prajavani.net prajavani
ಬುಧವಾರ, ಮಾರ್ಚ್ 4, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 63 | ಪುಟ 16
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬಣ್ಣಗಳ ಸಂಭ್ರಮ
ರಾಜಸ್ಥಾನದ ಜೈಪುರದಲ್ಲಿ ಮಂಗಳವಾರ ನಡೆದ ಹೋಳಿ ಹಬ್ಬದಲ್ಲಿ ಸಂಭ್ರಮಿಸಿದ ಯುವತಿಯರು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಅಬುಧಾಬಿಯ ಹೋಟೆಲ್‌ನಲ್ಲಿ ಹಾವೇರಿ ಎಂಜಿನಿಯರ್ ಕುಟುಂಬ 8

ಅಮೆರಿಕ ರಾಯಭಾರ ಕಚೇರಿ ಗುರಿ

ಸೌದಿ ಅರೇಬಿಯಾದ ರಿಯಾದ್ ಮೇಲೆ ಇರಾನ್ ಡ್ರೋನ್ ದಾಳಿ ಮುಂದುವರಿದ ಇಸ್ರೇಲ್– ಅಮೆರಿಕ ವೈಮಾನಿಕ ಪ್ರಹಾರ

ದುಬೈ/ ದೋಹಾ (ಎಪಿ/ ಎಎಫ್‌ಪಿ): ಸೌದಿ ಅರೇಬಿಯಾದ ರಾಜಧಾನಿ ರಿಯಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿ ಗುರಿಯಾಗಿಸಿ ಇರಾನ್ ಸೇನೆ ಮಂಗಳವಾರ ಬೆಳಿಗ್ಗೆ ಡ್ರೋನ್ ದಾಳಿ ನಡೆಸಿದೆ. ಕೊಲ್ಲಿ ರಾಷ್ಟ್ರಗಳಲ್ಲಿನ ತೈಲ ಮತ್ತು ಅನಿಲ ಮೂಲಸೌಕರ್ಯಗಳು ಹಾಗೂ ರಾಜತಾಂತ್ರಿಕ ಗುರಿಗಳ ಮೇಲಿನ ದಾಳಿಯನ್ನು ಇರಾನ್ ಮುಂದುವರಿಸಿದೆ.

ಮತ್ತೊಂದೆಡೆ, ಅಮೆರಿಕ ಮತ್ತು ಇಸ್ರೇಲ್ ಸೇನೆಗಳು ಸತತ ನಾಲ್ಕನೇ ದಿನವೂ ಇರಾನ್ ಮೇಲೆ ವೈಮಾನಿಕ ದಾಳಿ ನಡೆಸಿವೆ. 'ಇದುವರೆಗಿನ ದಾಳಿಯು ಒಂದು ತಿಂಗಳಿಗೂ ಹೆಚ್ಚು ನಡೆಯುವ ನಿರಂತರ ಮಿಲಿಟರಿ ಕಾರ್ಯಾಚರಣೆಯ ಆರಂಭ ಮಾತ್ರ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದು, ದಾಳಿಯನ್ನು ಇನ್ನಷ್ಟು ತೀವ್ರಗೊಳಿಸುವ ಸೂಚನೆ ನೀಡಿದ್ದಾರೆ.

'ಅಮೆರಿಕ ರಾಯಭಾರ ಕಚೇರಿಯ ಮೇಲೆ ಎರಡು ಡ್ರೋನ್‌ಗಳು ಅಪ್ಪಳಿಸಿದ್ದು, ಸಣ್ಣ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದೆ. ಕಟ್ಟಡಕ್ಕೆ ತುಸು ಹಾನಿಯಾಗಿದೆ' ಎಂದು ಸೌದಿ ಅರೇಬಿಯಾದ ರಕ್ಷಣಾ ಸಚಿವಾಲಯ ತಿಳಿಸಿದೆ. ಯಾವುದೇ ಕಾರಣಕ್ಕೂ ರಾಯಭಾರ ಕಚೇರಿಗೆ ಬರದಂತೆ ಅಮೆರಿಕನ್ನರಿಗೆ ಸೂಚನೆ ನೀಡಲಾಗಿದೆ.

9

ದಿನದ ಬೆಳವಣಿಗೆ

- ಇರಾನ್ ಮೇಲೆ ದಾಳಿ– ಸಾವಿನ ಸಂಖ್ಯೆ 787ಕ್ಕೆ ಏರಿಕೆ
- ಇರಾನ್ ಹಾರಿಸಿದ ಎರಡು ಡ್ರೋನ್‌ಗಳನ್ನು ಒಮಾನ್ ಹೊಡೆದುರುಳಿಸಿದ್ದು, ಒಂದು ಡ್ರೋನ್ ಸಲಾಲಾ ಬಂದರಿನ ಬಳಿ ಬಿದ್ದಿದೆ. ಯಾವುದೇ ಹಾನಿ ಉಂಟಾಗಿಲ್ಲ
- ದೋಹಾ, ದುಬೈ, ಅಬುಧಾಬಿಯಲ್ಲಿ ಮಂಗಳವಾರ ರಾತ್ರಿ ಭಾರಿ ಸ್ಫೋಟ
- ಇರಾನಿನ ದಾಳಿಯಿಂದ ತನ್ನ ನೌಕಾ ಮತ್ತು ವಾಯು ನೆಲೆಗಳನ್ನು ರಕ್ಷಿಸಲು ಯುಎಇನಲ್ಲಿ ರಫೇಲ್ ಯುದ್ಧ ವಿಮಾನಗಳನ್ನು ನಿಯೋಜಿಸಿದ ಫ್ರಾನ್ಸ್
- ಯುಎಇಯಲ್ಲಿ ತನ್ನ ಎರಡು ಡೇಟಾ ಸೆಂಟರ್‌ಗಳ ಮೇಲೆ ಡ್ರೋನ್ ದಾಳಿ ನಡೆದಿರುವುದಾಗಿ ಅಮೆಜಾನ್ ಕಂಪನಿ ಹೇಳಿದೆ
- ತನ್ನ ಆರು ಯೋಧರು ಮೃತಪಟ್ಟಿರುವುದನ್ನು ಖಚಿತಪಡಿಸಿದ ಅಮೆರಿಕ
- ಪಶ್ಚಿಮ ಏಷ್ಯಾ ರಾಷ್ಟ್ರಗಳಿಗೆ ಬುಧವಾರ ಭಾರತದಿಂದ 58 ವಿಮಾನ ಹಾರಾಟ ನಡೆಸಲು ಸಿದ್ಧತೆ

ಮಾತುಕತೆಗೆ ಕಾಲ ಮಿಂಚಿದೆ: ಟ್ರಂಪ್



ನಮ್ಮ ದಾಳಿಯಲ್ಲಿ ಅವರ (ಇರಾನ್) ವಾಯು ರಕ್ಷಣಾ ವ್ಯವಸ್ಥೆ, ವಾಯುಪಡೆ, ನೌಕಾಪಡೆ ಮತ್ತು ನಾಯಕತ್ವವು ಸಂಪೂರ್ಣ ನಾಶವಾಗಿದೆ. ಎಲ್ಲವೂ ಕಳೆದುಕೊಂಡ ಬಳಿಕ ಇದೀಗ ನಮ್ಮೊಂದಿಗೆ ಮಾತನಾಡಲು ಬಯಸಿದ್ದಾರೆ. ಆದರೆ 'ಈಗ ಕಾಲ ಮಿಂಚಿದೆ' ಎಂದು ನಾನು ಅವರಿಗೆ ತಿಳಿಸಿದ್ದೇನೆ

– **ಡೊನಾಲ್ಡ್ ಟ್ರಂಪ್,** ಅಮೆರಿಕದ ಅಧ್ಯಕ್ಷ

ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಅಬುಧಾಬಿಯಲ್ಲಿ ಮಕ್ಕಳೊಂದಿಗೆ ಸಿಲುಕಿಕೊಂಡಿದ್ದ ಮಹಿಳೆಯೊಬ್ಬರು ಮಂಗಳವಾರ ಮುಂಬೈನ ಛತ್ರಪತಿ ಶಿವಾಜಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದರು –ಪಿಟಿಐ ಚಿತ್ರ

ತಾಯ್ನಾಡಿಗೆ ಮರಳಿದ ಕನ್ನಡಿಗರು

ದೇವನಹಳ್ಳಿ: ಇರಾನ್–ಇಸ್ರೇಲ್ ಯುದ್ಧದ ಕಾರಣ ಪಶ್ಚಿಮ ಏಷ್ಯಾದಲ್ಲಿ ನಿರ್ಮಾಣವಾಗಿದ್ದ ಉದ್ವಿಗ್ನ ಪರಿಸ್ಥಿತಿಯಿಂದಾಗಿ ಸ್ಥಗಿತಗೊಂಡಿದ್ದ ವಿಮಾನ ಸಂಚಾರ ಮತ್ತೆ ಶುರುವಾಗಿದೆ. ಅಬುಧಾಬಿ, ದುಬೈ ಸೇರಿದಂತೆ ಕೊಲ್ಲಿ ರಾಷ್ಟ್ರಗಳ ನಗರಗಳಲ್ಲಿ ಸಿಲುಕಿದ್ದ 500ಕ್ಕೂ ಹೆಚ್ಚು ಕನ್ನಡಿಗರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಮರಳಿ ಕರೆ ತರಲಾಗಿದೆ.

ಅಬುಧಾಬಿಯಿಂದ ಸೋಮವಾರ ಹಾಗೂ ಮಂಗಳವಾರ ಎರಡು ವಿಮಾನಗಳು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿವೆ.

210 ಪ್ರಯಾಣಿಕರನ್ನು ಹೊತ್ತ ಮೊದಲ ವಿಮಾನ ಸೋಮವಾರ ರಾತ್ರಿ 10ಕ್ಕೆ ಬೆಂಗಳೂರಿಗೆ ಬಂದಿಳಿಯಿತು. ಎರಡನೇ ವಿಮಾನ ಮಂಗಳವಾರ ಬೆಳಗಿನ ಜಾವ 3.20ಕ್ಕೆ 300 ಪ್ರಯಾಣಿಕರನ್ನು ಕರೆತಂದಿತು. ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕಾಲಿಡುತ್ತಲೇ ಪ್ರಯಾಣಿಕರ ಮುಖಗಳಲ್ಲಿ ಹರ್ಷ ಕಾಣಿಸಿತು.

9

ರಾಜ್ಯದ ಆದಾಯ ಸಂಗ್ರಹದಲ್ಲಿ ಹಿನ್ನಡೆ, ಬಡ್ಡಿ ಪಾವತಿ ಏರಿಕೆ

₹8.14 ಲಕ್ಷ ಕೋಟಿ ಸಾಲ

● ಜಯಸಿಂಹ ಆರ್.

ಬೆಂಗಳೂರು: ಇದೇ ತಿಂಗಳ ಅಂತ್ಯದ ಹೊತ್ತಿಗೆ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತ ₹8.14 ಲಕ್ಷ ಕೋಟಿಯ ಗಡಿ ದಾಟಲಿದೆ. 2025–26ನೇ ಆರ್ಥಿಕ ವರ್ಷದಲ್ಲಿ ರಾಜ್ಯ ಸರ್ಕಾರವು ಬಡ್ಡಿ ಪಾವತಿಗೆಂದೇ ಅಂದಾಜು ₹48,000 ಕೋಟಿ ವೆಚ್ಚ ಮಾಡುತ್ತಿದೆ.

2025ರ ಮಾರ್ಚ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಿದಾಗ, 2025–26ನೇ ಸಾಲಿನ ಬಜೆಟ್‌ನಲ್ಲಿ ₹90,428 ಕೋಟಿಯಷ್ಟು ವಿತ್ತೀಯ ಕೊರತೆಯನ್ನು ಅಂದಾಜಿಸಿದ್ದರು.

ರಾಜ್ಯದ ಒಟ್ಟು ಸಾಲವು, ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇ 25ಕ್ಕಿಂತಲೂ (ಶೇ 24.91ರಷ್ಟು) ಕಡಿಮೆ ಇದ್ದು, ಆರ್ಥಿಕ ಶಿಸ್ತನ್ನು ಕಾಪಾಡಿಕೊಳ್ಳಲಾಗಿದೆ ಎಂದು ಸಿದ್ದರಾಮಯ್ಯ ಅವರು ಬಜೆಟ್ ಭಾಷಣದಲ್ಲಿ ಹೇಳಿದ್ದರು. ಆದರೆ, ಅವರ ಅಂದಾಜು ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಏರುಪೇರಾಗುವ ಸೂಚನೆ ಕಾಣಿಸಿದೆ. ಅಂದಾಜಿಸಿದಂತೆಯೇ ರಾಜ್ಯದ ಒಟ್ಟು ಸಾಲ ₹8.14 ಲಕ್ಷ ಕೋಟಿಯಷ್ಟಾದರೆ, ಆರ್ಥಿಕ ಶಿಸ್ತಿನ ಮಿತಿಯನ್ನು ಮೀರಿದಂತಾಗುತ್ತದೆ.



ಇದೇ ಮಾರ್ಚ್ ಅಂತ್ಯದ ವೇಳೆಗೆ ರಾಜ್ಯದ ಒಟ್ಟು ಸಾಲವು ₹7.64 ಲಕ್ಷ ಕೋಟಿಯಷ್ಟಾಗಬಹುದು ಮತ್ತು ಬಡ್ಡಿ ಪಾವತಿಗೆ ₹45,600 ಕೋಟಿ ವೆಚ್ಚ ಮಾಡಬೇಕಾಗಬಹುದು ಎಂದು ಬಜೆಟ್‌ನಲ್ಲಿ ಅಂದಾಜಿಸಲಾಗಿತ್ತು. ಆದರೆ, ವಾಣಿಜ್ಯ ತೆರಿಗೆ, ನೋಂದಣಿ ಮತ್ತು ಮುದ್ರಾಂಕ ಶುಲ್ಕ ಸಂಗ್ರಹದಲ್ಲಿ ಆಗಿರುವ ಹಿನ್ನಡೆ ಹಾಗೂ ಬಹುಮುಖ್ಯವಾಗಿ ಜಿಎಸ್‌ಟಿ ಸ್ಲ್ಯಾಬ್‌ಗಳ ಪರಿಷ್ಕರಣೆಯಿಂದಾಗಿ ರಾಜ್ಯದ ವಿತ್ತೀಯ ಕೊರತೆಯು, ಬಜೆಟ್ ಅಂದಾಜಿಗಿಂತ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. ಪರಿಣಾಮವಾಗಿ ರಾಜ್ಯದ ಸಾಲದ ಮೊತ್ತ ಹೆಚ್ಚಾಗಲಿದೆ.

2025–26ರ ಅಂತ್ಯದ ವೇಳೆಗೆ ಒಟ್ಟು ಸಾಲದ ಮೊತ್ತ ₹8.14 ಲಕ್ಷ ಕೋಟಿಯಷ್ಟಾಗಲಿದೆ ಮತ್ತು ಇದು ರಾಜ್ಯದ ಜಿಎಸ್‌ಡಿಪಿಯ ಶೇ 26.5ರಷ್ಟಾಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜಿಸಿದೆ.

4

ಚಿನಕುರುಳಿ ಪ್ರಕಾಶ್ ಶೆಟ್ಟಿ

ಕೃಷಿಗೆ ಬಳಸುವ ಪ್ರತಿ ಯೂನಿಟ್ ದರ 95 ಪೈಸೆಯಷ್ಟು ಇಳಿಕೆ

ಕೈಗಾರಿಕೆಗೆ ವಿದ್ಯುತ್ ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ವಿದ್ಯುತ್ ದರಗಳನ್ನು ಪರಿಷ್ಕರಿಸಿದ್ದು, ಕೃಷಿ ಪಂಪ್‌ಸೆಟ್‌ಗಳಿಗೆ ಬಳಸುವ ವಿದ್ಯುತ್ ದರವನ್ನು ಯೂನಿಟ್‌ಗೆ ಸರಾಸರಿ 95 ಪೈಸೆ ಕಡಿಮೆ ಮಾಡಿದೆ. ಆದರೆ, ಕೈಗಾರಿಕೆ ಮತ್ತು ವಾಣಿಜ್ಯ ಬಳಕೆಯ ವಿದ್ಯುತ್ ದರವನ್ನು ಹೆಚ್ಚಿಸಲಾಗಿದೆ.

2025–26ನೇ ಸಾಲಿಗೆ ನಿಗದಿಪಡಿಸಿರುವ ವಿದ್ಯುತ್ ದರಗಳನ್ನು ಪರಿಷರಿಸಬೇಕು ಎಂದು ಎಸ್ಕಾಂಗಳು ಸಲ್ಲಿಸಿದ್ದ ಪ್ರಸ್ತಾವಕ್ಕೆ ಕೆಇಆರ್‌ಸಿ ಒಪ್ಪಿಗೆ ನೀಡಿ, ಪರಿಷ್ಕೃತ ದರಗಳನ್ನು ಮಂಗಳವಾರ ಪ್ರಕಟಿಸಿದೆ. ಆದರೆ, ಇದು ಯಾವಾಗ ಜಾರಿಯಾಗಲಿದೆ ಎಂಬ ಬಗ್ಗೆ ಕೆಇಆರ್‌ಸಿ ಆದೇಶದಲ್ಲಿ ಸ್ಪಷ್ಟನೆ ಇಲ್ಲ. ಆದರೆ, ಇದು 2025–26ನೇ ಸಾಲಿನ ಪರಿಷ್ಕೃತ ದರವಾಗಿರುವುದರಿಂದ 2025ರ ಏಪ್ರಿಲ್ ಒಂದರಿಂದಲೇ ಪೂರ್ವಾನ್ವಯವಾಗಲಿದೆ ಎಂದು ಮೂಲಗಳು ತಿಳಿಸಿವೆ.

ವರ್ಗ	ಹಾಲಿ ದರ	ಪರಿಷ್ಕೃತ ದರ (₹ಗಳಲ್ಲಿ)
ಎಲ್‌ಟಿ 3 (ಎ) ವಾಣಿಜ್ಯ	₹7	₹7.10
ಎಲ್‌ಟಿ 5 (ಕೈಗಾರಿಕೆ)	₹4.50	₹5.20
ಎಚ್‌ಟಿ 2ಎ (ಕೈಗಾರಿಕೆ)	₹6.60	₹6.70
ಎಚ್‌ಟಿ 2 ಬಿ (ವಾಣಿಜ್ಯ)	₹5.95	₹6.90

ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಬಳಸುವ ವಿದ್ಯುತ್ ದರವನ್ನು ಯೂನಿಟ್‌ಗೆ ಕನಿಷ್ಠ 10 ಪೈಸೆಯಿಂದ ಗರಿಷ್ಠ 95 ಪೈಸೆವರೆಗೆ ಹೆಚ್ಚಿಸಲಾಗಿದೆ.

4

ಚಿನ್ನಸ್ವಾಮಿಯಲ್ಲಿ ಆರ್‌ಸಿಬಿ ಪಂದ್ಯ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮುಂಬರುವ ಆವೃತ್ತಿಯಲ್ಲಿ ಐದು ಪಂದ್ಯಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲಿದೆ. ಇದೇ ತಿಂಗಳು ಟೂರ್ನಿ ಆರಂಭವಾಗಲಿದೆ. 'ಬೆಂಗಳೂರಿನಲ್ಲಿ ಲೀಗ್ ಹಂತದ ಐದು ಹಾಗೂ ರಾಯಪುರದಲ್ಲಿ ಎರಡು ಪಂದ್ಯಗಳನ್ನು ಆಯೋಜಿಸಲಾಗುವುದು' ಎಂದು ಆರ್‌ಸಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಮೆನನ್ ಮಂಗಳವಾರ ತಿಳಿಸಿದ್ದಾರೆ.

4

ನಾನು ಸ್ಟ್ರೀಟ್ ಫೈಟರ್: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಸ್ಟ್ರೀಟ್ ಫೈಟರ್. ಹೇಗೆ ಹೋರಾಟ ಮಾಡಬೇಕು ಎಂದು ನನಗೆ ಗೊತ್ತಿದೆ. ನನ್ನ ಹೋರಾಟ ಪಕ್ಷದ ಒಳಗಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಇತ್ತೀಚೆಗೆ ನೀವು ಯೋಗಿಯಂತೆ ಮಾತನಾಡುತ್ತಿದ್ದೀರಿ' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನನ್ನ ಹೋರಾಟ ಪಕ್ಷದ ಹೊರಗೆ. ಹಾಗೆಂದು ಅಧಿಕಾರಕ್ಕಾಗಿ ಅಲ್ಲ. ನಾನು ಸುಮ್ಮನಾಗಿದ್ದೇನೆಂದು ಭಾವಿಸಿದರೆ, ಅದು ಅವರಿಗೆ ಬಿಟ್ಟ ವಿಚಾರ' ಎಂದು ಮಾರ್ಮಿಕವಾಗಿ ನುಡಿದರು. 'ಸ್ವಾರ್ಥಕ್ಕಾಗಿ ನಾನು ಎಂದೂ ಬ್ಲ್ಯಾಕ್‌ಮೇಲ್ ಮಾಡುವುದಿಲ್ಲ. ಪಕ್ಷಕ್ಕೆ ತೊಂದರೆಯನ್ನೂ ಮಾಡುವುದಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

4

'ಪಕ್ಷಕ್ಕೆ ಹೊಸ ರಕ್ತ, ಆಲೋಚನೆ ಬೇಕು'

ಶಿವಕುಮಾರ್

'ಪಕ್ಷಕ್ಕೆ ಹೊಸ ರಕ್ತ ಬರಬೇಕು. ಹೊಸ ಆಲೋಚನೆ ಬರಬೇಕು' ಎಂದು ಶಿವಕುಮಾರ್ ಹೇಳಿದರು.

'ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಪರಮೇಶ್ವರ ಅವರ ದಾಖಲೆ ಮುರಿಯುತ್ತೀರಾ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನನಗೆ ಆರು ವರ್ಷ ಸಾಕು. ನಾನು, ಪರಮೇಶ್ವರ, ಎಚ್.ಕೆ. ಪಾಟೀಲ, ರಾಮಲಿಂಗಾರೆಡ್ಡಿ ಎಲ್ಲರೂ ಹಿರಿಯ ನಾಗರಿಕರಾಗಿದ್ದೇವೆ. ಹೊಸಬರು ಬರಲಿ' ಎಂದರು. 'ನೀವು ಅಧ್ಯಕ್ಷ ಸ್ಥಾನ ಬಿಟ್ಟರೆ ಬೇರೆ ಯಾವ ಸ್ಥಾನ ಇದೆ' ಎಂದು ಕೇಳಿದಾಗ, 'ನಾನು ನನ್ನ ಅಭಿಪ್ರಾಯ ತಿಳಿಸಿದ್ದೇನೆ' ಎಂದರು. 'ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷವಾಗುತ್ತಿರುವ ಕಾರಣ ಮಾ.10ರಂದು ಭೋಜನ ಕೂಟ ಇಟ್ಟುಕೊಂಡಿದ್ದೇನೆ' ಎಂದೂ ಅವರು ತಿಳಿಸಿದರು.

ವಂತಾರಾ ಸ್ಥಾಪನೆಗೆ ವರ್ಷದ ಸಂಭ್ರಮ

ಪ್ರಧಾನಿ ಮೋದಿಯವರಿಂದ ಉದ್ಘಾಟನೆಗೊಂಡ 'ವಂತಾರಾ' ವನ್ಯಜೀವಿ ಸಂರಕ್ಷಣಾ ಕೇಂದ್ರ ಒಂದು ವರ್ಷದಲ್ಲಿ ಸಾವಿರಾರು ಪ್ರಾಣಿಗಳ ಪುನರ್ವಸತಿ ಮತ್ತು ಸಂರಕ್ಷಣೆಯ ಸಾರ್ಥಕ ಸೇವೆ ಮಾಡಿದೆ. ಪರಿಸರ ಸಂರಕ್ಷಣೆಗೂ ಕೊಡುಗೆ ನೀಡಿದೆ

ಜಾಮ್‌ನಗರ: ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಂದ ಉದ್ಘಾಟನೆಗೊಂಡ 'ವಂತಾರಾ' ವನ್ಯಜೀವಿ ಸಂರಕ್ಷಣಾ ಕೇಂದ್ರ ಇಂದಿಗೆ ಒಂದು ವರ್ಷ ಪೂರೈಸಿದೆ. ಈ ಅವಧಿಯಲ್ಲಿ ವಂತಾರಾ ಸಂಸ್ಥೆಯು ವನ್ಯಜೀವಿ ರಕ್ಷಣೆ, ಸುಧಾರಿತ ವೈದ್ಯಕೀಯ ಚಿಕಿತ್ಸೆ ಮತ್ತು ವಿಜ್ಞಾನ ಆಧಾರಿತ ಸಂರಕ್ಷಣೆಯಲ್ಲಿ ಕೈಗೊಂಡಿರುವ ಮಹತ್ವದ ಸಾಧನೆಗಳನ್ನು ಸಾಧಿಸಿದೆ. ಅನಂತ್ ಮುಖೇಶ್ ಅಂಬಾನಿ ಅವರ ನೇತೃತ್ವದಲ್ಲಿ ಸ್ಥಾಪಿತವಾದ ಈ ಸಂಸ್ಥೆ, ಕಳೆದೊಂದು ವರ್ಷದಲ್ಲಿ ಕಾಡು ಬೆಕ್ಕುಗಳು, ಸರಿಸೃಪಗಳು, ಪಕ್ಷಿಗಳು ಮತ್ತು ಸಸ್ತನಿಗಳು ಸೇರಿದಂತೆ ಸಾವಿರಾರು ರಕ್ಷಿಸಲ್ಪಟ್ಟ ವನ್ಯಜೀವಿಗಳಿಗೆ ಮರುಜೀವ ನೀಡಿದೆ. ಆ ಮೂಲಕ ಜೀವವೈವಿಧ್ಯತೆಗೆ ವಂತಾರಾ ವಿಶೇಷ ಕೊಡುಗೆಯನ್ನು ನೀಡಿದೆ. ಪ್ರತ್ಯೇಕವಾಗಿ ಸಾವಿರಾರು ವನ್ಯಜೀವಿಗಳಿಗೆ ಮರುಜೀವ ನೀಡುವ ಮೂಲಕ ದೇಶದ ಪ್ರಕೃತಿಗೆ ತನ್ನದೇ ಆದ ವಿಶೇಷ ಕೊಡುಗೆಯನ್ನು ನೀಡಿದೆ. ಈ ಮಹತ್ತರ ವನ್ಯಜೀವಿ ಸಂರಕ್ಷಣೆಯಲ್ಲಿನ ಅವರ ಅಸಮಾನ್ಯ ಸಾಧನೆ ಮತ್ತು ಜೀವವೈವಿಧ್ಯ ರಕ್ಷಣೆಯಲ್ಲಿನ ವಿಶೇಷ ಕೊಡುಗೆಗೆ ಅನಂತ್ ಅಂಬಾನಿ ಅವರಿಗೆ ಪ್ರತಿಷ್ಠಿತ 'ಗ್ಲೋಬಲ್ ಹ್ಯೂಮನ್ ಅವಾರ್ಡ್' ನೀಡಿ ಗೌರವಿಸಲಾಗಿದೆ. ಜತೆಗೆ, ಜೀವವೈವಿಧ್ಯ ಕ್ಷೇತ್ರದಲ್ಲಿ ವಂತಾರಾ ಸಂಸ್ಥೆಯು EARAZA, SEAZA ಸದಸ್ಯತ್ವ ಹಾಗೂ 2025ರ 'ಪ್ರಾಣಿ ಮಿತ್ರ' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

ಪ್ರಮುಖ ಸಾಧನೆಗಳು

- **ಆನೆಗಳ ರಕ್ಷಣೆ:** ದೌರ್ಜನ್ಯಕ್ಕೊಳಗಾಗಿದ್ದ ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದ 250ಕ್ಕೂ ಹೆಚ್ಚು ಆನೆಗಳಿಗೆ ವಿಶ್ವದರ್ಜೆಯ ವೈದ್ಯಕೀಯ ಆರೈಕೆ ನೀಡಲಾಗುತ್ತಿದೆ.
- **ವೈದ್ಯಕೀಯ ಮೂಲಸೌಕರ್ಯ:** ಇಲ್ಲಿನ ಕೇಂದ್ರ ಪ್ರಯೋಗಾಲಯ ಮತ್ತು 11 ಉಪ-ಪ್ರಯೋಗಾಲಯಗಳಲ್ಲಿ 70ಕ್ಕೂ ಹೆಚ್ಚು ತಜ್ಞರು ಪ್ರತಿದಿನ 2,000ಕ್ಕೂ ಹೆಚ್ಚು ಮಾದರಿಗಳನ್ನು ಪರೀಕ್ಷಿಸುವ ಸಾಮರ್ಥ್ಯ ಹೊಂದಿದ್ದಾರೆ.
- **ಆಹಾರ ವ್ಯವಸ್ಥೆ:** ಪ್ರತಿದಿನ ಸಾವಿರಾರು ಪ್ರಾಣಿಗಳಿಗೆ 1,56,000ಕೆಜಿ ಉತ್ತಮ ಗುಣಮಟ್ಟದ ಆಹಾರವನ್ನು ಸಂಪೂರ್ಣ ಸ್ವಯಂಚಾಲಿತ ವ್ಯವಸ್ಥೆಯ ಮೂಲಕ ವಿತರಿಸಲಾಗುತ್ತಿದೆ.
- **ರಕ್ಷಣಾ ಕಾರ್ಯಾಚರಣೆ:** 200 ಸದಸ್ಯರ ತುರ್ತು ಪ್ರತಿಕ್ರಿಯೆ ತಂಡವು 50ಕ್ಕೂ ಹೆಚ್ಚು ಅಂತರಾಷ್ಟ್ರೀಯ ರಕ್ಷಣಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದೆ.

ಒಂದು ವರ್ಷದಲ್ಲಿ ದಾಖಲೆ : ವಂತಾರಾ ಸಂಸ್ಥೆ ಕಳೆದೊಂದು ವರ್ಷದಲ್ಲಿ ಕೇವಲ ದೇಶಕ್ಕೆ ಸೀಮಿತವಾಗದೇ ವಿಶ್ವಾದ್ಯಂತ ತನ್ನ ಖ್ಯಾತಿಯನ್ನು ವಿಸ್ತರಿಸಿಕೊಂಡಿದೆ. ವಿಶ್ವದ ಖ್ಯಾತನಾಮರೆಲ್ಲರು ವಂತಾರಕ್ಕೆ ಭೇಟಿ ನೀಡಿ, ಇಲ್ಲಿನ ಪರಿಸರದಲ್ಲಿ ಸಮಯ ಕಳೆದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆ ಮೂಲಕ ಇಲ್ಲಿನ ವನ್ಯಸಂಕುಲಕ್ಕೆ ಮನಸೋತಿದ್ದಾರೆ. ಇಲ್ಲಿಗೆ ಭೇಟಿ ನೀಡುವ ಗಣ್ಯರಿಗೆ ಅಗತ್ಯ ಸೌಕರ್ಯದೊಂದಿಗೆ ವನ್ಯಸಂಕುಲಕ್ಕೆ ಪೂರಕ ವಾತಾವರಣವನ್ನು ರೂಪಿಸುವಲ್ಲಿ ವಂತಾರಾ ಸದಾ ಮುಂದಿದೆ. ವನ್ಯಸಂಕುಲ ಮಾತ್ರವಲ್ಲದೇ ದೇಶಕ್ಕೆ ಯಾವುದೇ ಸನ್ನಿವೇಶದಲ್ಲಿ ಸ್ಪಂದಿಸುವ ವ್ಯವಸ್ಥೆಯನ್ನು ಹೊಂದಿದೆ. ಪಂಜಾಬ್ ಪ್ರವಾಹದ ಸಮಯದಲ್ಲಿ ವಂತರಾ ಸಂಸ್ಥೆಯು 10ಲಕ್ಷಕ್ಕೂ ಹೆಚ್ಚು ಜನರಿಗೆ ಮತ್ತು ಸಾವಿರಾರು ಪ್ರಾಣಿಗಳಿಗೆ ಮಾನವೀಯ ನೆರವು ನೀಡಿದೆ. ಜತೆಗೆ, ನೂರಾರು ಪಶುವೈದ್ಯರಿಗೆ ತರಬೇತಿ ನೀಡುವ ಮೂಲಕ ಮತ್ತು 50ಕ್ಕೂ ಹೆಚ್ಚು ಜ್ಞಾನ ಹಂಚಿಕೆ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಮುಂದಿನ ಪೀಳಿಗೆಯನ್ನು ಸಂರಕ್ಷಣಾ ಕಾರ್ಯಕ್ಕೆ ಸಿದ್ಧಪಡಿಸುತ್ತಿದೆ.

ಪುನರ್ವಸತಿಗೆ ಅಗತ್ಯ ಸೌಕರ್ಯ

ಅನಂತ್ ಅಂಬಾನಿ ಅವರ ಕನಸಿನ ಯೋಜನೆಯಾದ 'ವಂತಾರಾ', ವಿಶ್ವದ ಅತಿದೊಡ್ಡ ಪ್ರಾಣಿ ಪುನರ್ವಸತಿ ಮತ್ತು ಸಂರಕ್ಷಣಾ ಕೇಂದ್ರಗಳಲ್ಲಿ ಒಂದಾಗಿದೆ. ಸುಮಾರು 3,000 ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ ಈ ಕೇಂದ್ರವು ಕೇವಲ ಒಂದು ಮೃಗಾಲಯವಲ್ಲ, ಬದಲಿಗೆ ಗಾಯಗೊಂಡ ಮತ್ತು ಅಳಿವಿನಂಚಿನಲ್ಲಿರುವ ಪ್ರಾಣಿಗಳಿಗೆ ನೀಡಲಾದ ಹೊಸ ಬದುಕು. ಇಲ್ಲಿ ಆನೆಗಳಿಗಾಗಿ ವಿಶೇಷ ಆಸ್ಪತ್ರೆ, ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳು ಮತ್ತು ಅವುಗಳ ನೈಸರ್ಗಿಕ ವಾಸಸ್ಥಾನವನ್ನೇ ಹೋಲುವ ಪರಿಸರವನ್ನು ನಿರ್ಮಿಸಲಾಗಿದೆ. ಜಗತ್ತಿನಾದ್ಯಂತ ಸಂಕಷ್ಟದಲ್ಲಿರುವ ಸಾವಿರಾರು ಪ್ರಾಣಿಗಳನ್ನು ರಕ್ಷಿಸಿ, ಅವುಗಳಿಗೆ ಪ್ರೀತಿ ಮತ್ತು ಆರೈಕೆ ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಪ್ರಕೃತಿ ಮತ್ತು ಪ್ರಾಣಿಗಳ ನಡುವಿನ ಸಮತೋಲನವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ವಂತಾರಾ ಒಂದು ಮಹತ್ವದ ಹೆಜ್ಜೆಯಾಗಿದೆ.

ವಂತಾರಾ ಸಾಮಾಜಿಕ ಕೊಡುಗೆ

ವಂತಾರಾ ಕೇವಲ ಪ್ರಾಣಿಗಳ ರಕ್ಷಣೆಗೆ ಸೀಮಿತವಾಗದೆ, ಪರಿಸರ ಮರುಸ್ಥಾಪನೆಯಲ್ಲೂ ತೊಡಗಿದೆ. ಗುಜರಾತ್ ಅರಣ್ಯ ಇಲಾಖೆಯ ಸಹಯೋಗದೊಂದಿಗೆ 53 ಚುಕ್ಕೆ ಜಿಂಕೆಗಳನ್ನು ಬರ್ಡಾ ವನ್ಯಜೀವಿ ಅಭಯಾರಣ್ಯಕ್ಕೆ ಬಿಡುಗಡೆ ಮಾಡಲಾಗಿದೆ ಮತ್ತು ಇಂಡೋನೇಷ್ಯಾದಲ್ಲಿ ಆಮೆಗಳ ಮರುಜೀವ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಪಂಜಾಬ್ ಪ್ರವಾಹದ ಸಮಯದಲ್ಲಿ ವಂತಾರಾ ತಂಡವು ಒಂದು ಮಿಲಿಯನ್ ಜನರಿಗೆ ಮತ್ತು ಸಾವಿರಾರು ಪ್ರಾಣಿಗಳಿಗೆ ನೆರವು ನೀಡುವ ಮೂಲಕ ಮಾನವೀಯತೆ ಮೆರೆದಿದೆ. ಕಳೆದ ಒಂದು ವರ್ಷದಲ್ಲಿ ವಂತಾರಾವು ಸಂಶೋಧನೆ, ರಕ್ಷಣೆ ಮತ್ತು ಸಮುದಾಯದ ಸಹಭಾಗಿತ್ವದ ಮೂಲಕ ಭಾರತ ಹಾಗೂ ಜಾಗತಿಕ ಮಟ್ಟದಲ್ಲಿ ವನ್ಯಜೀವಿ ಸಂರಕ್ಷಣೆಯ ಹೊಸ ಮಾದರಿಯಾಗಿ ಹೊರಹೊಮ್ಮಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ.

100 ಅಂಗವಿಕಲರಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಡಿಯಾಜಿಯೊ ಇಂಡಿಯಾ, ಅಂಗವಿಕಲ ವ್ಯಕ್ತಿಗಳ ಕೌಶಲ ಮಂಡಳಿ ಸಹಭಾಗಿತ್ವದಲ್ಲಿ ಕೌಶಲ ತರಬೇತಿ ನೀಡುತ್ತಿದ್ದು, ಈ ವರ್ಷ 100 ಅಂಗವಿಕಲರು ಉತ್ತೀರ್ಣರಾಗಿ ಪದವಿ ಪಡೆದಿದ್ದಾರೆ.

ನಗರದಲ್ಲಿ ನಡೆದ ಘಟಿಕೋತ್ಸವದಲ್ಲಿ ನೂರು ಮಂದಿಗೆ ಪದವಿ ಪ್ರದಾನ ಮಾಡಲಾಯಿತು.

ಈ ವೇಳೆ ಮಾತನಾಡಿದ ಡಿಯಾಜಿಯೊ ಇಂಡಿಯಾದ ಮುಖ್ಯ ಹಣಕಾಸು ಅಧಿಕಾರಿ ಪ್ರದೀಪ್, 'ದೈಹಿಕ ವೈಕಲ್ಯ ಇರುವವರಲ್ಲೂ ಕೌಶಲ ಇರುತ್ತದೆ. ಅವರಿಗೆ ಸೂಕ್ತ ತರಬೇತಿ ನೀಡಿದರೆ, ತಮ್ಮ ಸ್ವ ಪ್ರಯತ್ನದಿಂದಲೇ ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದು. ಹೀಗಾಗಿ ಅವರಿಗೂ ಸೂಕ್ತ ಕೌಶಲ ತರಬೇತಿ ನೀಡುವುದು ಅನಿವಾರ್ಯ. ಕೌಶಲ ಮಂಡಳಿಯ ಸಹಯೋಗದಲ್ಲಿ ಆಸಕ್ತರಿಗೆ ಎಫ್ ಆಂಡ್ ಬಿ ಸರ್ವಿಸಸ್, ಹಾಸ್ಪಿಟಾಲಿಟಿ ಆಪರೇಷನ್ಸ್, ಕಸ್ಟಮರ್ ಸರ್ವಿಸ್, ಸಾಫ್ಟ್ ಸ್ಕಿಲ್ಸ್ ಸೇರಿದಂತೆ ಹಲವು ರೀತಿಯ ತರಬೇತಿ ನೀಡಲಾಗುತ್ತಿದೆ. ಅರ್ಹ ತರಬೇತುದಾರರು ತರಬೇತಿ ನೀಡುವರು ಎಂದರು.

ಪ್ರಸಕ್ತ ಸಾಲಿನಲ್ಲಿ 100 ಅಂಗವಿಕಲರಿಗೆ ಪದವಿ ಪ್ರದಾನ ಮಾಡಲಾಗಿದ್ದು, ಭವಿಷ್ಯದಲ್ಲಿ ಇನ್ನಷ್ಟು ಮಂದಿ ಇದರ ಪ್ರಯೋಜನ ಪಡೆದುಕೊಂಡು ತಮ್ಮ ಸ್ವಂತ ಶಕ್ತಿಯಿಂದಲೇ ಜೀವನ ನಡೆಸುವ ಸಾಮರ್ಥ್ಯ ಬೆಳೆಸಲಾಗುವುದು ಎಂದು ಹೇಳಿದರು.

ದೇಶದಾದ್ಯಂತ ಈ ರೀತಿಯ ತರಬೇತಿ ನೀಡಲಾಗುತ್ತಿದ್ದು, ಈ ಕೇಂದ್ರದಲ್ಲಿ ತರಬೇತಿ ಪಡೆದು ಉತ್ತೀರ್ಣರಾದ ಅಂಗವಿಕಲರಿಗೆ ಉದ್ಯೋಗ ಖಾತ್ರಿ ನೀಡಲಾಗುತ್ತಿದೆ. ಇದಕ್ಕಾಗಿ ಸಾಕಷ್ಟು ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಅರ್ಹ ಪದವೀಧರರಿಗೆ ಉದ್ಯೋಗ ಕೂಡ ದೊರೆಯಲಿದೆ ಎಂದರು.

3ಕ್ಕೂ ಹೆಚ್ಚು ಅಂತಸ್ತಿನ ಕಟ್ಟಡಗಳಲ್ಲಿ ತ್ಯಾಜ್ಯ ಬುಟ್ಟಿ ಕಡ್ಡಾಯ

ಬೆಂಗಳೂರು: ನಗರದಲ್ಲಿರುವ ಮೂರು ಅಂತಸ್ತಿಗೂ ಹೆಚ್ಚಿನ ಕಟ್ಟಡಗಳಲ್ಲಿ ಒಣ ಹಾಗೂ ಹಸಿ ಕಸಕ್ಕೆ ಪ್ರತ್ಯೇಕವಾಗಿ ಬುಟ್ಟಿಗಳನ್ನು (ಬಿನ್) ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಗಳವಾರ ನಡೆದ ಸಾರ್ವಜನಿಕ ಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, 'ಪ್ರತ್ಯೇಕ ಬುಟ್ಟಿಗಳನ್ನು ಅವರ ಜಾಗದಲ್ಲಿ ಅಳವಡಿಸಿಲು ಕಟ್ಟಡದವರಿಗೆ ಕೂಡಲೇ ನೋಟಿಸ್ ಜಾರಿ ಮಾಡಬೇಕು' ಎಂದು ಆದೇಶಿಸಿದರು.

ರೈಲ್ವೆ ಗೇಟ್ ಬಂದ್: ಕಿಲೋ ಮೀಟರ್ ಸುತ್ತು ಹಾಕುವ ಸ್ಥಿತಿ

ದಟ್ಟಣೆ: ಸವಾರರು ಸುಸ್ತು

● ಕೆ.ಎಸ್.ಸುನಿಲ್

ಮೈಸೂರು ರಸ್ತೆಯ ಕೆಂಗೇರಿ ಬಳಿ ವಾಹನಗಳು ಸಾಲುಗಟ್ಟಿ ನಿಂತಿದ್ದವು

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬೆಂಗಳೂರು: ಮೈಸೂರು ರಸ್ತೆಯ ರಾಮೋಹಳ್ಳಿ ಗೇಟ್ ಬಳಿ ಕೆಳ ಸೇತುವೆ ನಿರ್ಮಾಣ ಕಾಮಗಾರಿಗಾಗಿ ರೈಲ್ವೆ ಗೇಟ್ ಬಂದ್ ಮಾಡಿರುವುದರಿಂದ ಕೆಂಗೇರಿ ಸುತ್ತಮುತ್ತಲ ಪ್ರದೇಶದಲ್ಲಿ ನಿತ್ಯ ಸಂಚಾರ ದಟ್ಟಣೆಯಿಂದ ವಾಹನ ಸವಾರರು ಹೈರಾಣಾಗಿದ್ದಾರೆ.

ದೊಡ್ಡ ಆಲದಮರ, ರಾಮೋಹಳ್ಳಿ, ಬೈಚೋಹಳ್ಳಿ, ತಾವರೆಕೆರೆ ರಸ್ತೆ ಹಾಗೂ ಮಂಚನಬೆಲೆ ಅಣೆಕಟ್ಟೆಗೆ ತೆರಳಬೇಕಾದವರು 6ರಿಂದ 7 ಕಿ.ಮೀ ಸುತ್ತು ಹಾಕಿಕೊಂಡು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಮೋಹಳ್ಳಿ ದೊಡ್ಡ ಆಲದಮರ, ಚಂದ್ರಪ್ಪ ವೃತ್ತದ ಕಡೆಯಿಂದ ಬೆಂಗಳೂರು–ಮೈಸೂರು ಮುಖ್ಯ ರಸ್ತೆ ಸೇರಲು ಗೇರುಪಾಳ್ಯ ಗೇಟ್ ಮೂಲಕ ಸಾಗಬೇಕಿತ್ತು. ಕಳೆದ ಡಿಸೆಂಬರ್‌ನಿಂದ ರೈಲ್ವೆ ಕೆಳಸೇತುವೆ ಕಾಮಗಾರಿಗಾಗಿ ಈ ಮಾರ್ಗ ಬಂದ್ ಮಾಡಿದ ಪರಿಣಾಮ ಕೆಂಗೇರಿ ಉಪನಗರ ಹೊರ ವರ್ತುಲ ರಸ್ತೆಯಲ್ಲಿ ವಿಪರೀತ ದಟ್ಟಣೆ ಉಂಟಾಗುತ್ತಿದೆ.

ರಸ್ತೆಯಲ್ಲೇ ಕಿಲೋಮೀಟರ್‌ಗಟ್ಟಲೆ ವಾಹನಗಳು ನಿಂತಲ್ಲೇ ನಿಂತಿರುತ್ತವೆ. ಆ ಅವಧಿಯಲ್ಲಿ ಪ್ರಯಾಣ ದುಸ್ತರವಾಗಿದೆ. ಸಂಚಾರ ದಟ್ಟಣೆ ಕಾರಣ ಕೆಲ ದ್ವಿಚಕ್ರ ವಾಹನ ಸವಾರರು ಪಾದಚಾರಿ ಮಾರ್ಗಗಳ ಮೇಲೆಯೂ ವಾಹನ ಓಡಿಸುತ್ತಾರೆ.

ಮೈಸೂರು ರಸ್ತೆಯಿಂದ ಬರುವ ವಾಹನಗಳು ಚಲಘಟ್ಟ ಮೂಲಕ ಭೀಮನಕುಪ್ಪೆ ಮಾರ್ಗವಾಗಿ ವಿನಾಯಕನಗರ, ರಾಮೋಹಳ್ಳಿ, ಕೇತೋಹಳ್ಳಿ, ದೊಡ್ಡ ಆಲದಮರ, ಚುಂಚನಕುಪ್ಪೆ, ಚಂದ್ರಪ್ಪ ಸರ್ಕಲ್‌ಗೆ ಸುತ್ತು ಹಾಕಿಕೊಂಡು ಹೋಗಬೇಕಾಗಿದೆ. ಹೊಯ್ಸಳ ವೃತ್ತ, ಶಂಕರ್ ನಾಗ್ ವೃತ್ತ ಹಾಗೂ ಒಂದನೇ ಮುಖ್ಯರಸ್ತೆ ಸೇತುವೆ ಬಳಿ ಸಂಚರಿಸುವುದೇ ಕಷ್ಟ.

ಅದರಲ್ಲೂ ವಾರಾಂತ್ಯ, ರಜಾ ದಿನಗಳು ಹಾಗೂ ದಟ್ಟಣೆ ಅವಧಿಯಾದ ಬೆಳಿಗ್ಗೆ 7ರಿಂದ 11, ಸಂಜೆ 4ರಿಂದ 8ರವರೆಗೆ ಈ ಮಾರ್ಗದಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. `ಐದಾರು ಕಿಲೋಮೀಟರ್ ಸುತ್ತು ಹಾಕಿಕೊಂಡು ಹೋಗಬೇಕಾಗಿರುವ ಕಾರಣ ಉದ್ಯೋಗಿಗಳು ನಿಗದಿತ ಸಮಯಕ್ಕೆ ಕಚೇರಿ ತಲುಪಲು ಹಾಗೂ ವಿದ್ಯಾರ್ಥಿಗಳು ಶಾಲಾ– ಕಾಲೇಜಿಗೆ ತೆರಳಲು ಕಷ್ಟವಾಗಿದೆ. ನಿತ್ಯ ಸಾವಿರಾರು ಬಸ್, ಕಾರು, ದ್ವಿಚಕ್ರ ವಾಹನಗಳು ಸಂಚರಿಸುತ್ತವೆ. ದಟ್ಟಣೆ ಜೊತೆಗೆ ದೂಳು ವಾಹನ ಸವಾರರನ್ನು ಹೈರಾಣಾಗಿಸುತ್ತಿದೆ.

ರಾಮೋಹಳ್ಳಿ ರೈಲ್ವೆ ಕೆಳಸೇತುವೆ ಮೂಲಕ ಕುಂಬಳಗೋಡು ಕೈಗಾರಿಕಾ ಪ್ರದೇಶಕ್ಕೆ ಒಂದು ಕಿಲೋ ಮೀಟರ್ ದೂರದವರೆಗೆ ರಸ್ತೆ ಬಂದ್ ಆಗಿರುವ ಕಾರಣ ಸುತ್ತು ಹಾಕಿಕೊಂಡು ಹೋಗುವಂತಾಗಿದೆ. ವಿಪರೀತ ದಟ್ಟಣೆಯಿಂದ ವಾಹನ ಸವಾರರು ಪರದಾಡುತ್ತಿದ್ದು, ಸಮಸ್ಯೆ ತೀವ್ರಗೊಂಡಿದೆ.

ಗೊಲ್ಲಹಳ್ಳಿ ಬಳಿ ಹಲವು ಕ್ರಷರ್‌ಗಳಿವೆ. ಕಲ್ಲು, ಜಲ್ಲಿ, ಮರಳು, ಟಿಪ್ಪರ್ ಲಾರಿಗಳ ಸಂಚಾರದಿಂದ ರಸ್ತೆಗಳು ಹದಗೆಟ್ಟಿವೆ. ಎಸ್.ಗೊಲ್ಲಹಳ್ಳಿ, ಕುರುಬರಪಾಳ್ಯ ಹಾಗೂ ಇತರ ಕಡೆಯಿಂದ ಬರುವ ಟಿಪ್ಪರ್ ಲಾರಿಗಳು ಈ ಹಿಂದೆ ಗೇರುಪಾಳ್ಯ ರೈಲ್ವೆ ಗೇಟ್ ಮೂಲಕ ಮೈಸೂರು ರಸ್ತೆ ಸೇರುತ್ತಿದ್ದವು.

ರೈಲ್ವೆ ಗೇಟ್ ಮುಚ್ಚಿರುವುದರಿಂದ ಭೀಮನಕುಪ್ಪೆ ಕ್ರಾಸ್, ಹೊಸ ಬೈರೊಹಳ್ಳಿ ಮೂಲಕ ಕೆಂಗೇರಿ ಉಪನಗರ ಮಾರ್ಗವಾಗಿ ಮೈಸೂರು ರಸ್ತೆ ತಲುಪುತ್ತಿವೆ. ಪ್ರತಿದಿನ ನೂರಾರು ಲಾರಿಗಳು ಈ ಮಾರ್ಗದಲ್ಲಿ ಸಂಚರಿಸುತ್ತಿರುವುದರಿಂದ ದ್ವಿಚಕ್ರ ವಾಹನ ಸವಾರರು ಸಾಗುವುದೇ ಕಷ್ಟವಾಗಿದೆ. ದೂಳಿನ ಸಮಸ್ಯೆಯೂ ಹೆಚ್ಚಿದೆ.

ಇದರ ನಡುವೆ ಗೇರುಪಾಳ್ಯ ಗ್ರಾಮಕ್ಕೆ ಸರಿಯಾದ ಬಸ್ ಸೇವೆ ಇಲ್ಲ. ಮೂರು ಕಿಲೋ ಮೀಟರ್ ನಡೆದುಕೊಂಡು ಹೋಗಿ ಬಸ್ ಹತ್ತಬೇಕು. ಇಲ್ಲವೇ ಖಾಸಗಿ ವಾಹನದಲ್ಲಿ ಪ್ರಯಾಣಿಸಬೇಕಿದೆ.

ರಾಮೋಹಳ್ಳಿ ಗೇಟ್ ಬಳಿ ಕೆಳ ಸೇತುವೆ ನಿರ್ಮಾಣ ಕಾಮಗಾರಿ ನಡೆಯುತ್ತಿದೆ

'ನಿಗದಿತ ಸ್ಥಳ ತಲುಪಲು ಆಗುತ್ತಿಲ್ಲ'

'ಕೆಳ ಸೇತುವೆ ನಿರ್ಮಾಣ ಕಾಮಗಾರಿಗಾಗಿ ರೈಲ್ವೆ ಗೇಟ್ ಬಂದ್ ಮಾಡಿರುವುದರಿಂದ ಸಾಕಷ್ಟು ತೊಂದರೆ ಆಗಿದೆ. ದೊಡ್ಡ ಆಲದ ಮರ, ರಾಮೋಹಳ್ಳಿ ಕಡೆಗೆ ಹೋಗಲು 5–6 ಕಿಲೋ ಮೀಟರ್ ಸುತ್ತು ಹಾಕಿಕೊಂಡು ಹೋಗಬೇಕು. ವಾಹನಗಳು ಸಾಲುಗಟ್ಟಿ ನಿಲ್ಲುವುದು ಸಾಮಾನ್ಯವಾಗಿದೆ. ಸಮಯಕ್ಕೆ ಸರಿಯಾಗಿ ನಿಗದಿತ ಸ್ಥಳ ತಲುಪಲು ಆಗುತ್ತಿಲ್ಲ. ಟ್ರಾಫಿಕ್‌ನಲ್ಲಿ ನಿಂತು ಸುಸ್ತು ಆಗಿರುತ್ತೇವೆ. ಕಾಮಗಾರಿ ಮುಗಿಯಲು ಒಂದು ವರ್ಷ ಬೇಕಾಗಿದೆ. ಅಲ್ಲಿಯವರೆಗೂ ಸಮಸ್ಯೆ ತಪ್ಪಿದಲ್ಲ' ಎಂದು ಸ್ಥಳೀಯ ನಿವಾಸಿ ರಾಜಶೇಖರ್ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜಶೇಖರ್

ICMR INDIAN COUNCIL OF MEDICAL RESEARCH — ICMR Bioethics Unit

DEPARTMENT OF HEALTH RESEARCH, MIN. OF HEALTH & FAMILY WELFARE, GOVT.OF INDIA
ICMR Complex, 2nd Floor, Poojanahalli Road, Kannamangala Post, Bengaluru-562110

Advt. No.02/2025-26/Project Position/IBU

VACANCY NOTIFICATION

Applications are invited for position of Consultant (Medical / Non -Medical) to be filled up purely on temporary contract basis at ICMR Bioethics Unit, Bengaluru. For details, please visit our websites at **www.icmr.gov.in and www.ethics.ncdirinida.org.** Please note that, corrigendum/addendum/further information; if any, in respect of this advertisement will be published on our websites only.

Sd/-
Director General-ICMR

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮು.ಇಂ(ವಿ)/ಪ್ರ(ಕಾ)ವಬೆ/ಅಇಂ(ಕ)/ಸ.ಇಂ–1/ಎಫ್–432,433,434/2025–26/11019–20 ದಿನಾಂಕ: 27.02.2026

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಕೆಳಕಂಡ ವಿಚಾರಣೆಗಳಿಗೆ ಬಿಡ್‌ಗಳನ್ನು ಆಹ್ವಾನಿಸಿದೆ:

1) **ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮುಇಂವಿ/ಪ್ರ(ಕಾ)ವಿ/ಬೆಂವ/ಭಾ.ಟಿ.ಕೆ–32/2025–26 ಅಳ್ಳಿಮಾರನಹಳ್ಳಿ ಕರೆ–3** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆಯ, **ಅಳ್ಳಿಮಾರನಹಳ್ಳಿ** ಉಪಕೇಂದ್ರದಲ್ಲಿ ಅಧಿಕ 1x8ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು ಅಳವಡಿಸುವುದು ಹಾಗೂ ಹಾಲಿ ಇರುವ 66ಕೆ.ವಿ ಅಳ್ಳಿಮಾರನಹಳ್ಳಿ ಉಪಕೇಂದ್ರದವರೆಗೆ ಕೊಯೋಟ್ ವಾಹಕದಿಂದ ಲಿಲೋ ಮಾರ್ಗದ ನಿರ್ಮಾಣ ಹಾಗೂ 66/11ಕೆ.ವಿ ಅಳ್ಳಿಮಾರನಹಳ್ಳಿ ಉಪಕೇಂದ್ರದಲ್ಲಿ ಒಂದು 66ಕೆ.ವಿ ಟರ್ಮಿನಲ್ ಬೇ ನಿರ್ಮಾಣ ಮಾಡಲು ಸೇರಿದಂತೆ ಎಲ್ಲಾ ಸರಿ ಹೊಂದುವ ಸಾಮಗ್ರಿಗಳು/ ಉಪಕರಣಗಳ ಸರಬರಾಜು (**1x8 ಎಂವಿಎ ವಿದ್ಯುತ್ ಪರಿವರ್ತಕ ಹಾಗೂ 11ಕೆ.ವಿ ಛೇದಕಗಳು ಹೊರತುಪಡಿಸಿ**) ಮತ್ತು ಎಲ್ಲಾ ಸರಿಹೊಂದುವ ಸಾಮಗ್ರಿಗಳು/ ಉಪಕರಣಗಳ ಸ್ಥಾಪನೆ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವ ಬಗ್ಗೆ

2) **ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮುಇಂವಿ/ಪ್ರ(ಕಾ)ವಿ/ಬೆಂವ/ಭಾ.ಟಿ.ಕೆ–33/2025–26** ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಮೆ॥ ಹಿಂದೂಸ್ತಾನ್ ಕೊಕಾ ಕೋಲಾ ಬೆವರೇಜಸ್ ಪ್ರೈವೇಟ್ ಲಿಮಿಟೆಡ್, ಬಿಡದಿ ಇಂಡಸ್ಟ್ರಿಯಲ್ ಏರಿಯಾದ ಸರಹದ್ದಿನಲ್ಲಿ 220ಕೆವಿ ಬಿಡದಿ–ಸೋಮನಹಳ್ಳಿ ಜೋಡಿ ಮಾರ್ಗದಲ್ಲಿ ಹಾನಿಗೊಂಡ ಗೋಪುರ ನಂ:41 ಅನ್ನು ಎಲ್ಲಾ ಸರಿಹೊಂದುವ ಸಾಮಗ್ರಿಗಳು/ ಉಪಕರಣಗಳ ಸರಬರಾಜು ಮತ್ತು ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸ್ಥಾಪನೆ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸವುದು ಮೆ॥ ಹಿಂದೂಸ್ತಾನ್ ಕೊಕಾ ಕೋಲಾ ಬೆವರೇಜಸ್ ಪ್ರೈವೇಟ್ ಲಿಮಿಟೆಡ್ ರವರ ವತಿಯಿಂದ ಠೇವಣಿ ವಂತಿಗೆ ಕಾಮಗಾರಿ ಆಧಾರದ ಮೇಲೆ

3) **ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮುಇಂವಿ/ಪ್ರ(ಕಾ)ವಿ/ಬೆಂವ/ಭಾ.ಟಿ.ಕೆ–34/2025–26** ರ ಅನ್ವಯ **ಪೂರ್ಣ ಗುತ್ತಿಗೆ ಆಧಾರದ ಮೇಲೆ** ಹಾರೋಹಳ್ಳಿ ತಾಲ್ಲೂಕಿನ, ಬೆಂಗಳೂರು ದಕ್ಷಿಣ ಜಿಲ್ಲೆಯ, 220ಕೆವಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಹಾರೋಹಳ್ಳಿ ಉಪ–ಕೇಂದ್ರದಲ್ಲಿ ರಕ್ಷಣೆ ವ್ಯವಸ್ಥೆಯ ನವೀಕರಣ (Upgradation of protection system) ಮಾಡುವ ಕಾಮಗಾರಿ ಎಲ್ಲಾ ಸರಿಹೊಂದುವ ಸಾಮಗ್ರಿಗಳು/ ಉಪಕರಣಗಳ ಸರಬರಾಜು ಮತ್ತು ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸ್ಥಾಪನೆ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸವುದು ಮೆ॥ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರ ವತಿಯಿಂದ ಠೇವಣಿ ವಂತಿಗೆ ಕಾಮಗಾರಿ ಆಧಾರದ ಮೇಲೆ (DCW basis).

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿನ ವಿಷಯದ ವಿಚಾರಣೆಯ ಕುರಿತು ವಿವರವಾದ ಅಧಿಸೂಚನೆಯನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 10.03.2026 ರಂದು ಅಥವಾ ತದ ನಂತರ** ಲಾಗಿನ್ ಆಗಿ ಪಡೆಯಬಹುದು. ಇನ್ನಿತರೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್), ಪ್ರಸರಣ (ಕಾರ್ಯಾಚರಣೆ) ವಲಯ, ಕವಿಪ್ರನಿನಿ, ಆನಂದರಾವ್ ವೃತ್ತ, ಬೆಂಗಳೂರು – 560009.

KVB Karur Vysya Bank Smart way to bank

THE KARUR VYSYA BANK LIMITED REGISTERED & CENTRAL OFFICE ERODE ROAD, KARUR – 639 002

ENQUIRY NOTICE

Whereas you, Mrs. Ashwini M, Manager (Under Suspension), Employee no.13896, W/o Mr. Ravi N, resident of No 102, 17B Sahaydri Apartment, MV Layout, Sonnennahalli, Bangalore – 560056 have been placed under Suspension effective from 08.10.2025 pending contemplation of domestic enquiry for alleged misconduct as per Charge Sheet No.: HRD/O-58/OFLT-26003/2025 dated 10.12.2025 issued by the Disciplinary Authority of the Bank under Karur Vysya Bank Officer Employees' (Conduct) Regulations and Karur Vysya Bank Officer Employees (Discipline And Appeal) Regulations which was duly served upon you.

The Disciplinary Authority ordered departmental inquiry against you vide order dated 28.01.2026. The Inquiring Authority appointed by the Disciplinary Authority has given opportunity to you for attending the Preliminary Enquiry fixed at HRD, Central Office, Karur on 26.02.2026 to record your statement. However, you failed to appear for the enquiry. The Inquiring Authority has fixed the next date of enquiry on 18.03.2026 at The Karur Vysya Bank Limited, Divisional Office, No. 6, 2nd Floor, Vasavi Temple Road, Sajjan rao Circle, V.V. Puram, Bangalore – 560004 at 10.00 AM. Please note that your attendance is necessary to ensure free and fair enquiry in the matter. Failure to comply with this notice will result in conducting the enquiry ex-parte which please note.

(SURESH BABU A)
ASST. GENERAL MANAGER
DISCIPLINARY AUTHORITY

PUBLIC NOTICE

NOTICE is hereby given that, our client intends to transact with the lands situated in Parappanna Agrahara Village, Begur Hobli, Bangalore South Taluk, from Mr B K Ramaiah, which is more fully described in the Schedule hereunder and hereinafter to as the **"Schedule Property".**

Any person having any subsisting claim, right, title or interest, in respect of the Schedule Property or any part thereof, in any manner including by way of sale, transfer, assignment, exchange, charge, tenancy, sub-tenancy, lease, sub-lease, license, mortgage, inheritance, share, gift, devise, lien, maintenance, easement, encumbrance, trust, covenant, possession, beneficial interest or pre-emption or under any agreement or other disposition or under any suit or award passed by any Court or Authority, arbitrator, lis-pendens, power of attorney, bequest, FSI, development rights, partnership, family arrangement or settlement or otherwise encumbrance of any nature howsoever ("Claim"), are hereby requested to respond with documentary proof to the undersigned within 15 (Fifteen) days from the date of publication of this notice, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim.

SCHEDULE PROPERTY

Survey No	Extent including kharabh		Boundaries			
	Acre	Gunta	East By	West By	North By	South By
77	5	21	Land in Survey No-83	Kudlu Village boundary and land in Survey No-49	Government land - Kudlu Village boundary	Land in Survey No-45
83	4	0	60 feet wide public road	Land in Survey No-77	Government land - Kudlu Village boundary	Land in Survey No-45

Date:04.03.2026
Bangalore

Pavithra Thammaiah
Khaitan & Co LLP
Embassy Quest, 3rd Floor, 45/1, Magrath Road
Bengaluru-560 025, T: +91 80 43397000

ನೈಋತ್ಯ ರೈಲ್ವೆ

ಉದ್ಯೋಗ ಸೂಚನೆ ಸಂಖ್ಯೆ ಸಿಎಂಪಿ/01/ಜಿಎಡ್
ದಿನಾಂಕ 26.02.2026

ಮೈಸೂರು ವಿಭಾಗದಲ್ಲಿ ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ಗುತ್ತಿಗೆ ವೈದ್ಯಕೀಯ ಅಧಿಕಾರಿಗಳನ್ನು (ಸಿಎಂಪಿಗಳ) ಜಿಡಿಎಂ ಒಗಳಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸಂದರ್ಶನಕ್ಕಾಗಿ ಅಧಿಸೂಚನೆ.

ಕೆಲಸದ ವಿವರಣೆ: ನೈಋತ್ಯ ರೈಲ್ವೆ, ಮೈಸೂರು ವಿಭಾಗವು 03 ಮೂರು (01 ಯುಆರ್, 01 ಎಸ್‌ಸಿ, 01 ಇಡಬ್ಲ್ಯೂಎಸ್) ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ಗುತ್ತಿಗೆ ವೈದ್ಯಕೀಯ ಅಧಿಕಾರಿಗಳನ್ನು (ಸಿಎಂಪಿಐ) ಜಿಡಿಎಂಒಗಳಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಒಂದು ವರ್ಷದ ಅವಧಿಗೆ ಅಥವಾ ನಿಯಮಿತ ಐಆರ್‌ಎಚ್‌ಎಸ್ ವೈದ್ಯರನ್ನು ನೇಮಿಸಿಕೊಳ್ಳುವವರೆಗೆ ನೈಋತ್ಯ ರೈಲ್ವೆಯ ಮೈಸೂರು ವಿಭಾಗದಲ್ಲಿ ಯಾವುದು ಮೊದಲು ಬರುತ್ತದೆಯೋ ಅದುವರೆಗೆ ನೇಮಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ.

ಸಂದರ್ಶನದ ಸ್ಥಳ: ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿಯ ಕಛೇರಿ, ಡಿಆರ್‌ಎಂ ಕಛೇರಿ ಕಟ್ಟಡ, ಇರ್ವಿನ್ ರಸ್ತೆ, ಮೈಸೂರು–570001.

ಸಂದರ್ಶನ ದಿನಾಂಕ: 11–03–2026 (ಬುಧವಾರ)

ಸಮಯ: ಮುಂಜಾನೆ 10.00 ರಿಂದ ಮಧ್ಯಾಹ್ನ 2.00 ವರೆಗೆ

ಅಧಿಸೂಚನೆಯ ಸಂಪೂರ್ಣ ವಿವರಗಳಿಗಾಗಿ, ಆಕಾಂಕ್ಷಿಗಳು ವೆಬ್‌ಸೈಟ್‌ಗೆ ಲಾಗಿನ್ ಆಗಬಹುದು: www.swr.indianrailways.gov.in (ನಮ್ಮ ಬಗ್ಗೆ ವಿಭಾಗಗಳು–ಮೈಸೂರು–ಸಿಬ್ಬಂದಿ ಶಾಖೆ– ಅಧಿಸೂಚನೆ/ಆಯ್ಕೆಗಳು)

ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ/ ಮೈಸೂರು

ಪಿಯುಬಿ/956/ಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025–26

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ3ವರೆಗೆ ರಿಯಾಯಿತಿಯನ್ನು ಪಡೆದು ಆನಂದಿಸಿ.

South Western Railway - SWR | SWRRLY | @SWRAILWAYHQ | @sw_railways

PUBLIC NOTICE

Publics are hereby informed that my client **M/s DS-Max Properties Pvt. Ltd.**, having its office at No. 1794, 14th Main, 30th Cross, HBR Layout, 1st Stage, 5th Block, Bengaluru- 43 and intend to enter into Absolute Sale Deed with Owner/s **1. Sri K.Amaresh Reddy** s/o Sri Krishna Reddy, **2. Sri Madhusudhan.V** s/o Sri Venkatesh Reddy **3. Sri Naveen Kumar.C.R** s/o Sri Ramakrishna and **4. Sri Sudhakar.V** s/o Sri Venkatesh Reddy are the absolute joint owner/s of converted land property bearing old Sy.No.30 (30-Block-II), New Sy.No.**166**, which measuring **5 acres**, situated at **Kommagatta Village**, Kengeri Hobli, Bangaluru South Taluk, and bounded on **East by:** Land of Sy.No.161, **West by:** Land of Sy.No.30, Now Road, **North by:** Land of Sy.No.165, **South by:** Land of Sy.No.30, Now BDA Flats and referred to as **"schedule property"**

Any person or Any Authority or Any promoters having any asserting right, title, interest and claims to oppose for Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **7** days from the date of this notice, if any objections fails to comply, my client shall take further steps and deemed for entering into Absolute Sale Deed of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

IN THE HON'BLE COURT OF PRINCIPAL CITY CIVIL COURT AND SESSIONS JUDGE AT BENGALURU (CCH-1)

MIS. NO. 220 OF 2026

Between : Vyakti Vikas Kendra, India (VVKI), A Registered Public Charitable Trust, having its registered office at No. 19, 39th A Cross, 11th Main, 4th "T" Block, Jayanagar, Bengaluru – 560041.

Represented by its Trustees

1. **Sri. Rohit Sikka**, Son of Romesh Kumar Sikka, aged about 50 years, residing at Art of Living International Center, 21st Km. Kanakapura Road, Udayapura, Bangalore South, Karnataka- 560082,
2. **Smt. Sanjitha M. Chudgar**, Daughter of Mahendra Kumar, aged about 59 years, residing at Art of Living International Center, 21st Km. Kanakapura Road, Udayapura, Bangalore South, Karnataka-560082

...Petitioner

-Versus- Nill ... Respondent

PUBLIC NOTICE BY PAPER PUBLICATION

Whereas the above named petitioners have lodged this Petition under Section 92 of CPC for grant of Permission to sell Schedule Trust Property. Any person has lawful vested interest in the petitioner trust or schedule properties may lodge Caveat/objection and oppose issuance of such permission on the next date of hearing scheduled **on 06/04/2026 in the forenoon at 11 'O' Clock** either in person or through authorized agent or through Advocate, failing which the matter will be proceeded with.

SCHEDULE PROPERTY

1. All piece and parcel of land bearing survey No. 965/1 measuring an extent of 1.45 Acres, 965/3 measuring an extent of 1.95 Acres, survey No. 966/2 measuring an extent of 1.07 Acres, 967/2 measuring an extent of 1.57 Acres, 968/2 measuring an extent of 3.39 Acres in total measuring an extent of 9.43 Acres situated at Tamil Nadu State, Coimbatore North Registration District Periyanaickenpalayam Sub-Registration District Coimbatore North Taluk No. 2 Gudalur Village, bounded on and by:
East by : Property bearing S.F.No. 958 and 957
West by : Property bearing S.F. Nos. 967/1 and 966/1
North by : Property bearing S.F. No. 969/2
South by : Property bearing S.F.No. 964

2. All piece and parcel of land bearing survey No.953 measuring an extent of 0.25 Acres situated at Tamil Nadu State, Coimbatore North Registration District Periyanaickenpalayam Sub-Registration District Coimbatore North Taluk No. 2 Gudalur Village, bounded on and by:
East by : Property bearing S.F. No. 950
West by : Property bearing S.F. No. 958
North by : Property bearing S.F. No. 954
South by: Property bearing S.F. No. 953 (remaining land) **North**: S.F. No. 954 **East**: S.F. No. 950
West: S.F. No. 958
South: S.F. No. 953 (remaining land)

3. All piece and parcel of land bearing survey No.958/2 measuring an extent of 0.18 Acres situated at Tamil Nadu State, Coimbatore North Registration District Periyanaickenpalayam Sub-Registration District Coimbatore North Taluk No. 2 Gudalur Village, bounded on and by:
East by : Property bearing S.F. No. 953 (Pathway)
West by : Property bearing S.F. No. 957/1
North by : Property bearing S.F. No. 957/1
South by : Property bearing S.F. No. 958/2 (remaining land)

Given Under the Seal and Signature of this Court on this the 26th day of the month of February of year 2026.

By Order Of Court
Sd/- Senior Sheristedar
City Civil Court, Bengaluru.

Prajwal Mahesh B.B.A,LL.B.[Hons], LL.M.,
Advocate & Attorney at Law
No. 799, Ground floor, 15th Cross, 12th Main, Saraswathipuram, Mysuru - 570009
Mob: 9481356378.
Email: prajwalmahesh95@gmail.com

ಚನ್ನಪಟ್ಟಣ ಯೋಜನಾ ಪ್ರಾಧಿಕಾರ
ನಂ. 2850. ಮೊದಲನೇ ಮಹಡಿ, ಚರ್ಚ್ ಸ್ಟ್ರೀಟ್, ರಾಜಾಕೆಂಪೇಗೌಡ ಬಡಾವಣೆ, ಚನ್ನಪಟ್ಟಣ–562160

ಸಂಖ್ಯೆ: ಚಯೋಪ್ರಾ/ಎಲ್‌ಎಒ/23/2025–26 ದಿನಾಂಕ: 03.03.2026

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರಾದ ಶ್ರೀ ಎಂ.ಕೆ. ನಿಂಗಪ್ಪ, ಶ್ರೀ ಜಯರಾಮು ಕೆ. ಶ್ರೀಮತಿ ರಾಧ, ಶ್ರೀ ಪುಟ್ಟರಾಜು ಕೆ., ಶ್ರೀ ಕೆ. ನಾಗೇಶ, ಶ್ರೀಮತಿ ಇಂದ್ರಮ್ಮ, ಶ್ರೀ ಮಹಾದೇವಪ್ಪ ಇವರುಗಳು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಬೆಂಗಳೂರು ದಕ್ಷಿಣ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಚಕ್ಕಲೂರು ಗ್ರಾಮದ ಸರ್ವೆ ಸಂಖ್ಯೆ: 61/4ರ 0ಎ–36ಗುಂ. ಪೈಕಿ 0ಎ–26 ಗುಂಟೆ, ಸ.ನಂ.61/5ರ 0ಎ–14ಗುಂ. ಒಟ್ಟು 1ಎಕರೆ ವಿಸ್ತೀರ್ಣದ ಜಮೀನಿಗೆ ಶೈಕ್ಷಣಿಕ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ.

ಅರ್ಜಿಯನ್ನು ಪರಿಶೀಲಿಸಲಾಗಿ ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/237/ಬೆಮಪ್ರಾ/2009, ದಿನಾಂಕ:19.09.2009ರ ಸುತ್ತೋಲೆಯನ್ವಯ ಪ್ರಶ್ನಿತ ಜಮೀನಿಗೆ ಶೈಕ್ಷಣಿಕ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಚನ್ನಪಟ್ಟಣ ಯೋಜನಾ ಪ್ರಾಧಿಕಾರ ಚನ್ನಪಟ್ಟಣ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಉದ್ದೇಶ
1	ಶ್ರೀ ಎಂ.ಕೆ. ನಿಂಗಪ್ಪ, ಶ್ರೀ ಜಯರಾಮು ಕೆ. ಶ್ರೀಮತಿ ರಾಧ, ಶ್ರೀ ಪುಟ್ಟರಾಜು ಕೆ. ಶ್ರೀ ಕೆ. ನಾಗೇಶ, ಶ್ರೀಮತಿ ಇಂದ್ರಮ್ಮ, ಶ್ರೀ ಮಹಾದೇವಪ್ಪ	ಚನ್ನಪಟ್ಟಣ	ಮಳೂರು	ಚಕ್ಕಲೂರು	61/4 ಮತ್ತು 61/5	0–36 ಗುಂ. ಪೈಕಿ 0–26 ಮತ್ತು 0–14	ಶೈಕ್ಷಣಿಕ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ
					ಒಟ್ಟು	1–00	

ಸಹಿ/– ಸದಸ್ಯ ಕಾರ್ಯದರ್ಶಿಗಳು
ಚನ್ನಪಟ್ಟಣ ಯೋಜನಾ ಪ್ರಾಧಿಕಾರ, ಚನ್ನಪಟ್ಟಣ.

DIPR/BSD/668/SA/2025-26

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ- 561203

ಸಂ.: DPA/TP/CLU/85/2025-26 ದಿನಾಂಕ: 03.03.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು (RTC ರನ್ವಯ)	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಬಿಐಎಪಿಎ ಯೋಜನಾ ಪ್ರಾಧಿಕಾರದ ಮಹಾ ಯೋಜನೆಯಲ್ಲಿನ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಕೀರ್ತನ್ ಬಸವಾರಾಧ್ಯ ಬಿನ್ ಬಸವಾರಾಧ್ಯ ಜಿ.ಎನ್.	ಯಲಹಂಕ	ಹೆಸರುಘಟ್ಟ 2	ಅರಕೆರೆ	195/6	0–10	ವ್ಯವಸಾಯ	ವಸತಿ
2.		ಯಲಹಂಕ	ಹೆಸರುಘಟ್ಟ 2	ಅರಕೆರೆ	195/11	0–25	ವ್ಯವಸಾಯ	ವಸತಿ

ಷರಾ: ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ- 561203

ಸಂ.: DPA/TP/CLU/77/2025-26 ದಿನಾಂಕ: 03.03.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು (RTC ರನ್ವಯ)	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಬಿಐಎಪಿಎ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿನ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಕೆ. ಚಲಪತಿ ಬಿನ್ ಕೃಷ್ಣಪ್ಪರವರ ಪರವಾಗಿ ನೋಂದಾಯಿತ ಜಿಪಿಎ ದಾರರಾದ ವಿಹಾನ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್‌ರ ಪರವಾಗಿ ನಿರ್ದೇಶಕರಾದ ಶ್ರೀ ನಿಲೇಶ್ ಆರ್ ದೇಶಪಾಂಡೆ ಬಿನ್ ರತ್ನಾಕರ್ ವಿ. ದೇಶಪಾಂಡೆ	ದೊಡ್ಡಬಳ್ಳಾಪುರ	ಕಸಬಾ	ದಾಸ ಗೊಂಡನಹಳ್ಳಿ	28/3	0–39	ವ್ಯವಸಾಯ	ವಸತಿ

ಷರಾ: ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ADVERTISEMENT

1. Applications are invited from war widows/ widows of defence personnel killed while on duty, disabled soldiers/ ex servicemen and spouses/ widows of ex- servicemen for running the following SI Side shops at **Air Force Station, Jalahalli (East and West) for period of 01 year initially.**
2. Applications are invited from civilians also. However, category mentioned in Para 1 above will be given priority over Para 2 category.
3. Applications are invited for the following category:

SI. No.	Name of the Shop	Location	Sl. No.	Name of the Shop	Location
EAST AREA					
01	Dry Cleaning shop	ETI	06	Provision shop	Akshaya complex
02	Fruit shop		07	Barber shop	
03	Supper bar		08	Meat shop	
04	Fruit shop	E&ITI	09	Steel box shop	
05	Supper bar	16 TS	10	Wet canteen	Krishna Auditorium
WEST AREA					
01	Car Garage	Tripti complex	05	Cable TV	Tripti complex
02	Tailor shop		06	Waste Food collection	All over station
03	Steel box shop		07	Newspaper collection	West domestic area
04	Mochi shop				

4. Further, considering the prime locality and scope for progression, interested parties are promoted to set up franchise like shops including safal vegetable shop, Hallimane vegetable shop, Karnataka state fisheries co-operative shop, Nandu's, 99 store, organics etc.
5. The space earmarked for the shops will be run as SI venture. Salient QRs for running the shops is as follows:
   (a) The shops should be brought up to desired standards on the expenses of vendor.
   (b) Sanitation and hygiene towards operating the shops is to be met.
   (c) Monthly rebate, rent and allied charges as applicable will be paid by the vendor to SI Fund and to BSO through MRO as per procedure in vogue.
6. Application forms can be procured on payment of Rs.500/- (non refundable) from 05 Mar 2026 to 18 Mar 2026, between 0900hrs to 1300hrs on all working days (except Saturdays & Sundays). Earnest money @ Rs.5,000/- per application must be deposited by applicant from 07 Mar 2026 to 20 Mar 2026 between 0900hrs to 1300hrs on all working days (except Saturdays & Sundays). Same can be collected from Service Institute office, Air force Station Jalahalli (East) Bangalore.
7. Contracts will be awarded through Auction Process. Minimum bench marking rebates will be set by AFS Jalahalli. Box will be placed at main gate, Air Force Station, Jalahalli (East), Bangalore-13 from **07 Mar 2026 to 23 Mar 2026** (1000hrs). Application forms should be in sealed envelopes separate for each shop with the name of shop written on it. If applied for more than one shop, application form for each shop should have copies of required documents. A vendor will be allotted not more than two shops. All applicants are to drop the sealed application envelopes in the said box which will be sealed at 1000hrs on **23 Mar 2026,** and applications will be opened at 1100hrs on **23 Mar 2026,** by BOO in the presence of applicants. In case selected applicants do not take over the allotment shop within the stipulated time, the earnest money will be forfeited and contract will not be awarded.
8. Interested persons are to attach a photo copy of the below mentioned documents along with the application form and produce the original ID card and original documents at the time of opening of applications for verification. Non adherence will result in disqualification of the applicant. Applicants not present during the Auctioning will be disqualified. The shops will be allotted based on the highest bidders for the rebates to be paid, in the Auction process, in presence of the applicants.
   (i) Discharge book (ii) PPO No. (iii) Adhaar card
   (iv) Education certificate (v) Bank pass book (vi) TIN/ GST /PAN No.
   (vii) FSSAI certificate (Supper bar, Sweet shop and restaurants)
9. The final call on allotment and location of the shops would be undertaken by an independent BOO depending on the responses received, considering the proposals for setting up of stalls not included in the main list.

Service Institute office, Air Force Station Jalahalli (East) Bangalore 13, Tele : 080-28399009/ 7235

₹18.55 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

8,335 ಎಲ್.ಎಸ್.ಡಿ ಸ್ಟ್ರಿಪ್ಸ್ ವಶಕ್ಕೆ ಪಡೆದ ಸಿಸಿಬಿ ಪೊಲೀಸರು

ಪ್ರಜಾವಾಣಿ ವಾರ್ತೆ

ಅಶ್ವಿನ್

ಮುಬಿನಾ

ಲಿಂಗರಾಜ್ ದಾಸ್

ಅಪರಾಧ ಸುದ್ದಿ

ಬೆಂಗಳೂರು: ಸಿಸಿಬಿಯ ಮಾದಕ ದ್ರವ್ಯ ವಿಭಾಗದ ಪೊಲೀಸರು, ಬಾಗಲೂರು ಭಾಗದಲ್ಲಿ ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ₹18 ಕೋಟಿ ಮೌಲ್ಯದ ವಿವಿಧ ಮಾದರಿಯ ಡ್ರಗ್ಸ್ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲದೇ, ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ₹55 ಲಕ್ಷ ಮೌಲ್ಯದ ಗಾಂಜಾ ಜಪ್ತಿ ಮಾಡಿದ್ದಾರೆ. ಒಟ್ಟು ₹18.55 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿ, ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

ಸಿಸಿಬಿ ಕಾರ್ಯಾಚರಣೆಯಲ್ಲಿ ಕೇರಳದ ಅಶ್ವಿನ್ (27) ಹಾಗೂ ಮುಬಿನಾ ನಿಜಾಮ್ (25) ಅವರು ಸಿಕ್ಕಿಬಿದ್ದಿದ್ದಾರೆ.

ಆರೋಪಿಗಳಿಂದ 8,335 ಎಲ್‌ಎಸ್‌ಡಿ ಸ್ಟ್ರಿಪ್ಸ್, ಐದು ಕೆ.ಜಿ ಹೈಡ್ರೊಗಾಂಜಾ, 534 ಗ್ರಾಂ ಚರಸ್, ಎರಡು ಮೊಬೈಲ್ ಫೋನ್, ಕೃತ್ಯಕ್ಕೆ ಬಳಸಿದ ಒಂದು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಮಾಧ್ಯಮಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

‘ಅಶ್ವಿನ್ ಹಾಗೂ ಮುಬಿನಾ ನಿಜಾಮ್ ಅವರು ಬಾಗಲೂರಿನ ಅಪಾರ್ಟ್‌ಮೆಂಟ್‌ನಲ್ಲಿ ಫ್ಲ್ಯಾಟ್‌ವೊಂದನ್ನು ಬಾಡಿಗೆಗೆ ಪಡೆದು ನೆಲಸಿದ್ದರು. ಆರು ವರ್ಷಗಳಿಂದ ಸಹಜೀವನ ನಡೆಸುತ್ತಿದ್ದರು. ಇದೇ ಪ್ರಕರಣದ ಆರೋಪಿ ವಿನ್ಸೆಂಟ್ ಎಂಬಾತ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಫ್ಲ್ಯಾಟ್‌ನಲ್ಲಿಯೇ ಸಂಗ್ರಹ: ‘ನಗರದಲ್ಲಿ ಇದೇ ಮೊದಲ ಬಾರಿಗೆ 8,335 ಎಲ್‌ಎಸ್‌ಡಿ ಸ್ಟ್ರಿಪ್ಸ್ ವಶಕ್ಕೆ ಪಡೆಯಲಾಗಿದೆ. ಬಾಡಿಗೆಗೆ ಪಡೆದಿದ್ದ ಫ್ಲ್ಯಾಟ್‌ನಲ್ಲಿ ವಿವಿಧ ಮಾದರಿಯ ಡ್ರಗ್ಸ್ ಅನ್ನು ಆರೋಪಿಗಳು ಸಂಗ್ರಹಿಸಿಕೊಂಡು ಮಾರಾಟ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ವಿದ್ಯಾರ್ಥಿಗಳು, ಉದ್ಯೋಗಿಗಳಿಗೆ ಡ್ರಗ್ಸ್ ಮಾರಾಟ: ವಿದ್ಯಾರ್ಥಿಗಳು, ಸಾಫ್ಟ್‌ವೇರ್ ಕಂಪನಿಯ ಉದ್ಯೋಗಿಗಳಿಗೆ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಒಡಿಶಾ ಮೂಲದ ಡ್ರಗ್ ಪೆಡ್ಲರ್‌ನನ್ನು ವೈಟ್‌ಫೀಲ್ಡ್ ಪೊಲೀಸರು ಬಂಧಿಸಿದ್ದಾರೆ. ಲಿಂಗರಾಜ್ ದಾಸ್ ಬಂಧಿತ ಆರೋಪಿ. ಅವರಿಂದ ₹55 ಲಕ್ಷ ಮೌಲ್ಯದ 27 ಕೆ.ಜಿ. ಗಾಂಜಾ, 3 ಕೆ.ಜಿ. 200 ಗ್ರಾಂ ಆ್ಯಶಿಸ್ ಆಯಿಲ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ದೇವರ ಚಿತ್ರ ರೂಪದಲ್ಲಿ ಎಲ್‌ಎಸ್‌ಡಿ ಸ್ಟ್ರಿಪ್ಸ್

‘ದೇವರ ಚಿತ್ರ ಸೇರಿ ವಿವಿಧ ಚಿತ್ರಕಲೆಗಳ ರೂಪದಲ್ಲಿ ಎಲ್‌ಎಸ್‌ಡಿ ಸ್ಟ್ರಿಪ್ಸ್ ಮಾರಾಟ ಮಾಡುತ್ತಿದ್ದರು. ಅಶ್ವಿನ್ ಹಾಗೂ ಮುಬಿನಾ ನಿಜಾಮ್‌ಗೆ ವಿನ್ಸೆಂಟ್ ಎಂಬಾತ ಥಾಯ್ಲೆಂಡ್‌ನಿಂದ ವಿಮಾನದ ಮೂಲಕ ಕೇರಳಕ್ಕೆ ಡ್ರಗ್ಸ್ ಕಳುಹಿಸುತ್ತಿದ್ದ. ಅಲ್ಲಿಂದ ಬೆಂಗಳೂರಿಗೆ ಪೂರೈಸಲಾಗುತ್ತಿತ್ತು. ವಿನ್ಸೆಂಟ್ ಸೂಚಿಸಿದ ಜಾಗದಲ್ಲಿ ಅಶ್ವಿನ್, ಮೊಬಿನಾ ನಿಜಾಮ್ ಅವರು ಡ್ರಗ್ಸ್ ಇಡುತ್ತಿದ್ದರು. ಪ್ರಕರಣದಲ್ಲಿ ಫ್ಲ್ಯಾಟ್ ಮಾಲೀಕನ ಪಾತ್ರದ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಸಿಸಿಬಿಯ ಮಾದಕ ದ್ರವ್ಯ ವಿಭಾಗದ ಪೊಲೀಸರು ವಶಪಡಿಸಿಕೊಂಡಿರುವ ವಿವಿಧ ಮಾದರಿಯ ಡ್ರಗ್ಸ್ ಅನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಪರಿಶೀಲಿಸಿದರು

ಚಾಕೊಲೇಟ್, ಬಿಸ್ಕತ್ ಬಾಕ್ಸ್‌ನಲ್ಲಿ ಹೈಡ್ರೊಗಾಂಜಾ

ಎಸಿಪಿ ಎಚ್.ಕೆ.ಮಹಾನಂದ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಿದೇಶದಿಂದ ಅಂಚೆಯ ಮೂಲಕ ಪಾರ್ಸೆಲ್‌ನಲ್ಲಿ ತರಿಸಿಕೊಳ್ಳುತ್ತಿದ್ದ 1.5 ಕೆ.ಜಿ. ಹೈಡ್ರೊಗಾಂಜಾವನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಚಾಕೊಲೇಟ್ ಹಾಗೂ ಬಿಸ್ಕತ್ ಬಾಕ್ಸ್‌ನಲ್ಲಿ ಹೈಡ್ರೊಗಾಂಜಾವನ್ನು ವ್ಯವಸ್ಥಿತವಾಗಿ ಪ್ಯಾಕ್ ಮಾಡಿ ಪೂರೈಸಲಾಗುತ್ತಿತ್ತು. ವಶಕ್ಕೆ ಪಡೆದ ಡ್ರಗ್ಸ್ ಮೌಲ್ಯ ₹1.5 ಕೋಟಿ ಎಂದು ಅಂದಾಜಿಸಲಾಗಿದೆ. ಈ ಸಂಬಂಧ ಬಾಗಲೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

15 ಕಳ್ಳತನ ಪ್ರಕರಣ: ಆರೋಪಿ ಸೆರೆ

ಬೆಂಗಳೂರು: 15 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಕುಖ್ಯಾತ ಕಳ್ಳನನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ. ಮಳವಳ್ಳಿಯ ಸಿದ್ದು ಅಲಿಯಾಸ್ ನಾಗರಾಜ್ ಬಂಧಿತ. ಆರೋಪಿಯಿಂದ ₹19.5 ಲಕ್ಷ ನಗದು ಮತ್ತು 711 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು. ಚಿನ್ನಾಭರಣ ಕಳ್ಳತನ ಮಾಡಿದ ಬಳಿಕ ಮಾದಪ್ಪನ ಬೆಟ್ಟಕ್ಕೆ ದೇವರ ದರ್ಶನ ಪಡೆಯಲು ತೆರಳಿದ್ದರು. ಅಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮೊಬೈಲ್ ಕದಿಯಲು ವಿಮಾನದಲ್ಲಿ ಪ್ರಯಾಣ

ವೈಟ್‌ಫೀಲ್ಡ್ ಠಾಣೆ ಪೊಲೀಸರ ಕಾರ್ಯಾಚರಣೆ ● ದೆಹಲಿಯ ಇಬ್ಬರು ಯುವಕರ ಸೆರೆ

ಪ್ರಜಾವಾಣಿ ವಾರ್ತೆ

ಜಯಚಂದ

ತರುಣ್

ಬೆಂಗಳೂರು: ದ್ವಿಚಕ್ರ ವಾಹನ ಅಥವಾ ಕಾರಿನಲ್ಲಿ ಬಂದು ಮೊಬೈಲ್‌ಗಳನ್ನು ಕಳ್ಳತನ ಮಾಡಿಕೊಂಡು ಹೋಗುವ ಪ್ರಕರಣಗಳು ಆಗಾಗ್ಗೆ ನಗರದಲ್ಲಿ ನಡೆಯುತ್ತಲೇ ಇವೆ. ಆದರೆ, ಇಲ್ಲೊಂದು ಪ್ರಕರಣದಲ್ಲಿ ವಿಮಾನದ ಮೂಲಕ ನಗರಕ್ಕೆ ಬಂದು, ಮೊಬೈಲ್ ಕಳ್ಳತನ ಮಾಡಿ ಕೊಂಡು ಹೋಗಿದ್ದ ಪ್ರಕರಣವು ಪೊಲೀಸರ ಕಾರ್ಯಾಚರಣೆಯಲ್ಲಿ ಪತ್ತೆಯಾಗಿದೆ.

ದೆಹಲಿಯ ಜಯಚಂದ ಮತ್ತು ತರುಣ್ ಅವರನ್ನು ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಇಬ್ಬರೂ ದೆಹಲಿಯಲ್ಲಿ ಕಾರು ಚಾಲಕರಾಗಿ ಕೆಲಸ ಮಾಡುತ್ತಿದ್ದರು.

ಬಂಧಿತರಿಂದ ವಿವಿಧ ಕಂಪನಿಯ 14 ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಮಹದೇವಪುರ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿದ್ದ ವ್ಯಕ್ತಿ ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಮೊಬೈಲ್ ಕಳವು ಮಾಡಲೆಂದೇ ವಿಮಾನದಲ್ಲಿ ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದರು. ಅಲ್ಲಿಂದ ಕ್ಯಾಬ್ ಪಡೆದುಕೊಂಡು ನಗರಕ್ಕೆ ಬರುತ್ತಿದ್ದರು. ಬಂದವರು ನಗರದಲ್ಲಿ ಸುತ್ತಾಟ ನಡೆಸಿ ಐ-ಫೋನ್ ಹೊಂದಿರುವ ವ್ಯಕ್ತಿಗಳನ್ನು ಗುರುತಿಸುತ್ತಿದ್ದರು. ಐ-ಫೋನ್ ಮಾತ್ರ ಕಳ್ಳತನ ಮಾಡುತ್ತಿದ್ದರು. ಸಣ್ಣಪುಟ್ಟ ಮೊಬೈಲ್ ಮುಟ್ಟುತ್ತಿರಲಿಲ್ಲ. ಶ್ರೀಮಂತರು ನಡೆಸುವ ಪಾರ್ಟಿಗಳನ್ನು ಗುರುತಿಸಿ, ಅಲ್ಲಿಗೆ ತೆರಳುತ್ತಿದ್ದರು. ಅಲ್ಲಿ ದುಬಾರಿ ಬೆಲೆಯ ಫೋನ್ ಕಳ್ಳತನ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಐಷಾರಾಮಿ ಬಸ್‌ಗಳಲ್ಲೂ ಪ್ರಯಾಣಿಕರ ಸೋಗಿನಲ್ಲಿ ಹೋಗಿ ಮೊಬೈಲ್ ಕಳ್ಳತನ ಮಾಡುತ್ತಿದ್ದರು. ಪ್ರಯಾಣಿಕರ ಗಮನವನ್ನು ಬೇರೆಡೆಗೆ ಸೆಳೆದು ಕೃತ್ಯ ಎಸಗುತ್ತಿದ್ದರು. ದೇವನಹಳ್ಳಿಯ ಸುತ್ತಮುತ್ತ ನಡೆಯುವ ಸಂಗೀತ ಕಾರ್ಯಕ್ರಮಕ್ಕೆ ತೆರಳುತ್ತಿದ್ದ ಆರೋಪಿಗಳು, 14 ಮೊಬೈಲ್‌ಗಳನ್ನು ಕದ್ದಿದ್ದರು. ಚನ್ನರಾಯಪಟ್ಟಣದಲ್ಲಿಯೂ ಆರೋಪಿಗಳು ಮೊಬೈಲ್ ಕಳವು ಮಾಡಿದ್ದು, ಅಲ್ಲಿಂದ ವೈಟ್ ಫೀಲ್ಡ್ ಕಡೆಗೆ ಬರುವಾಗ ಮತ್ತೊಂದು ಐ-ಫೋನ್ ಕಳವು ಮಾಡಿದ್ದರು’ ಎಂದು ಹೇಳಿದರು. ‘ಕದ್ದ ಮೊಬೈಲ್‌ಗಳನ್ನು ಲಾಡ್ಜ್‌ನಲ್ಲಿ ಬಚ್ಚಿಡುತ್ತಿದ್ದರು. ಲಾಡ್ಜ್ ಮೇಲೆ ದಾಳಿ ನಡೆಸಿದಾಗ ಮೊಬೈಲ್ ಕಳ್ಳತನ ಮಾಡುತ್ತಿದ್ದ ರಹಸ್ಯ ಬಯಲಾಗಿದೆ. ಬಂಧಿತರಿಂದ ₹10 ಲಕ್ಷ ಮೌಲ್ಯದ 14 ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ಹೇಳಿದರು.

ಪಿ.ಜಿಗಳಲ್ಲಿ ಲ್ಯಾಪ್‌ಟಾಪ್ ಕಳ್ಳತನ

ಸಂತೋಷ್

ಬೆಂಗಳೂರು: ಪೇಯಿಂಗ್ ಗೆಸ್ಟ್ (ಪಿ.ಜಿ), ಕಚೇರಿ ಹಾಗೂ ಮನೆಗಳಿಗೆ ನುಗ್ಗಿ ಲ್ಯಾಪ್‌ಟಾಪ್ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ಅಂಬೂರು ತಾಲ್ಲೂಕಿನ ಉದ್ಯೈಯರಾಜಪಾಳ್ಯಂ ಗ್ರಾಮದ ಸಂತೋಷ್ (26) ಬಂಧಿತ.

ಆರೋಪಿಯಿಂದ ₹10 ಲಕ್ಷ ಮೌಲ್ಯದ ವಿವಿಧ ಕಂಪನಿಯ 15 ಲ್ಯಾಪ್‌ಟಾಪ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಅಂಬೇಡ್ಕರ್ ನಗರದ ಶ್ರೀಸಾಯಿ ಪೇಯಿಂಗ್ ಗೆಸ್ಟ್‌ನಲ್ಲಿ ವಾಸವಿದ್ದ ಸಂಗಮೇಶ್ ಅವರ ಲ್ಯಾಪ್‌ಟಾಪ್ ಅನ್ನು ಆರೋಪಿ ಕಳ್ಳತನ ಮಾಡಿದ್ದ. ಸಂಗಮೇಶ್ ಅವರು ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸುದ್ದಗುಂಟೆಪಾಳ್ಯ, ಸಂಪಿಗೆಹಳ್ಳಿ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ಸಂತೋಷ್ ಜೈಲಿಗೆ ಹೋಗಿ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದರು. ಜಾಮೀನಿನ ಮೇಲೆ ಹೊರಬಂದ ನಂತರವೂ ಕಳ್ಳತನ ಮುಂದುವರಿಸಿದ್ದರು ಎಂದು ಮೂಲಗಳು ಹೇಳಿವೆ.

₹5.80 ಕೋಟಿ ಮೌಲ್ಯದ ಗಾಂಜಾ ಜಪ್ತಿ

ಬೆಂಗಳೂರು: ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ನಡೆಸಿದ ಕಸ್ಟಮ್ಸ್ ಅಧಿಕಾರಿಗಳು, ₹5.80 ಕೋಟಿ ಮೌಲ್ಯದ ಹೈಡ್ರೊಗಾಂಜಾ ಜಪ್ತಿ ಮಾಡುವಲ್ಲಿ ಯಶಸ್ವಿ ಆಗಿದ್ದಾರೆ.

ಮೂವರು ಪ್ರಯಾಣಿಕರು ಪ್ರತ್ಯೇಕ ವಿಮಾನದಲ್ಲಿ ಬಂದಿದ್ದರು. ಅವರ ಲಗೇಜ್ ಬ್ಯಾಗ್‌ಗಳನ್ನು ತಪಾಸಣೆ ನಡೆಸಿದಾಗ ಹೈಡ್ರೊಗಾಂಜಾ ಪತ್ತೆಯಾಗಿದೆ. ಆರೋಪಿಗಳಿಂದ ಸುಮಾರು 15.49 ಕೆ.ಜಿ ಗಾಂಜಾ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಕಸ್ಟಮ್ಸ್ ಮೂಲಗಳು ತಿಳಿಸಿವೆ.

ಎನ್‌ಡಿಪಿಎಸ್ ಕಾಯ್ದೆ ಅಡಿ ಮೂವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಬೆಂಗಳೂರನಲ್ಲಿ ಮಹಾ ರುದ್ರಾಕ್ಷಿ ಪ್ರದರ್ಶನ ಹಾಗೂ ಮಾರಾಟ

ಮಾರ್ಚ್ 04 ರಿಂದ 09 ರವರೆಗೆ
ಬೆಳಗ್ಗೆ 10.30 ರಿಂದ ರಾತ್ರಿ 09.00

ಬೆಂಗಳೂರು: ನಗರದ **ಹೊಟೇಲ್** Hotel Le Foliage, Beside Sangeeta Gadgets, **ಸಂಗಮ ಸರ್ಕಲ್ ಬಸ್ ಸ್ಟಾಪ್ ಹತ್ತಿರ**, Opp. Metro Pillar EP-No.9, **ಎದುರಿಗೆ, 46 ನೇ ಕ್ರಾಸ್ 8 ಬ್ಲಾಕ್, ಸಿಆರ್ ಲೇಔಟ್, 1ನೇ ಹಂತ, ಜೆ.ಪಿ. ನಗರ, ಬೆಂಗಳೂರು, ಮಾರ್ಚ್ 4 ರಿಂದ 9** ರವರೆಗೆ ರುದ್ರಾಕ್ಷಿ ಪ್ರದರ್ಶನ ಮಾರಾಟ, **ಒಂದು ಮುಖಿ ಯಿಂದ 21 ಮುಖಿ ರುದ್ರಾಕ್ಷಗಳು ಲಭ್ಯವಿವೆ.** ಇಂಡಸ್-ನೇಪಾಳ ಸಂಸ್ಥೆಯ **ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ** ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಮಾಂಸಹಾರಿಗಳು ಸಹ ರುದ್ರಾಕ್ಷಿಗಳನ್ನು ಧರಿಸಬಹುದು.
ಸಂಪರ್ಕಿಸಿ: ಡಾ. ನರೇಂದ್ರ ಕಾಶಿರೆಡ್ಡಿ 7097296666
ADVT

ಶೇ 15ರಲ್ಲೇ ಒಳಮೀಸಲು ಕಲ್ಪಿಸಿ: ಎಡಗೈ ಪಟ್ಟು

ನಾಳೆ ನಡೆಯಲಿರುವ ಸಂಪುಟ ಸಭೆಯಲ್ಲಿ ತೀರ್ಮಾನ– ಸಚಿವ ಮುನಿಯಪ್ಪ ವಿಶ್ವಾಸ

ಪ್ರಜಾವಾಣಿ ವಾರ್ತೆ

ಒಳ ಮೀಸಲಾತಿ ಅಳವಡಿಸದೆ ಸರ್ಕಾರ ನೇಮಕಾತಿ ಪ್ರಕ್ರಿಯೆ ಆರಂಭಿಸಿದರೆ ಮಾದಿಗ ಸಮುದಾಯಕ್ಕೆ ಅನ್ಯಾಯವಾಗಲಿದೆ. ನಮಗೆ ನ್ಯಾಯ ಸಿಗಬೇಕು

ಎಚ್‌. ಆಂಜನೇಯ, ಮಾಜಿ ಸಚಿವ

ಒಳಮೀಸಲಾತಿ ಕಲ್ಪಿಸದೆ ಯಾವುದೇ ಕಾರಣಕ್ಕೂ ಖಾಲಿ ಹುದ್ದೆಗಳಿಗೆ ನೇಮಕಾತಿ ಆಗಬಾರದು ಎಂಬುದು ನಮ್ಮೆಲ್ಲರ (ಎಡಗೈ ಸಮುದಾಯ) ಒಕ್ಕೊರಲ ಆಗ್ರಹ

ಎಲ್‌. ಹನುಮಂತಯ್ಯ, ರಾಜ್ಯಸಭೆಯ ಮಾಜಿ ಸದಸ್ಯ

ಬೆಂಗಳೂರು: 'ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಾಗ, ಪರಿಶಿಷ್ಟ ಜಾತಿಗಿರುವ ಶೇ 15ರ ಮೀಸಲಾತಿಯಲ್ಲಿಯೇ ಒಳ ಮೀಸಲಾತಿ ಅನ್ವಯಿಸುವ ಕುರಿತಂತೆ ಇದೇ 5ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ' ಎಂದು ಆಹಾರ ಸಚಿವ ಕೆ.ಎಚ್‌. ಮುನಿಯಪ್ಪ ಹೇಳಿದರು.

ಸಚಿವ ಆರ್‌.ಬಿ. ತಿಮ್ಮಾಪುರ, ಮಾಜಿ ಸಚಿವ ಎಚ್‌. ಆಂಜನೇಯ ಸೇರಿದಂತೆ ಎಡಗೈ ಸಮುದಾಯದ ಮುಖಂಡರ ಜೊತೆ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಅವರು ಮಾತನಾಡಿದರು. 'ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ಸರ್ಕಾರ ಬದ್ಧವಾಗಿದೆ. ಈ ವಿಚಾರದಲ್ಲಿ ಆದಷ್ಟು ಬೇಗ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ. ಯಾವುದೇ ಅನುಮಾನ ಬೇಡ' ಎಂದರು.

ಕೆ.ಎಚ್‌. ಮುನಿಯಪ್ಪ

'ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 15ರಿಂದ 17ಕ್ಕೆ, ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 3ರಿಂದ 7ಕ್ಕೆ ಹೆಚ್ಚಿಸಿದ್ದರಿಂದ ಒಟ್ಟು ಮೀಸಲಾತಿ ಪ್ರಮಾಣ ಶೇ 50ರಿಂದ ಶೇ 56ಕ್ಕೆ ಹೆಚ್ಚಳವಾಗಿದೆ. ಹೆಚ್ಚಿಸಿದ ಮೀಸಲಾತಿಗೆ ಅನುಗುಣವಾಗಿ ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ರೂಪಿಸಿದ ಮಸೂದೆಗೆ ರಾಜ್ಯಪಾಲರು ಸಹಿ ಹಾಕಿದ್ದಾರೆ. ಆದರೆ, ಮೀಸಲಾತಿಯನ್ನು ಶೇ 56ಕ್ಕೆ ಹೆಚ್ಚಿಸಿರುವುದಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ನೇಮಕಾತಿ ಪ್ರಕ್ರಿಯೆ ಆರಂಭಿಸುವಂತೆ ಆಗ್ರಹಿಸಿ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಪ್ರತಿಭಟನೆ ನಡೆಸಿದ ಕಾರಣ, ಫೆ. 26ರಂದು ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ ಈ ಹಿಂದಿನಂತೆ ಶೇ 50ರಷ್ಟು ಮೀಸಲಾತಿ ಅನ್ವಯಿಸಿ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಒಪ್ಪಿಗೆ ನೀಡಲಾಗಿತ್ತು' ಎಂದು ಅವರು ತಿಳಿಸಿದರು.

'ಒಳ ಮೀಸಲಾತಿ ಅನ್ವಯಿಸಿ, ಕೋರ್ಟ್‌ನ ಅಂತಿಮ ತೀರ್ಪಿಗೆ ಒಳಪಟ್ಟು ನೇಮಕಾತಿ ಪ್ರಕ್ರಿಯೆ ನಡೆಸುವಂತೆ ನಾವು ಸಂಪುಟ ಸಭೆಯಲ್ಲಿ ಬೇಡಿಕೆ ಒಟ್ಟಿದ್ದೆವು. ಆದರೆ, ನೇಮಕಾತಿ ಆರಂಭಿಸುವ ಕುರಿತು ಡಿಪಿಎಆರ್ ಹೊರಡಿಸಿದ ಆದೇಶದಲ್ಲಿ ಒಳ ಮೀಸಲಾತಿ ಅಳವಡಿಸುವ ಪ್ರಸ್ತಾವ ಇಲ್ಲ. ಈ ಆದೇಶದಿಂದ ನಮಗೆ ಆಘಾತವಾಗಿದೆ. ನಾವು ಅಡ್ವೊಕೇಟ್ ಜನರಲ್ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದು, ಒಳ ಮೀಸಲಾತಿ ಅನುಷ್ಠಾನಕ್ಕೆ ಯಾವುದೇ ಅಡ್ಡಿ ಇಲ್ಲ ಎಂದು ಅವರು ಹೇಳಿದ್ದಾರೆ. ಮುಖ್ಯಮಂತ್ರಿಯವರ ಜೊತೆಗೂ ಈ ಬಗ್ಗೆ ಚರ್ಚೆ ನಡೆಸಿದ್ದೇವೆ. ಮುಂದಿನ ಸಂಪುಟ ಸಭೆಯಲ್ಲಿ ಆದೇಶ ಪರಿಷ್ಕರಿಸುವ ಬಗ್ಗೆ ಚರ್ಚೆ ನಡೆಸುವುದಾಗಿ ಅವರು ಭರವಸೆ ನೀಡಿದ್ದಾರೆ' ಎಂದರು.

ಆರ್‌.ಬಿ. ತಿಮ್ಮಾಪುರ ಮಾತನಾಡಿ, 'ನೇಮಕಾತಿ ಆರಂಭಿಸುವ ಕುರಿತು ಹೊರಡಿಸಿರುವ ಆದೇಶದಲ್ಲಿ ಒಳ ಮೀಸಲಾತಿ ಅಂಶ ಇಲ್ಲ. ಈ ಬಗ್ಗೆ ಗೊಂದಲ ನಿವಾರಣೆ ಬಗ್ಗೆ ಚರ್ಚಿಸಿ ತೀರ್ಮಾನಿಸೋಣ ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಸಮುದಾಯದವರು ಗಲಾಟೆ, ಗೊಂದಲ ಮಾಡಬೇಕಿಲ್ಲ. ಸಮುದಾಯದ ಪರವಾಗಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿದೆ' ಎಂದರು.

'ಒಳ ಮೀಸಲಾತಿ ಕಲ್ಪಿಸುವ ವಿಚಾರದಲ್ಲಿ ಸರ್ಕಾರ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳದಿದ್ದರೆ ಮುಂದಿನ ಹೋರಾಟಗಳ ಬಗ್ಗೆ ತೀರ್ಮಾನಿಸಲಾಗುವುದು' ಎಂದು ಎಡಗೈ ಸಮುದಾಯದ ನಾಯಕರು ಎಚ್ಚರಿಕೆ ನೀಡಿದರು.

ಮಾಜಿ ಸಂಸದ ಬಿ.ಎನ್‌. ಚಂದ್ರಪ್ಪ, ಶಾಸಕ ಕೆ.ಎಸ್‌. ಬಸವಂತಪ್ಪ, ಕೆಪಿಸಿಸಿ ಎಸ್‌ಸಿ ಘಟಕದ ಅಧ್ಯಕ್ಷ ಆರ್‌. ಧರ್ಮಸೇನ ಉಪಸ್ಥಿತರಿದ್ದರು.

'ನೇಮಕಾತಿ ಆದೇಶ ಹಿಂಪಡೆಯಲು ಆಗ್ರಹ'

ಬೆಂಗಳೂರು: 'ಪರಿಶಿಷ್ಟ ಜಾತಿಯ ಒಳ ಮೀಸಲಾತಿಯನ್ನು ಜಾರಿಗೊಳಿಸದೇ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಬಿಡಬೇಕು' ಎಂದು ಕರ್ನಾಟಕ ರಾಜ್ಯ ಮಾದಿಗ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದು, 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳ ಹಿತ ಕಾಪಾಡದ ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಅವರು ರಾಜೀನಾಮೆ ನೀಡಬೇಕು. ನಮ್ಮ ಸಮುದಾಯದ ನಾಯಕರಾದ ಸಚಿವ ಕೆ.ಎಚ್‌. ಮುನಿಯಪ್ಪ ಅವರ ವಿರೋಧದ ನಡುವೆಯೂ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಜಾರಿಗೊಳಿಸದೇ ವಿವಿಧ ಹುದ್ದೆಗಳ ನೇಮಕಾತಿಗೆ ತೀರ್ಮಾನಿಸಿ, ಆದೇಶ ಹೊರಡಿಸಿರುವ ಸರ್ಕಾರದ ನಿರ್ಧಾರ ಖಂಡನೀಯ' ಎಂದು ತಿಳಿಸಿದೆ.

'ದೇಶದ ವಿವಿಧ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹಂಚಿಕೆ ಮಾಡಲಾಗಿದೆ. ಅದೇ ರೀತಿ ನಮ್ಮ ರಾಜ್ಯದಲ್ಲಿ 2022ರಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣವನ್ನು ಶೇಕಡ 15ರಿಂದ 17ಕ್ಕೆ ಹೆಚ್ಚಿಸಲಾಗಿದೆ. ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಶೇ 3ರಿಂದ 7ಕ್ಕೆ ಹೆಚ್ಚಿಸಲಾಗಿದ್ದು, ಅದರಂತೆಯೇ ನೇಮಕಾತಿ ಮಾಡಬೇಕು' ಎಂದು ಒತ್ತಾಯಿಸಿದೆ.

'ರಾಜ್ಯ ಸರ್ಕಾರ ಕೂಡಲೇ ವಿಶೇಷ ಸಚಿವ ಸಂಪುಟ ಸಭೆ ಕರೆದು ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗದ ಶಿಫಾರಸಿನಂತೆ ಪರಿಶಿಷ್ಟ ಜಾತಿ ಒಳ ಮೀಸಲಾತಿಯ ಪ್ರಮಾಣವನ್ನು ಹಂಚಿಕೆ ಮಾಡಬೇಕು. ಫೆ. 27ರಂದು ಹೊರಡಿಸಿರುವ ಆದೇಶವನ್ನು ಕೂಡಲೇ ಹಿಂಪಡೆದು ಪರಿಷ್ಕೃತ ರೋಸ್ಟರ್ ಬಿಂದುಗಳನ್ನು ಗುರುತಿಸಬೇಕು. ಆ ಬಳಿಕವೇ 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಬೇಕು' ಎಂದಿದೆ.

'ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಒಳ ಮೀಸಲಾತಿಯನ್ನು ಹಂಚಿಕೆ ಮಾಡಿ, ಅನುಷ್ಠಾನಗೊಳಿಸಬೇಕು' ಎಂದು ಆಗ್ರಹಿಸಿದೆ.

'ಪಿಟಿಸಿಎಲ್ ಕಾಯ್ದೆ: ಅನ್ಯಾಯ ಸರಿಪಡಿಸಿ'

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸರ್ಕಾರ ಮಂಜೂರು ಮಾಡಿರುವ ಜಮೀನನ್ನು ರಕ್ಷಿಸುವ ಉದ್ದೇಶದಿಂದ ಜಾರಿಯಾಗಿರುವ ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ತಿದ್ದುಪಡಿ ಕಾಯ್ದೆಯ (ಪಿಟಿಸಿಎಲ್) ಗೊಂದಲದಿಂದ ಆಗುತ್ತಿರುವ ಅನ್ಯಾಯ ಸರಿಪಡಿಸಬೇಕು' ಎಂದು ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿ ಆಗ್ರಹಿಸಿದೆ.

ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಮಂಜುನಾಥ್ ಮಾತನಾಡಿ, 'ಪಿಟಿಸಿಎಲ್ ಕಾಯ್ದೆಯನ್ನು 2023ರಲ್ಲಿ ತಿದ್ದುಪಡಿ ಮಾಡಿದ ನಂತರ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ನ್ಯಾಯಾಲಯ, ಹೈಕೋರ್ಟ್, ಸುಪ್ರೀಂ ಕೋರ್ಟ್‌ನಲ್ಲಿ ಪಿಟಿಸಿಎಲ್ ಕಾಯ್ದೆ ವಿರುದ್ಧವಾಗಿ ಆಗುತ್ತಿರುವ ಆದೇಶಗಳನ್ನು ತಡೆಯಲು ಕಠಿಣ ಕಾನೂನು ರೂಪಿಸಬೇಕು. ಈ ಕಾಯ್ದೆಯ ವಿರುದ್ಧ ಜಿಲ್ಲಾಧಿಕಾರಿಗಳು ಹಾಗೂ ಉಪ ವಿಭಾಗಾಧಿಕಾರಿಗಳು ಸರ್ವಾಧಿಕಾರಿಗಳಂತೆ ವರ್ತಿಸುತ್ತಿದ್ದಾರೆ' ಎಂದು ಆರೋಪಿಸಿದರು.

'2023ರಲ್ಲಿ ಪಿಟಿಸಿಎಲ್ ಕಾಯ್ದೆ ತಿದ್ದುಪಡಿಯಲ್ಲಿ ಸೇರಿಸಿರುವ ಕಲಂ 5(1)ಡಿ ಅನ್ನು ತೆಗೆಯಬೇಕು. ಪಿಟಿಸಿಎಲ್ ಕಾಯ್ದೆ ಕಲಂ 3(1)ಬಿ ಅಡಿ ಬರುವ ಜಮೀನುಗಳು ಸರ್ಕಾರದಿಂದ ಮಂಜೂರಾಗಿದ್ದರೂ, ಕಾಯ್ದೆ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಮಂಜೂರಾತಿ ವಜಾ ಮಾಡಿ, ಗೊಂದಲ ಸೃಷ್ಟಿಸುತ್ತಿದ್ದಾರೆ. ಈ ಎಲ್ಲ ಜಮೀನುಗಳ ಬಗ್ಗೆ ಸ್ಪಷ್ಟಪಡಿಸಿ ತಿದ್ದುಪಡಿ ಮಾಡಬೇಕು' ಎಂದರು.

'ಪಿಟಿಸಿಎಲ್ ತಿದ್ದುಪಡಿ ಕಾಯ್ದೆಯನ್ನು ಸರ್ವನಾಶ ಮಾಡುತ್ತಿರುವ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ಕಂದಾಯ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು. ಸರ್ಕಾರ ಮಂಜೂರಾತಿ ಮಾಡಿದ ಜಮೀನಿನ ದಾಖಲೆಗಳನ್ನು ಸಂರಕ್ಷಿಸಬೇಕು. ಸರ್ಕಾರದ ಪರವಾಗಿ ವಾದ ಮಾಡುವ ವಕೀಲರ ಬೇಜವಾಬ್ದಾರಿಯಿಂದ ಎಲ್ಲ ನ್ಯಾಯಾಲಯಗಳಲ್ಲಿ ಕಾಯ್ದೆಯ ವಿರುದ್ಧ ಆದೇಶಗಳು ಬರುತ್ತಿವೆ. ಇಂತಹ ವಕೀಲರನ್ನು ವಜಾಗೊಳಿಸಬೇಕು' ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಸಹಕಾರಿ ಕಾಯ್ದೆ ತಿದ್ದುಪಡಿ: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಕಾಯ್ದೆ-2025 ಅನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, 'ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ'ದ ಅಧ್ಯಕ್ಷ ಜಿ.ನಂಜನಗೌಡ ಹಾಗೂ ಇದರ ಸದಸ್ಯ ಸಂಸ್ಥೆಗಳಾಗಿರುವ ರಾಜ್ಯದ ವಿವಿಧ 12 ಸೌಹಾರ್ದ ಸಹಕಾರಿ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಸಿಇಒ) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಾನೂನು ಇಲಾಖೆ, ಸಹಕಾರ ಇಲಾಖೆ ಹಾಗೂ ಸಹಕಾರ ಸಂಘಗಳ ನಿಬಂಧಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ಸರ್ಕಾರ ಸೇರಿದಂತೆ ಇತರ ಪ್ರತಿವಾದಿಗಳು ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಬೇಕು. ಒಂದೊಮ್ಮೆ ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸದೇ ಇದ್ದ ಪಕ್ಷದಲ್ಲಿ ಕಾಯ್ದೆ ಜಾರಿಗೆ ತಡೆ ನೀಡಬೇಕು ಎಂಬ ಅರ್ಜಿದಾರರ ಮಧ್ಯಂತರ ಮನವಿಯನ್ನು ಪರಿಗಣಿಸಲಾಗುವುದು' ಎಂದು ನ್ಯಾಯಪೀಠ ಹೇಳಿದೆ.

ಆಕ್ಷೇಪ ಏನು?: 'ತಿದ್ದುಪಡಿ ಕಾಯ್ದೆಯು ಸಹಕಾರ ತತ್ವಕ್ಕೆ ವಿರುದ್ಧವಾಗಿದೆ. ಸೌಹಾರ್ದ ಸಹಕಾರಿ ಬ್ಯಾಂಕುಗಳು ತಮ್ಮ ಠೇವಣಿಯ ಶೇ 20ರಷ್ಟು ಮೊತ್ತವನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಅಪೆಕ್ಸ್ ಅಥವಾ ಡಿಸಿಸಿ ಬ್ಯಾಂಕುಗಳಲ್ಲಿ ಇರಿಸಬೇಕು. ಬ್ಯಾಂಕುಗಳ ಅಧ್ಯಕ್ಷರು, ಪದಾಧಿಕಾರಿಗಳು ಪ್ರತಿ ವರ್ಷ ತಮ್ಮ ಆಸ್ತಿ ಘೋಷಿಸಬೇಕು ಎಂಬುದೂ ಸೇರಿದಂತೆ ವಿಧಿಸಲಾಗಿರುವ ಷರತ್ತುಗಳು ಸಹಕಾರ ಸಂಘಗಳ ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳಲಿವೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

'ತಿದ್ದುಪಡಿಯು ಸಹಕಾರ ಸಂಘಗಳ ಸ್ವಾಯತ್ತತೆ ಮತ್ತು ಸ್ವತಂತ್ರ ನಿರ್ವಹಣೆಗೆ ಅಡ್ಡಿ ಉಂಟು ಮಾಡಲಿದ್ದು, 2025ರ ಸೆಪ್ಟೆಂಬರ್ 12ರಂದು ಜಾರಿಗೆ ಬಂದಿರುವ ತಿದ್ದುಪಡಿ ಕಾಯ್ದೆಯನ್ನು ಸಂವಿಧಾನ ಬಾಹಿರ ಎಂದು ಘೋಷಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ

ಬೆಂಗಳೂರು: ನಗರದ ಬಸವ ಸಮಿತಿಯು ವಿಶ್ವ ಬಸವಜಯಂತಿ 2026ರ ಅಂಗವಾಗಿ ರಾಜ್ಯಮಟ್ಟದ ಮುಕ್ತ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಿದೆ.

'ಬಸವಾದಿ ಶರಣರು ಕಟ್ಟಿದ ಮಾನವತಾ ಧರ್ಮ' ಎನ್ನುವ ವಿಷಯದ ಕುರಿತು ಪ್ರಬಂಧವನ್ನು ಏ.5ರೊಳಗೆ pub.asst@basavasamithi.orgಗೆ ಕಳುಹಿಸಬಹುದು. ವಿಜೇತರಿಗೆ ಪ್ರಥಮ ಬಹುಮಾನ ₹ 15 ಸಾವಿರ, ದ್ವಿತೀಯ ₹ 10 ಸಾವಿರ ಹಾಗೂ ತೃತೀಯ ಬಹುಮಾನ ₹5 ಸಾವಿರ ನಗದು ನೀಡಲಾಗುತ್ತದೆ. ಮಾಹಿತಿಗೆ 9481422734(ಶಂಕರ ಜಾಲವಾದಿ).

ವಿರೋಧ ಪಕ್ಷದ ನಾಯಕರಿಂದ ಹುಳಿ ಹಿಂಡುವ ಯತ್ನ: ಸಿ.ಎಂ

'ನಮ್ಮ ಸಂಬಂಧ ಹಾಲು–ಜೇನಿನಂತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿರುದ್ಯೋಗಿ ವಿರೋಧ ಪಕ್ಷದ ನಾಯಕರು ನನ್ನ ಮತ್ತು ಡಿ.ಕೆ.ಶಿವಕುಮಾರ್ ಸಂಬಂಧಕ್ಕೆ ಹುಳಿ ಹಿಂಡಲು ಪ್ರಯತ್ನಿಸುತ್ತಿದ್ದಾರೆ. ಇದರಿಂದ ಅವರೊಳಗೆ ತುಂಬಿಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು ನಮ್ಮ ಹಾಲು– ಜೇನಿನಂತಹ ಸಂಬಂಧ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಡಿ.ಕೆ.ಶಿವಕುಮಾರ್ ಮತ್ತು ಅವರ ಬಣದ ಶಾಸಕರ ಮೇಲೆ ನಿಗಾ ಇಡಲು ಸಿದ್ದರಾಮಯ್ಯ ಗುಪ್ತಚರ ಇಲಾಖೆ ಬಳಸಿಕೊಂಡಿದ್ದಾರೆ ಎಂಬ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಮತ್ತು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಆರೋಪಕ್ಕೆ ಮುಖ್ಯಮಂತ್ರಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

'ಈ ರೀತಿ ಸುಳ್ಳು ಸುದ್ದಿಗಳನ್ನು ಹರಡಿ ನಮ್ಮಿಬ್ಬರ ಸಂಬಂಧವನ್ನು ಕೆಡಿಸಿ, ಶಿವಕುಮಾರ್ ಅವರನ್ನು ಒಲಿಸಿಕೊಳ್ಳುವ ದುರಾಲೋಚನೆ ಏನಾದರೂ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಇದ್ದರೆ, ಅವರ ಹಗಲು ಕನಸುಗಳಿಗೆ ಶುಭ ಹಾರೈಸುತ್ತೇನೆ. ಶಿವಕುಮಾರ್ ಒಬ್ಬ ಕಟ್ಟಾ ಕಾಂಗ್ರೆಸಿಗ, ಸುಳ್ಳು ಕೇಸುಗಳನ್ನು ಹಾಕಿ, ಜೈಲಿಗೆ ಕಳುಹಿಸಿ ಅವರನ್ನು ಮಣಿಸುವ ಎಲ್ಲ ಪ್ರಯತ್ನಗಳನ್ನು ಬಿಜೆಪಿ ಮಾಡಿಯಾಗಿದೆ. ಅದಕ್ಕೆಲ್ಲ ಮಣಿಯದೇ ಅವರು ಪಕ್ಷಕ್ಕೆ ನಿಷ್ಠರಾಗಿಯೇ ಉಳಿದವರು ಎನ್ನುವುದು ಈ ಕುತಂತ್ರಿ ನಾಯಕರಿಗೆ ತಿಳಿದಿರಲಿ' ಎಂದು ಕಿಡಿಕಾರಿದ್ದಾರೆ.

'ಕರ್ನಾಟಕದ ಇತ್ತೀಚಿನ ರಾಜಕೀಯ ಇತಿಹಾಸದ ಪುಟಗಳ ಮೇಲೆ ಒಮ್ಮೆ ಕಣ್ಣಾಡಿಸಿದರೆ ಈ ಫೋನ್ ಕದ್ದಾಲಿಕೆ, ಗೂಢಚರ್ಯೆಗಳೆಲ್ಲ ಯಾವ ಪಕ್ಷದ ದುಷ್ಕೃತ್ಯಗಳು ಎನ್ನುವುದು ಅರಿವಾಗುತ್ತದೆ. ಈ ದುರ್ಬುದ್ಧಿಯ ಕಾರಣದಿಂದಾಗಿಯೇ ರಾಜ್ಯ ರಾಜಕೀಯದಲ್ಲಿ ಆಪರೇಷನ್ ಕಮಲ, ರೆಸಾರ್ಟ್ ರಾಜಕಾರಣ, ವಚನಭಂಗದಂತಹ ಅನಿಷ್ಟಗಳು ಕಾಣಿಸಿಕೊಂಡವು. 2004ರಿಂದ 2013ರವರೆಗಿನ ಒಂಬತ್ತು ವರ್ಷಗಳ ಅವಧಿಯಲ್ಲಿ ರಾಜ್ಯ ಐದು ಮುಖ್ಯಮಂತ್ರಿಗಳನ್ನು, 2018ರಿಂದ 2023ರ ಅವಧಿಯಲ್ಲಿ ಮೂರು ಮುಖ್ಯಮಂತ್ರಿಗಳನ್ನು ಕಾಣುವಂತಾಗಲು ಇವರೊಳಗಿನ ಪರಸ್ಪರ ಅಪನಂಬಿಕೆ, ದ್ವೇಷ, ಅಸೂಯೆ, ಬೆನ್ನಿಗೆ ಚೂರಿ ಹಾಕುವ ಕುತಂತ್ರಗಳೇ ಕಾರಣ' ಎಂದು ಸಿದ್ದರಾಮಯ್ಯ ಟೀಕಿಸಿದ್ದಾರೆ.

'ಸ್ವಾಮೀಜಿ ದೂರವಾಣಿ ಕದ್ದಾಲಿಕೆ ಮಾಡಿಸಿದ್ದು ಯಾರು?'

ಸಿದ್ದರಾಮಯ್ಯ

'2018 ರಲ್ಲಿ ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮಿಗಳ ದೂರವಾಣಿ ಕದ್ದಾಲಿಕೆ ಮಾಡಿಸಿದ್ದು ಯಾರು' ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

'ಎಚ್‌.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮಿಗಳ ದೂರವಾಣಿ ಕದ್ದಾಲಿಕೆ ಮಾಡಿದ್ದಾರೆ ಎಂದು ಅವರ ಈಗಿನ ರಾಜಕೀಯ ಸಂಗಾತಿ ಬಿ.ವೈ.ವಿಜಯೇಂದ್ರ ಅವರೇ ಆರೋಪ ಮಾಡಿದ್ದರು. ಇದರ ಬಗ್ಗೆ ತನಿಖೆ ಮಾಡಿದ್ದ ಸಿಬಿಐ, ಒಬ್ಬ ಸ್ವಾಮೀಜಿಗಳದ್ದಷ್ಟೇ ಅಲ್ಲ, ಬದಲಿಗೆ ಏಳು ಸ್ವಾಮೀಜಿಗಳ ಫೋನ್ ಕದ್ದಾಲಿಕೆ ಮಾಡಲಾಗಿದೆ ಎಂದು ತಿಳಿಸಿತ್ತು' ಎಂದಿದ್ದಾರೆ.

'ನಂಬಿಕೆಗೆ ತಾನು ಅರ್ಹ ಅಲ್ಲ ಎಂದು ಸಾಬೀತು ಮಾಡಿರುವ ಕುಮಾರಸ್ವಾಮಿ ಅವರನ್ನು ಬಿಜೆಪಿಯವರು ಸುಮ್ಮನೆ ಬಿಟ್ಟಾರೆಯೇ? ಅವರ ವಿರುದ್ಧವೂ ಗೂಢಾಚಾರರನ್ನು ಬಿಟ್ಟಿರಬಹುದು. ಇಂತಹ ದುರ್ಬುದ್ಧಿಗಾಗಿಯೇ ರಾಜ್ಯದ ಜನತೆ ಈ ಎರಡೂ ಪಕ್ಷಗಳನ್ನು ತಿರಸ್ಕರಿಸಿದ್ದಾರೆ' ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ನಾನೇನು ಎಂದು ಸಿ.ಎಂಗೆ ಗೊತ್ತು: ಡಿಕೆಶಿ

'ನನ್ನ ಮತ್ತು ಮುಖ್ಯಮಂತ್ರಿ ನಡುವಿನ ಸಂಬಂಧ ಖಂಡಿತ ಹಾಲು ಜೇನಿನ ಸಂಬಂಧ. 2023ರ ಚುನಾವಣೆ ಮಾತ್ರವಲ್ಲ, 2028ರ ಚುನಾವಣೆಯಲ್ಲೂ ಹೀಗೆ ಇರಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

'ನಮ್ಮ ಮಧ್ಯೆ ಹುಳಿ ಹಿಂಡಿ ಶಿವಕುಮಾರ್‌ನನ್ನು ಒಲಿಸಿಕೊಳ್ಳುವ ದುರಾಲೋಚನೆ ಬೇರೆ ಯಾರಿಗಾದರೂ ಇದ್ದರೆ, ಅದು ಹಗಲುಗನಸು' ಎಂಬ ಮುಖ್ಯಮಂತ್ರಿ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಅದು ಅವರ ಅನುಭವದ ಮಾತು. ಅವರು ನನ್ನನ್ನು ನೋಡಿದ್ದಾರೆ. ಅವರು ಬೇರೆ ಪಕ್ಷದಲ್ಲಿದ್ದಾಗಲೂ ನನ್ನನ್ನು ನೋಡಿದ್ದಾರೆ. ನಮ್ಮ ಪಕ್ಷಕ್ಕೆ ಬಂದ ನಂತರವೂ ಬಹಳ ಹತ್ತಿರದಿಂದ ನೋಡಿದ್ದಾರೆ. ನಾನು ಏನು ಎಂಬುದು ಅವರಿಗೆ ಗೊತ್ತಿದೆ' ಎಂದರು.

'ನಿಮ್ಮನ್ನು ಒಲಿಸಿಕೊಳ್ಳಲು ಬಿಜೆಪಿ–ಜೆಡಿಎಸ್ ಪ್ರಯತ್ನ ನಡೆಸಿವೆಯೇ' ಎಂಬ ಪ್ರಶ್ನೆಗೆ, 'ಮುಂದೊಂದು ದಿನ ಪುಸ್ತಕ ಬರೆದರೆ ಈ ಬಗ್ಗೆ ವಿವರಿಸುವೆ' ಎಂದು ತಿಳಿಸಿದರು.

'ಗಲಿಬಿಲಿಗೊಂಡ ಸಿ.ಎಂ'

ಅಶೋಕ

ಬೆಂಗಳೂರು: 'ಗುಪ್ತಚರ ವಿಭಾಗವನ್ನು ಕೇವಲ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಬಳಸಲಾಗುತ್ತಿದೆಯೇ ಅಥವಾ ಕಾಂಗ್ರೆಸ್ ಪಕ್ಷದ ಆಂತರಿಕ ಬಣ ರಾಜಕೀಯವನ್ನು ನಿಭಾಯಿಸಲು ಬಳಸಿಕೊಳ್ಳಲಾಗುತ್ತಿದೆಯೆ? ಕರ್ನಾಟಕದ ಜನತೆಗೆ ನೇರ ಮತ್ತು ಪ್ರಾಮಾಣಿಕ ಉತ್ತರ ಬೇಕಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಹೇಳಿದ್ದಾರೆ.

ಸಿದ್ದರಾಮಯ್ಯ ಅವರ ಟೀಕೆಗೆ ತಮ್ಮ 'ಎಕ್ಸ್' ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಅಶೋಕ, 'ಗುಪ್ತಚರ ಇಲಾಖೆ ದುರ್ಬಳಕೆ ಆಗುತ್ತಿದೆ ಎನ್ನುವುದು ನನ್ನ ವೈಯಕ್ತಿಕ ಆರೋಪವಲ್ಲ. ಮಾಧ್ಯಮ ಸಂಸ್ಥೆಯ ವರದಿಯನ್ನು ಉಲ್ಲೇಖಿಸಿ ನಿಮ್ಮನ್ನು ಪ್ರಶ್ನಿಸಿದ್ದೇವೆ. ವರದಿಯಿಂದ ಗಲಿಬಿಲಿಗೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ' ಎಂದಿದ್ದಾರೆ.

'ಇಂತಹ ಗಂಭೀರ ವಿಷಯಗಳು ಮುನ್ನೆಲೆಗೆ ಬಂದಾಗ, ವಿರೋಧ ಪಕ್ಷದ ನಾಯಕನಾಗಿ ಅದರ ಬಗ್ಗೆ ಸ್ಪಷ್ಟನೆ ಕೇಳುವುದು ನನ್ನ ಸಾಂವಿಧಾನಿಕ ಜವಾಬ್ದಾರಿ. ಜನರ ಮುಂದೆ ಸತ್ಯಾಂಶಗಳನ್ನು ಇಡುವ ಬದಲು, ತಾವು ಯಾವುದೋ ಹಳೆಯ ಇತಿಹಾಸವನ್ನು ಕೆದಕಿ, ಸಂಬಂಧವಿಲ್ಲದ ರಾಷ್ಟ್ರೀಯ ನಾಯಕರನ್ನು ಎಳೆದು ತರುವ ಮೂಲಕ ವಿಷಯಾಂತರ ಮಾಡಲು ಯತ್ನಿಸುತ್ತಿರುವುದು ಸ್ಪಷ್ಟವಾಗಿ ತೋರುತ್ತದೆ' ಎಂದು ಅಶೋಕ ಹೇಳಿದ್ದಾರೆ.

ಕದ್ದಾಲಿಕೆ ಮಾಡಿದ್ದರೆ ಅಧಿಕಾರ ಉಳಿಯುತ್ತಿತ್ತು: ಎಚ್‌ಡಿಕೆ

'ನಾನು ಎರಡು ಬಾರಿ ಅಲ್ಪ ಅವಧಿಗೆ ಮುಖ್ಯಮಂತ್ರಿ ಆಗಿದ್ದೆ. ಸ್ವತಂತ್ರ ಸರ್ಕಾರವೂ ನನ್ನದಲ್ಲ. ಫೋನ್ ಕದ್ದಾಲಿಕೆ ಮಾಡಿದ್ದಿದ್ದರೆ ಅಧಿಕಾರ ಉಳಿಸಿಕೊಳ್ಳುತ್ತಿದ್ದೆ. 2019ರಲ್ಲಿ ಸರ್ಕಾರ ಕೆಡವಲು ಯಾರು ಕರಾಮತ್ತು ನಡೆಸಿದರು ಎನ್ನುವುದನ್ನು ಪತ್ತೆ ಹಚ್ಚುತ್ತಿದ್ದೆ' ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದ್ದಾರೆ.



ಕುಮಾರಸ್ವಾಮಿ

ಈ ಕುರಿತು 'ಎಕ್ಸ್' ಮಾಡಿರುವ ಅವರು, 'ಈಗಿನ ಗುಪ್ತಚರ ರಾಜಕಾರಣ ನನಗೆ ಗೊತ್ತು. ಸಿದ್ದರಾಮಯ್ಯ ತನಿಖಾ ತಂಡ (ಎಸ್ಐಟಿ) ಏನೇನು ಮಾಡುತ್ತಿದೆ ಎನ್ನುವುದು ಗೊತ್ತಿದೆ. ಅಧಿಕಾರ ದುರ್ಬಳಕೆ, ಪ್ರತಿಪಕ್ಷಗಳ ವಿರುದ್ಧ ಸೇಡು ಸಾಧನೆ ನಿಮ್ಮ ನೈಜಗುಣ. ಒಬ್ಬರಿಗೊಬ್ಬರು ಬೆನ್ನಿಗೆ ಚೂರಿ ಹಾಕುವಷ್ಟು ಸಿದ್ದರಾಮಯ್ಯ–ಡಿ.ಕೆ.ಶಿವಕುಮಾರ್ ನಡುವೆ ಕುಚುಕುತನವಿದೆ. ನಿಮ್ಮ ಸ್ನೇಹಿತನಿಗಾಗಿ (ಶಿವಕುಮಾರ್) ನೀವು ಕೊಟ್ಟ ವಚನ ಉಳಿಸಿಕೊಳ್ಳಿ' ಎಂದು ಸಲಹೆ ನೀಡಿದ್ದಾರೆ.

ನಾನು ಸ್ಟ್ರೀಟ್ ಫೈಟರ್: ಡಿಕೆಶಿ

ಒಂದನೇ ಪುಟದಿಂದ...

'ಪಕ್ಷದ ಅಧ್ಯಕ್ಷನಾಗಿ ನನ್ನ ಜವಾಬ್ದಾರಿಗಳು ತಿಳಿದಿವೆ. ಈ ಪಕ್ಷಕ್ಕೆ ನನ್ನಿಂದ ಯಾವುದೇ ಕಾರಣಕ್ಕೂ ಧಕ್ಕೆ ಆಗಬಾರದು. ಅಧ್ಯಕ್ಷ ಸ್ಥಾನದಲ್ಲಿ ಕುಳಿತು, ಆ ಸ್ಥಾನಕ್ಕೆ ಅನ್ಯಾಯ ಮಾಡಬಾರದು. ನನ್ನಿಂದ ತಪ್ಪಾಗಿದೆ ಎಂದು ಬೇರೆಯವರು ನನ್ನ ಕಡೆ ಬೆರಳು ತೋರಿಸಬಾರದು. ನಾನು ತಾಳ್ಮೆಯಿಂದ ಇದ್ದೇನೆ' ಎಂದರು.

'ಬಜೆಟ್ ನಂತರ ಕ್ರಾಂತಿ ಮಾಡುತ್ತೀರಾ' ಎಂಬ ಪ್ರಶ್ನೆಗೆ, 'ಯಾಕೆ ಕ್ರಾಂತಿ ಮಾಡಲಿ. ನನಗೆ ನನ್ನ ಮೇಲೆ ನಂಬಿಕೆ ಇದೆ. ನಾನು ಭರವಸೆ ಮೇಲೆ ಬದುಕುತ್ತೇನೆ. ನನಗೆ ಯಾವಾಗ ಯಾವುದು ಬರಬೇಕೊ ಅದು ಬರುತ್ತದೆ. ಆ ಆತ್ಮವಿಶ್ವಾಸ ನನಗಿದೆ' ಎಂದರು.

'ನಾನು ಇದುವರೆಗೂ ಮುಖ್ಯಮಂತ್ರಿ ವಿಚಾರವಾಗಿ ಮಾತನಾಡಿಲ್ಲ. ನನ್ನ ವಿಚಾರದಲ್ಲಿ ನಾನುಂಟು, ಸಿ.ಎಂ ಉಂಟು, ಪಕ್ಷದ ಹೈಕಮಾಂಡ್ ಉಂಟು. ಕೆಲವು ನಿರ್ಧಾರ ಕೈಗೊಂಡಾಗ ನಾನು ಭಾಗಿಯಾಗಿದ್ದೆ ಎಂದು ಹೇಳಿರುವುದು ಬಿಟ್ಟರೆ, ಯಾವುದೇ ಹೇಳಿಕೆ ನೀಡಿಲ್ಲ. ಸಿ.ಎಂ ಹುದ್ದೆ ಖಾಲಿಯಾಗುತ್ತದೆ. ಸಿ.ಎಂ ಹುದ್ದೆಯಿಂದ ಇಳಿಯುತ್ತಾರೆ. ದಲಿತರಿಗೆ ಮುಖ್ಯಮಂತ್ರಿ ಹುದ್ದೆ ಸಿಗಬೇಕು, ಬೇರೆಯವರಿಗೆ ಸಿಗಬೇಕು ಎಂದು ಎಲ್ಲಿಯೂ ಹೇಳಿಲ್ಲ. ಮುಖ್ಯಮಂತ್ರಿ ಹುದ್ದೆ ಖಾಲಿ ಮಾಡಿಸಲು ಹೊರಟಿರುವವರು ಬೇರೆಯವರು. ಖಾಲಿಯಾದರೆ ಅಲ್ಲವೇ ಬೇರೆಯವರಿಗೆ ನೀಡುವುದು' ಎಂದರು.

'ಶಾಸಕರ ಹೇಳಿಕೆ ನೋಡಿದರೆ ಇದಕ್ಕೆ ತದ್ವಿರುದ್ಧವಾಗಿದೆ' ಎಂದಾಗ, 'ನನಗೆ ಒಳ್ಳೆಯದಾಗಬೇಕು ಎಂಬ ಆಸೆ ಶಾಸಕರಿಗೆ ಇದ್ದರೆ, ಸುಮ್ಮನಿದ್ದು ಬಿಡಿ ಎಂದು ಅವರಿಗೆ ಮನವಿ ಮಾಡುತ್ತೇನೆ' ಎಂದರು.

'ದೆಹಲಿಗೆ ಹೋಗಿ ಬಂದ ನಂತರ ನೀವು ಸಿ.ಎಂ ಕುರ್ಚಿ ಬಗ್ಗೆ ಯಾವುದೇ ಮಾತು ಆಡುತ್ತಿಲ್ಲ' ಎಂದಾಗ, 'ಇದನ್ನು ಕಾಲ ನಿರ್ಣಯ ಮಾಡುತ್ತದೆ' ಎಂದರು.

'ವರ್ಷಾಂತ್ಯಕ್ಕೆ ಸಂಪೂರ್ಣ ಡಿಜಿಟಲ್'

ಬೆಂಗಳೂರು: ಕಂದಾಯ ಇಲಾಖೆ ವರ್ಷದ ಅಂತ್ಯದೊಳಗೆ ಸಂಪೂರ್ಣ ಡಿಜಿಟಲೀಕರಣ-ಗೊಳ್ಳಲಿದ್ದು, ಪ್ರತಿಯೊಂದು ದಾಖಲೆಯ ಪ್ರತಿಯೂ ಡಿಜಿಟಲ್ ರೂಪದಲ್ಲಿ ಸಿಗಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಜಿಲ್ಲಾಧಿಕಾರಿಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ನಂತರ ಮಾತನಾಡಿದ ಅವರು, 'ರೋವರ್ ಮೂಲಕ ಸರ್ವೆ ಪೂರ್ಣಗೊಳಿಸಿದರೆ ಸ್ಕೆಚ್, ಟಿಪ್ಪಣಿ, ಆಕಾರ್ ಬಂದ್, ಕೈಬರಹ ಸೇರಿ ಪ್ರತಿಯೊಂದರ ಡಿಜಿಟಲ್ ಪ್ರತಿ ಲಭ್ಯವಾಗುತ್ತದೆ. ಹತ್ತಾರು ವರ್ಷಗಳಿಂದ ಆಗದ ಕೆಲಸಗಳು ಸಾವಿರ ದಿನಗಳಲ್ಲಿ ಆಗಿವೆ' ಎಂದರು.

2,05,757 ರೈತರ ಜಮೀನುಗಳ ಸರ್ವೆ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. 3 ತಿಂಗಳಲ್ಲಿ 1ಲಕ್ಷ ಜಮೀನುಗಳನ್ನು ಸರ್ವೆ ಪೂರ್ಣಗೊಳಿಸಲಾಗುವುದು. 1,07,217 ರೈತರ ಕಡತಗಳನ್ನು ಕಾಣೆಯಾದ ಕಡತಗಳ ಸಮಿತಿಗೆ ಕಳುಹಿಸಲಾಗಿದೆ. 3,662 ರೈತರಿಗೆ ದಾಖಲೆ ನೀಡಲಾಗಿದೆ. 50,000 ಕಡತಗಳನ್ನೂ ವಿಲೇಗೊಳಿಸಲು ಗಡುವು ನೀಡಲಾಗಿದೆ ಎಂದರು.

ಕೈಗಾರಿಕೆಗೆ ವಿದ್ಯುತ್ ದುಬಾರಿ

ಒಂದನೇ ಪುಟದಿಂದ...

ಕೃಷಿಗೆ ಬಳಸುವ ವಿದ್ಯುತ್ ದರವನ್ನು ಕಡಿಮೆ ಮಾಡಿರುವುದರಿಂದ, ಸಹಾಯಧನದ ರೂಪದಲ್ಲಿ ನೀಡುವ ಮೊತ್ತವು ₹1,254.88 ಕೋಟಿಯಷ್ಟು ಸರ್ಕಾರಕ್ಕೆ ಉಳಿತಾಯವಾಗಲಿದೆ.

ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಕೃಷಿಗೆ ಬಳಸುವ ಪ್ರತಿ ಯೂನಿಟ್ ವಿದ್ಯುತ್‌ಗೆ ಪ್ರಸ್ತುತ ₹8.30 ಪೈಸೆ ದರ ಇತ್ತು. ಇದನ್ನು ಪರಿಷ್ಕರಿಸಿ ಬೆಸ್ಕಾಂ ವ್ಯಾಪ್ತಿಯಲ್ಲಿ ಯೂನಿಟ್‌ಗೆ ₹6.57, ಮೆಸ್ಕಾಂ ವ್ಯಾಪ್ತಿಯಲ್ಲಿ ₹7.40, ಚೆಸ್ಕಾಂ ವ್ಯಾಪ್ತಿಯಲ್ಲಿ ₹7.73, ಹೆಸ್ಕಾಂ ವ್ಯಾಪ್ತಿಯಲ್ಲಿ ₹7.73 ಹಾಗೂ ಜೆಸ್ಕಾಂ ವ್ಯಾಪ್ತಿಯಲ್ಲಿ ₹7.79 ನಿಗದಿಪಡಿಸಲಾಗಿದೆ.

ಹಿಂದೆ ಎಲ್ಲ ಕಂಪನಿಗಳ ವ್ಯಾಪ್ತಿಯಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಒಂದೇ ರೀತಿಯ ದರವನ್ನು ನಿಗದಿಪಡಿಸಲಾಗಿತ್ತು. ಆದರೆ, ಈಗ ಕಂಪನಿವಾರು ಪ್ರತ್ಯೇಕವಾಗಿ ದರ ನಿಗದಿಪಡಿಸಲಾಗಿದೆ. ಬೆಸ್ಕಾಂ ವ್ಯಾಪ್ತಿಯಲ್ಲಿ ಹೆಚ್ಚು ಪಂಪ್‌ಸೆಟ್‌ಗಳು ಇದ್ದು, ಇಲ್ಲಿ ಕಡಿಮೆ ದರ ನಿಗದಿ ಮಾಡಲಾಗಿದೆ.

ಕೃಷಿ ಬಳಕೆಯ ವಿದ್ಯುತ್ ದರ

ಕಂಪನಿ ಹೆಸರು	ಯೂನಿಟ್ ದರ
ಬೆಸ್ಕಾಂ	₹6.57
ಮೆಸ್ಕಾಂ	₹7.40
ಚೆಸ್ಕಾಂ	₹7.70
ಹೆಸ್ಕಾಂ	₹7.73
ಜೆಸ್ಕಾಂ	₹ 7.79

ಸಾಲ ಪ್ರಮಾಣ: ದಕ್ಷಿಣದಲ್ಲಿ ಕರ್ನಾಟಕದ್ದೇ ಉತ್ತಮ ಸ್ಥಿತಿ

ರಾಜ್ಯದ ಒಟ್ಟು ಸಾಲದ ಮೊತ್ತ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದ್ದರೂ ದಕ್ಷಿಣ ಭಾರತದ ಇತರ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದ ಸ್ಥಿತಿ ಉತ್ತಮವಾಗಿಯೇ ಇದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಹೋಲಿಕೆಯಲ್ಲಿ ಒಟ್ಟು ಸಾಲದ ಶೇಕಡಾವಾರು ಪ್ರಮಾಣವು ಆಂಧ್ರ ಪ್ರದೇಶ, ತೆಲಂಗಾಣ, ಕೇರಳ ಮತ್ತು ತಮಿಳುನಾಡಿಗಿಂತ ಕರ್ನಾಟಕದ್ದೇ ಕಡಿಮೆ ಎಂಬುದನ್ನು ಆರ್‌ಬಿಐನ 'ರಾಜ್ಯಗಳ ಆರ್ಥಿಕತೆ: ಬಜೆಟ್‌ಗಳ ಅಧ್ಯಯನ' ವರದಿಯ ದತ್ತಾಂಶಗಳು ಹೇಳುತ್ತವೆ. ಗೋವಾ (25.7%), ಗುಜರಾತ್ (17.9%), ಉತ್ತರಾಖಂಡ (25.3%), ಒಡಿಶಾ (20.3%), ಜಾರ್ಖಂಡ್ (25.4%) ಮತ್ತು ಮಹಾರಾಷ್ಟ್ರ (19%) ಬಿಟ್ಟರೆ, ಉಳಿದೆಲ್ಲಾ ರಾಜ್ಯಗಳಿಗಿಂತ ಕರ್ನಾಟಕದ ಸಾಲದ ಪ್ರಮಾಣ ಕಡಿಮೆಯೇ ಇದೆ.



₹8.14 ಲಕ್ಷ ಕೋಟಿ ಸಾಲ

ಒಂದನೇ ಪುಟದಿಂದ...

ಹೀಗಿದ್ದೂ ಆರ್ಥಿಕ ಶಿಸ್ತಿನ ವಿಚಾರದಲ್ಲಿ ರಾಜ್ಯವು, ದಕ್ಷಿಣ ಭಾರತದ ಇತರ ರಾಜ್ಯಗಳಿಗಿಂತ ಉತ್ತಮ ಸ್ಥಿತಿಯಲ್ಲಿಯೇ ಇರಲಿದೆ ಎಂಬುದನ್ನೂ ಆರ್‌ಬಿಐನ 'ರಾಜ್ಯಗಳ ಆರ್ಥಿಕತೆ: ಬಜೆಟ್‌ಗಳ ಅಧ್ಯಯನ' ವರದಿಯಲ್ಲಿನ ದತ್ತಾಂಶಗಳು ಹೇಳುತ್ತವೆ. ಸಿದ್ದರಾಮಯ್ಯ ಅವರು ಈ ವಾರದಲ್ಲಿಯೇ ಮಂಡಿಸಲಿರುವ ಮುಂದಿನ ಬಜೆಟ್‌ನಲ್ಲಿ ಆರ್ಥಿಕ ಶಿಸ್ತನ್ನು ಹೇಗೆ ಕಾಪಾಡಿಕೊಳ್ಳಲಿದ್ದಾರೆ ಎಂಬುದನ್ನು ನೋಡಬೇಕಿದೆ.

2028–29ಕ್ಕೆ ₹10.17 ಲಕ್ಷ ಕೋಟಿ ಸಾಲ: 2025–26ನೇ ಮಧ್ಯಮಾವಧಿ ವಿತ್ತೀಯ ಮುನ್ನಂದಾಜಿನ ಪ್ರಕಾರ 2028–29ನೇ ಆರ್ಥಿಕ ವರ್ಷದ ಅಂತ್ಯದ ಹೊತ್ತಿಗೆ ರಾಜ್ಯದ ಒಟ್ಟು ಸಾಲವು ₹10.17 ಲಕ್ಷ ಕೋಟಿಯಷ್ಟಾಗಲಿದೆ.

ಮುಂಬರುವ ಆರ್ಥಿಕ ವರ್ಷಗಳಲ್ಲಿ ವೇತನ–ಪಿಂಚಣಿ ಮತ್ತಿತರ ಬದ್ಧ ವೆಚ್ಚಗಳಲ್ಲಿ ಏರಿಕೆಯಾಗುವ ಸಾಧ್ಯತೆ ನಿಚ್ಚ-ಳವಾಗಿರುವ ಕಾರಣ, ರಾಜ್ಯದ ಮೇಲಿನ ಹಣಕಾಸು ಹೊರೆಯೂ ಹೆಚ್ಚಾಗಲಿದೆ. ಈ ಹೊರೆಗಳ ನಿರ್ವಹಣೆಗೆ ಸಾಲದ ಮೇಲಿನ ಅವಲಂಬನೆ ಅನಿವಾರ್ಯ ಎಂಬುದನ್ನು ಮುನ್ನಂದಾಜಿನಲ್ಲಿ ಉಲ್ಲೇಖಿಸಲಾಗಿದೆ.

'ಪರಿಶಿಷ್ಟರ ಹಣ ಅನ್ಯ ಉದ್ದೇಶಕ್ಕೆ ಬಳಸಿದರೆ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಸಮುದಾಯದವರಿಗೆ ಮೀಸಲಾದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸುಮಾರು ₹39,000 ಕೋಟಿಯನ್ನು ಸರ್ಕಾರ ಅನ್ಯ ಉದ್ದೇಶಗಳಿಗೆ ಬಳಸಿದೆ. ಇದು ದಲಿತರಿಗೆ ಮಾಡಿರುವ ವಂಚನೆ' ಎಂದು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಂಘಟನೆಗಳು ದೂರಿವೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಂಘಟನೆಗಳ ದುಂಡು ಮೇಜಿನ ಸಭೆ ಮಂಗಳವಾರ ಇಲ್ಲಿ ನಡೆಯಿತು. ಸುಮಾರು 60 ಸಂಘಟನೆ ಗಳ ಪ್ರಮುಖರು ಸಭೆಯಲ್ಲಿ ಭಾಗವಹಿಸಿದ್ದರು.

'ಈ ಸಾಲಿನ ಬಜೆಟ್‌ನಲ್ಲಿ ಪುನಃ ಅದೇ ತಪ್ಪನ್ನು ಮಾಡಿದರೆ ಬಜೆಟ್ ಪ್ರತಿಯನ್ನು ಸುಟ್ಟು ಹಾಕಿ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ' ಎಂದೂ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸುತ್ತಿರುವುದನ್ನು ಎಲ್ಲ ಸಂಘಟನೆಗಳು ಖಂಡಿಸಿವೆ. ಈ ಸರ್ಕಾರ ದಲಿತರಿಗೆ ವಂಚನೆ ಮಾಡುತ್ತಿದೆ. ಸರ್ಕಾರದ ವಿರುದ್ಧ ದೊಡ್ಡ ಹೋರಾಟ ರೂಪಿಸಬೇಕು ಎಂಬ ಮಾತನ್ನು ಸಭೆಯಲ್ಲಿ ಒಕ್ಕೊರಲಿನಿಂದ ಹೇಳಿದ್ದಾರೆ' ಎಂದರು.

'ಗ್ಯಾರಂಟಿ ಯೋಜನೆಗಳಿಗೆ ಒಂದು ವರ್ಷಕ್ಕೆ ₹52 ಸಾವಿರ ಕೋಟಿ ಬೇಕು. ಅಷ್ಟು ಮೊತ್ತವನ್ನು ಬಜೆಟ್‌ನಲ್ಲಿ ತೆಗೆದಿಟ್ಟ ಮೇಲೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣವನ್ನು ಯಾಕೆ ಬಳಸಿಕೊಳ್ಳಬೇಕು? ಒಕ್ಕಲಿಗರಿಗೆ ಒಕ್ಕಲಿಗರ ಅಭಿವೃದ್ಧಿ ನಿಗಮದಿಂದ ತೆಗೆದು ಕೊಡುತ್ತಿದ್ದೀರಾ? ಲಿಂಗಾಯತರಿಗೆ ಕೊಡುವುದನ್ನು ಅವರ ಅಭಿವೃದ್ಧಿ ನಿಗಮದಿಂದ ತೆಗೆದು ಕೊಡುತ್ತಿದ್ದೀರಾ' ಎಂದು ಪ್ರಶ್ನಿಸಿದರು.

'ಮುಸ್ಲಿಮರಿಗೆ ಕೊಡುವ ಗ್ಯಾರಂಟಿ ಹಣವನ್ನು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ತೆಗೆದು ಕೊಡುತ್ತೀರಾ? ಪರಿಶಿಷ್ಟ ಜಾತಿ, ವರ್ಗಗಳಿಗೆ ಕೊಡುವಾಗ ಅವರ ಹಣ ತೆಗೆದು ಯಾಕೆ ಕೊಡುತ್ತೀರಿ ಎಂಬ ವಿಷಯವನ್ನು ಸಭೆಯಲ್ಲಿ ಎಲ್ಲ ಮುಖಂಡರು ಪ್ರಸ್ತಾಪಿಸಿದರು' ಎಂದರು.

'ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ₹42 ಸಾವಿರ ಕೋಟಿ ಎಂದು ಜನರಿಗೆ ತೋರಿಸುತ್ತೀರಿ. ಇದರಲ್ಲಿ 34 ಇಲಾಖೆಗಳಿವೆ. ಅವುಗಳಿಗೆ ₹21 ಸಾವಿರ ಕೋಟಿ ಕೊಡುತ್ತೀರಿ. ಉಳಿದ ₹21 ಸಾವಿರ ಕೋಟಿಯಲ್ಲಿ ₹14 ಸಾವಿರ ಕೋಟಿಯನ್ನು ಗ್ಯಾರಂಟಿಗಳಿಗೆ ಬಳಸಿದರೆ ಉಳಿಯುವುದು ₹7 ಸಾವಿರ ಕೋಟಿ. ಅಂದರೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸಿಗುವ ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣ ಕೇವಲ ₹7 ಸಾವಿರ ಕೋಟಿ. ಅಂದ ಮೇಲೆ ₹42 ಸಾವಿರ ಕೋಟಿ ಕೊಡುತ್ತಿದ್ದೇವೆ ಎಂದು ಯಾಕೆ ಹೇಳಿಕೊಳ್ಳುತ್ತೀರಿ' ಎಂದು ಛಲವಾದಿ ಪ್ರಶ್ನಿಸಿದರು.

ತೇರನೆಳೆಯುವ ಸಂಭ್ರಮ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಕ್ಷೇತ್ರದಲ್ಲಿ ಮಂಗಳವಾರ ಮುಂಜಾನೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಗಂಗಾಧರೇಶ್ವರಸ್ವಾಮಿ ರಥೋತ್ಸವ ಸಂಭ್ರಮದಿಂದ ನಡೆಯಿತು

ಗಂಗಾಧರೇಶ್ವರಸ್ವಾಮಿ ರಥೋತ್ಸವ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಆದಿಚುಂಚನಗಿರಿ ಸುಕ್ಷೇತ್ರದಲ್ಲಿ ಗಂಗಾಧರೇಶ್ವರ ಸ್ವಾಮಿಯ 'ಮಹಾ ರಥೋತ್ಸವ' ಹಾಗೂ ನಿರ್ಮಲಾನಂದನಾಥ ಸ್ವಾಮಿಜೀಯವರ 'ಅಡ್ಡಪಲ್ಲಕ್ಕಿ ಉತ್ಸವ'ವು ಮಂಗಳವಾರ ಮುಂಜಾನೆ ವಿಜೃಂಭಣೆಯಿಂದ ನಡೆಯಿತು.

ಅಲಂಕೃತ ರಥದಲ್ಲಿ ಗಂಗಾಧರೇಶ್ವರ ಸ್ವಾಮಿಯ ಮೂರ್ತಿ ಸ್ಥಾಪಿತವಾಗುತ್ತಿದ್ದಂತೆ, ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತರು ಕಾಲಭೈರವೇಶ್ವರ ಸ್ವಾಮಿ, ಬಾಲಗಂಗಾಧರನಾಥ ಸ್ವಾಮಿ ಹಾಗೂ ನಿರ್ಮಲಾನಂದನಾಥ ಸ್ವಾಮೀಜಿಯವರಿಗೆ ಜಯಘೋಷ ಮೊಳಗಿಸಿದರು.

ಸೋಮವಾರ ರಾತ್ರಿ ಕಾಲಭೈರವೇಶ್ವರಸ್ವಾಮಿಯ ತಿರುಗಣಿ ಉತ್ಸವ ಹಾಗೂ ನಿರ್ಮಲಾನಂದನಾಥ ಸ್ವಾಮೀಜಿಯವರ ತೆಪ್ಪೋತ್ಸವ ನಡೆದಿತ್ತು. ಭಕ್ತರು ರಥ ಎಳೆದು ಭಕ್ತಿ ಪ್ರದರ್ಶಿಸಿದರು.

ಉತ್ಸವಮೂರ್ತಿಗಳ ಗಿರಿಪ್ರದಕ್ಷಿಣೆ: ಮಂಗಳವಾರ ರಾತ್ರಿ ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ್ದ 250ಕ್ಕೂ ಹೆಚ್ಚು ಗ್ರಾಮ ದೇವತೆಗಳ ಉತ್ಸವ ಮೂರ್ತಿಗಳೊಂದಿಗೆ 'ಗಿರಿ ಪ್ರದಕ್ಷಿಣೆ' ವೈಭವದಿಂದ ನಡೆಯಿತು. ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರು ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಆರೋಪಿಯ ವಿಚಾರಣೆ ರದ್ದು

ಕೊಲೆ ಪ್ರಕರಣ: ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿಂದ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಪ್ರಕರಣವೊಂದರಲ್ಲಿ ಒಟ್ಟು 13 ಆರೋಪಿಗಳನ್ನು ಖುಲಾಸೆಗೊಳಿಸಿರುವ ಸೆಷನ್ಸ್ ನ್ಯಾಯಾಲಯದ ತೀರ್ಪು ಆಧರಿಸಿ ಪ್ರಕರಣದ 14ನೇ ಆರೋಪಿ ವಿರುದ್ಧದ ವಿಚಾರಣೆಯನ್ನು ರದ್ದುಪಡಿಸಿ ಹೈಕೋರ್ಟ್ ಆದೇಶಿಸಿದೆ.

‘ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಬೆಂಗಳೂರಿನ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ವಿಚಾರಣೆಯ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ ಡಿ.ಪ್ರವೀಣ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಸಾಕ್ಷ್ಯಾಧಾರಗಳ ಕೊರತೆ ಹಿನ್ನೆಲೆಯಲ್ಲಿ ಪ್ರಕರಣದ ಇತರ ಎಲ್ಲಾ 13 ಆರೋಪಿಗಳು ಈಗಾಗಲೇ ಖುಲಾಸೆಯಾಗಿದ್ದಾರೆ. ಆರೋಪಿಗಳ ವಿರುದ್ಧದ ಅಪರಾಧಗಳನ್ನು ದೃಢಪಡಿಸುವಲ್ಲಿ ತನಿಖಾಧಿಕಾರಿಗಳು ಸಂಪೂರ್ಣ ವಿಫಲರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸೆಷನ್ಸ್ ನ್ಯಾಯಾಲಯ ಪ್ರವೀಣ್ ವಿರುದ್ಧದ ವಿಚಾರಣೆ ಮುಂದುವರಿಸಿದರೂ ಖುಲಾಸೆಯಾಗಬಹುದು. ಹಾಗಾಗಿ, ನ್ಯಾಯಾಲಯದ ಅಮೂಲ್ಯ ಸಮಯವನ್ನು ಉಳಿಸುವ ದೃಷ್ಟಿಯಿಂದ ಅರ್ಜಿದಾರರ ವಿರುದ್ಧದ ಪ್ರಕರಣ ರದ್ದುಪಡಿಸುವುದು ಸೂಕ್ತ’ ಎಂಬ ಅಭಿಪ್ರಾಯವನ್ನು ನ್ಯಾಯಪೀಠ ವ್ಯಕ್ತಪಡಿಸಿದೆ.

ಪ್ರಕರಣ: ಜೆ.ಪಿ.ನಗರದ ವರುಣ್ (24) ಎಂಬ ತರುಣನನ್ನು 2019ರ ಆಗಸ್ಟ್ 25ರಂದು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು. ಈ ಸಂಬಂಧ ಜೆ.ಪಿ.ನಗರ ಠಾಣೆಯ ಪೊಲೀಸರು ಅರ್ಜಿದಾರ ಪ್ರವೀಣ್ ಸೇರಿದಂತೆ ಒಟ್ಟು 14 ಆರೋಪಿಗಳ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ್ದ ಸೆಷನ್ಸ್ ನ್ಯಾಯಾಲಯ, ಕೊಲೆ, ಅಕ್ರಮ ಕೂಟ ಮತ್ತು ಅಪರಾಧಿಕ ಒಳಸಂಚು ಆರೋಪ ಹೊತ್ತಿದ್ದ ಪ್ರಕರಣದಲ್ಲಿನ 13 ಆರೋಪಿಗಳನ್ನು ಖುಲಾಸೆಗೊಳಿಸಿ 2025ರ ಆಗಸ್ಟ್ 30ರಂದು ಆದೇಶಿಸಿತ್ತು. ‘ವಿಚಾರಣೆ ವೇಳೆ ತಲೆಮರೆಸಿಕೊಂಡಿದ್ದಾನೆ’ ಎಂಬ ಕಾರಣಕ್ಕಾಗಿ ಪ್ರಕರಣದ 14ನೇ ಆರೋಪಿ ಪ್ರವೀಣ್ ವಿರುದ್ಧ ಪ್ರತ್ಯೇಕವಾಗಿ ವಿಚಾರಣೆ ನಡೆಸಲಾಗುತ್ತಿತ್ತು.

‘ಗಾಯಾಳು ರಕ್ಷಣೆಗೆ ಆದ್ಯತೆ–ದೂರಿಗಲ್ಲ’

‘ಅಪರಾಧ ಘಟಿಸಿದಾಗ ಸಂತ್ರಸ್ತರ ಕುಟುಂಬವು ಗಾಯಾಳು ಬಗ್ಗೆ ಕಾಳಜಿ ತೋರುತ್ತದೆಯೇ ಹೊರತು ಪೊಲೀಸರಿಗೆ ದೂರು ನೀಡುವ ಬಗ್ಗೆ ಅಲ್ಲ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಅಭಿಪ್ರಾಯಪಟ್ಟಿದೆ.

ದಾವಣಗೆರೆ ಜಿಲ್ಲಾ ಒಂದನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಹೊನ್ನಾಳಿ ತಾಲ್ಲೂಕು ನ್ಯಾಮತಿ ಪೊಲೀಸ್ ಠಾಣೆ ವ್ಯಾಪ್ತಿಯ ಟಿ.ಗೋಪಗೊಂಡನ ಹಳ್ಳಿ ಮಂಜಪ್ಪ (55) ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

‘ಕೊಲೆ ಪ್ರಕರಣದಲ್ಲಿ ದೂರುದಾರರು ದೂರು ದಾಖಲಿಸುವಲ್ಲಿ ವಿಳಂಬ ಮಾಡಿದ್ದರೆ ಅದು ಆರೋಪಿಯನ್ನು ಖುಲಾಸೆಗೊಳಿಸಲು ಆಧಾರವಾಗುವುದಿಲ್ಲ’ ಎಂದು ಸ್ಪಷ್ಟಪಡಿಸಿರುವ ನ್ಯಾಯಪೀಠ, ‘ವಿಚಾರಣಾ ನ್ಯಾಯಾಲಯದ ತೀರ್ಪು ರದ್ದುಗೊಳಿಸಲು ನಮಗೆ ಯಾವುದೇ ಆಧಾರಗಳು ಕಂಡುಬರುವುದಿಲ್ಲ’ ಎಂದು ಹೇಳಿದೆ.

ಪ್ರಕರಣವೇನು: ‘ಶಿವಕುಮಾರ್, ಮಂಜಪ್ಪನ ಮಗಳನ್ನು ಪ್ರೀತಿಸಿ ಮದುವೆಯಾಗಿದ್ದರು. ಇವರಿಗೆ ಇಬ್ಬರು ಮಕ್ಕಳಿದ್ದು, ಶಿವಕುಮಾರ್ ಆಗ್ಗಾಗ್ಗೆ ಹಣಕ್ಕಾಗಿ ಪೀಡಿಸುತ್ತಿದ್ದ ಕಾರಣಕ್ಕೆ ಮಾವ-ಅಳಿಯನ ಜತೆ ಗಲಾಟೆ ನಡೆಯುತ್ತಿತ್ತು. ಇಂತಹುದೇ ಒಂದು ಸನ್ನಿವೇಶದಲ್ಲಿ ಶಿವಕುಮಾರ್ 2017ರ ಅಕ್ಟೋಬರ್ 6ರಂದು ಟಿ.ಗೋಪಗೊಂಡನ ಹಳ್ಳಿಯ ಮನೆಯಲ್ಲಿ ಮಲಗಿದ್ದಾಗ ಮಂಜಪ್ಪ ಶಿವಕುಮಾರ್‌ಗೆ ಮರದ ದಿಮ್ಮಿ ತೆಗೆದುಕೊಂಡು ಹೊಟ್ಟೆಯ ಮೇಲೆ ಬಲವಾಗಿ ಹೊಡೆದಿದ್ದ. ಪರಿಣಾಮ ಕೆಲ ದಿನಗಳ ಬಳಿಕ ಶಿವಕುಮಾರ್ ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆದಿದ್ದರು’ ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿತ್ತು.

ಮಂಜಪ್ಪನ ವಿರುದ್ಧ ಮಗಳು ನೀಡಿದ್ದ ದೂರಿನ ಆಧಾರದಲ್ಲಿ ಪೊಲೀಸರು ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಸೆಷನ್ಸ್ ನ್ಯಾಯಾಲಯ ಭಾರತೀಯ ದಂಡ ಸಂಹಿತೆ–1860ರ ಕಲಂ 302ರ ಪ್ರಕಾರ ಮಂಜಪ್ಪ ಅಪರಾಧಿ ಎಂದು ಸಾರಿ ಜೀವಾವಧಿ ಶಿಕ್ಷೆ ವಿಧಿಸಿತ್ತು.

ನೋಟಿಸ್ ಪ್ರಶ್ನಿಸಿದ್ದ ಅರ್ಜಿ ವಜಾ

₹12 ಕೋಟಿ ಪ್ರೊ–ರೇಟಾ ಶುಲ್ಕ ಭರ್ತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನಕಪುರ ತಾಲ್ಲೂಕಿನ ಜಕ್ಕಸಂದ್ರ ಪೋಸ್ಟ್ ವ್ಯಾಪ್ತಿಯಲ್ಲಿರುವ ಜೈನ್ ಅಂತರರಾಷ್ಟ್ರೀಯ ವಸತಿ ಶಾಲೆಯು ₹12.96 ಕೋಟಿ ಮೊತ್ತದ ಪ್ರೊ–ರೇಟಾ (ಅನುಪಾತದ ಶುಲ್ಕ) ಶುಲ್ಕ ಭರ್ತಿ ಮಾಡಬೇಕು’ ಎಂದು ಬೆಂಗಳೂರು ಜಲಮಂಡಳಿ ನೀಡಿದ್ದ ನೀರಿನ ಡಿಮ್ಯಾಂಡ್ ನೋಟಿಸ್ ಅನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಡಿಮ್ಯಾಂಡ್ ನೋಟಿಸ್ ರದ್ದುಗೊಳಿಸುವಂತೆ ಕೋರಿ, ‘ಜೈನ್ ಅಂತರರಾಷ್ಟ್ರೀಯ ವಸತಿ ಶಾಲೆ’ ನಿರ್ದೇಶಕರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ರದ್ದುಗೊಳಿಸಿದೆ.

‘ಈಗಾಗಲೇ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು (ಬೆಸ್ಕಾಂ), ಶಿಕ್ಷಣ ಸಂಸ್ಥೆ ವಾಣಿಜ್ಯ ಕಟ್ಟಡ ಎಂದು ಪರಿಗಣಿಸಿ ಶುಲ್ಕವನ್ನು ವಸೂಲಿ ಮಾಡುತ್ತಿದೆ. ಹೀಗಾಗಿ, ನೀರಿನ ಸರಬರಾಜಿಗೂ ವಾಣಿಜ್ಯ ಕಟ್ಟಡವೆಂದು ಗುರುತಿಸಿ ಶುಲ್ಕ ಪಾವತಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್ಎಸ್‌ಬಿ) ನೀಡಿರುವ ಡಿಮ್ಯಾಂಡ್ ನೋಟಿಸ್‌ನಲ್ಲಿ ಯಾವುದೇ ದೋಷಗಳಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

‘ಅನುಪಾತ ಆಧಾರಿತ ಶುಲ್ಕವನ್ನು ಪಾವತಿಸಲು ನಾವು ಬಾಧ್ಯಸ್ಥರಲ್ಲ ಎಂದು ಘೋಷಿಸಬೇಕು ಮತ್ತು ₹1,01,91,510 ಮೊತ್ತದ ಮರುಪಾವತಿ ಅಥವಾ ಹೊಂದಾಣಿಕೆಗೆ ನಿರ್ದೇಶಿಸಬೇಕು’ ಎಂಬ ಅರ್ಜಿದಾರರ ಮನವಿಯನ್ನು ತಿರಸ್ಕರಿಸಿದೆ.

‘ಒಂದು ವೇಳೆ ಪ್ರಮಾಣೀಕೃತ ಶುಲ್ಕಗಳ ಲೆಕ್ಕಾಚಾರ ಅಥವಾ ಪ್ರಮಾಣಕ್ಕೆ ಸಂಬಂಧಿಸಿದ ಯಾವುದೇ ದೂರುಗಳಿದ್ದರೆ ಅರ್ಜಿದಾರರು, ಬೆಂಗಳೂರು ಜಲಮಂಡಳಿ ಕಾಯ್ದೆ–1964ರ ಕಲಂ 120ರ ಅಡಿಯಲ್ಲಿ ಮೇಲ್ಮನವಿ ಪ್ರಾಧಿಕಾರವನ್ನು ಸಂಪರ್ಕಿಸಲು ಸ್ವಾತಂತ್ರ್ಯ ನೀಡಲಾಗಿದೆ’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

‘ನಿಗದಿತ ಅವಧಿಯೊಳಗೆ ಮೇಲ್ಮನವಿ ಸಲ್ಲಿಸಿದರೆ, ಮೇಲ್ಮನವಿ ಪ್ರಾಧಿಕಾರವು ಮಿತಿಯ ಆಧಾರದಡಿ ಯಾವುದೇ ಆಕ್ಷೇಪಣೆಯನ್ನು ಎತ್ತದೆ, ಕಾನೂನಿನ ಪ್ರಕಾರ ಅರ್ಹತೆಗಳ ಮೇಲೆ ಅದನ್ನು ಪರಿಗಣಿಸಿ ವಿಲೇವಾರಿ ಮಾಡಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಪ್ರಕರಣವೇನು?: ಶಾಲೆಯ ಬೋರ್‌ವೆಲ್ ನೀರು ಕುಡಿಯಲು ಯೋಗ್ಯವಾಗಿರದ ಕಾರಣ, ಆಡಳಿತ ಮಂಡಳಿಯು ಹೆಚ್ಚಿನ ಪ್ರಮಾಣದ ನೀರಿನ ಪೂರೈಕೆಗೆ 2004ರಲ್ಲಿ ಬಿಡಬ್ಲ್ಯುಎಸ್ಎಸ್‌ಬಿಯನ್ನು ಸಂಪರ್ಕಿಸಿತ್ತು. ನಿತ್ಯ 9 ಲಕ್ಷ ಲೀಟರ್ ನೀರು ಪೂರೈಸಲು ಸರ್ಕಾರ ಅನುಮೋದನೆ ನೀಡಿತ್ತು. ಪೈಪ್‌ಲೈನ್ ಅಳವಡಿಸಲು ಶಾಲೆ ₹93 ಲಕ್ಷ ಪಾವತಿಸಿ ಒಪ್ಪಂದ ಮಾಡಿಕೊಂಡಿತ್ತು.

ನೀರಿನ ದರಗಳನ್ನು 2016ರಲ್ಲಿ ಪರಿಷ್ಕರಿಸಿದ್ದ ಜಲಮಂಡಳಿ, ‘ಪ್ರೊ-ರೇಟಾ ಶುಲ್ಕವಾಗಿ ₹4.32 ಕೋಟಿ ಹಾಗೂ ಹೆಚ್ಚುವರಿ ಶುಲ್ಕ ₹8.64 ಕೋಟಿ ಪಾವತಿಸಬೇಕು. ಇಲ್ಲದಿದ್ದರೆ ಸಂಪರ್ಕ ಕಡಿತಗೊಳಿಸಲಾಗುವುದು’ ಎಂದು ಶಾಲೆಗೆ ಡಿಮ್ಯಾಂಡ್ ನೋಟಿಸ್ ಜಾರಿ ಮಾಡಿತ್ತು.

ಡಿಮ್ಯಾಂಡ್ ನೋಟಿಸ್ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಆಡಳಿತ ಮಂಡಳಿ, ‘ಪ್ರೊ-ರೇಟಾ ಶುಲ್ಕ ಪಾವತಿಸಬೇಕಾಗಿಲ್ಲ. ಹೆಚ್ಚುವರಿ ಶುಲ್ಕ ₹1.01 ಕೋಟಿ ಮರು ಪಾವತಿಸಲು ನಿರ್ದೇಶಿಸಬೇಕು’ ಎಂದು ಮನವಿ ಮಾಡಿತ್ತು.

‘ಕಾಂಗ್ರೆಸ್‌ಗೆ ರಾಜಕೀಯವೇ ಮುಖ್ಯ’

ಬೆಂಗಳೂರು: ಕಾಂಗ್ರೆಸ್‌ಗೆ ರಾಷ್ಟ್ರದ ಹಿತಾಸಕ್ತಿಗಿಂತ ರಾಜಕೀಯ ಹಿತಾಸಕ್ತಿಯೇ ಮುಖ್ಯ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದ್ದಾರೆ.

ಇರಾನ್–ಇಸ್ರೇಲ್ ಯುದ್ಧದ ಸಂಬಂಧ ಭಾರತದ ನಿಲುವಿಗೆ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ಭಾರತ ಒಂದು ರಾಷ್ಟ್ರವಾಗಿ ರಾಷ್ಟ್ರದ ಹಿತಾಸಕ್ತಿಯನ್ನು ಆಧರಿಸಿ ಸಾಂದರ್ಭಿಕ ನಿಲುವು ತೆಗೆದುಕೊಳ್ಳುತ್ತದೆ ಎಂದು ಅವರು ತಿಳಿಸಿದರು.

ರಾಷ್ಟ್ರದ ಹಿತಾಸಕ್ತಿಯನ್ನು ಆಧರಿಸಿ ಕಾಲ ಕಾಲಕ್ಕೆ ಅಗತ್ಯ ಇರುವ ನಿಲುವನ್ನು ಭಾರತವು ತೆಗೆದುಕೊಳ್ಳುತ್ತದೆ. ಆದರೆ, ಕಾಂಗ್ರೆಸ್‌ಗೆ ರಾಜಕೀಯ ಹಿತಾಸಕ್ತಿಯೇ ಮುಖ್ಯವಾಗಿದೆ. ತಮ್ಮ ಮತ ಬ್ಯಾಂಕ್ ರಕ್ಷಿಸಿಕೊಳ್ಳಲು ಭಯೋತ್ಪಾದಕನಾದರೂ ಪರವಾಗಿಲ್ಲ. ಅವರ ಬಗ್ಗೆ ಕರುಣೆ ತೋರಿಸಬೇಕು ಎಂಬ ನಿಲುವು ಹೊಂದಿದೆ. ಬಿಜೆಪಿ ಆ ನಿಲುವು ಹೊಂದಿಲ್ಲ ಎಂದರು.

ನಗರದಲ್ಲಿ ಇಂದು

ಮಾಧ್ಯಮ ಹಬ್ಬ: ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಅತಿಥಿಗಳು: ಕೆ.ವಿ. ಪ್ರಭಾಕರ್, ದಿನೇಶ್ ಅಮೀನ್ ಮಟ್ಟು, ಬಿ. ರಮೇಶ್, ಜಿ. ಜಗದೀಶ್, ಹೇಮಂತ್ ಎಂ. ನಿಂಬಾಳ್ಕರ್, ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳ: ಡಬ್ಲ್ಯು.ಬಿ.ಸಿ. ಸಭಾಂಗಣ, ಅಕಾಡೆಮಿ ಬ್ಲಾಕ್, ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10ರಿಂದ

‘ಪ್ರೊ.ಕೆ.ಬಿ. ಸಿದ್ಧಯ್ಯ’ ಒಂದು ದಿನದ ರಾಷ್ಟ್ರೀಯ ವಿಚಾರಸಂಕಿರಣ, ಕೆ.ಬಿ. ಸಿದ್ಧಯ್ಯ ಅವರ ‘ತೊಗಲ ಮಂಟಪ’ ಪುಸ್ತಕ ಬಿಡುಗಡೆ: ಉದ್ಘಾಟನೆ: ಎಚ್.ಎಸ್. ಶಿವಪ್ರಕಾಶ್, ಪುಸ್ತಕ ಬಿಡುಗಡೆ: ಎಲ್. ಹನುಮಂತಯ್ಯ, ಅತಿಥಿಗಳು: ಎಲ್.ಎನ್. ಮುಕುಂದರಾಜ್, ಶಿವಾನಂದ ಕೆಳಗಿನಮನಿ, ಅಧ್ಯಕ್ಷತೆ: ಎಸ್.ಎಂ. ಜಯಕರ, ಆಯೋಜನೆ: ಡಾ. ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸ್ಥಳ: ಜಿ.ಎಸ್.ಎಸ್. ಸಭಾಂಗಣ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ ಆವರಣ, ಬೆಳಿಗ್ಗೆ 10.30

ಎಚ್.ಎಸ್. ಶಿವಪ್ರಕಾಶ್

ಸುಧಾಕರ ಹೊಸಳ್ಳಿ ಅವರ ‘ನಾನೂ ಕಾಫಿರ’ ಪುಸ್ತಕ ಬಿಡುಗಡೆ: ಪ್ರಕಾಶ್ ಬೆಳವಾಡಿ, ಪುಸ್ತಕ ಪರಾಮರ್ಶೆ: ಜಿ.ಬಿ. ಹರೀಶ್, ಅಧ್ಯಕ್ಷತೆ: ಎನ್. ರವಿಕುಮಾರ್, ಅತಿಥಿ: ನಾರಾಯಣ ಶೇವಿರೆ, ಆಯೋಜನೆ: ಸ್ವರಾಷ್ಟ್ರ ಪ್ರಕಾಶನ, ಸ್ಥಳ: ಸುಚಿತ್ರ ಸಭಾಂಗಣ, ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ, ಸಂಜೆ 5



ಪ್ರಕಾಶ್ ಬೆಳವಾಡಿ

‘ಮನರೇಗಾ ವರ್ಸಸ್ ಜಿ ರಾಮ್ ಜಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಬದಲಾವಣೆ–ಸಾಧಕ ಬಾಧಕಗಳು’ ವಿಚಾರಸಂಕಿರಣ: ಆಶಯ ಭಾಷಣ: ಸ್ವರ್ಣ ಭಟ್, ಅಧ್ಯಕ್ಷತೆ: ಬಿ.ಆರ್. ಪಾಟೀಲ, ‘ಉದ್ಯೋಗ ಖಾತ್ರಿ ಯೋಜನೆ ಕಲಿಸಿದ ಪಾಠಗಳು–ಕರ್ನಾಟಕದ ಅನುಭವಗಳು’ ಗೋಷ್ಠಿ: ನರೇಂದ್ರಪಾಣಿ, ಆಯೋಜನೆ: ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30ರಿಂದ

ಎಸ್.ಎನ್. ಪ್ರಶಾಂತ್ ಚಂದ್ರ ಅವರ ‘ಕಂಪೆಂಡಿಯಮ್ ಆನ್ ಕರ್ಮಷಿಯಲ್ ಕೋರ್ಟ್ಸ್ ಆ್ಯಕ್ಟ್, 2015–ಪಾರ್ಟ್–2’ ಪುಸ್ತಕ ಬಿಡುಗಡೆ: ವಿಭು ಖಬ್ರು, ಅತಿಥಿಗಳು: ಅನು ಶಿವರಾಮನ್, ಬಸವಪ್ರಭು ಎಸ್. ಪಾಟೀಲ, ಹರೀಶ್ ನರಸಪ್ಪ, ಡಿ.ಎಂ. ಹೆಗಡೆ, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ಬೆಂಗಳೂರು ವಕೀಲರ ಸಂಘ, ಸ್ಥಳ: ಹೈಕೋರ್ಟ್ ಯೂನಿಟ್, ಹಾಲ್ ನಂ.1, ಮಧ್ಯಾಹ್ನ 1.45

ಕಾಮಣ್ಣನ ಹಬ್ಬದ ಆಚರಣೆ: ‘ಮನ್ಮಥನ ದಹನ ರತಿಯಿಂದ ಶಿವನಲ್ಲಿ ಪತಿ ಭಿಕ್ಷೆಯ ಪ್ರಾರ್ಥನೆ’, ಆಯೋಜನೆ ಮತ್ತು ಸ್ಥಳ: ಕಾಮಣ್ಣನ ಗುಡಿ ಸೇವಾ ಸಮಿತಿ ಟ್ರಸ್ಟ್, ಅರಳೇಪೇಟೆ, ಸಂಜೆ 6.30ರಿಂದ

ಮಹಿಳಾ ಹುಣ್ಣಿಮೆ ಹಾಡು, ಮಹಿಳಾ ದಿನಾಚರಣೆ, ಗಾನ ಸಂಭ್ರಮ: ಸವಿತಾ ಗಣೇಶ್ ಪ್ರಸಾದ್, ಸೀಮಾ ರಾಯ್ಕರ್, ಶುಭಾ ರಾಘವೇಂದ್ರ, ಪ್ರಭಾ ಇನಾಂದಾರ, ಅರ್ಪಿತಾ ವೇಣು, ಸೌಮ್ಯ ಶ್ರೀರಾಮ್, ತನುಶ್ರೀ ಆರ್., ಉಪಸ್ಥಿತಿ: ಬಿ.ಕೆ. ಶಿವರಾಂ, ಬಾಲಚಂದ್ರ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗ ಮಂಟಪ, ಮಲ್ಲೇಶ್ವರ, ಸಂಜೆ 6.30

‘ನಕ್ಷತ್ರ ಯಾತ್ರಿಕರು’ ನಾಟಕ ಪ್ರದರ್ಶನ: ರಚನೆ: ಸಂಧ್ಯಾ ಎಸ್., ಸಂಗೀತ: ಶ್ರೀಪತಿ ಮಂಜನಬೈಲು, ನಿರ್ದೇಶನ: ಸವಿತಾ ಬೈರಪ್ಪ, ಆಯೋಜನೆ: ಆಯಾಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

‘ಮಾಯಾಮೃಗ’ ನಾಟಕ ಪ್ರದರ್ಶನ: ನಿರ್ದೇಶನ: ಪೃಥ್ವಿ ಆರಾಧ್ಯ, ಆಯೋಜನೆ: ಧ್ವನಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಯೋಗಿನಾರೇಯಣ ಯತೀಂದ್ರರ ಜಯಂತಿಯಲ್ಲಿ ಸೀತಾರಾಂ

‘ಸ್ವಾರ್ಥ ಮನೋಭಾವ ತೊರೆಯಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾರ್ಥ ಮನೋಭಾವ ತೊರೆದರೆ ಬಲಿಜ ಮತ್ತು ಬಣಜಿಗ ಸಮುದಾಯಗಳು ಒಂದಾಗಬಹುದು’ ಎಂದು ವಿಧಾನ ಪರಿಷತ್ ಸದಸ್ಯ ಎಂ.ಆರ್. ಸೀತಾರಾಂ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಗಳವಾರ ಆಯೋಜಿಸಿದ್ದ ಯೋಗಿನಾರೇಯಣ ಯತೀಂದ್ರರ ಜಯಂತಿ (ಕೈವಾರ ತಾತಯ್ಯ) ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಬೇಕು. ಸಮುದಾಯದಲ್ಲಿ ಬಡವರು, ಶ್ರೀಮಂತರು ಇರುವುದು ಸಹಜ. ಸಣ್ಣ ಸಮುದಾಯಗಳನ್ನು ಜತೆಯಲ್ಲಿ ಕೊಂಡೊಯ್ಯಬೇಕು. ಉಳ್ಳವರು ಇಲ್ಲದವರಿಗೆ ತಮ್ಮ ಕೈಲಾದಷ್ಟು ಸಹಾಯ ಮಾಡಬೇಕು’ ಎಂದು ಕರೆ ನೀಡಿದರು.

‘ಕೋಲಾರ, ಚಿಕ್ಕಬಳ್ಳಾಪುರದ ಜನರಿಗೆ ತಾತಯ್ಯ ಅವರ ಮೇಲೆ ಅಪಾರ ನಂಬಿಕೆ. ತಾತಯ್ಯ ಎಲ್ಲರಿಗೂ ಆದರ್ಶಪ್ರಾಯರು. ಅವರ ತತ್ವ ಮತ್ತು ಆದರ್ಶಗಳನ್ನು ಪಾಲಿಸಬೇಕು. ಮುಂದಿನ ವರ್ಷ ತಾತಯ್ಯ ಅವರ 301ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸೋಣ’ ಎಂದರು.

ನಗರದಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥಸ್ವಾಮಿ, ವಿಧಾನ ಪರಿಷತ್ ಸದಸ್ಯ ಎಂ. ಆರ್. ಸೀತಾರಾಂ, ಬಾಲಕೃಷ್ಣ ಭಗವತರ್ ಮತ್ತು ಸಂಸದ ಪಿ.ಸಿ. ಮೋಹನ್ ಅವರು ಯೋಗಿನಾರೇಯಣ ಯತೀಂದ್ರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎನ್.ಸಂಪಂಗಿ ಮಾತನಾಡಿ, ‘ಬಲಿಜ ಸಮುದಾಯ ರಾಜಕೀಯವಾಗಿ ಬೆಳೆಯಬೇಕು. ಪರಸ್ಪರ ಭಿನ್ನಾಭಿಪ್ರಾಯ ಮರೆತು ಸಮುದಾಯದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ‘ ಎಂದರು.

ಉಪನ್ಯಾಸ ನೀಡಿದ ಕೈವಾರದ ಬಾಲಕೃಷ್ಣ ಭಾಗವತರ್, ‘ದ್ವೇಷ, ಅಸೂಯೆಯಿಂದ ಏನೂ ಸಾಧಿಸಲು ಆಗುವುದಿಲ್ಲ. ಯಾವುದೇ ತಾರತಮ್ಯ ಮಾಡದೇ ಎಲ್ಲರನ್ನೂ ನಮ್ಮವರು ಎಂದು ಅಪ್ಪಿಕೊಂಡು ಸಾಗಬೇಕು. ಸಮಾಜಕ್ಕೆ ಕೊಡುಗೆ ನೀಡಿದವರನ್ನು ಸ್ಮರಿಸಿಕೊಳ್ಳಬೇಕು’ ಎಂದು ನುಡಿದರು.

ಸಂಸದ ಪಿ.ಸಿ.ಮೋಹನ್, ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಪದ್ಮಾವತಿ, ವಕೀಲ ಅಶ್ವಥ್ ನಾರಾಯಣ, ಸಮುದಾಯದ ಮಮತಾ ದೇವರಾಜ, ರಾಮಲಿಂಗಪ್ಪ, ಶ್ರೀರಾಮುಲು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥಸ್ವಾಮಿ ಇದ್ದರು.

‘₹1,700 ಕೋಟಿ ಬಿಲ್ ಪಾವತಿಸಿ’

ಗ್ರೇಟರ್ ಬೆಂಗಳೂರು ನಗರ ಪಾಲಿಕೆಗಳ ಗುತ್ತಿಗೆದಾರರ ಸಂಘ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಬಿಎಂಪಿ ವ್ಯಾಪ್ತಿಯಲ್ಲಿ ಪೂರ್ಣಗೊಳಿಸಿರುವ ಕಾಮಗಾರಿಗಳ ಬಾಕಿ ಬಿಲ್ ₹1,700 ಕೋಟಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವತಿಯಿಂದಲೇ ಪಾವತಿಸಬೇಕು ಎಂದು ಗ್ರೇಟರ್ ಬೆಂಗಳೂರು ನಗರ ಪಾಲಿಕೆಗಳ ಗುತ್ತಿಗೆದಾರರ ಸಂಘ (ಜಿಬಿಸಿಸಿಸಿಎ) ಒತ್ತಾಯಿಸಿದೆ.

‘ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ 26 ತಿಂಗಳಿಂದ ಬಾಕಿ ಇದೆ. ಸರ್ಕಾರದ ಅನುದಾನದಿಂದ ಕೈಗೊಂಡಿರುವ ಕಾಮಗಾರಿಗಳ ಬಿಲ್ ಕೂಡ ಬಾಕಿ ಉಳಿದಿದೆ. ಇದೆಲ್ಲವನ್ನೂ ಜಿಬಿಎಯಿಂದ ಕೂಡಲೇ ಬಿಡುಗಡೆ ಮಾಡಬೇಕು’ ಎಂದು ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಆಗ್ರಹಿಸಿದರು.

‘ರಾಜ್ಯ ಗುತ್ತಿಗೆದಾರರ ಸಂಘ ಮಾರ್ಚ್ 6ರಂದು ಹಮ್ಮಿಕೊಂಡಿರುವ ಮುಷ್ಕರದಲ್ಲಿ ನಮ್ಮ ಸಂಘದ ಎಲ್ಲರೂ ಭಾಗವಹಿಸಲಿದ್ದೇವೆ. ಜಿಬಿಎ ವ್ಯಾಪ್ತಿಯಲ್ಲಿ ಅಂದು ಯಾವ ಕಾಮಗಾರಿ ನಡೆಯುವುದಿಲ್ಲ’ ಎಂದರು.

‘ಐದು ವರ್ಷಗಳ ಹಿಂದೆ ನಡೆಸಿರುವ ಕಾಮಗಾರಿಗಳಿಗೆ ನೀಡಲಾಗಿದ್ದ ಶೇ 10ರಷ್ಟು ಭದ್ರತಾ ಠೇವಣಿಯನ್ನು ಬಿಲ್ ಪಾವತಿ ಸಂದರ್ಭದಲ್ಲಿ ಹಿಂದಿರುಗಿಸಿಲ್ಲ. ಇತ್ತೀಚಿನ ದಿನಗಳಲ್ಲಿ ಎಲ್ಲ ಕಾಮಗಾರಿಗಳನ್ನು ಒಟ್ಟುಗೂಡಿಸಿ ಪ್ಯಾಕೇಜ್ ಪದ್ಧತಿಯಲ್ಲಿ ಟೆಂಡರ್ ಕರೆಯುತ್ತಿದ್ದಾರೆ. ಇದರಿಂದ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರಿಗೆ ತೊಂದರೆಯಾಗಿದೆ’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಚೇತನ್ ಕುಮಾರ್ ಹೇಳಿದರು.

‘ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ಸಂಸ್ಥೆ (ಕೆಆರ್ಐಡಿಎಲ್) ವತಿಯಿಂದ ನಿರ್ವಹಿಸಿರುವ ಕಾಮಗಾರಿಯ ಬಿಲ್‌ನಲ್ಲಿ ಶೇ 25ರಷ್ಟನ್ನು ಬಾಕಿ ಉಳಿಸಿಕೊಳ್ಳಲಾಗಿದ್ದು, ಅದನ್ನು ಕೂಡಲೇ ಪಾವತಿಸಬೇಕು ಎಂದು ಆಗ್ರಹಿಸಿದರು.

ಜಿಬಿಎ ವ್ಯಾಪ್ತಿಯಲ್ಲಿ ಕಾಮಗಾರಿ ಮುಗಿದು ವರ್ಷಗಳೇ ಕಳೆದರೂ ಬಿಲ್ ಪಾವತಿಸಿಲ್ಲ. ರಾಜ್ಯ ಗುತ್ತಿಗೆದಾರರ ಸಂಘದೊಂದಿಗೆ ಪ್ರತಿಭಟನೆ ನಡೆಸಲಿದ್ದೇವೆ
ಜಿ.ಎಂ. ನಂದಕುಮಾರ್, ಅಧ್ಯಕ್ಷ, ಜಿಬಿಸಿಸಿಸಿಎ

ಮುಖ್ಯಾಂಶಗಳು
- ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ 26 ತಿಂಗಳಿಂದ ಬಾಕಿ
- ರಾಜ್ಯ ಗುತ್ತಿಗೆದಾರರ ಸಂಘದಿಂದ ಮಾರ್ಚ್ 6ರಂದು ಪ್ರತಿಭಟನೆ

ಚಿತ್ರಾವಳಿ

ಕನ್ನಡದ ಮೊದಲ ವಾಕ್ಚಿತ್ರ ‘ಸತಿ ಸುಲೋಚನಾ’ ಬಿಡುಗಡೆಯಾಗಿ (1934ರ ಮಾರ್ಚ್ 3) 93ನೇ ವರ್ಷಕ್ಕೆ ಕಾಲಿರಿಸಿದ ನೆನಪಿನಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಮಂಗಳವಾರ ‘ಕನ್ನಡ ವಾಕ್ಚಿತ್ರ ದಿನ’ ಆಚರಿಸಲಾಯಿತು. ಮಂಡಳಿಯ ಅಧ್ಯಕ್ಷೆ ಜಯಮಾಲಾ, ನಟಿ ಗಿರಿಜಾ ಲೋಕೇಶ್ ಕೇಕ್ ಕತ್ತರಿಸಿ ಸಂಭ್ರಮಿಸಿದರು. ಕಾರ್ಯದರ್ಶಿ ಅಶೋಕ್ ಕೆ.ಸಿ., ನಿರ್ಮಾಪಕ ಕೆ.ಮಂಜು, ಖಜಾಂಚಿ ಜಯಸಿಂಹ ಮುಸುರಿ ಬಿ.ಕೆ. ಮತ್ತು ನಟ ಸುಂದರ್‌ರಾಜ್ ಈ ಸಂಭ್ರಮದಲ್ಲಿ ಜತೆಗಿದ್ದರು

ನಾರಾಯಣ ಸಮೂಹಗಳ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಕ್ಲಬ್ಸ್ ಕಲ್ಮಿನೇಷನ್ ಮತ್ತು ರೀಡಿಂಗ್ ಕಾರ್ನಿವಲ್ ಸಮಾರಂಭದಲ್ಲಿ ರೋಬೊ ಪ್ರದರ್ಶಿಸಲಾಯಿತು

ಕಾಲು ತುಳಿದಿದ್ದಕ್ಕೆ ಗಲಾಟೆ: ಕೊಲೆ

ಪ್ರಜಾವಾಣಿ ವಾರ್ತೆ

ಶಶಿಕುಮಾರ್

ಬೆಂಗಳೂರು: ಬಸವೇಶ್ವರನಗರ ಸಮೀಪದ ಶಿವನಹಳ್ಳಿಯ ಹೋಟೆಲ್‌ನಲ್ಲಿ ಸೋಮವಾರ ರಾತ್ರಿ ಕಾಲು ತುಳಿದಿದ್ದ ವಿಚಾರಕ್ಕೆ ಗಲಾಟೆ ನಡೆದು ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನು ಕೊಲೆ ಮಾಡಲಾಗಿದೆ.

ಶ್ರೀರಾಂಪುರದ ನಿವಾಸಿ ಶಶಿಕುಮಾರ್ (31) ಕೊಲೆಯಾದವರು. ಆರೋಪಿಗಳಾದ ಮಂಜುನಾಥ್ ಮತ್ತು ಆತನ ತಮ್ಮ ಭಾಗ್ಯರಾಜ್ ಅವರು ಪರಾರಿಯಾಗಿದ್ದು, ಅವರ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕೊಲೆ ಸಂಬಂಧ ಬಸವೇಶ್ವರನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶಶಿಕುಮಾರ್ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಸೋಮವಾರ ರಾತ್ರಿ ಶಿವನಹಳ್ಳಿಯ ತಿಮ್ಮಯ್ಯ ರಸ್ತೆಯಲ್ಲಿನ ಶ್ರೀರಾಘವೇಂದ್ರ ವೆಜ್ ದೋಸೆ ಕಾರ್ನರ್ ಹೋಟೆಲ್‌ಗೆ ಬಂದಿದ್ದರು. ಆಗ ಗಲಾಟೆ ನಡೆದು ಕೊಲೆ ಮಾಡಲಾಗಿದೆ ಎಂದರು.

‘ಶಶಿಕುಮಾರ್ ಅವರು ಬಂದಿದ್ದ ಹೋಟೆಲ್‌ಗೆ ಆರೋಪಿ ಮಂಜುನಾಥ್ ಸಹ ಬಂದಿದ್ದ. ಹೋಟೆಲ್‌ನಲ್ಲಿ ಓಡಾಡುವಾಗ ಆಕಸ್ಮಿಕವಾಗಿ ಶಶಿಕುಮಾರ್ ಅವರ ಕಾಲನ್ನು ಮಂಜುನಾಥ್ ತುಳಿದಿದ್ದ. ಈ ವಿಚಾರಕ್ಕೆ ಶಶಿಕುಮಾರ್ ಅವರು ಆತನಿಗೆ ಬೈದಿದ್ದರು. ಬಳಿಕ ಇಬ್ಬರ ನಡುವೆ ವಾಗ್ವಾದ ನಡೆದು ಜಗಳವಾಗಿತ್ತು. ಹೋಟೆಲ್ ಸಿಬ್ಬಂದಿ ಗಲಾಟೆ ಬಿಡಿಸಿದ್ದರು. ಮಂಜುನಾಥ್, ತನ್ನ ತಮ್ಮ ಭಾಗ್ಯರಾಜ್‌ಗೆ ಕರೆ ಮಾಡಿ ಜಗಳದ ವಿಚಾರ ತಿಳಿಸಿದ್ದ. ಅಲ್ಲಿಗೆ ಡ್ಯಾಗರ್ ಸಹಿತ ಭಾಗ್ಯರಾಜ್ ಬಂದಿದ್ದ. ಇಬ್ಬರೂ ಸೇರಿಕೊಂಡು ಶಶಿಕುಮಾರ್ ಮೇಲೆ ಹಲ್ಲೆ ನಡೆಸಿದ್ದರು’ ಎಂದು ಹೇಳಿದರು.

ಜಗಳ ವಿಕೋಪಕ್ಕೆ ಹೋಗಿ ಶಶಿಕುಮಾರ್ ಅವರಿಗೆ ಆರೋಪಿಗಳು ಡ್ಯಾಗರ್‌ನಿಂದ ಇರಿದು ಕೊಲೆ ಮಾಡಿ ಪರಾರಿ ಆಗಿದ್ದಾರೆ. ಅಪರಾಧ ಹಿನ್ನೆಲೆಯುಳ್ಳ ಭಾಗ್ಯರಾಜ್, ಈ ಹಿಂದೆ 2025ರ ಜನವರಿಯಲ್ಲಿ ಬಾರ್‌ನಲ್ಲಿ ಗಲಾಟೆ ಮಾಡಿದ್ದ. ಈ ಸಂಬಂಧ ಆತನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ಬಳಿಕ ಆತ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಎಂದು ಎಂದು ಪೊಲೀಸರು ಹೇಳಿದರು.

‘ಸವಿತಾ ಸಮುದಾಯ: ಎಸ್‌ಟಿಗೆ ಸೇರಿಸಿ’

ಬೆಂಗಳೂರು: ಸವಿತಾ ಸಮುದಾಯದವರನ್ನು ಪರಿಶಿಷ್ಟ ಪಂಗಡ ಅಥವಾ ಪ್ರವರ್ಗ–1ಕ್ಕೆ ಸೇರಿಸಬೇಕು ಎಂದು ಅಖಿಲ ಕರ್ನಾಟಕ ಕನ್ನಡ ಸೇವಾ ಮಹಾಮಂಡಲ ಆಗ್ರಹಿಸಿದೆ.

ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಮಂಡಲದ ಅಧ್ಯಕ್ಷ ಟಿ. ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಪಿ. ರಮೇಶ, ‘ಸವಿತಾ ಸಮುದಾಯ ಸದ್ಯ ಪ್ರವರ್ಗ–2ರಲ್ಲಿ ಇದೆ. ಇದನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಮೂಲಕ ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ಸೌಲಭ್ಯ ಒದಗಿಸಬೇಕು. ಅಸಂಘಟಿತ ಕ್ಷೌರಿಕ ಸಮುದಾಯದಲ್ಲಿನ 50 ವರ್ಷ ಮೇಲ್ಪಟ್ಟ ಮಂಗಳ ವಾದ್ಯ ಕಲಾವಿದರಿಗೆ ಮಾಸಾಶನ, ಆರೋಗ್ಯ ವಿಮೆ, ನಿವೇಶನ ನೀಡಬೇಕು’ ಎಂದು ಒತ್ತಾಯಿಸಿದರು.

ಬೆಂಕಿ ಅವಘಡ: ಮಹಿಳೆ ಸಾವು

ಬೆಂಗಳೂರು: ರಾಜಾಜಿನಗರ ಎರಡನೇ ಹಂತದ ‘ಡಿ’ ಬ್ಲಾಕ್‌ನ ಮನೆಯೊಂದರಲ್ಲಿ ಸೋಮವಾರ ರಾತ್ರಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಮಹಿಳೆಯೊಬ್ಬರು ಸಜೀವ ದಹನವಾಗಿದ್ದಾರೆ.

ಸವಿತಾ(55) ಮೃತಪಟ್ಟವರು. ಸವಿತಾ ಅವರ ಪತಿ ಡಿ.ಆರ್.ರಮೇಶ್ ಬಾಬು, ಪುತ್ರ ವಿಶ್ರುತ್ ಹಾಗೂ ರಮೇಶ್ ಅವರ ತಾಯಿ ಸಣ್ಣಮ್ಮ ಪಾರಾಗಿದ್ದಾರೆ.

ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಸೋಮವಾರ ರಾತ್ರಿ 9 ಗಂಟೆಯ ಸುಮಾರಿಗೆ ಅವಘಡ ಸಂಭವಿಸಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ರಾಜಾಜಿನಗರದ ‘ಡಿ’ ಬ್ಲಾಕ್‌ನಲ್ಲಿ ರಮೇಶ್ ಅವರಿಗೆ ಸೇರಿದ ನಾಲ್ಕು ಅಂತಸ್ತಿನ ಮನೆಯಿದೆ. ಮೂರು ಮತ್ತು ನಾಲ್ಕನೇ ಅಂತಸ್ತಿನಲ್ಲಿ ರಮೇಶ್ ಬಾಬು ಹಾಗೂ ಕುಟುಂಬಸ್ಥರು ನೆಲಸಿದ್ದರು. ಬೆಡ್ ರೂಮ್‌ನ ಎ.ಸಿ. ಉಪಕರಣದಲ್ಲಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡು ದುರ್ಘಟನೆ ನಡೆದಿದೆ. ಕೊಠಡಿಯಲ್ಲಿ ಹೊಗೆ ಆವರಿಸಿದ್ದರಿಂದ ಸವಿತಾ ಅವರಿಗೆ ಹೊರಗೆ ಬರಲು ಸಾಧ್ಯವಾಗಿಲ್ಲ’ ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ವಿಮರ್ಶಾ ಪ್ರಶಸ್ತಿಗೆ ಕೃತಿ ಆಹ್ವಾನ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನವು ವಾರ್ಷಿಕವಾಗಿ ನೀಡುವ ಸೂ.ವೆಂ. ಆರಗ ವಿಮರ್ಶಾ ಪ್ರಶಸ್ತಿಗಾಗಿ ವಿಮರ್ಶಾ ಕೃತಿಗಳನ್ನು ಆಹ್ವಾನಿಸಲಾಗಿದೆ.

₹10 ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಈ ಪ್ರಶಸ್ತಿ ಹೊಂದಿದ್ದು, 2025ರ ಜನವರಿಯಿಂದ ಡಿಸೆಂಬರ್ ಅಂತ್ಯದ ಒಳಗೆ ಮೊದಲ ಆವೃತ್ತಿಯಾಗಿ ಪ್ರಕಟವಾಗಿರುವ ವಿಮರ್ಶಾ ಕೃತಿಯ ಮೂರು ಪ್ರತಿಗಳ ಜೊತೆಗೆ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ನಮೂದಿಸಿ ಮಾರ್ಚ್ 25ರ ಒಳಗೆ ಗೌರವ ಕಾರ್ಯದರ್ಶಿ,
ಬಿ.ಎಂ.ಶ್ರೀ ಪ್ರತಿಷ್ಠಾನ, ಬಿ.ಎಂ.ಶ್ರೀ ಪ್ರತಿಷ್ಠಾನದ ರಸ್ತೆ, 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೊನಿ, ಬೆಂಗಳೂರು, 560004, ಮೊಬೈಲ್: 9972812127, ಇಲ್ಲಿಗೆ ಕಳುಹಿಸಬೇಕು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ವ್ಯಂಗ್ಯಚಿತ್ರ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: ವ್ಯಂಗ್ಯಚಿತ್ರಕಾರರಾದ ದಿವಂಗತ ಮಾಯಾ ಕಾಮತ್ ಅವರ 75ನೇ ಜನ್ಮದಿನದ ಪ್ರಯುಕ್ತ ಭಾರತೀಯ ವ್ಯಂಗ್ಯ ಚಿತ್ರಕಾರರ ಸಂಸ್ಥೆಯು ‘ಅಂತರರಾಷ್ಟ್ರೀಯ ಮಾಯಾ ಕಾಮತ್ ಸ್ಮಾರಕ’ ವ್ಯಂಗ್ಯಚಿತ್ರ ಸ್ಪರ್ಧೆಯನ್ನು ಹಮ್ಮಿಕೊಂಡಿದೆ.

ಮಾಯಾ ಕಾಮತ್ ಅವರ ಕುಟುಂಬದ ಪ್ರಾಯೋಜಕತ್ವದಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ ಮೊದಲ ಬಹುಮಾನ ₹1 ಲಕ್ಷ, ಎರಡನೇ ಬಹುಮಾನ ₹50 ಸಾವಿರ, ಮೂರನೇ ಬಹುಮಾನ ₹25 ಸಾವಿರ ಹಾಗೂ ಹತ್ತು ಅತ್ಯುತ್ತಮ ವ್ಯಂಗ್ಯಚಿತ್ರಗಳಿಗೆ ಪ್ರಮಾಣ ಪತ್ರ ಹಾಗೂ ತಲಾ ₹5 ಸಾವಿರ ಬಹುಮಾನ ನೀಡಲಾಗುತ್ತದೆ.

ಎಲ್ಲ ವೃತ್ತಿಪರ ಮತ್ತು ಹವ್ಯಾಸಿ ವ್ಯಂಗ್ಯಚಿತ್ರಕಾರರು ಭಾಗವಹಿಸಬಹುದು. ವಿವರಗಳಿಗೆ www.cartoonistsindia.org ಸಂಪರ್ಕಿಸಬಹುದು. ಸ್ಪರ್ಧಿಗಳು ಏಪ್ರಿಲ್ 30ರ ಒಳಗೆ mkmawards@gmail.com, cartoonistsindia@gmail.com ಗೆ ಮೇಲ್ ಕಳುಹಿಸಬಹುದು ಎಂದು ಸಂಘಟಕರು ತಿಳಿಸಿದ್ದಾರೆ..

‘ಪಾಲಕತ್ವದ ಜವಾಬ್ದಾರಿ’ ಉಪನ್ಯಾಸ ಇಂದಿನಿಂದ

ಬೆಂಗಳೂರು: ವೈಯಾಲಿಕಾವಲ್ ಶಿಕ್ಷಣ ಸಂಸ್ಥೆಯ ವಿದ್ಯಾ ಸಂಸ್ಕೃತಿ ಶಾಲೆಯಲ್ಲಿ ಮಾ. 4ರಿಂದ 6ರವರೆಗೆ ಪಾಲಕರಿಗೊಂದು ಕಿವಿಮಾತು ಎಂಬ ಮೂರು ದಿನಗಳ ವಿಶೇಷ ಕಾರ್ಯಕ್ರಮ ನಡೆಯಲಿದೆ.

ಮಾ. 4ರಿಂದ ಪ್ರತಿದಿನ ಸಂಜೆ 6ರಿಂದ 7.30ರವರೆಗೆ ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರು ‘ಪಾಲಕತ್ವದ ಜವಾಬ್ದಾರಿ’ ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ‘ಪ್ರಜಾವಾಣಿ’ಯ ಸಹಯೋಗ ಇದ್ದು, ಉಚಿತ ಪ್ರವೇಶ ಇದೆ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ವಿದ್ಯಾ ಸಂಸ್ಕೃತಿ ಶಾಲೆ, 16ನೇ ಅಡ್ಡರಸ್ತೆ, ಗಾಯತ್ರಿದೇವಿ ಪಾರ್ಕ್ (ಎಕ್ಸ್‌ಟೆನ್ಶನ್), ವೈಯಾಲಿ ಕಾವಲ್, ಮಾಹಿತಿಗೆ: 70900 02200, 96202 20087.

‘ಮೂಢನಂಬಿಕೆ ಬಿತ್ತಿ ಸಮಾಜವನ್ನು ತಪ್ಪು ದಾರಿಗೆ ಎಳೆಯುವುದನ್ನು ಕೈಬಿಡಿ’

ಗ್ರಹಣದ ವೇಳೆ ಆಹಾರ ಸೇವಿಸಿ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಹಣದ ಕುರಿತು ವೈಜ್ಞಾನಿಕವಾಗಿ ಚಿಂತಿಸುವ ಬದಲು ಜನರಲ್ಲಿ ಮೂಢನಂಬಿಕೆ ಬಿತ್ತಿ ಸಮಾಜವನ್ನು ತಪ್ಪು ದಾರಿಗೆ ಎಳೆಯುವುದನ್ನು ಕೈಬಿಡಿ’ ಎಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕ ಎಸ್.ಮರಿಸ್ವಾಮಿ ಹೇಳಿದರು.

ಮೂಢನಂಬಿಕೆ ವಿರೋಧಿ ಒಕ್ಕೂಟ ಪುರಭವನ ಎದುರು ಮಂಗಳವಾರ ಸಂಜೆ ಆಯೋಜಿಸಿದ್ದ ಚಂದ್ರಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ತಂತ್ರಜ್ಞಾನದಲ್ಲಿ ಆಗುತ್ತಿರುವ ಕ್ರಾಂತಿಯಿಂದ ನಾವು ಸಾಕಷ್ಟು ಮುಂದೆ ಹೋಗಿದ್ದೇವೆ. ಚಂದ್ರಗ್ರಹಣ, ಸೂರ್ಯಗ್ರಹಣವನ್ನು ವೈಜ್ಞಾನಿಕವಾಗಿ ವಿಮರ್ಶಿಸುವ ಸಾಮರ್ಥ್ಯ ಸಂಪಾದಿಸಿದ್ದೇವೆ. ಆದರೆ ಧಾರ್ಮಿಕ, ಜ್ಯೋತಿಷ್ಯದ ನೆಲೆಯಲ್ಲಿ ನೋಡುವ ಮನೋಭಾವ ನಮ್ಮನ್ನು ಹಿಂದಕ್ಕೆ ಕೊಂಡೊಯ್ಯುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯಾಂಶಗಳು
- ಮೂಢನಂಬಿಕೆ ವಿರೋಧಿ ಒಕ್ಕೂಟದ ಕಾರ್ಯಕ್ರಮ
- ಗ್ರಹಣದ ಬಗ್ಗೆ ಭಯ ಬೇಡ: ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್
- ಕಾರ್ಯಕ್ರಮದಲ್ಲಿ ವಿಜ್ಞಾನಿಗಳು, ವಿದ್ಯಾರ್ಥಿಗಳು ಭಾಗಿ

ಒಕ್ಕೂಟದ ಸಂಚಾಲಕ ಟಿ.ನರಸಿಂಹಮೂರ್ತಿ, ‘2010ರಿಂದಲೂ ಗ್ರಹಣದ ವೇಳೆ ಆಹಾರ ಸೇವಿಸುವ ಜತೆಗೆ ಇದರ ಕುರಿತು ಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಿದ್ದೇವೆ. ಇದು ನಿರಂತರವಾಗಿ ನಡೆಯಲಿದೆ’ ಎಂದು ಹೇಳಿದರು.

ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಮಾತನಾಡಿ, ‘ಗ್ರಹಣ ಎನ್ನುವುದು ಸಹಜವಾಗಿ ನಡೆಯುವ ಕ್ರಿಯೆ. ಇದರ ಕುರಿತು ಗೃಹಿಣಿಯರು, ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕೆ ಹೊರತು ಭಯ ಹುಟ್ಟಿಸುವುದನ್ನು ನಿಲ್ಲಿಸಬೇಕು’ ಎಂದು ಹೇಳಿದರು.

ನಿವೃತ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸುಭಾಷ್ ಭರಣಿ, ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ, ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಹುಲಿಕಲ್ ನಟರಾಜ್ ಮಾತನಾಡಿದರು.

ಇದೇ ವೇಳೆ ಎಗ್ ಬಿರಿಯಾನಿ, ವೆಜಿಟೆಬಲ್ ಬಿರಿಯಾನಿ, ಕಾಯಿ ಹೋಳಿಗೆ, ಸಮೋಸಾ, ಹಣ್ಣುಗಳು, ಬಿಸ್ಕೇಟ್ ಅನ್ನು ಸೇವನೆ ಮಾಡಲಾಯಿತು.

ವಿಜ್ಞಾನಿಗಳು, ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಆಗಮಿಸಿ ಜಾಗೃತಿ ಕಾರ್ಯಕ್ರಮದಲ್ಲಿ ಭಾಗಿಯಾದರು.

ಟೌನ್‌ಹಾಲ್ ಬಳಿ ಆಹಾರ ಸೇವಿಸುವ ಮೂಲಕ ಚಂದ್ರಗ್ರಹಣದ ಬಗ್ಗೆ ಜನರಲ್ಲಿ ವೈಜ್ಞಾನಿಕ ಅರಿವು ಮೂಡಿಸಲಾಯಿತು ಪ್ರಜಾವಾಣಿ ಚಿತ್ರ

ಸೆಟ್‌ಬ್ಯಾಕ್ ಉಲ್ಲಂಘನೆ: ಶೇ 15ಕ್ಕೆ ಏರಿಕೆ

ಜಿಬಿಎಯಿಂದ ಸರ್ಕಾರಕ್ಕೆ ಪ್ರಸ್ತಾವ; ಶೀಘ್ರ ಕರಡು ಅಧಿಸೂಚನೆ ಪ್ರಕಟ

• ಆರ್. ಮಂಜುನಾಥ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಕಟ್ಟಡಗಳ ಸೆಟ್‌ಬ್ಯಾಕ್ ಉಲ್ಲಂಘನೆ ವಿನಾಯಿತಿಯನ್ನು ಶೇ 5ರಿಂದ ಶೇ 15ಕ್ಕೆ ವಿಸ್ತರಿಸಲು ನಿರ್ಧರಿಸಲಾಗಿದ್ದು, ಈ ಸಂಬಂಧ ಕರಡು ಅಧಿಸೂಚನೆ ಶೀಘ್ರವೇ ಪ್ರಕಟವಾಗಲಿದೆ.

ಜಿಬಿಎ ವ್ಯಾಪ್ತಿಯಲ್ಲಿ ವಸತಿ ಕಟ್ಟಡಗಳ ಸೆಟ್‌ಬ್ಯಾಕ್‌ನಲ್ಲಿ ಭಾರಿ ಕಡಿತ ಮಾಡಿ 2026ರ ಜನವರಿ 5ರಂದು ನಗರಾಭಿವೃದ್ಧಿ ಇಲಾಖೆ ಅಂತಿಮ ಅಧಿಸೂಚನೆ ಹೊರಡಿಸಿತ್ತು. ಇದೀಗ, ಸೆಟ್‌ಬ್ಯಾಕ್ ಉಲ್ಲಂಘನೆಯನ್ನೂ ಎರಡು ಪಟ್ಟು ಹೆಚ್ಚಿಸಲು ನಿರ್ಧರಿಸಿರುವ ಜಿಬಿಎ, ಈ ಪ್ರಸ್ತಾವವನ್ನು ಸರ್ಕಾರಕ್ಕೆ ಕಳುಹಿಸಿದೆ.

'ನಕ್ಷೆ ಮಂಜೂರು, ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಸಿಗದೆ ಚಿಕ್ಕ ನಿವೇಶನಗಳಲ್ಲಿನ ಕಟ್ಟಡದ ಮಾಲೀಕರು ವಿದ್ಯುತ್ ಹಾಗೂ ನೀರಿನ ಸಂಪರ್ಕ ಸಿಗದೆ ಸಂಕಷ್ಟದಲ್ಲಿದ್ದಾರೆ. ಈಗಾಗಲೇ ಸೆಟ್‌ಬ್ಯಾಕ್ ಕಡಿಮೆ ಮಾಡಲಾಗಿದ್ದು, ಅದರ ಉಲ್ಲಂಘನೆ ಪ್ರಮಾಣವನ್ನೂ ಹೆಚ್ಚಿಸುವುದರಿಂದ ಅವರಿಗೆಲ್ಲ ಅನುಕೂಲವಾಗಲಿದೆ' ಎಂದು ಜಿಬಿಎ ಅಧಿಕಾರಿಗಳು ತಿಳಿಸಿದರು.

ಈಗಿರುವ ವಲಯ ನಿಯಮಾವಳಿಗಳಂತೆ, ಅನುಮೋದನೆ ಆದ ಕಟ್ಟಡ ನಕ್ಷೆಗೆ ವಿರುದ್ಧವಾಗಿ ಶೇ 5ರಷ್ಟು ಉಲ್ಲಂಘನೆಯಾಗಿದ್ದರೆ ಅದನ್ನು ಸಕ್ರಮಗೊಳಿಸಬಹುದಾಗಿದೆ. ಈ ಪ್ರಕ್ರಿಯೆಯಲ್ಲಿ, ಎಡ-ಬಲ, ಅಕ್ಕ-ಪಕ್ಕ ನಿಗದಿಯಾಗಿರುವ ಸೆಟ್‌ಬ್ಯಾಕ್ ಅನ್ನು ಪ್ರತ್ಯೇಕವಾಗಿ ಲೆಕ್ಕಾಚಾರ ಮಾಡಿ, ಶೇ 5ರೊಳಗಿನ ಉಲ್ಲಂಘನೆ ಮಾತ್ರ ಸಕ್ರಮವಾಗಲಿದೆ. ಆದರೆ, ಹೊಸ ಪ್ರಸ್ತಾವದಲ್ಲಿ, ಉಲ್ಲಂಘನೆ ಪ್ರಮಾಣವನ್ನು ಶೇ 15ಕ್ಕೆ ವಿಸ್ತರಿಸಲಾಗಿದೆ. ಈ ಹೊಸ ನಿಯಮಾವಳಿ ಪ್ರಕಾರ, ಸೆಟ್‌ಬ್ಯಾಕ್‌ನ ಎಡ-ಬಲ, ಅಕ್ಕ-ಪಕ್ಕದ ಉಲ್ಲಂಘನೆಯನ್ನು ಪ್ರತ್ಯೇಕವಾಗಿ ಪರಿಗಣಿಸುವುದಿಲ್ಲ. ಕಟ್ಟಡದ ಸುತ್ತಲಿನ ಸೆಟ್‌ಬ್ಯಾಕ್ ಉಲ್ಲಂಘನೆ ಪ್ರಮಾಣವನ್ನು ಲೆಕ್ಕಾಚಾರ ಮಾಡಿ, ಅದು ಶೇ 15ಕ್ಕಿಂತ ಕಡಿಮೆ ಇದ್ದರೆ ಅಂತಹ ಕಟ್ಟಡವನ್ನು ಸಕ್ರಮಗೊಳಿಸಲಾಗುತ್ತದೆ.

ಕಟ್ಟಡದ ಎತ್ತರದ ಉಲ್ಲಂಘನೆ ಪ್ರಮಾಣವನ್ನು ಶೇ 5ರಿಂದ ಶೇ 7.5ಕ್ಕೆ ಏರಿಸಲಾಗುತ್ತದೆ. ಅಲ್ಲದೆ, ಎಫ್‌ಎಆರ್ (ಫ್ಲೋರ್ ಏರಿಯಾ ರೇಷಿಯೊ) ಉಲ್ಲಂಘನೆ ಪ್ರಮಾಣವನ್ನೂ ಶೇ 5ರಿಂದ ಶೇ 15ಕ್ಕೆ ಹೆಚ್ಚಿಸಲು ಪ್ರಸ್ತಾವಿಸಲಾಗಿದೆ. ಈ ಎಲ್ಲ ಉಲ್ಲಂಘನೆ ಪ್ರಮಾಣ 5 ಸಾವಿರ ಚದರಡಿ ಒಳಗಿನ ನಿವೇಶನಗಳಿಗೆ ಮಾತ್ರ ಅನ್ವಯವಾಗಲಿದೆ.

ಮುಖ್ಯಾಂಶಗಳು

- ಚಿಕ್ಕ ನಿವೇಶನಗಳಲ್ಲಿನ ಕಟ್ಟಡದ ಮಾಲೀಕರಿಗೆ ಅನುಕೂಲ
- ವಿದ್ಯುತ್, ನೀರಿನ ಸಂಪರ್ಕ ಸಿಗದೆ ಸಂಕಷ್ಟದಲ್ಲಿದ್ದವರು ನಿರಾಳ
- ಸೆಟ್‌ಬ್ಯಾಕ್ ಕಡಿಮೆ ಆಗಿದ್ದರಿಂದ ಉಲ್ಲಂಘನೆ ಪ್ರಮಾಣ ಹೆಚ್ಚಳ

ಯಾವ ನಿವೇಶನಕ್ಕೆ ಎಷ್ಟು ಸೆಟ್‌ಬ್ಯಾಕ್?

ನಿವೇಶನದ ವಿಸ್ತೀರ್ಣ	ಸೆಟ್‌ಬ್ಯಾಕ್			
	ಮುಂದೆ	ಹಿಂದೆ	ಎಡ	ಬಲ
60 ಚದರ ಮೀಟರ್‌ವರೆಗೆ	0.75 ಮೀ	0	0.6 ಮೀ ಯಾವುದಾದರೂ ಒಂದು ಬದಿ	
60 ಚದರ ಮೀಟರ್‌ನಿಂದ 150 ಚದರ ಮೀಟರ್‌ವರೆಗೆ	0.90 ಮೀ	0.70 ಮೀ	0.7 ಮೀ ಯಾವುದಾದರೂ ಒಂದು ಬದಿ	
150 ಚದರ ಮೀಟರ್‌ನಿಂದ 250 ಚದರ ಮೀಟರ್	1 ಮೀ	0.80 ಮೀ	0.8 ಮೀ	0.8 ಮೀ
250 ಚದರ ಮೀಟರ್‌ನಿಂದ 4,000 ಚದರ ಮೀಟರ್	ನಿವೇಶನ ಉದ್ದದ 12%	ನಿವೇಶನ ಉದ್ದದ 8%	ನಿವೇಶನ ಉದ್ದದ 8%	ನಿವೇಶನ ಉದ್ದದ 8%

ಎಲ್ಲ ಕಟ್ಟಡಗಳಿಗೂ ಅನ್ವಯ

ಎರಡು ಪಟ್ಟು ಹೆಚ್ಚಿಸಲು ಉದ್ದೇಶಿಸಿರುವ ಸೆಟ್‌ಬ್ಯಾಕ್ ಉಲ್ಲಂಘನೆ ಪ್ರಮಾಣ ಜಿಬಿಎ ವ್ಯಾಪ್ತಿಯಲ್ಲಿರುವ ಎಲ್ಲ ಕಟ್ಟಡಗಳಿಗೂ ಅನ್ವಯವಾಗಲಿದೆ. ಈಗಾಗಲೇ ನಿರ್ಮಾಣಗೊಂಡಿರುವ, ನಿರ್ಮಾಣ ಹಂತದಲ್ಲಿರುವ ಹಾಗೂ ಮುಂದಿನ ದಿನಗಳಲ್ಲಿ ನಿರ್ಮಾಣವಾಗುವ ಎಲ್ಲ ಕಟ್ಟಡಗಳಿಗೂ ಶೇ 15ರಷ್ಟು ಸೆಟ್‌ಬ್ಯಾಕ್ ಉಲ್ಲಂಘನೆ ವಿನಾಯಿತಿ ಅಳವಡಿಕೆಯಾಗಲಿದೆ.

ಸೆಟ್‌ಬ್ಯಾಕ್ ಅನ್ನು ಈಗಾಗಲೇ ಭಾರಿ ಪ್ರಮಾಣದಲ್ಲಿ ಕಡಿಮೆ ಮಾಡಿ, ಅದು ಜಾರಿಯಲ್ಲಿದೆ. ಈ ಸೆಟ್‌ಬ್ಯಾಕ್‌ನಲ್ಲೇ ಶೇ 15ರಷ್ಟು ಪ್ರಮಾಣ ಉಲ್ಲಂಘನೆಯಾಗಿದ್ದರೂ ಕಟ್ಟಡ ಸಕ್ರಮಗೊಳ್ಳಲಿದೆ. ಸ್ವಾಧೀನಾನುಭವ ಪ್ರಮಾಣ ಪತ್ರ ಲಭ್ಯವಾಗಲಿದೆ. ಇದರಿಂದ ಸಣ್ಣ ನಿವೇಶನಗಳಲ್ಲಿರುವ ಕಟ್ಟಡಗಳಿಗೆ ಭಾರಿ ಅನುಕೂಲವಾಗಲಿದೆ ಎಂಬುದು ಜಿಬಿಎ ಅಧಿಕಾರಿಗಳ ಅಭಿಪ್ರಾಯ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಟರ್ಮಿನಲ್ 2ರಲ್ಲಿ ಸಹಾಯವಾಣಿ ಆರಂಭ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ವಿಮಾನ ನಿಲ್ದಾಣದ ಟರ್ಮಿನಲ್ 2ರ ಹೊರಭಾಗದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಸಹಾಯ ಕೇಂದ್ರ ಸ್ಥಾಪಿಸಲಾಗಿದೆ.

ವಿಮಾನ ರದ್ದುಗೊಂಡ ಕಾರಣ ಗೊಂದಲಕ್ಕೆ ಒಳಗಾದ ಪ್ರಯಾಣಿಕರಿಗೆ ಮಾಹಿತಿ ನೀಡುವ ಹಾಗೂ ಅಗತ್ಯ ರಸ್ತೆ ಸಾರಿಗೆ ವ್ಯವಸ್ಥೆ ಕಲ್ಪಿಸುವ ಕೆಲಸ ನಡೆಯುತ್ತಿದೆ.

ತುರ್ತು ವೈದ್ಯಕೀಯ ನೆರವು, ಕುಡಿಯುವ ನೀರು, ತಿಂಡಿ, ಮೊಬೈಲ್ ಚಾರ್ಜಿಂಗ್ ವ್ಯವಸ್ಥೆ, ಮಹಿಳೆಯರಿಗಾಗಿ ಅಗತ್ಯ ವಸ್ತುಗಳು ಹಾಗೂ ವ್ಹೀಲ್ ಚೇರ್ ವ್ಯವಸ್ಥೆ ಮಾಡಲಾಗಿದೆ ಎಂದು ವಿಮಾನ ನಿಲ್ದಾಣದ ವಕ್ತಾರರು ಹೇಳಿದ್ದಾರೆ.

ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ 080-28388005ಕ್ಕೆ ಸಂಪರ್ಕಿಸಿ ಮಾಹಿತಿ ನೀಡಬಹುದು ಎಂದು ಜಿಲ್ಲಾಧಿಕಾರಿ ಡಾ. ಕೆ.ಎನ್. ಅನುರಾಧ ತಿಳಿಸಿದ್ದಾರೆ.

ಇಸ್ರೇಲ್	+972-54-7520711
ಇರಾನ್	+98 912 810 9115, +98 912 810 9109, +98 912 810 9102, +98 993 217 9359
ಸೌದಿ ಅರೇಬಿಯಾ (ರಿಯಾದ್)	00-966-11-4884697, 00-966-542126748 (ವಾಟ್ಸ್ ಆ್ಯಪ್), 800 247 1234 (ಟೋಲ್ ಫ್ರೀ)
ಸೌದಿ ಅರೇಬಿಯಾ (ಜೆದ್ದಾ)	+966536209704 (ವಾಟ್ಸ್ ಆ್ಯಪ್), 00 966 125643660 / 00966 12 2614093, +966 556122301, 800 2440003 (ಟೋಲ್ ಫ್ರೀ)
ಸಂಯುಕ್ತ ಅರಬ್ ಸಂಸ್ಥಾನ (ಯುಎಇ)	800-46342 (ಟೋಲ್ ಫ್ರೀ), +971 5430 90571 (ವಾಟ್ಸ್ ಆ್ಯಪ್)
ಕತಾರ್	00974-55647502
ಬಹರೇನ್	00973-39418071
ಜೋರ್ಡನ್	00962-770 422 276
ಒಮಾನ್	8007 1234 (ಟೋಲ್ ಫ್ರೀ), +968 9828 2270 (ವಾಟ್ಸ್ ಆ್ಯಪ್)
ಇರಾಕ್	+964 771 651 1185 (ಇಂಗ್ಲಿಷ್, ಹಿಂದಿ), +964 770 444 4899 (ಅರೇಬಿಕ್)
ಕುವೈತ್	+965 65501946
ಪ್ಯಾಲೆಸ್ಟೀನ್	+970 592916418

ಇಂಡಿಯನ್ ಸಿಲ್ಕ್ ಎಕ್ಸ್‌ಪೊ ಆರಂಭ

ಬೆಂಗಳೂರು: ಇಂಡಿಯನ್ ಸಿಲ್ಕ್ ಗ್ಯಾಲರಿ ಎಕ್ಸ್‌ಪೊ ಕುಮಾರಕೃಪಾ ರಸ್ತೆಯ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಮಂಗಳವಾರ ಆರಂಭಗೊಂಡಿದೆ.

ಮಾರ್ಚ್ 8ರವರೆಗೆ ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ ಎಕ್ಸ್‌ಪೊ ಇರಲಿದೆ. ಯುಗಾದಿ ಹಬ್ಬ ಮತ್ತು ವಿವಾಹಗಳ ಸಂಭ್ರಮಾಚರಣೆ ಭಾಗವಾಗಿ ಕೈಮಗ್ಗ ನೇಕಾರರು ನೇಯ್ದಿರುವ ವಿಶೇಷ ರೇಷ್ಮೆ ಉತ್ಪನ್ನಗಳು ಈ ಪ್ರದರ್ಶನದಲ್ಲಿ ಸಿಗಲಿವೆ ಎಂದು ಆಯೋಜಕರು ತಿಳಿಸಿದ್ದಾರೆ.

ಕೈಮಗ್ಗ ನೇಕಾರರ ಉತ್ಪನ್ನಗಳು ಜನಪ್ರಿಯವಾಗಬೇಕು, ಮಹಿಳೆಯರು ಕೈಮಗ್ಗದ ಉಡುಪುಗಳನ್ನು ಧರಿಸಬೇಕು ಮತ್ತು ಭವಿಷ್ಯದ ಪೀಳಿಗೆಯೂ ಇಂತಹ ಉಡುಪುಗಳನ್ನು ಧರಿಸುವಂತಾಗಬೇಕು ಎನ್ನುವುದು ಆಯೋಜನೆ ಉದ್ದೇಶ. ದೇಶದ ವಿವಿಧ ನಗರಗಳ ಕುಶಲಕರ್ಮಿಗಳು ತಯಾರಿಸಿದ ಕೈಮಗ್ಗ ಸೀರೆಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಭಾರತೀಯ ದೂತವಾಸ ಕಚೇರಿಯಲ್ಲಿ ಸಹಕಾರ ಸಿಗಲಿಲ್ಲ: ಬೇಸರದ ನುಡಿ

'ಸ್ಫೋಟದ ಸದ್ದು ಮರೆಯಲು ಆಗುತ್ತಿಲ್ಲ'

ಪ್ರಜಾವಾಣಿ ವಾರ್ತೆ

ಭೋಜೇಗೌಡ

ಬೆಂಗಳೂರು: 'ಮೂರ್ನಾಲ್ಕು ದಿನದಿಂದ ದುಬೈನಲ್ಲಿ ಭಯದ ವಾತಾವರಣವಿತ್ತು. ನಾವಿದ್ದ ಹೋಟೆಲ್ ಬಳಿ ಸ್ಫೋಟದ ಸದ್ದುಗಳು ಕೇಳಿಸುತ್ತಿತ್ತು. ದೀಪಾವಳಿ ಪಟಾಕಿ ಸಿಡಿತದ ಸದ್ದು ಕೇಳಿದ ನಮಗೆ ಬಾಂಬ್ ಸದ್ದು ನಿಜಕ್ಕೂ ಆತಂಕವನ್ನೇ ಹುಟ್ಟಿಸಿತ್ತು. ಈಗಲೂ ಅದನ್ನು ಮರೆಯಲು ಆಗುತ್ತಿಲ್ಲ. ಅಲ್ಲಿಂದ ಬೆಂಗಳೂರಿಗೆ ಬಂದು ಇಳಿದಾಗ ಮನಸಿಗೆ ನಿರಾಳವಾಯಿತು...'

ದುಬೈ ಪ್ರವಾಸದಲ್ಲಿದ್ದು ಅಲ್ಲಿಯೇ ಸಿಲುಕಿಕೊಂಡು ಮಂಗಳವಾರ ಬೆಳಗಿನ ಜಾವ ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದು ಚಿಕ್ಕಮಗಳೂರಿನ ತಮ್ಮ ಮನೆ ತಲುಪಿದ ವಿಧಾನಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಅಲ್ಲಿನ ಅನುಭವವನ್ನು ಹಂಚಿಕೊಂಡರು.

'ಅಲ್ಲಿನ ಕಾರ್ಯಕ್ರಮ ಮುಗಿಸಿ ಹೊರಡಬೇಕಿತ್ತು. ಯುದ್ಧದ ವಾತಾವರಣ ಶುರು ಆಗಿ ವಿಮಾನ ಸೇವೆಯೂ ನಿಂತು ಹೋಯಿತು. ಹೋಟೆಲ್ ಒಂದರಲ್ಲಿ ಉಳಿದುಕೊಂಡಿದ್ದೆ. ಕತ್ತಲಾಗುತ್ತಲೇ ಸಮೀಪದಲ್ಲೇ ಬಾಂಬ್ ಬೀಳುತ್ತಿರುವ ಮಾಹಿತಿ ನೀಡಲಾಗುತ್ತಿತ್ತು. ಕೊನೆಗೆ ಕನ್ನಡಿಗರಾದ ರೊನಾಲ್ಡ್ ಕೊಲಾಸೊ ಅವರು ತಮ್ಮ ಮನೆಗೆ ಕರೆದುಕೊಂಡು ಹೋದರೂ ಭಯ ಕಡಿಮೆಯಾಗಿರಲಿಲ್ಲ. ಸೋಮವಾರ ಮಧ್ಯರಾತ್ರಿ 300ಕ್ಕೂ ಅಧಿಕ ಪ್ರಯಾಣಿಕರನ್ನು ಹೊತ್ತ ಎಮಿರೇಟ್ಸ್ ವಿಮಾನ ಕರಾಚಿ ಮಾರ್ಗವಾಗಿ ಬೆಂಗಳೂರಿಗೆ ಬಂದಿಳಿಯಿತು. ಮನೆ ತಲುಪಿದ್ದೇನೆ' ಎಂದು ನಿಟ್ಟುಸಿರುಬಿಟ್ಟರು.

'ನಮ್ಮ ನೆರವಿಗೆ ಬರುವಂತೆ ಭಾರತೀಯ ದೂತವಾಸ ಕಚೇರಿಯನ್ನು ಸಂಪರ್ಕಿಸಿದರೂ ಸೂಕ್ತ ಸಹಕಾರ ಸಿಗಲಿಲ್ಲ. ದುಬೈ ಸರ್ಕಾರವೇ ನಿಜಕ್ಕೂ ನಮ್ಮಲ್ಲಿ ಆತ್ಮಸ್ಥೈರ್ಯ ತುಂಬಿತು. ವಿಮಾನದ ಪೈಲಟ್ ಕೂಡ ಧೈರ್ಯದಿಂದಲೇ ನಮ್ಮನ್ನು ಕರೆದುಕೊಂಡು ಬಂದರು' ಎಂದು ನೆನಪಿಸಿಕೊಂಡರು.

ಅಲ್ಲಿಯೇ ಉಳಿದಿರುವ ಹಲವರು

ದುಬೈ ಸೇರಿದಂತೆ ವಿವಿಧೆಡೆ ಸಂಕಷ್ಟಕ್ಕೆ ಸಿಲುಕಿದ್ದ 1,053 ಕನ್ನಡಿಗರು ಸೋಮವಾರ ಹಾಗೂ ಮಂಗಳವಾರ ಮರಳಿದರೆ, ಇನ್ನಷ್ಟು ಪ್ರವಾಸಿಗರು ಅಲ್ಲಿಯೇ ಉಳಿದಿದ್ದಾರೆ.

ಎರಡು ವಿಮಾನದಲ್ಲಿ ದುಬೈ ಮಾತ್ರವಲ್ಲದೇ ಅಬುಧಾಬಿ, ದೋಹಾ, ಜೆಡ್ಡಾ ಸಹಿತ ವಿವಿಧ ಕಡೆ ಸಿಲುಕಿದ್ದವರನ್ನು ಬೆಂಗಳೂರಿಗೆ ಮಂಗಳವಾರ ಬೆಳಗಿನ ಜಾವ ಸುರಕ್ಷಿತವಾಗಿ ಕರೆತರಲಾಗಿದೆ. ಉಳಿದವರು ಬುಧವಾರ ಊರುಗಳಿಗೆ ತಲುಪುವ ವಿಶ್ವಾಸ ಹೊಂದಿದ್ದಾರೆ.

ಉದ್ಯಮಿ ರೊನಾಲ್ಡ್ ಕೊಲಾಸೊ ಅವರೊಂದಿಗೆ ಕನ್ನಡ ಕೂಟಗಳ ಪ್ರಮುಖರು ಪ್ರವಾಸಿಗರ ಸುರಕ್ಷತೆ ಕುರಿತು ಚರ್ಚೆ ನಡೆಸಿದರು.

'ದುಬೈನಲ್ಲಿ ಸಿಲುಕಿಕೊಂಡಿರುವ ಹಲವರಿಗೆ ಕನ್ನಡಿಗರ ಕೂಟದಿಂದ ಮಂಗಳವಾರ ಬೆಳಿಗ್ಗೆ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಪರಿಸ್ಥಿತಿ ಸಂಪೂರ್ಣ ಸುಧಾರಿಸುವವರೆಗೆ ಅಗತ್ಯ ನೆರವು ಮುಂದುವರಿಸಲಾಗುತ್ತದೆ. ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿಯೊಂದಿಗೆ ಮಾತುಕತೆ ನಡೆಸಲಾಗಿದ್ದು, ಬುಧವಾರ ಎಲ್ಲರನ್ನೂ ಬೆಂಗಳೂರಿಗೆ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತಿದೆ' ಎಂದು ದುಬೈ ಕನ್ನಡಿಗರ ಕೂಟದ ಅಧ್ಯಕ್ಷ ಅರುಣ್‌ಕುಮಾರ್, ಸಲಹೆಗಾರ ಭಾರ್ಗವ ಶರ್ಮ ಮಾಹಿತಿ ನೀಡಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

Sri Saraswathi Vidyaniketana
Dommasandra
REQUIRE QUALIFIED TEACHERS
English: Any Degree with D.Ed
English / History: BA.B Ed
Science/Maths: BSc.B.Ed (PCM)
Computer: BCA
Yoga (Lady): Diploma / Degree
Good communication skills in English, Contact:
94480 28933 / 84978 55814
Drop Your CV within 09.03.2026
ssvn1980@gmail.com

ST. JOHN'S HIGH SCHOOL
132, St. John's Church Road, Cleveland Town, Bangalore – 560 005
Email : contactus@csistjohnshighschool.edu.in
Website : www.johnshighedu.com :
Phone Nos: 080-29719720/ +91 97396 00076

REQUIRES
1. **Biology Teacher:** 1 Post - High School (ISC)
Qualification : M.Sc., or M.Phil (Botany / Zoology), B.Ed.,
2. **Biology Teacher:** 1 Post - High School (ICSE)
Qualification : M.Sc., (Botany / Zoology), B.Ed.,
3. **History Teacher :** 1 Post – High School (ICSE)
Qualification : M.A.,(History) B.Ed.,
4. **Geography Teacher :** 1 Post - High School (ICSE)
Qualification : M.Sc., / M.A., (Geography) B.Ed.,
5. **English Teacher :** 1 Post - High School (ICSE)
Qualification : M.A., (English) B.Ed.,
6. **Scripture Teacher :** 1 Post
Qualification : B.D., / M.A., in Christian studies
7. **Music Teacher :** 1 Post
Qualifiction : Minimum 3rd grade complete in Piano/Guitar and should know to sing
8. **Physical Education Teacher :** 1 Post
Qualification : B.P.Ed., / M.P.Ed.,

Experience : Teachers must have worked in ISC/ ICSE/ CBSE Institution for a minimum period of five years. The candidates should have studied in an English Medium School. All degrees must be obtained from recognized Universities.
The application forms will be available in the School Office from 2nd March 2026 to 18th March 2026 from 9.30 a.m to 1.00 p.m. The last date for submission of filled in application forms with relevant documents is 20th March 2026 by 1.00 p.m.

HOLY ANGEL'S High School,Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2026-27 for Kannada (to handle Higher Primary). High School- Ist Language English, Mathematics, Science & SocialScience to handle VIII & IX. STATE & ICSE. Qualification: B.A./B.Sc., B.Ed/ M.A./M.Sc, M.Ed. Only English Medium Candidates need to apply

REPUTED PU COLLEGE @ HESARAGHATTA ROAD REQUIRES PRINCIPAL AND OTHER FACULTY MEMBERS FOR ENGLISH, ACCOUNTANCY, COMPUTER SCIENCE, ECONOMICS, BUSINESS STUDIES AND HINDI. CONTACT: 6360291124. Mail: ashakashyap1380@gmail.com

REQUIRES EXPERIENCED Primary and High School Teachers with B.A / B.Sc., B.Ed / M.A / M.Sc., M.Ed to teach Science, English, Mathematics and Sanskrit. English fluency is must. Walk-in-Interview. Contact Max Muller Public School, Mahalakshmi Layout, B'lore-96. Ph: 23376050. E-mail- maxmullerpublicschool.mlayout@gmail.com

"PLANET BLOOMINGDALE" Requires Trained/`Untrained Pre-School Teachers, Housekeeping Staff and Lady Security for`Koramangala Branch. Call: 9243127555 / 9243101700

ST FLOWERS ENGLISH SCHOOL ICSE-STATE, Bangalore 9686732171, 080-23399884/ 080-23408832, stflowerenglishschool@gmail.com Required Experience Trained Teachers for the Academic Year 2026-2027 For Primary and High School Kannada, Hindi, English, Social Teacher (MA , B.Ed) Maths, Science (M.Sc , B.Ed) Physical Education (BPEd, MPEd) Computer Science (M.Sc, B.Ed) Nursery Teachers NTT, Basic Degree with B.Ed Trained teachers.

Wanted

GIRI R RAMMURTHY Group CFO / Finance Director 30+ yrs | Infra, Real Estate, Hospitality MBA (Fin), M.Com, ACCA Rs.550+ Cr Fundraising | Project Finance | Governance Bengaluru | 9742488188 | rgiri0507@gmail.com

Security & Detectives

JOB VACANCY Company Appointment SECURITY GUARD, SUPERVISOR, Salary Rs. 18,600 to 25,000, P.F., E.S.I., BONUS, FOUR Weekly off J.P.NAGAR, Marathahalli Kundalahalli. 9036374114 9686684009 9600325583 6361106051

MARKETING EXECUTIVES & Accountant required for Security & property management Company, Bangalore. Attractive salary + incentives. Contact: 9743265995/ 9019198255

Graphic Designers

REQUIRED GRAPHIC Designer- Photoshop/ Corel Draw/ Illustrator. Experience 1 Year or Above in around Rajajinagar Contact: 9902891620/ 9845579620

Multiple Vacancy

URGENT REQUIRED
Insurance / Banking / Chits / Digital Marketing / Direct Sales / Auto Mobile Sales
(Male / Female)
For Salary per annum
Sales Officer 6 Lakhs 1 Year Experience
Sales Manager 15 Lakhs 3 Year Experience
Area Sales Manager 18 Lakhs 5 Year Experience
Regional Sales Manager 21 Lakhs 8 Years Experience
National Sales Manager 24 Lakhs 10 Years Experience
Contact: 8296862282 6360534415

Cook

WANTED BRAHMIN LADY COOK
Lady Cook (preferably Brahmin) to work for a small family at JP Nagar 2nd Phase. Candidates should be above 40yrs, Attractive salary. Call: 89705 50662

Accounts & Finance

WANTED SENIOR ACCOUNTANT with 10-15 years experience for a Reputed Real Estate Company. Interested candidates may kindly mail their resumes to: info@highgateshotel.com

Walk-in

MMET ENGLISH PRIMARY& HIGH SCHOOL
8, Patel Kulappa Road, R.S. Palya, M.S. Nagar Post, Bangalore - 560033.
Ph. 080-25450522, 72596 48179, 93428 54850
Please send your resume to Email: mmetschool@gmail.com
WANTED TEACHERS
Pre-Primary : PUC. NTT / Montessori
Primary: PET, (D.P.Ed)
High School : Maths & Chemistry (B Sc, B Ed) Hindi (BA, B.Ed)
KNSS VIDYAMANDIR ENGLISH PRIMARY & HIGH SCHOOL
Anandapura, T.C. Palya Main Road, Bangalore - 560 036.
Ph. No. 080 - 2545 0522, 70224 77196, 94497 09292
Please send your resume to knssvidyamandirephs@gmail.com
Pre Primary : PUC, NTT / Montessori
Primary : Kannada, English, Hindi (PUC, D Ed)
Computer Teacher
Attractive salary with benefits offered. Walk-in interview on 14.03.2026 (Saturday) 10 AM onwards at MMET School.

Engg/ Production Technical

SERVICE ENGINEERS for ATLAS COPCO SCREW Compressors Location Bangalore ITI/ Diploma Electrical/ Mechanical Fresher/ 2-3 Years experience Email: chandra@synergics.in/ Mob: 9341856562

General

WANTED OFFICE ASSISTANTS and HELPERS for an Electronic Industry in JP-Nagar 7th Phase, Bangalore-78. Contact: 9141009161 between 10AM and 5PM.

EDUCATION CORNER ಕ್ಲಾಸಿಫೈಡ್ಸ್

HIRING OFFICE ASSISTANTS & CLERKS (Textile Export Company) Bommanahalli, Bangalore. Mail: starsilks@gmail.com

Marketing & Sales

WANTED MARKETING Manager, Tele Marketing and Marketing Executives for reputed Real Estate to sell Plots and Farm Land. Preferably experience candidates. Call: 9845041912

RENTAL PROPERTIES

Accommodation Available

Industrial And Factory

WAREHOUSE FOR LEASE, in KIADB Allotted Corner Plot, 50000 sqft, Facing 150 ft Rd, 500mts from STRR, 300mts from the Brigade WTC Devanahalli, 20mins from Kempegowda International Airport. Ct: 9677403235

BUSINESS

Business to Business

Hotel & Restaurant

WELL FURNISHED Restaurant with well equipped kitchen & Everything in 1000 Sft area for SALE or RENT in Posh Vijaya Bank Layout, Bannerghatta Road. Lease Agreement Transferable. For Details Call: 9900001954

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Industrial & Factory

Tumkur Road

SALE 108 Acres Agriculture Land near Nelamangala Suitable for Warehouse/ Industry/ Residential/ Fantasy Park. 9141326819

PERSONAL

Change of Name

I, PRAJWAL SOMASHEKAR #455/5, Sarjapura Road, Tilaknagar, Opp KEB Attibele, Bengaluru- 562107 have changed my name to PRAJWAL M S GOWDA vide affidavit dated-03/03/2026

Lost

DOCUMENT LOST
I, **RAJA R**, residing at No. 35 1st Main, Vignan Nagar New Thippasandra post Malleshpalya Extn. Bengaluru - 560075, have lost **my Late Brother BABU.R his KGID Policies - DOCUMENT No.1588730, 2920565, 2698136, 2191986, 1744279.** Lost Report No. 2090967/2026. While in transit. If found Please contact: **9972113305**

DH Classifieds ಪ್ರಜಾವಾಣಿ
More value, more impact
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact:
9845114560
9886213331
*Conditions apply



ಡೇಟಾ ಎಂಬುದು ತೈಲವಲ್ಲ, ಕಚ್ಚಾತೈಲ!

• ಕೃಷ್ಣ ಭಟ್

2006ರಲ್ಲಿ ರಾಷ್ಟ್ರೀಯ ಜಾಹೀರಾತುದಾರರ ಸಂಘಟನೆಯ ಒಂದು ಸಮ್ಮೇಳನ ನ್ಯೂಯಾರ್ಕ್‌ನ ಗ್ರ್ಯಾಂಡ್ ಹಯಾತ್ ಹೋಟೆಲ್‌ನಲ್ಲಿ ನಡೆದಾಗ, ಕ್ಲೈವ್ ಹಂಬಿ ಎಂಬ ಬ್ರಿಟಿಷ್ ಗಣಿತಶಾಸ್ತ್ರಜ್ಞ ಹಾಗೂ ಡೇಟಾ ಸೈನ್ಸ್ ಪರಿಣತರದ್ದೊಂದು ಉಪನ್ಯಾಸವಿತ್ತು. ಅಲ್ಲಿ ಅವರು ಜಾಹೀರಾತುದಾರರಿಗೆ ಡೇಟಾ ಎಂಬುದು ಎಷ್ಟು ಮುಖ್ಯ ಎಂದು ವಿವರಿಸುತ್ತಾ, 'Data is the new oil'ಎಂಬ ಪದವನ್ನು ಬಳಸಿದರು.

ಅವತ್ತು ಅವರು ಹೇಳಿದ್ದು ಅಲ್ಲೇ, ಅದೇ, ಸಮ್ಮೇಳನದಲ್ಲೇ ಕುಳಿತ ಜನರ ಈ ಕಿವಿಯಿಂದ ಆ ಕಿವಿಗೆ ಹರಿದು ಹೋಯಿತು. ಆದರೆ, ನಿಧಾನಕ್ಕೆ ಜಾಹೀರಾತುದಾರರಿಗೆ ಈ ಡೇಟಾ ಎಂಬುದು ಎಷ್ಟು ಮುಖ್ಯ ಎನ್ನುವ ಸಂಗತಿ ಅರಿವಿಗೆ ಬರುತ್ತಾ ಹೋಯಿತು. 2017ರಲ್ಲಿ ದಿ ಎಕಾನಮಿಸ್ಟ್‌ನಲ್ಲಿ ಈ ಬಗ್ಗೆ ಅಂದರೆ 'ಡೇಟಾ ಈಸ್ ದಿ ನ್ಯೂ ಆಯಿಲ್' ಎಂಬ ಬಗ್ಗೆ ಒಂದು ಸುದೀರ್ಘ ಲೇಖನ ಪ್ರಕಟವಾಯಿತು. ಅಷ್ಟು ಹೊತ್ತಿಗೆ ಅಂದರೆ ಈ 11 ವರ್ಷಗಳಲ್ಲಿ ಜಾಹೀರಾತುದಾರರಿಗೆ ಡೇಟಾ ಎಷ್ಟು ಮುಖ್ಯ ಎಂದು ಅರಿವಾಗಿತ್ತು.

ಆದರೆ, ಈಗ ನೋಡಿ, ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಈಗ ಯಾರೂ ಡೇಟಾವನ್ನೂ ತೈಲವನ್ನೂ ಪರಸ್ಪರ ಇಟ್ಟು ಹೋಲಿಕೆ ಮಾಡುತ್ತಿಲ್ಲ. ಬದಲಿಗೆ, ಡೇಟಾವನ್ನು ಕಚ್ಚಾತೈಲ ಎಂದು ಕರೆಯುತ್ತಿದ್ದಾರೆ!

ಹಾಗಾದರೆ, ಈ ಇಪ್ಪತ್ತು ವರ್ಷದಲ್ಲಿ ಬದಲಾದದ್ದೇನು?

ಇದನ್ನು ನೋಡಬೇಕಾದರೆ ನಾವು ಇದೇ ಡೇಟಾದ ಮೊರೆ ಹೋಗಬೇಕು! 2010ರ ಹೊತ್ತಿಗೆ ಒಂದು ಮಿಲಿಯನ್ ಗ್ರಾಹಕರ ಪ್ರೊಫೈಲ್ ಡೇಟಾ ನಿಮ್ಮ ಬಳಿ ಇತ್ತು ಎಂದಾದರೆ ನೀವು ಇಡೀ ಮಾರ್ಕೆಟ್ ಅನ್ನೇ ಆಳಬಹುದಿತ್ತು! ಇಡೀ ಮಾರುಕಟ್ಟೆಯಲ್ಲಿ ಇದ್ದಿದ್ದೇ 2 ಝೆಟಾಬೈಟ್ಸ್‌ನಷ್ಟು ಡೇಟಾ. ಅಂದರೆ, ನಮ್ಮ ಕಂಪ್ಯೂಟರ್‌ಗಳಲ್ಲಿರುವ 1 ಟಿಬಿಗೆ ಹೋಲಿಸಿದರೆ, ಇದು 1 ಬಿಲಿಯನ್ ಟಿಬಿ ಆಗುತ್ತದೆ!

ಆದರೆ, ಈಗ ಅಂದರೆ 2026ರಲ್ಲಿ ಕುಳಿತು ನೋಡಿದರೆ, ನಮ್ಮ ಇಡೀ ಮಾರುಕಟ್ಟೆಯಲ್ಲಿ ಪ್ರತಿ ವರ್ಷಕ್ಕೆ 221 ಝೆಟಾಬೈಟ್ಸ್ ಡೇಟಾ ಸಂಗ್ರಹವಾಗುತ್ತಿದೆ! ಅಂದರೆ, ಈ ಡೇಟಾ ಈಸ್ ಆಯಿಲ್ ಎಂಬ ಪದಗುಚ್ಛ ಕಟ್ಟಿದ ಕಾಲಕ್ಕೆ ಹೋಲಿಸಿದರೆ 110 ಪಟ್ಟು ಡೇಟಾ ನಮ್ಮ ಬಳಿ ಇದೆ!

ಇನ್ನೂ ಆಸಕ್ತಿಕರ ಸಂಗತಿಯೆಂದರೆ, ಈ ಪೈಕಿ ಶೇ 70 ರಷ್ಟು ಭಾಗ ಡೇಟಾ ಇನ್ನೂ ಬಳಕೆಯೇ ಆಗಿಲ್ಲ! ಅಂದರೆ, ಮಾಹಿತಿಯನ್ನ ಸಂಗ್ರಹಿಸಿ, ಸಂಸ್ಕರಿಸಿ, ಶೇಖರಿಸಿಟ್ಟುಕೊಂಡಿದ್ದಾರೆ. ಆದರೆ, ಅದನ್ನು ಬಳಸಿಕೊಂಡು ಕಂಪನಿಗಳು ಒಂದು ರೂಪಾಯಿ ದುಡ್ಡನ್ನೂ ಮಾಡಿಲ್ಲ! ಅದೊಂದು ರೀತಿ ಖಾಲಿ ಬಿದ್ದಿರುವ ಹಾರ್ಡ್ ಡ್ರೈವ್ ಇದ್ದ ಹಾಗೆ! ಕೆಲವೇ ವರ್ಷಗಳ ಹಿಂದೆ ಕಂಪನಿಗಳು ಡೇಟಾ ಸಂಗ್ರಹಿಸುವುದೇ ನಮ್ಮ ಬ್ಯುಸಿನೆಸ್‌ನ ಒಂದು ಮಹತ್ವದ ಭಾಗ ಎಂದು ಅಂದುಕೊಳ್ಳುತ್ತಿದ್ದವು. ಆದರೆ, ಈಗ ಡೇಟಾ ಸಂಗ್ರಹ ಮಾಡುವುದರಿಂದ ನಾವು ಸುಮ್ಮನೆ ಜಂಕ್ ಡೇಟಾವನ್ನು ಸಂಗ್ರಹಿಸಿಟ್ಟುಕೊಂಡು, ಅದಕ್ಕೆ ಬೇಕಾದ ಹಾರ್ಡ್‌ವೇರ್‌ಗೆ ಸುಮ್ಮನೆ ದುಡ್ಡು ದಂಡ ಮಾಡುತ್ತಿದ್ದೇವೆ ಅನಿಸುತ್ತಿದೆ. ಇದೇ ಕಾರಣಕ್ಕೆ ಎಂಡ್ ಟು ಎಂಡ್ ಎನ್‌ಕ್ರಿಪ್ಷನ್ ಹೆಚ್ಚು ಚಾಲ್ತಿಗೆ ಬಂದಿದೆ. ಈ ಎಂಡ್ ಟು ಎಂಡ್ ಎನ್‌ಕ್ರಿಪ್ಷನ್ ಹೇಗೆಂದರೆ, ನಾವು ಕಳುಹಿಸಿದ ಪ್ರತಿ ಡೇಟಾವೂ ನಮ್ಮದೇ ಸಾಧನದಲ್ಲಿ ಸಂಗ್ರಹವಾಗುತ್ತದೆ. ಇದೆಲ್ಲ ಡೇಟಾ ಸಂಗ್ರಹವಾಗಿದ್ದು ಕೂಡಾ ಗೌಪ್ಯತೆ ಬಗ್ಗೆ ಕಟ್ಟುನಿಟ್ಟಾದ ನಿಯಮಗಳು ಜಾರಿ ಬಂದ ನಂತರವೇ ಎನ್ನುವುದು ಇಲ್ಲಿ ಗಮನಾರ್ಹ ಸಂಗತಿ. ಈ ತತ್ವ ಜನಪ್ರಿಯತೆ ಪಡೆದುಕೊಳ್ಳುತ್ತಿದ್ದಂತೆಯೇ ಯುರೋಪ್ ರಾಷ್ಟ್ರಗಳು ಡೇಟಾ ನಿರ್ವಹಣೆಗೆ ಎಂದು GDPR ನಿಯಮಗಳನ್ನು ಜಾರಿಗೆ ತಂದರು. ಇದರಿಂದ ಡೇಟಾ ಸಂಗ್ರಹದ ಮೇಲೆ ಒಂದು ಕಟ್ಟುನಿಟ್ಟಿನ ನಿಗಾ ಉಳಿಯಿತು.

ಈ ಡೇಟಾ ನೋಡಿದರೆ, ನಾವು ಗೌಪ್ಯತೆಯ ಬಗ್ಗೆ ಮಾಡುವ ಮಡಿವಂತಿಕೆಯೇ ತೀರಾ ಬೆಣ್ಣೆಯಲ್ಲಿ ಕೂದಲು ತೆಗೆದ ಹಾಗೆ ಅನ್ನಿಸುತ್ತದೆಯಲ್ಲವೇ?! ಅಷ್ಟೇ ಅಲ್ಲ, ಈಗ ಕಂಪನಿಗಳಿಗೆ ಝೆಟಾಬೈಟ್‌ಗಳಲ್ಲಿ ಮಾಹಿತಿ ಇಟ್ಟುಕೊಂಡು ಕುಳಿತುಕೊಳ್ಳಲೂ ಹೆದರಿಕೆಯಾಗುತ್ತಿದೆ. ಎಲ್ಲಾದರೂ, ಯಾರೋ ಒಬ್ಬ ಹ್ಯಾಕರ್ ಎಂದು ಸಣ್ಣ ತುಂಡು ಮಾಹಿತಿಯನ್ನು ಕದ್ದು ಡಾರ್ಕ್‌ವೆಬ್‌ನಲ್ಲಿ ಹಂಚಿಕೊಂಡರೆ ಈಗಿನ ಕಾನೂನುಗಳ ಪ್ರಕಾರ ಮಿಲಿಯನ್‌ಗಟ್ಟಲೆ ದಂಡ ತೆರಬೇಕಾಗುತ್ತದೆ. ಅದು ಈ ಡೇಟಾ ಸಂಗ್ರಹ ಮಾಡಿ, ಶೇಖರಿಸಿಟ್ಟುಕೊಂಡಿರುವ ವೆಚ್ಚಕ್ಕೂ ಹೆಚ್ಚಾಗಿಬಿಡುತ್ತದೆ! ಇದೇ ಕಾರಣಕ್ಕೆ ಕಂಪನಿಗಳು ಈ ಯಾವ ರಿಸ್ಕ್ ಇಲ್ಲದ ಸಿಂಥೆಟಿಕ್ ಡೇಟಾ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುತ್ತಿವೆ. ಅಂದರೆ, ಅಸಲಿ ಮಾಹಿತಿಯಂತೆಯೇ ಕಾಣುವ ಹಾಗೂ ಅದನ್ನೇ ಹೋಲುವ ನಕಲಿ ಡೇಟಾ. ಈ ಡೇಟಾ ಬಳಸುವುದರ ಅನುಕೂಲವೇನೆಂದರೆ, ಇದನ್ನು ಶುಚಿಗೊಳಿಸುವುದಕ್ಕೆ ಅಂದರೆ ವೈಯಕ್ತಿಕ ಮಾಹಿತಿಯನ್ನೆಲ್ಲ ತೆಗೆದು ಬಳಕೆಗೆ ಸೂಕ್ತ ಮಾಹಿತಿಯನ್ನಾಗಿಸಲು ಅಗತ್ಯವಿರುವ ಶ್ರಮ ಇದಕ್ಕೆ ಹಾಕಬೇಕಿಲ್ಲ. ಇದಕ್ಕಿಂತ ಕಡಿಮೆ ವೆಚ್ಚದಲ್ಲಿ ಈ ಸಿಂಥೆಟಿಕ್ ಡೇಟಾವನ್ನು ಉತ್ಪಾದನೆ ಮಾಡಬಹುದು!

ನಾವು ಒಂದು ಬಾರಿ ಗೂಗಲ್ ಸರ್ಚ್‌ನಲ್ಲಿ ಒಂದು ಪ್ರಶ್ನೆ ಕೇಳಿ ಅದು ಉತ್ತರ ಹೇಳುವುದಕ್ಕೆ ತೆಗೆದುಕೊಳ್ಳುತ್ತಿದ್ದ ಕಂಪ್ಯೂಟಿಂಗ್ ಪವರ್‌ಗೆ ಹೋಲಿಸಿದರೆ 10 ಪಟ್ಟು ಹೆಚ್ಚು ಎನರ್ಜಿ ಈ ಎಐಯಲ್ಲಿ ಒಂದು ಪ್ರಶ್ನೆ ಕೇಳಿದಾಗ ಅದಕ್ಕೆ ಉತ್ತರಿಸಲು ಬೇಕಾಗುತ್ತದೆ! ಇಡೀ ಜಗತ್ತಿನ ಡೇಟಾ ಸೆಂಟರ್‌ಗಳೆಲ್ಲ ಸೇರಿ ಖರ್ಚು ಮಾಡುವ ವಿದ್ಯುತ್‌ಗೆ ಹೋಲಿಸಿದರೆ ಇಡೀ ಜರ್ಮನಿ ದೇಶ ರನ್ ಆಗುವುದಕ್ಕೆ ಬಳಸುವ ವಿದ್ಯುತ್‌ಗೆ ಸಮ! ಸುಮಾರು 500 ಟೆರಾವ್ಯಾಟ್ ಗಂಟೆಗಳಷ್ಟು ವಿದ್ಯುತ್ತನ್ನು ಈ ಡೇಟಾ ಸೆಂಟರ್‌ಗಳೇ ಬಳಕೆ ಮಾಡುತ್ತಿವೆ. ಇನ್ನು 4 ವರ್ಷದಲ್ಲಿ, ಅಂದರೆ 2030ರ ಹೊತ್ತಿಗೆ ಈ ಡೇಟಾ ಬಳಕೆ ದುಪ್ಪಟ್ಟಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ನೋಡಿದರೆ, ಈಗ ಡೇಟಾ ಇಟ್ಟುಕೊಂಡವ ನಿಷ್ಪ್ರಯೋಜಕ! ಬದಲಿಗೆ, ಆ ಡೇಟಾವನ್ನು ಬಳಸಿಕೊಳ್ಳುವ ಶಕ್ತಿ ಇರುವವನೇ ನಿಜವಾದ ಜಾಣ! ❖

ಹಾಗಾದರೆ, ಈಗ ಯಾವುದು ಮುಖ್ಯ?

ಈಗ ಮುಖ್ಯವಾಗಿರುವುದು ಡೇಟಾ ಸಂಗ್ರಹದ ನಂತರದ ಹಂತ. ಅಂದರೆ, ಡೇಟಾವನ್ನು ಹೇಗೆ ಸಂಸ್ಕರಿಸುವುದು ಎಂಬುದು. ಈಗ ಡೇಟಾವನ್ನು ಪ್ರೊಸೆಸ್ ಮಾಡುವ ಸಾಮರ್ಥ್ಯ ಇದ್ದವನೇ ನಿಜವಾದ ರಾಜ!

2010ರ ಸಮಯದಲ್ಲಿ ಒಬ್ಬ ವ್ಯಕ್ತಿಯ ಸಂಪೂರ್ಣ ಪ್ರೊಫೈಲ್ ಸಂಗ್ರಹ ಮಾಡುವುದಕ್ಕೆ ₹ 5 ರಿಂದ 10 ತಗಲುತ್ತಿತ್ತು. ಆದರೆ, ಈಗ ಪ್ರೊಫೈಲ್ ಮಾಹಿತಿ ಬಹುತೇಕ ಉಚಿತವಾಗಿ ಅಥವಾ ತೀರಾ ಕೆಲವೇ ಪೈಸೆಗಳಲ್ಲಿ ಸಿಗುತ್ತದೆ. ಆದರೆ, ಅದನ್ನು ಪ್ರೊಸೆಸ್ ಮಾಡುವುದಕ್ಕೆ ಈಗ ಅಪಾರ ಹಣ ಬೇಕಾಗುತ್ತಿದೆ.

ಅಂದರೆ, ನಮ್ಮ ಬಳಿ ಈಗ ಬೇಕಾದಷ್ಟು ತೈಲ ಇದೆ. ಆದರೆ, ಅದನ್ನು ಬಳಸುವುದಕ್ಕೆ ಬೇಕಾದ ಎಂಜಿನ್‌ಗಳ ಸಂಖ್ಯೆ ಸಾಕಷ್ಟಿಲ್ಲ! ಅಥವಾ ಇದನ್ನು ಹೀಗೂ ಹೇಳಬಹುದು. ನಮ್ಮ ಬಳಿ ಕಚ್ಚಾತೈಲ ಬೇಕಾದಷ್ಟಿದೆ. ಆದರೆ, ಅದನ್ನು ಬಳಕೆಗೆ ಬೇಕಿರುವ ಪೆಟ್ರೋಲ್ ಅಥವಾ ಡೀಸೆಲ್ ಅನ್ನಾಗಿ ಪರಿವರ್ತಿಸುವುದಕ್ಕೆ ನಮ್ಮ ಬಳಿ ಸಾಕಷ್ಟು ಸಂಪನ್ಮೂಲವಿಲ್ಲ. ಇದೊಂದು ರೀತಿ ವೆನೆಜುವೆಲಾದ ಕಥೆ!

ಜಗತ್ತಿನ ಮೊದಲ ಡೇಟಾ ಸೆಂಟರ್

• ವಿಕ್ರಮ ಜೋಶಿ

'I don't need a hard disk in my computer if I can get to the server faster. carrying around these non-connected computers is byzantine by comparison'-(ಸರ್ವರ್‌ಗೆ ವೇಗವಾಗಿ ಸಂಪರ್ಕ ಸಾಧಿಸಲು ಸಾಧ್ಯವಾದರೆ ನನ್ನ ಕಂಪ್ಯೂಟರ್‌ಗೆ ಹಾರ್ಡ್ ಡಿಸ್ಕೇ ಬೇಡ) ಎನ್ನುವ ಮಾತನ್ನು 1997ರಲ್ಲಿ ಆ್ಯಪಲ್ ಕಂಪನಿಯ ಚೇರ್ಮನ್ ಆಗಿದ್ದ ಸ್ಟೀವ್ ಜಾಬ್ಸ್ ಹೇಳಿದಾಗ ಆಗಿನ್ನೂ ಡೇಟಾ ಸೆಂಟರ್ ಎನ್ನುವುದು ಮನೆ ಮನೆಮಾತಾಗಿರಲಿಲ್ಲ. ಇಂದು ನಾವು ಭಾಗವಹಿಸುವಿಕೆಯ (ಪಾರ್ಟಿಸಿಪೇಷನ್) ಯುಗದಲ್ಲಿದ್ದೇವೆ. ಸನ್ ಮೈಕ್ರೋ ಸಿಸ್ಟಮ್‌ನ ಮಾಜಿ ಸಿಇಒ ಸ್ಕಾಟ್ ಅವರ ಮಾತಿನಲ್ಲೇ ಹೇಳಬೇಕು ಅಂದರೆ - 'ನಾವು ಶಿಲಾಯುಗ, ಕಬ್ಬಿಣದಯುಗ, ಮಾಹಿತಿ ತಂತ್ರಜ್ಞಾನದ ಯುಗವನ್ನು ಮೀರಿ ಭಾಗವಹಿಸುವಿಕೆಯ ಯುಗಕ್ಕೆ ಬಂದಿದ್ದೇವೆ. ಇಂಟರ್ನೆಟ್, ಬ್ಲಾಗ್, ಫೋಟೊ, ಪಾಡಕಾಸ್ಟ್, ಆನ್ಲೈನ್ ಟ್ರಾನ್ಸ್‌ಲೇಷನ್, ವ್ಯವಹಾರ, ದೂರದ ಕಲಿಕೆ, ಟೆಲಿಮೆಡಿಸನ್ ಇವೆಲ್ಲವೂ ಭಾಗವಹಿಸುವಿಕೆಯ ಯುಗಕ್ಕೆ ಸಂಬಂಧಿಸಿದ್ದು, ಅದಕ್ಕೆ ಬೇಕಾದ ಡೇಟಾ ಸೆಂಟರ್ ಬಿಡಿಭಾಗಗಳನ್ನು ನಾವು ತಯಾರಿಸುತ್ತೇವೆ'. ಒಂದು ಸಾಲನ್ನು ಬರೆದು ಅಥವಾ ಪಟವನ್ನು ಪಟಕ್ಕನೆ ಕ್ಲಿಕ್ಕಿಸಿ ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಮಾಡಿದೆವು ಅಂದರೆ ಸಾಕು ನಮಗೆ ಹಾಗೂ ಡೇಟಾ ಸೆಂಟರ್‌ಗೆ ನಂಟು ಬೆಳೆದಂತೆ. ಇವತ್ತು ನಮ್ಮ ಎಲ್ಲಾ ಮಾಹಿತಿಗಳು ಇರುವುದು ಡೇಟಾ ಸೆಂಟರ್‌ಗಳಲ್ಲಿಯೇ.

ಭಾರತದಲ್ಲಿ 275ಕ್ಕೂ ಹೆಚ್ಚು ಡೇಟಾ ಸೆಂಟರ್‌ಗಳಿವೆ ಎಂಬುದಾಗಿ ಡೇಟಾ ಸೆಂಟರ್ ಮ್ಯಾಪ್ ಹೇಳುತ್ತದೆ. ಜಗತ್ತಿನಾದ್ಯಂತ 10,000-11,000 ಡೇಟಾ ಸೆಂಟರ್‌ಗಳಿವೆ ಎಂದು ಅಂದಾಜಿಸಲಾಗಿದೆ. ಅದರಲ್ಲಿ ಸುಮಾರು 4,000ಕ್ಕೂ ಡೇಟಾ ಸೆಂಟರ್‌ಗಳು ಅಮೆರಿಕದಲ್ಲಿಯೆ ಇವೆ.

ಇಂದು ಅಲ್ಲಿಯ ಶೇ 4ರಷ್ಟು ವಿದ್ಯುತ್ ಬಳಕೆಯು ಡೇಟಾ ಸೆಂಟರ್‌ಗಳಿಗೇ ವ್ಯಯವಾಗು ತ್ತದೆ ಅಂದರೆ ಅಚ್ಚರಿ ಪಡಬೇಕಿಲ್ಲ, 2030ರೊಳಗೆ ಈ ಮಿತಿ ದುಪ್ಪಟ್ಟಾಗಲಿದೆಯಂತೆ. ಅಲ್ಲಿ ಅಷ್ಟೊಂದು ವಿದ್ಯುತ್ ಸರಬರಾಜು ಮಾಡುವುದು ಸಾಧ್ಯವಿಲ್ಲವೆಂದೇ ಅವರೆಲ್ಲ ಭಾರತವನ್ನು ಡೇಟಾ ಸೆಂಟರ್ ಕೇಂದ್ರವಾಗಿ ಮಾಡಲು ಹೆಜ್ಜೆಯಿಡುತ್ತಿರುವುದು.

ಈ ಡೇಟಾ ಸೆಂಟರ್ ಅಥವಾ ದತ್ತಾಂಶ ಕೇಂದ್ರವು ಇವತ್ತಿನ ತಂತ್ರಜ್ಞಾನವಲ್ಲ, ಎಂಬತ್ತು ವರ್ಷ ಹಳೆಯದು! ಜಗತ್ತಿನ ಮೊತ್ತ ಮೊದಲ ಡೇಟಾ ಸೆಂಟರ್ ನಿರ್ಮಾಣವಾಗಿದ್ದು 1945ರಲ್ಲಿ, ಎರಡನೆಯ ಮಹಾಯುದ್ಧದ ಸಮಯದಲ್ಲಿ. ಎರಡನೆಯ ಮಹಾಯುದ್ಧದ ಕಾಲದಲ್ಲಿ ಮಿಲಿಟರಿಗೆ ನೆರವಾಗಲು ಸಂಕೀರ್ಣ ಗಣಕಶಕ್ತಿಗೆ ಬೇಕು ಎನ್ನುವ ಉದ್ದೇಶದಿಂದ ಹಾಗೆಯೇ ಮ್ಯಾನ್ ಹ್ಯಾಟನ್ ಯೋಜನೆಯಲ್ಲಿ ಅಣು ಬಾಂಬ್ ಸಂಶೋಧನೆಯ ಕಾರಣದಿಂದಲೂ ಎಲೆಕ್ಟ್ರಾನಿಕ್ ನ್ಯೂಮರಿಕಲ್ ಇಂಟಿಗ್ರೇಟರ್ ಆ್ಯಂಡ್ ಕಂಪ್ಯೂಟರ್ (ENIAC)ಅನ್ನು ಯುನಿವರ್ಸಿಟಿ ಆಫ್ ಪೆನ್ಸಿಲ್ವೇನಿಯಾದಲ್ಲಿ ನಿರ್ಮಿಸಲಾಗಿತ್ತು.

ಅವತ್ತಿನದಕ್ಕೂ ಇವತ್ತಿನದಕ್ಕೂ ಹೋಲಿಸಿದರೆ ಇವತ್ತಿನದು ಹಿಮಾಲಯ ಪರ್ವತ ಆಗಿನ ಮೊದಲ ಡೇಟಾ ಸೆಂಟರ್ ರಸ್ತೆಯ ಬದಿ ಶೇಖರಿಸಿಟ್ಟ ಮಣ್ಣಿನ ಗುಡ್ಡೆ ಅಷ್ಟೇ. ಅಂದಿನ ಡೇಟಾ ಸೆಂಟರ್‌ನ್ನು 1,800 ಚದರಡಿ ವಿಸ್ತೀರ್ಣ ಅಂದರೆ ಪುಟ್ಟ ಅಪಾರ್ಟ್‌ಮೆಂಟ್ ಗಾತ್ರದ ಜಾಗದಲ್ಲಿ ನಿರ್ಮಿಸಲಾಗಿತ್ತು. ಇಂದು ಒಂದು ಸಾಮಾನ್ಯ ಡೇಟಾ ಸೆಂಟರ್ ಕೂಡ ಹತ್ತು ಲಕ್ಷ ಚದರಡಿ ವಿಸ್ತೀರ್ಣವನ್ನು ಹೊಂದಿರುತ್ತದೆ. ಈಗಂತೂ ಡೇಟಾ ಸೆಂಟರ್‌ಗಳಲ್ಲಿ ಒಂದೇ ಕಾಲಕ್ಕೆ ಕೋಟ್ಯಂತರ ಕೆಲಸಗಳು ನಡೆಯುತ್ತವೆ; ಆಗ ಒಂದು, ಎರಡು ಹೀಗಿತ್ತು ಲೆಕ್ಕಾಚಾರ. 150 ಕಿಲೋ ವ್ಯಾಟ್ ಬಳಸಿಕೊಂಡು 30 ಟನ್ ಭಾರದ ಮಷಿನ್‌ನಲ್ಲಿ ಕುದುರೆ ಲಾಳದಾಕಾರದ ನಲವತ್ತು ವೆಕ್ಯೂಮ್ ಟ್ಯೂಬ್‌ಗಳಿದ್ದವು. ಈ ಡೇಟಾ ಸೆಂಟರ್‌ನ್ನು ಒಂದು ಹವಾನಿಯಂತ್ರಿತ ಕೋಣೆಯಲ್ಲಿ ಇಟ್ಟಿದ್ದರು. ಇಂದು ತಂತ್ರಜ್ಞಾನವೇ ಬದಲಾಗಿದೆ. ಸಿಪಿಯು ಬದಲು ಜಿಪಿಯು ಬಳಸಲಾಗುತ್ತದೆ, ಗಣಕ ಶಕ್ತಿಯ ಜೊತೆಗೆ ಡೇಟಾವನ್ನು ಸಂಗ್ರಹಿಸಿಡಲು ಹಾಗೂ ಸಾವಿರಾರು ಇತರೆ ಉಪಯೋಗಕ್ಕೂ ಡೇಟಾ ಸೆಂಟರ್ ಬಳಕೆಯಾಗುತ್ತದೆ.

ಜಗತ್ತಿನಲ್ಲಿ ಅತ್ಯಂತ ಹೆಚ್ಚು ಮೌಲ್ಯವನ್ನು ಹೊಂದಿರುವ ಕಂಪನಿ ಎನ್ವಿಡಿಯಾ, ಅದರ ಮುಖ್ಯ ಉತ್ಪನ್ನವೇ ಜಿಪಿಯು, ಆ ಜಿಪಿಯುವಿಗೆ ಇರುವ ಬೇಡಿಕೆಯ ಮುಕ್ಕಾಲು ಭಾಗ ಡೇಟಾ ಸೆಂಟರ್‌ಗಳು! ಅಂದು ಡೇಟಾ ಸೆಂಟರ್‌ಗಳ ಕ್ಷಮತೆಯನ್ನು MIPS ಅಂದರೆ ಮಿಲಿಯನ್ ಇನ್ಸ್ಟ್ರಕ್ಷನ್ಸ್ ಪರ್ ಸೆಕೆಂಡ್ ಮೂಲಕ ಅಳೆಯಲಾಗುತ್ತಿತ್ತು. ಈಗ ಅದನ್ನು FLOPS ಅಂದರೆ ಫ್ಲೋಟಿಂಗ್ ಪಾಯಿಂಟ್ ಆಪರೇಷನ್ಸ್ ಪರ್ ಸೆಕೆಂಡ್ ಮೂಲಕ ಅಳೆಯಲಾಗುತ್ತದೆ. ಹಾಗೆಯೇ ಡೇಟಾ ಸೆಂಟರ್ ಉಷ್ಣತೆಯು ಹೆಚ್ಚದಂತೆ ತಾಪಮಾನವನ್ನು ನಿಯಂತ್ರಿಸುವ ತಂತ್ರಜ್ಞಾನವು ಸಂಪೂರ್ಣವಾಗಿ ಬದಲಾಗಿದೆ. ಇವೆಲ್ಲ ಒಂದೇ ರಾತ್ರಿಯಲ್ಲಿ ಆಗಿಲ್ಲ, ಹಂತ ಹಂತವಾಗಿ ಬೆಳೆದುಕೊಂಡು ಬಂದಿದೆ.

ENAIC ನಂತರ ಒಂದು ಉತ್ತಮ ಡೇಟಾ ಸೆಂಟರ್ ನಿರ್ಮಾಣವನ್ನು ಮಾಡಿದ್ದು ಐಬಿಎಂ. ಅದು 1970ರಲ್ಲಿ. ಮೊತ್ತ ಮೊದಲ ಬಾರಿಗೆ ಅದೊಂದು ಕಮರ್ಷಿಯಲ್ ಡೇಟಾ ಸೆಂಟರ್ ಆಗಿ ಅವತಾರವನ್ನು ತಾಳಿತು ಅನ್ನೋಣ.

1980ರ ವೇಳೆಗೆ ಮೈಕ್ರೊಕಂಪ್ಯೂಟರ್ ಬಳಕೆಯು ಸ್ಫೋಟಗೊಂಡಿತ್ತು; ಆಗ ಡೇಟಾ ಸೆಂಟರ್ ಬಳಕೆಯೂ ಜನರಿಗೆ ಅಗತ್ಯವಾಗಲು ಶುರುವಾಯಿತು. ನಿಜವಾಗಿಯೂ ಡೇಟಾ ಸೆಂಟರ್‌ಗಳಿಗೆ ಬೇಡಿಕೆಯನ್ನು ಹೆಚ್ಚು ಮಾಡಿದ್ದು ಅಂತರ್ಜಾಲದ ಬಳಕೆ. ನಂತರ ಅಮೆಜಾನ್ ಕಂಪನಿಯು ಕ್ಲೌಡ್ ಕಂಪ್ಯೂಟಿಂಗ್ ಎನ್ನುವ ಒಂದು ಹೊಸ ವಿಚಾರವನ್ನು ಹೊರಗಡೆಗೆ ಬಿಟ್ಟಿತು, ಅಲ್ಲಿಂದಲೇ ಡೇಟಾ ಸೆಂಟರ್ ವ್ಯಾಪಾರವು ತೆರೆಯನ್ನು ಬಿಚ್ಚಿಕೊಂಡಿದ್ದು; ಅದು ಈ ಶತಮಾನದ ಆರಂಭ ಕಾಲ. 2010ರ ವೇಳೆಗೆ ಸ್ಮಾರ್ಟ್ ಮೊಬೈಲ್ ಬಳಕೆಯು ಹೆಚ್ಚು ಚಾಲ್ತಿಗೆ ಬಂತು. ಹೀಗಾಗಿ ಬಿಗ್ ಡೇಟಾ ಅನಲಿಟಿಕ್ಸ್, ಸ್ಟ್ರೀಮಿಂಗ್ ಇತ್ಯಾದಿಗಳಿಗೆ ಪೂರಕವಾಗಿ ಡೇಟಾ ಸೆಂಟರ್ ಇಲ್ಲದೆ ಗತಿಯಿರಲಿಲ್ಲ. ಅಲ್ಲಿಯವರೆಗೆ ಈ ಕ್ಲೌಡ್, ಡೇಟಾ ಸೆಂಟರ್ ಎಲ್ಲವೂ ಮುಖ್ಯವಾಹಿನಿಗೆ ಬಂದಿರಲಿಲ್ಲ.

2020ರ ನಂತರದಲ್ಲಿ ಯಾವಾಗ ಎಐ ಬೂಮ್ ಶುರುವಾಯಿತೋ ಅಲ್ಲಿಂದ ಡೇಟಾ ಸೆಂಟರ್ ಜಪ ಕೂಡ ತೀವ್ರವಾಗಿ ಹೆಚ್ಚಾಗಿದೆ.

ನಾಡಿನಲ್ಲಿ ಜಾಗವಿಲ್ಲವೆಂದು ಕಾಡುಗಳನ್ನು ಕಡಿದು ಡೇಟಾ ಸೆಂಟರ್ ಮಾಡಲು ಹೊರಟಿದ್ದಾರೆ. ಇಡೀ ನದಿಯ ನೀರನ್ನು ಹರಿಸಿದರೂ ಅದನ್ನು ತಣಿಸಲು ಸಾಧ್ಯವಾಗದಷ್ಟು ಬಿಸಿಯೇರುತ್ತಿದೆ. ಡೇಟಾ ಸೆಂಟರ್ ವಿದ್ಯುತ್ ಬಳಕೆಯಂತೂ ಜಗತ್ತಿಗೇ ಸವಾಲಾಗಿದೆ. ಎಲ್ಲರಿಗೂ ತಮ್ಮ ಡೇಟಾ ಸೆಂಟರ್ ಬೇಕು. ಜಿಪಿಯು ತಂತ್ರಜ್ಞಾನವು ಹೆಚ್ಚಿದಂತೆ ಡೇಟಾ ಸೆಂಟರ್ ಕ್ಷಮತೆಯೂ ಹೆಚ್ಚುತ್ತಿದೆ, ಕ್ಷಮತೆಗೆ ತಕ್ಕಂತೆ ಬಳಕೆ!. ಈಗ ಎಲ್ಲರೆದುರೂ ಇರುವ ದೊಡ್ಡ ಸವಾಲು - ಡೇಟಾ ಸೆಂಟರ್‌ನಲ್ಲಿರುವ ಡೇಟಾ ಸುರಕ್ಷಿತವೇ?. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ — ವಿಜ್ಞಾನ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

16) ಸ್ನೇಲ್‌ನ ನಿಯಮಕ್ಕೆ (Snell Law)ಸಂಬಂಧಿಸಿದ್ದು ....
ಎ) ಬೆಳಕಿನ ಪ್ರತಿಫಲನ ಬಿ) ಬೆಳಕಿನ ವಕ್ರೀಭವನ
ಸಿ) ಬೆಳಕಿನ ಪ್ರಸರಣೆ ಡಿ) ಬೆಳಕಿನ ಕೋರಿಕೆ
ಉತ್ತರ:– (ಬಿ) ಬೆಳಕಿನ ವಕ್ರೀಭವನ

17) ಸಸ್ಯಗಳ ಬೆಳವಣಿಗೆ ನಿಲ್ಲಲು ಯಾವ ಹಾರ್ಮೋನು ಕಾರಣವಾಗುತ್ತದೆ?
ಎ) ಅಬ್ಸಿಸಿಕ್ ಆಮ್ಲ (abscisic acid)
ಬಿ) ಆಕ್ಸಿನ್ ಸಿ) ಸೈಟೋಕೈನಿನ್
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಎ) ಅಬ್ಸಿಸಿಕ್ ಆಮ್ಲ (abscisic acid)

18) ಪೈರೋವೇಟ್‌ನ ವಿಭಜನೆಯಿಂದ ಕಾರ್ಬನ್ ಡೈ–ಆಕ್ಸೈಡ್, ನೀರು, ಮತ್ತು ಶಕ್ತಿಯ ಬಿಡುಗಡೆಯಾಗುವ ಸ್ಥಳ............
ಎ) ಕೋಶದ್ರವ್ಯ
ಬಿ) ಮೈಟೋ ಕಾಂಡ್ರಿಯಾ ಸಿ) ಕ್ಲೋರೋಪ್ಲಾಸ್ಟ್
ಡಿ) ನ್ಯೂಕ್ಲೀಯಸ್
ಉತ್ತರ:– (ಬಿ) ಮೈಟೋ ಕಾಂಡ್ರಿಯಾ

19) ಈ ಕೆಳಗಿನ ಯಾವ ಗುಂಪು ಅಲೋಹವಾಗಿದೆ?
ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್
ಬಿ) ತಾಮ್ರ, ಅಲ್ಯುಮಿನಿಯಂ, ಬ್ರೋಮಿನ್, ಗಂಧಕ
ಸಿ) ಮೆಗ್ನಿಷಿಯಂ, ಸೋಡಿಯಂ, ಗಂಧಕ, ಕಾರ್ಬನ್
ಡಿ) ಸೀಸ, ಸತು, ಗಂಧಕ, ಬ್ರೋಮಿಯಮ್
ಉತ್ತರ:– (ಎ)ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್

20) ಮಾನವನ ಜಠರವು ....ಉತ್ಪಾದಿಸುತ್ತದೆ. ಹಾಗೂ ಅದೂ ಜೀರ್ಣಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.
ಎ) ಆಮ್ಲಜನಕ ಬಿ) ಸಾರಜನಕ
ಸಿ) ಹೈಡ್ರೋಕ್ಲೋರಿಕ್ ಆಮ್ಲ ಡಿ) ಪೊಟಾಷಿಯಂ ಸಲ್ಫೇಟ್
ಉತ್ತರ:– (ಸಿ) ಹೈಡ್ರೋಕ್ಲೋರಿಕ್ ಆಮ್ಲ

21) "ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ." ಇದು ಯಾವ ನಿಯಮ?
ಎ) ಗುರುತ್ವಾಕರ್ಷಣ ನಿಯಮ
ಬಿ) ನ್ಯೂಟನನ ಮೊದಲ ನಿಯಮ
ಸಿ) ರಾಶಿ ಸಂರಕ್ಷಣೆ ನಿಯಮ (ಡಿ) ಹೊಸ ವಿಕಿರಣ ನಿಯಮ
ಉತ್ತರ:– (ಸಿ) ರಾಶಿ ಸಂರಕ್ಷಣೆ ನಿಯಮ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

23) ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ ಯಾವುದು? ವಿಭವಾಂತರವನ್ನು ಅಳೆಯಲು ಬಳಸುವ ಸಾಧನವನ್ನು ಹೆಸರಿಸಿ.
ಉತ್ತರ:– (ಜೂನ್ 2019)
* ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ :– ವೋಲ್ಟ್
* ವಿಭವಾಂತರವನ್ನು ಅಳೆಯಲು ಬಳಸುವ ಸಾಧನ:– ವೋಲ್ಟ್ ಮೀಟರ್

24) ಮಾನವ ಹೃದಯದ ಛೇದ ನೋಟದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ
ಉತ್ತರ:–



25) ಒಂದು ಆಟೋಮೊಬೈಲ್ ವಾಹನದಲ್ಲಿ ಹಿನ್ನೋಟವನ್ನು ಪಡೆಯಲು ಉಪಯೋಗಿಸಿದ ಪೀನ ದರ್ಪಣದ ವಕ್ರತಾ ತ್ರಿಜ್ಯವು 3.00 m ಇದೆ. ಒಂದು ವೇಳೆ ಬಸ್ಸು ದರ್ಪಣದಿಂದ 5.00 m ದೂರದಲ್ಲಿ ಇದ್ದರೆ ಪ್ರತಿಬಿಂಬದ ಸ್ಥಾನ, ಸ್ವಭಾವ ಮತ್ತು ಗಾತ್ರವನ್ನು ಕಂಡುಹಿಡಿಯಿರಿ

ಪರಿಹಾರ : ವಕ್ರತಾ ತ್ರಿಜ್ಯ $R = +3.00$ m
ವಸ್ತು ದೂರ $u = -5.00$ m
ಪ್ರತಿಬಿಂಬ ದೂರ $v = ?$
ಪ್ರತಿಬಿಂಬದ ಎತ್ತರ $h' = ?$

ಸಂಗಮ ದೂರ

$$f = \frac{R}{2} = \frac{3.00}{2} = +1.50\text{m}$$

$\frac{1}{v} + \frac{1}{u} = \frac{1}{f}$ ಆಗಿರುವುದರಿಂದ
ಅಥವಾ,

$$\frac{1}{v} = \frac{1}{f} - \frac{1}{u} = \frac{1}{1.50} - \frac{1}{(-5.00)} = \frac{1}{1.50} + \frac{1}{5.00}$$

$$= \frac{5.00+1.50}{7.50}$$

$$v = \frac{+7.50}{6.50} + 1.15\text{m}$$

ಪ್ರತಿಬಿಂಬವು ದರ್ಪಣದ ಹಿಂದೆ 1.15 m ದೂರದಲ್ಲಿದೆ.
ವರ್ಧನೆ,

$$m = \frac{h'}{h} = \frac{v}{u} = -\frac{1.15m}{-5.00m} = +0.23$$

ಪ್ರತಿಬಿಂಬವು ಮಿಥ್ಯ, ನೇರ ಮತ್ತು ಗಾತ್ರದಲ್ಲಿ 0.23 ಅಂಶದಷ್ಟು ಚಿಕ್ಕದಾಗಿದೆ.

26) ಈ ಕೆಳಗಿನ ಯಾವುದೆಲ್ಲವೂ ಭೌತಿಕ ಕ್ರಿಯೆ ಅಥವಾ ರಾಸಾಯನಿಕ ಕ್ರಿಯೆಗಳಾಗಿವೆ ಎಂಬುದನ್ನು ತಿಳಿಸಿ,
1) ಪೆಟ್ರೋಲಿಯಂ ಅನಿಲ ದಹನ
2) ಪೆಟ್ರೋಲ್ ಬಾಷ್ಪೀಕರಿಸುವಿಕೆ
3) ಕಬ್ಬಿಣವನ್ನು ಕೆಂಪಗೆ ತ್ಕಾಯಿಸುವುದು
4) ಹಾಲು ಮೊಸರಾಗುವಿಕೆ
5) ಅಮೋನಿಯಂ ಕ್ಲೋರೈಡ್‌ನ ಸಂಸ್ಕರಣೆ
6) ನೀರು ಮಂಜುಗಡ್ಡೆಯಾಗುವುದು

ಉತ್ತರ: ಭೌತಿಕ ಕ್ರಿಯೆ: (1) ಪೆಟ್ರೋಲ್ ಬಾಷ್ಪೀಕರಿಸುವಿಕೆ
(2) ಕಬ್ಬಿಣ ಕೆಂಪಗೆ ಕಾಯಿಸುವುದು
(3) ನೀರು ಮಂಜುಗಡ್ಡೆಯಾಗುವುದು
ರಾಸಾಯನಿಕ ಕ್ರಿಯೆ: (1) ಪೆಟ್ರೋಲಿಯಂ ಅನಿಲದ ದಹನ
(2) ಹಾಲು ಮೊಸರಾಗುವಿಕೆ
(3) ಅಮೊನಿಯಂಅ ಕ್ಲೋರೈಡ್‌ನ ಸಂಸ್ಕರಣೆ

27) ಸಣ್ಣ ಕರಳಿನ ಬಿತ್ತಿಯಲ್ಲಿರುವ ಗ್ರಂಥಿಗಳು ರಸವನ್ನು ಸ್ರವಿಸುತಿದ್ದು ಅವು ಸ್ರವಿಸುವ ಕಿಣ್ವಗಳು ಈ ಕೆಳಗಿನವುಗಳನ್ನು ಏನನ್ನಾಗಿ ಪರಿವರ್ತಿಸುತ್ತವೆ?
ಅ) ಪ್ರೋಟೀನ್ (ಬ) ಸಂಕೀರ್ಣ ಕಾರ್ಬೋಹೈಡ್ರೇಟ್
(ಕ) ಕೊಬ್ಬು
ಉತ್ತರ:– ಸಣ್ಣ ಕರಳಿನ ಬಿತ್ತಿಯಲ್ಲಿರುವ ಗ್ರಂಥಿಗಳು ರಸವನ್ನು ಸ್ರವಿಸುತಿದ್ದು ಅವು ಸ್ರವಿಸುವ ಕಿಣ್ವಗಳು
ಅ) ಪ್ರೋಟೀನ್‌ಗಳನ್ನು ಅಮಿನೋ ಆಮ್ಲಗಳಾಗಿ ಪರಿವರ್ತಿಸುತ್ತದೆ
ಬಿ) ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳನ್ನು ಗ್ಲುಕೋಸ್‌ಗಳಾಗಿ ಪರಿವರ್ತಿಸುತ್ತವೆ
ಕ) ಕೊಬ್ಬನ್ನು ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್ ಆಗಿ ಪರಿವರ್ತಿಸುತ್ತವೆ.

(ಮುಂದುವರಿಯುವುದು)

ಪಿಯುಸಿ/ಸಿಇಟಿ ಪರೀಕ್ಷೆ — CHEMISTRY

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MULTIPLE CHOICE QUESTIONS

1) Which of the following set of polymers are used as fibres?
(i) Teflon (ii) Starch
(iii) Terylene (iv) Orlon
Choose the correct answer:
(a) (i) and (ii) (b) (ii) and (iii)
(c) (iii) and (iv) (d) (i) and (iv)
Ans:-C
Expln:- Terylene and Orlon are classified as fibres due to their structural properties and usability in fabric production. Terylene, a type of polyester, is widely used for making textiles due to its strength, durability, and resistance to stretching. Orlon, a type of acrylic polymer, is also used as a fibre because of its wool-like texture and lightweight nature. Teflon and starch do not have fibre-forming characteristics, which makes them unsuitable in this context.

2) Match List-I with List-II and select the correct option:

List-I (Molecule / ion)	List-II (Bond order)
1. NO	i. 15
2. CO	ii. 2.0
3. O_2^-	iii. 2.5
4. O_2	iv. 3.0

Choose the correct answer from the options given below. **(a) a-iv, b-iii, c-i, d-ii**
(b) a-ii, b-i, c-iv, d-iii
(c) a-iii, b-iv, c-i, d-ii
(d) a-iii, b-ii, c-i, d-iv
Ans. C
Solution :

$$\text{Bond order} = \frac{1}{2}[\text{no. of bonding} - \text{no. of bonding electrons}]$$

For NO molecule
$BO = (8\text{-}3)/2 = 2.5$

$$CO - \frac{1}{2}[10-4] = 3.0$$

$$O_2^{-1} - \frac{1}{2}[6-3] = 1.5$$

$$O_2 - \frac{1}{2}[6-2] = 2.0$$

3) Which of the following vitamins is not stored in the adipose tissue?
a) D b) E
c) A d) B_6
Answer: (d)
Expln:- Adipose tissue stores those vitamins which are fat-soluble. Among the given vitamins, only A, D and E are fat-soluble. Vitamin B_6 is water-soluble and hence, is not stored in adipose tissue.

4) Hypothyroidism is caused by the deficiency of:
a) Thyroxine b). Glucocorticoid
c). Vitamin B-12 d) Adrenalin
Answer: (a)
Expln:- Hypothyroidism is caused by the deficiency of the hormone thyroxine which is produced by the thyroid gland.

5) The correct statement is
a) cyclohexadiene and cyclohexene cannot be isolated with ease during controlled hydrogenation of benzene
b) One mole each of benzene and hydrogen when reacted gives 1/3 mole of cyclohexene and 2/3 mole unreacted hydrogen
c) Hydrogenation of benzene to cyclohexene is an endothermic process
d) It is essier to hydrogenate benzene when compared to cyclohexene to cyclohexene.
Ans:- a
Expln; during the hydrogenation of benzene, only cyclohexene can be isolated.



6) Which of the following is NOT a characteristic of a covalent compound?
a) Low melting point b) No definite geometry
c) Insoluble in polar solvent
d) Small difference in electronegativity between the combining atoms
Ans:- (b)
Expln:-: A key characteristic of a covalent compound is that it has a definite geometry due to the directional nature of the covalent bonds.

7) The biodegradable polymer obtained by polymerisation of Glycine and Aminocaproic acid is:.............
(a) Nylon 6 b) PHBV
(c) Nylon 2 – Nylon 6 (d) Nylon 6, 10
Ans:- (C)
Expln:- *Nylon 2-nylon-6 is a copolymer of glycine and aminocaproic acid.
*Glycine is an alpha amino acid.
*Aminocaproic acid is also known as 6-aminohexanoic acid.
*The chemical formula for glycine is H2N-CH2-COOH.

8) The compound that reacts the fastest with sodium methoxide is



Ans:- (a)
Expln:- electron withdrawing groups ($-NO_2$) increase the reactivity of the aryl halide (-ArCI). Hence, 2-4-dinitrochlorobenzene reacts fastest.

ಕೋರ್ಟ್‌ಗಳಿಗೆ ಬಾಂಬ್ ಬೆದರಿಕೆ

ಬೆಳಗಾವಿ, ಹಾಸನ, ಕಲಬುರಗಿಯಲ್ಲಿ ಆತಂಕ • ನ್ಯಾಯಾಲಯ ಕಲಾಪಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಳಗಾವಿ/ಹಾಸನ/ಕಲಬುರಗಿ: ರಾಜ್ಯದ ಮೂರು ಜಿಲ್ಲೆಗಳಲ್ಲಿ ಮಂಗಳವಾರ ಜಿಲ್ಲಾ ನ್ಯಾಯಾಲಯಗಳಿಗೆ ಬಾಂಬ್ ಬೆದರಿಕೆ ಕರೆ ಬಂದಿದ್ದು, ತಪಾಸಣೆ ಬಳಿಕ ಹುಸಿ ಎಂದು ದೃಢಪಟ್ಟಿದೆ.

ಆದರೆ, ಬೆದರಿಕೆ ಕರೆಯಿಂದಾಗಿ ಬೆಳಗಿನ ಹೊತ್ತು ಕಲಾಪ ವ್ಯತ್ಯಯವಾಯಿತು, ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಕೆಲ ದಿನಗಳ ಹಿಂದೆಯೂ ವಿವಿಧ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಬೆದರಿಕೆ ಕರೆ ಬಂದಿತ್ತು.

ಬೆಳಗಾವಿ ವರದಿ: ಇಲ್ಲಿನ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ಕೋರ್ಟ್‌ಗೆ ಬಾಂಬ್ ಕುರಿತು ಇ-ಮೇಲ್ ಬೆದರಿಕೆ ಸಂದೇಶ ಬಂದಿದ್ದು, ಮಧ್ಯಾಹ್ನದ ಎಲ್ಲ ಕಲಾಪವನ್ನು ಸ್ಥಗಿತಗೊಳಿಸಲಾಯಿತು.

ಸಿಬ್ಬಂದಿಯನ್ನು ಹೊರಗೆ ಕಳುಹಿಸಿದ ಪೊಲೀಸರು ಬಾಂಬ್ ನಿಷ್ಕ್ರಿಯ ದಳ, ಶ್ವಾನದಳದ ನೆರವಿನಲ್ಲಿ ಸುಮಾರು ಮೂರು ತಾಸು ಪರಿಶೀಲನೆ ನಡೆಸಿದರು. 'ಪರಿಶೀಲನೆ ಬಳಿಕ ಹುಸಿ ಎಂದು ಗೊತ್ತಾಗಿದೆ' ಎಂದು ಡಿಸಿಪಿ ನಾರಾಯಣ ಭರಮನಿ ತಿಳಿಸಿದರು.

'ಆರ್‌ಡಿಎಕ್ಸ್ ಬಾಂಬ್ ಸ್ಫೋಟಿಸುವ ಬೆದರಿಕೆ'

ಹಾಸನ ವರದಿ: ನಗರದ ಜಿಲ್ಲಾ ನ್ಯಾಯಾಲಯ ಸಂಕೀರ್ಣಕ್ಕೆ ಮಂಗಳವಾರ 3ನೇ ಬಾರಿಗೆ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿದ್ದು, ಪೊಲೀಸರ ತಪಾಸಣೆಯ ನಂತರ ಬೆದರಿಕೆ ಹುಸಿ ಎಂಬುದು ಗೊತ್ತಾಯಿತು.

'ಬೆಳಿಗ್ಗೆ 5.40ಕ್ಕೆ ಕೋರ್ಟ್‌ನ ಅಧಿಕೃತ ಇ-ಮೇಲ್ ಐಡಿಗೆ ಸಂದೇಶ ಬಂದಿದ್ದು, 'ಬೆಳಿಗ್ಗೆ 11.50ಕ್ಕೆ ಸ್ಪೈನಲ್ ವಿಷಾನಿಲ ತುಂಬಿದ ಆರ್‌ಡಿಎಕ್ಸ್ ಬಾಂಬ್ ಸ್ಫೋಟಗೊಳ್ಳಲಿದೆ ಎಂದು' ಎಂದು ಬೆದರಿಕೆ ಹಾಕಲಾಗಿತ್ತು.

ಭಯೋತ್ಪಾದನೆ, ಕಾನೂನು ಹಾಗೂ 26/11 ಮುಂಬೈ ದಾಳಿಯ ಸಂದರ್ಭದ ವಿಚಾರಗಳನ್ನು ಉಲ್ಲೇಖಿಸಿ, ಅಜ್ಮಲ್ ಕಸಬ್ ಹೆಸರನ್ನೂ ಪ್ರಸ್ತಾಪಿಸಲಾಗಿತ್ತು.

ಬೆಳಗಾವಿಯಲ್ಲಿ ವಕೀಲರು ಹಾಗೂ ಕಕ್ಷಿದಾರರು ಕಲಾಪದಿಂದ ಹೊರಬಂದರು

ಡಿಎಆರ್ ಡಿವೈಎಸ್ಪಿ ಪಾಲಾಕ್ಷ ನೇತೃತ್ವದಲ್ಲಿ ಶ್ವಾನದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ತೀವ್ರ ಪರಿಶೀಲನೆ ನಡೆಸಿದರು. ಹುಸಿ ಎಂದು ಸಾಬೀತಾದ ಬಳಿಕ ಕೆಲಸಗಳನ್ನು ಪುನರಾರಂಭಿಸಲಾಯಿತು.

ಡಿ.15ರಂದು ಜಿಲ್ಲಾಧಿಕಾರಿ ಕಚೇರಿಯ ಇ-ಮೇಲ್‌ಗೆ, ಜನವರಿ 6 ಮತ್ತು ಫೆ.16 ರಂದು ಕೋರ್ಟ್‌ನ ಅಧಿಕೃತ ಇ-ಮೇಲ್ ಐಡಿಗೆ ಬೆದರಿಕೆ ಸಂದೇಶ ಬಂದಿತ್ತು.

ಕಲಬುರಗಿ ವರದಿ: ಬಾಂಬ್ ಬೆದರಿಕೆ ಕರೆ ಹಿನ್ನೆಲೆಯಲ್ಲಿ ನಗರದ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಆತಂಕ ಆವರಿಸಿತ್ತು. ಶ್ವಾನದಳ, ಬಾಂಬ್ ನಿಷ್ಕ್ರಿಯ ದಳ, ವಿಧ್ವಂಸಕ ಕೃತ್ಯ ತಡೆ ತಂಡದವರು ಪರಿಶೀಲಿಸಿದರು.

ಬೆದರಿಕೆ ಕಾರಣದಿಂದ ಕೋರ್ಟ್ ಕಲಾಪ ಅರ್ಧ ದಿನ ಸ್ಥಗಿತಗೊಂಡಿತು.

ಮರು ಸಮೀಕ್ಷೆ ಮುಂದುವರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ದೇವದಾಸಿಯರ ಮರು ಸಮೀಕ್ಷೆ ಸಮರ್ಪಕವಾಗಿ ನಡೆದಿಲ್ಲ, ಇದರಿಂದಾಗಿ ಅರ್ಹ ಮತ್ತು ನೈಜ ಸಂತ್ರಸ್ತರನ್ನು ಗಣತಿಯಿಂದ ಹೊರಗುಳಿದಿದ್ದಾರೆ ಎಂದು ಆರೋಪಿಸಿ ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್ (ಎನ್‌ಎಫ್‌ಐಡಬ್ಲ್ಯು) ರಾಜ್ಯ ಸಮಿತಿ ನೇತೃತ್ವದಲ್ಲಿ ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

ಸರ್ಕಾರವು ಮಾಜಿ ದೇವದಾಸಿಯರ ಮರುಸಮೀಕ್ಷೆ ಮುಂದುವರಿಸಬೇಕು. ಅರ್ಹ ಸಂತ್ರಸ್ತೆಯರು ಮತ್ತು ಅವರ ಕುಟುಂಬದವರ ಸೇರ್ಪಡೆಯಾಗುವಂತೆ ಪಾರದರ್ಶಕವಾಗಿ ನಡೆಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಎನ್‌ಎಫ್‌ಐಡಬ್ಲ್ಯು ಅಧ್ಯಕ್ಷೆ ಎ.ಜ್ಯೋತಿ ಮಾತನಾಡಿ, 'ಸರ್ಕಾರಕ್ಕೆ ಸಲ್ಲಿಸಿರುವ ಅಪೂರ್ಣ ವರದಿಯ ಆಧಾರದಲ್ಲಿ ಮಾಜಿ ದೇವದಾಸಿಯರ ಕುರಿತ ಯೋಜನೆಗಳಿಗೆ ಮತ್ತು ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಗುರುತಿಸಬಾರದು. ಮರುಸಮೀಕ್ಷೆ ನಡೆಸಿ ಪಟ್ಟಿ ಅಂತಿಮಗೊಳಿಸುವಾಗ ಮಾಜಿ ದೇವದಾಸಿಯರಿಗೆ ವಯಸ್ಸಿನ ಮಾನದಂಡ ವಿಧಿಸಬಾರದು' ಎಂದರು.

ದೇವದಾಸಿ ಪದ್ಧತಿಗೆ ಬಲಿಯಾದ ಎಲ್ಲ ಕುಟುಂಬಗಳ ಸಮೀಕ್ಷೆ ನಡೆಸಿ, ಅವರ 3 ತಲೆಮಾರುಗಳ ಎಲ್ಲರೂ ಪಟ್ಟಿಯಲ್ಲಿ ಸೇರುವಂತೆ ಕ್ರಮ ವಹಿಸಬೇಕು. ಸಮೀಕ್ಷೆಗೆ ಆಗತ್ಯವಾದ ಮಾಜಿ ದೇವದಾಸಿಯರ ಮತ್ತು ಅವರ ಕುಟುಂಬದವರ ದಾಖಲೆಗಳನ್ನು ಆದ್ಯತೆಯ ಮೇಲೆ ಒದಗಿಸುವಂತೆ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ನಿರ್ದೇಶನ ನೀಡಬೇಕು. ಮರುಸಮೀಕ್ಷೆಯ ಮಾಹಿತಿಯನ್ನು ಅಂಗನವಾಡಿ ಕೇಂದ್ರಗಳಲ್ಲಿ ಪ್ರದರ್ಶಿಸಬೇಕು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಸಾತಿ ಸುಂದರೇಶ್, ಎನ್‌ಎಫ್‌ಐಡಬ್ಲ್ಯು ಕಾರ್ಯದರ್ಶಿ ಕೆ. ರೇಣುಕಾ, ರಾಜ್ಯ ಮಂಡಳಿ ಸದಸ್ಯರಾದ ಶೇಖಮ್ಮ, ದುರ್ಗಾ, ತಾಯಮ್ಮ, ಅಕ್ಕಮ್ಮ, ಮಾಲಾ, ಚಂದ್ರಕಲಾ, ಲಿಂಗತ್ವ ಅಲ್ಪಸಂಖ್ಯಾತರ ಸಂಘಟನೆಯ ಹೋರಾಟಗಾರರಾದ ಪ್ರಕಾಶ್ ರಾಜ್, ಮಲ್ಲು ಕುಂಬಾರ್, ಎನ್. ವೈಶಾಲಿ ಭಾಗವಹಿಸಿದ್ದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್ ರಾಜ್ಯ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು – ಪ್ರಜಾವಾಣಿ ಚಿತ್ರ

ವಿಧಾನಸೌಧ ವೀಕ್ಷಣೆ

ಪ್ರಜಾವಾಣಿ ಚಿತ್ರ

ಸೊರಬ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲೆಗಳಲ್ಲಿ ಓದಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಮತ್ತು ಅಲ್ಲಿನ ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರು ಮಂಗಳವಾರ ವಿಧಾನಸೌಧ ವೀಕ್ಷಣೆ ಬಳಿಕ, ಗಾಂಧಿ ಪ್ರತಿಮೆ ಎದುರು ಛಾಯಾಚಿತ್ರ ತೆಗೆಸಿಕೊಂಡರು

₹33.34 ಕೋಟಿ ಸ್ಟೈಫಂಡ್ ಕಬಳಿಕೆ: ದೂರು

ಬೆಂಗಳೂರು: ವೈದ್ಯಕೀಯ ಪದವಿ ವಿದ್ಯಾರ್ಥಿಗಳ ₹33.34 ಕೋಟಿ ಮೊತ್ತ ದಷ್ಟು ಸ್ಟೈಫಂಡ್ ಕಬಳಿಸಿದ್ದ ಪ್ರಕರಣದಲ್ಲಿ ಹೈದರಾಬಾದ್ ಎಜುಕೇಶನ್ ಸೊಸೈಟಿಯ ಭೀಮಾಶಂಕರ್ ಬಿಳಗುಂಡಿ, ಮಲ್ಲಣ್ಣ ಎಸ್.ಮದ್ದಾರ್ಕಿ ವಿರುದ್ಧ ಜಾರಿ ನಿರ್ದೇಶನಾಲಯವು ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ.

ಮಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಮಂಗಳವಾರ ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ.

ಹೈದರಾಬಾದ್ ಎಜುಕೇಶನ್ ಸೊಸೈಟಿಯ 'ಮಹದೇವಪ್ಪ ರಾಂಪುರೆ ವೈದ್ಯಕೀಯ ಕಾಲೇಜ್'ನ ವಿದ್ಯಾರ್ಥಿಗಳಿಗೆ ಸಿಗಬೇಕಾಗಿದ್ದ ಸ್ಟೈಫಂಡ್ ಅನ್ನು ಆರೋಪಿಗಳು ಕಬಳಿಸಿರುವುದು ಸೇರಿ ಹಲವು ಆರೋಪಗಳನ್ನು ಇ.ಡಿ. ಮಾಡಿದೆ.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC)

ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560010
ದೂರವಾಣಿ: 080–23157189, ಫ್ಯಾಕ್ಸ್: 080–23301683
ವೆಬ್‌ಸೈಟ್: www.karnataka.gov.in/gttc ಇ–ಮೇಲ್: gttc.projects@karnataka.gov.in
ಸಂ: ಜಿಟಿಟಿಸಿ/ಪ್ರಾಯೋಜನೆ/ನಿರ್ಮಾಣ/ಪಿಎಂಸಿ/ಬಿಡ್–159/2025–26 ದಿನಾಂಕ: 02.03.2026

ಇ–ಟೆಂಡರ್ ಪ್ರಕಟಣೆ

ಜಿಟಿಟಿಸಿಯ ಹೊಸ ಯೋಜನೆ ಕಾಮಗಾರಿಗಳ ಮೇಲ್ವಿಚಾರಣೆ, ಕಾರ್ಯಾಚರಣೆ ಮತ್ತು ಗುಣಮಟ್ಟ ನಿಯಂತ್ರಣಕ್ಕಾಗಿ ಅರ್ಹ ಯೋಜನಾ ನಿರ್ವಹಣೆ ಕನ್ಸಲ್ಟೆಂಟ್ (PMC) (ಮೂರನೇ ವ್ಯಕ್ತಿ ಪರಿಶೀಲನೆ) ರಿಂದ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳು ಕೆಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 04.03.2026** ರಿಂದ ಲಭ್ಯವಿರುವುದು. ಬಿಡ್ ಪೂರ್ವ ಸಭೆಯ **ದಿನಾಂಕ: 12.03.2026** ರಂದು. ದಾಖಲೆಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 20.03.2026 ಸಂಜೆ 5.30 ಗಂಟೆಯವರೆಗೆ.** ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in** ಮೂಲಕ ಅಥವಾ ಸಹಾಯಕ ದೂರವಾಣಿ ಸಂಖ್ಯೆ: **+91 80 23010900 +91 80 23010901** ಮೂಲಕ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.

ಸಂಖ್ಯೆ: ಕಾಇಂ:ಗ್ರಾಕುನೀ&ನೈವಿ:ದಾ:ಕಿಇಂ–1:ಹೊ.ಗು.ಸಿ:2025–26/1825
ದಿನಾಂಕ: 02/03/2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ದಾವಣಗೆರೆ ಇವರ ವ್ಯಾಪ್ತಿಯಲ್ಲಿ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ದ್ವಿಲಕೋಟೆ ಪದ್ಧತಿಯಲ್ಲಿ ಸೇವಾ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಸಂಸ್ಥೆ/ಏಜೆನ್ಸಿಯಿಂದ kppp ಪೋರ್ಟಲ್ ಮುಖಾಂತರ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ದಾವಣಗೆರೆ ಜಿಲ್ಲೆಯ ವೃತ್ತ ಕಛೇರಿ, ವಿಭಾಗ ಮತ್ತು ಉಪ–ವಿಭಾಗಗಳಲ್ಲಿ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಸಲುವಾಗಿ ಅರ್ಹ ಏಜೆನ್ಸಿಯನ್ನು ನೇಮಿಸಲು ಟೆಂಡರ್ ಕರೆಯಲಾಗಿದೆ.

ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 16–03–2026ರ ಸಂಜೆ 17–00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17–03–2026ರ ಸಂಜೆ 17–15 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ: 20–03–2026ರ ಬೆಳಿಗ್ಗೆ 11–00 ಗಂಟೆಗೆ

ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ವಿವರಗಳನ್ನು ಮತ್ತು ನಿಬಂಧನೆಗಳನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ: 08192–262126 ಸಂಪರ್ಕಿಸಿ ಅಥವಾ http// kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/788/ ಕೆಎಸ್‌ಎಂಸಿಎ/2025–26

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈ. ವಿಭಾಗ, ದಾವಣಗೆರೆ.

(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:25/2025–26 ದಿನಾಂಕ:02.03.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಹಾಸನ ಉಪ ವಿಭಾಗ ವ್ಯಾಪ್ತಿಯ 2025–2026 ನೇ ಸಾಲಿನ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆಯಡಿಯಲ್ಲಿ ಟೆಂಡರ್ ಕರೆಯಲಾದ ಕೆಳಕಂಡ ಕಾಮಗಾರಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಕೆ.ಪಿ.ಪಿ.ಪಿ ಅಡಿ kw-3 & kw-4, ರ ರೀತ್ಯಾ ಅಂತರ್ಜಾಲದಲ್ಲಿ ದಿನಾಂಕ:02.03.2026 ರಿಂದ ದಿ:09.03.2026 ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.inನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:09.03.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ:07.03.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:10.03.2026 ರಂದು ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಕ್ರ.ಸಂ.ಇಂಡೆಂಟ್ ಸಂಖ್ಯೆ 01.RDPR/2025-26/BD/WORK_INDENT 25163 ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ Rs.146.82 lakhs 02.RDPR/2025-26/BD/WORK_INDENT 25152 ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ Rs.89.44 lakhs 03.RDPR/2025-26/BD/WORK_INDENT 25143 ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ Rs.94.09 lakhs

ಸಹಿ/–ಕಾರ್ಯಪಾಲಕ ಇಂಜಿನಿಯರ್, ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/1133/ಕೆಎಸ್‌ಎಂಸಿಎ/2025–26

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ಟೆಂಡರ್ ಆಹ್ವಾನ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆವಿಕಂ ರವರು ವಿಚಾರಣೆ ಸಂಖ್ಯೆ BESCOM/2025-26/EL/WORK_INDENT1045 ಅಡಿಯಲ್ಲಿ "System strengthening works of conversion of existing LT Overhead line into Aerial Bunched (AB) cable at various hazardous loations in W-6 subdivision of R.R Nagar division, Bengaluru West circle, BMAZ (South), BESCOM on percentage basis quoting". ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ.

ಬಿಡ್ ದಾಖಲೆಗಳ ಲಭ್ಯತೆ: 05.03.2026 ರ ನಂತರ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 06.04.2026 @ 15:00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವುದು: 07.04.2026 @ 15:30 ಗಂಟೆಗೆ. ಬಿಡ್ ಪೂರ್ವ–ಭಾವಿ ಸಭೆ: 16.03.2026 @ 11:00 ಗಂಟೆಗೆ. ಸ್ಥಳ: ಸಭಾಂಗಣ ಕೊಠಡಿ, 3ನೇ ಮಹಡಿ, ಬೆಳಕು ಭವನ, ನಿಗಮ ಕಛೇರಿ, ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು–560 001. ಬಿಡ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆಪಿಪಿಪಿ) ವೆಬ್‌ಸೈಟ್ http://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಅಗತ್ಯವಿರುವ ಬೆಂಬಲ ಪಡೆಯಬಹುದು. ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು +91 9240214000/+91 9240214001/+91–8046010000/+91–8068948777. ಇಮೇಲ್: support@eprochelpdesk.com. ಆಸಕ್ತ ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆಪಿಪಿಪಿ) ನಲ್ಲಿ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು, ವಿದ್ಯುತ್., ಯೋಜನೆಗಳು, ನಿಗಮ ಕಛೇರಿ, ಬೆವಿಕಂ, ಕೆ ಆರ್ ವೃತ್ತ, ಬೆಂಗಳೂರು – 560001.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,

ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ನೆಲಮಹಡಿ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001 ದೂರವಾಣಿ ಸಂಖ್ಯೆ: 080–22866066, 080–22866046
ಇ–ಮೇಲ್ ವಿಳಾಸ: dirdwdscka@gmail.com, dir-dwdsc-ka@nic.in

No: DEDSC/2025-26/IND0124(Call-2) Dated: 02-03-2026

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮುಖಾಂತರ)

2025–26ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಹಾಗೂ ನಂತರದ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ 235 ಟಾಕಿಂಗ್ ಲ್ಯಾಪ್ ಟಾಪ್‌ಗಳನ್ನು ಖರೀದಿಸಿ ವಿತರಿಸಲು ಇ–ಪ್ರೊಕ್ಯೂರ್ ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬಿಡ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 10–03–2026 ಮತ್ತು ಸಮಯ ಪೂರ್ವಾಹ್ನ 11:00 ಗಂಟೆಯ ವರೆಗೆ, ದಿನಾಂಕ:11–03–2026 ಪೂರ್ವಾಹ್ನ 11:01 ಗಂಟೆಗೆ ತಾಂತ್ರಿಕ ಬಿಡ್ ಮತ್ತು ದಿನಾಂಕ:12–03–2026 ಪೂರ್ವಾಹ್ನ 11:30 ಗಂಟೆಗೆ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಯಾವುದೇ ಕಾರಣ ನೀಡದೇ ಎಲ್ಲಾ ಆಫರ್ಸ್/ಬಿಡ್‌ಗಳನ್ನು ಸ್ವೀಕರಿಸುವ, ತಿರಸ್ಕರಿಸುವ, ಮಾರ್ಪಡಿಸುವ ಮತ್ತು ಮರುಟೆಂಡರ್ ಆಹ್ವಾನಿಸುವ ಹಕ್ಕನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ. ಟೆಂಡರ್ ವಿವರಗಳನ್ನು www.kppp.karnataka.gov.in ಜಾಲತಾಣದಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿ.ವಿ.ಗೋಪುರ, ಡಾ॥ ಬಿ.ಅರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇವರನ್ನು ದೂರವಾಣಿ ಸಂಖ್ಯೆ:080–22866066, 22860907 ಹಾಗೂ ಇಲಾಖೆಯ ಜಾಲತಾಣ www.dwdsc.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.

DIPR/CP/5968/Zen/2025-26

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
3ನೇ ಮಹಡಿ, ಟಿ.ಟಿ.ಎಂ.ಸಿ 'ಬಿ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027. ದೂರವಾಣಿ: 080–22223753/58.

ಸಂ.:ಡಿಡಿಯುಟಿಟಿಎಲ್/ತಾ.ವಿ/ಟ್ರಟ/2025–26/700 ದಿನಾಂಕ: 03–03–2026

ಪಾವತಿ ಮತ್ತು ನಿಲುಗಡೆ ಇ–ಹರಾಜು ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್, ಬೆಂಗಳೂರು – 27 ಈ ಸಂಸ್ಥೆಯ ವತಿಯಿಂದ 1) ಮೈಸೂರು ಜಿಲ್ಲೆ, ಬಂಡಿಪಾಳ್ಯ ನಂಜನಗೂಡು ಮುಖ್ಯರಸ್ತೆ, ನಾಚನಹಳ್ಳಿ ಗ್ರಾಮದ ಆವರಣದಲ್ಲಿರುವ ಒಂದು (01) ಸ್ಥಿರ ನಿಲುಗಡೆ ಜಾಗಕ್ಕೆ ಎರಡು ವರ್ಷಗಳ ಅವಧಿಗೆ ಮತ್ತು ವಿಜಯ ನಗರ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಅಮರಾವತಿ ಗ್ರಾಮದ ಆವರಣದಲ್ಲಿರುವ ಸ್ಥಿರ ನಿಲುಗಡೆ ಜಾಗಕ್ಕೆ 2 / 3 / 5 ವರ್ಷಗಳ ಅವಧಿಗೆ **ಗುತ್ತಿಗೆ ಆಧಾರದ ಮೇಲೆ ಹೇಗಿದೆಯೋ ಹಾಗೆ ಆಧಾರದ** ಮೇಲೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪರವಾನಗಿ ನೀಡಿ, ಸರಕು ಸಾಗಾಣಿಕೆ ವಾಹನಗಳು / ಟ್ರಕ್‌ಗಳಿಂದ ನಿಲುಗಡೆ ಶುಲ್ಕವನ್ನು ಸಂಗ್ರಹಿಸಲು ಆಸಕ್ತ ಏಜೆನ್ಸಿಗಳು / ವ್ಯಕ್ತಿಗಳು / ಕಂಪನಿಗಳು / ಇಲಾಖೆಗಳು ಭಾಗವಹಿಸುವಂತೆ ಕೋರಿ ಹರಾಜನ್ನು ಆಹ್ವಾನಿಸಲಾಗಿದೆ.

ಸದರಿ ಹರಾಜುಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಇ–ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಯಾವುದಾದರು ತಿದ್ದುಪಡಿ / ಮಾರ್ಪಾಡುಗಳು ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಡಿಡಿಯುಟಿಟಿಎಲ್, ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಿಂದ, ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಡಿಡಿಯುಟಿಟಿಎಲ್

ವಾಸಾಸಂಇ/ವಾ.ಪ್ರ/5975/ಅಡ್ವರ್ಟೋರ್/2025–26

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ,
ಕ್ಯಾನ್ಸರ್ ಸಂಶೋಧನೆ ಮತ್ತು ತರಬೇತಿ ಕೇಂದ್ರ (ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಪ್ರಾದೇಶಿಕ ಅರ್ಬುದ ಸಂಶೋಧನಾ ಮತ್ತು ಚಿಕಿತ್ಸಾ ಕೇಂದ್ರ
ಡಾ॥ ಎಂ.ಎಚ್. ಮರೀಗೌಡ ರಸ್ತೆ, ಬೆಂಗಳೂರು–560029
ದೂ: +91 080-2656 0722/2656 0723, 080-6669 7999

No:KMIO/SME(1)/TENDER/Nano Zoomer/493/2025-26 Date: 03-03-2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಇವರು, ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡವುಗಳಿಗಾಗಿ ದ್ವಿಲಕೋಟೆ ಬಿಡ್ ಪದ್ಧತಿಯಲ್ಲಿ ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

Sl No.	Tender No. & Date	Name of the Items
1	KMIO/SME(1)/TENDER/Nano Zoomer/493/2025-26, Dt: 03.03.2026	Supply, Installation & Commissioning of Nanozoomer S210 Digital slide Scanner(Proprietary) to the department of Pathology through LIC CSR fund KMIO, Bengaluru(Estimated Cost.1.89 Cr)
2	KMIO/SME(1)/TENDER/M.EQUIP/H&N/467/2025-26, Dt: 03.03.2026(CALL-2)	Supply, Installation of Medical Equipments to the Dept. of Head and Neck at KMIO, (Estimated Budget.1.6 Cr)
3	KMIO/SME(1)/TENDER/Accessories RD/497/2025-26, Dt: 03.03.2026	Supply, Installation & Commissioning of Radiation Protection Accessories for Intervenlional Radiology to the department of Radio diagnosis KMIO, Bengaluru (Estimated Cost.6.00 lakh)
4	KMIO/SME(1)/TENDER/M.Equip/452/2025-26, Dt: 03.03.2026(CALL-3)	Supply & Commissioning of Low Energy Linear Accelerator to the department of Radiation Oncology at KMIO, Bengaluru (Estimated Cost.18.00 Cr)
5	KMIO/SME(1)/TENDER/CT Scan 128 Slice/494/2025-26, Dt: 03.03.2026	Supply, Installation & Commissioning of 128 Slice CT Scanner to the department of Radio diagnosis KMIO, Bengaluru (Estimated Cost.12.00 Cr)
6	KMIO/SME(1)/TENDER/1000MA/495/2025-26, Dt: 03.03.2026	Supply, Installation & Commissioning of 1000MA X Ray Machine to the department of Radio diagnosis KMIO, Bengaluru (Estimated Cost.1.5 Cr)
7	KMIO/SME(1)/TENDER/Portable X Ray/496/2025-26, Dt: 03.03.2026	Supply, Installation & Commissioning of Portable X Ray Machine to the department of Radio diagnosis KMIO, Bengaluru (Estimated Cost.1 Cr)
8	KMIO/MRD/TENDER/Disposal of Old files/498/2025-26, Dt: 03.03.2026	Disposable of Inactive Old Case Sheets from the year 2017-2020 at KMIO

ಬಿಡ್ ದಾಖಲೆಗಳು ಆನ್‌ಲೈನ್‌ನಲ್ಲಿ ದೊರೆಯುವ ದಿನಾಂಕ: ಕ್ರಮ ಸಂಖ್ಯೆ: 01 ದಿನಾಂಕ: 06–03–2026 ರಿಂದ 13–03–2026ರ ವರೆಗೆ, ಕ್ರಮ ಸಂಖ್ಯೆ: 2, 3 & 4 ದಿನಾಂಕ: 06–03–2026 ರಿಂದ 23–03–2026ರ ವರೆಗೆ, ಕ್ರಮ ಸಂಖ್ಯೆ: 5 ರಿಂದ 8 ದಿನಾಂಕ: 06–03–2026 ರಿಂದ 06–04–2026ರ ವರಗೆ. ಬಿಡ್ಡರುಗಳು ಬಿಡ್‌ದಾಖಲೆಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ನೋಡಬಹುದು ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್‌ಗಳನ್ನು ಮತ್ತು ಶುಲ್ಕಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಬಹುದು. ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 13–03–2026, 23–03–2026 & 06–04–2026ರ ಸಂಜೆ 4:00 ಗಂಟೆಯವರೆಗೆ. ಟೆಂಡರ್ ಅಂಗೀಕಾರ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕಾರ/ತಿರಸ್ಕಾರ/ರದ್ದುಗೊಳಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

ಸಹಿ/–
ಆರ್ಥಿಕ ಸಲಹೆಗಾರರು

ಡಿಐಪಿಆರ್/ಎಸ್‌ಐ/5955/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/4059 2025–26/5042 ದಿನಾಂಕ:02.03.2026

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆಡಬ್ಲೂ– 4 ರಲ್ಲಿ ಲೆಕ್ಕ ಶಿರ್ಷಿಕೆ 4059– ಮಾನ್ಯ ಮುಖ್ಯ ಮಂತ್ರಿ ಮೂಲ ಸೌಕರ್ಯ ಅಭಿವೃಧ್ಧಿ ಯೋಜನೆ ಅಡಿ ಯಲ್ಲಿನ ಒಟ್ಟು 1 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅಂದಾಜು ಮೊತ್ತ ರೂ. 400.00 ಲಕ್ಷಗಳು ಹಾಗೂ ಮುಂಗಡ ಠೇವಣಿ ಮೊತ್ತ 6,00,000.00 /– ರೂ.ಗಳು ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತøತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:–17.03.2026 ರ ಸಂಜೆ 4.30 ಗಂಟೆಯವರೆಗೆ, 2) ಟೆಂಡರಗಳ ತಾಂತ್ರಿಕ್ ಬಿಡ್‌ಗಳನ್ನು ದಿನಾಂಕ :– 18.03.2026 ಸಂಜೆ 4.31 ಗಂಟೆಗೆ 3) ಟೆಂಡರಗಳ ಆರ್ಥಿಕ ಬಿಡ್ ದಿನಾಂಕ: 20.03.2026 ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in (ಪೋನ್ ನಂ.91 80 46010000, +91 80 68948777 ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/768/ಕೆಎಸ್‌ಎಂಸಿಎ/2025–26

ಜಲ ಸಂಪನ್ಮೂಲ ಇಲಾಖೆ
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ)
ಬೇಲೂರು ಕೈಗಾರಿಕಾ ವಸಾಹತು, ಧಾರವಾಡ – 580011.
ಫೋನ್/ಫ್ಯಾಕ್ಸ್ ಸಂಖ್ಯೆ: 0836–2486893/889 ಮೊಬೈಲ್ ಸಂಖ್ಯೆ: 9448386889
ಇ–ಮೇಲ್: directorwalmidharwad@gmail.com

ಸಂಖ್ಯೆ: ವಾಲ್ಮಿ/ನಿರ್ದೇಶಕರು/ಇ–ಆಕ್ಷನ್/2025–26 ದಿನಾಂಕ: 03–03–2026

ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ)

ಮಾನ್ಯ ನಿರ್ದೇಶಕರು, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ಬೇಲೂರು ಕೈಗಾರಿಕಾ ವಸಾಹತು, ಧಾರವಾಡ – 580011 ಕಚೇರಿ ಅಡಿಯಲ್ಲಿ ಕೆಳಗಿನ ಅರ್ಹ Nationalized Public Sector Banks and Private Scheduled Commercial Banks ರವರಿಂದ Competitive Interest Rates on Fixed Deposit ಪ್ರತಿಶತ ದರದ ಟೆಂಡರ್‌ನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಆಹ್ವಾನಿಸಲಾಗಿದೆ.

Sl. No.	Name of Work	Amount (Rs. in Lakhs)	Category	EMD (in Rs.)	Period	Category/ Class of Contractors
1	e-Tender invited from Private Scheduled Commercial Banks for Providing Competitive Interest Rates on Fixed Deposit. **No. WALMI/2025-26/SE0007**	50.80	Fixed Deposit	10000.00	365 Days	Private Scheduled Commercial Banks
2	e-Tender invited from Nationalized Public Sector Banks for Providing Competitive Interest Rates on Fixed Deposit. **No. WALMI/2025-26/SE0008**	76.20	Fixed Deposit	10000.00	365 Days	Nationalized Public Sector Banks

ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ನಿಗದಿತ ಇ.ಎಂ.ಡಿ ಶುಲ್ಕದೊಂದಿಗೆ **www.kppp.karnataka.gov.in** ಪೋರ್ಟಲ್‌ನಲ್ಲಿ, ಅರ್ಜಿಯನ್ನು ದಿನಾಂಕ: **04–03–2026 ರಿಂದ 20–03–2026 ರವರೆಗೆ** ಡೌನಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **20–03–2026 ರಂದು ಸಂಜೆ 4.00 ಗಂಟೆಯವರೆಗೆ.** ಬಿಡ್ ತೆರೆಯುವ ದಿನಾಂಕ: **23–03–2026 ರಂದು ಬೆಳಿಗ್ಗೆ 11.00 ಗಂಟೆಯ ನಂತರ.** ಇ.ಎಂ.ಡಿ. ವಿವರ, ಪೂರ್ವಾರ್ಹತೆ ಷರತ್ತುಗಳು, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ **(www.kppp.karnataka.gov.in)** ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: **0836–2486889** ಸಂಪರ್ಕಿಸುವುದು. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ನಿರ್ದೇಶಕರು
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ,
ಬೇಲೂರು ಕೈಗಾರಿಕಾ ವಸಾಹತು, ಧಾರವಾಡ– 580011

ವಾಸಾಸಂಇ/ಧಾರವಾಡ/1305/ಅಡ್ವರ್ಟೋರ್/2025–26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://dom.karnataka.gov.in

ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

2025–26ನೇ ಸಾಲಿಗೆ UPSC (Prelims Support Programme) ಪೂರ್ವಭಾವಿ ಪರೀಕ್ಷಾ ತರಬೇತಿ ಪಡೆಯಲು ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ ಪ್ರಕಟಣೆ.

ಆನ್‌ಲೈನ್ ಅರ್ಜಿ

2025–26ನೇ ಸಾಲಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ಬೆಂಗಳೂರಿನ ಹಜ್ ಭವನದಲ್ಲಿ ವಸತಿಯುತ 04 ತಿಂಗಳ UPSC (Prelims Support Programme) ಪೂರ್ವಭಾವಿ ಪರೀಕ್ಷಾ ತರಬೇತಿಯನ್ನು ಪ್ರತಿಷ್ಠಿತ ಸಂಸ್ಥೆಯ ಮೂಲಕ ನೀಡಲಾಗುತ್ತಿದ್ದು, ಸದರಿ ತರಬೇತಿಗೆ ಅರ್ಹ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಮಯಾವಕಾಶ

ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ: **04.03.2026.**
ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **09.03.2026.**

ಅರ್ಹತೆಗಳು

- ಅಭ್ಯರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ).
- ಅಭ್ಯರ್ಥಿಯು ಕಳೆದ ಅಧಿಸೂಚನೆಗಳಲ್ಲಿ UPSC/KAS ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಅಭ್ಯರ್ಥಿಯ ವಯೋಮಿತಿ ಕನಿಷ್ಠ 21 ಹಾಗೂ ಗರಿಷ್ಠ 35 ವರ್ಷಗಳು ಮೀರಿರಬಾರದು. (ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದೊಳಗೆ).

ಅರ್ಜಿದಾರರಿಗೆ ಸೂಚನೆಗಳು

- ಅರ್ಜಿದಾರರು ಅಲ್ಪಸಂಖ್ಯಾತರ ನಿರ್ದೇಶನಾಲಯದ ಜಾಲತಾಣ https://dom.karnataka.gov.in ಇಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ಮಾರ್ಗಸೂಚಿಗಳನ್ವಯ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.
- ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲಾ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಸಹಾಯವಾಣಿ ಸಂಖ್ಯೆ: 8277799990 ಇವರನ್ನು ಸಂಪರ್ಕಿಸಬಹುದು.

ದಿನಾಂಕ : 04.03.2026
ಸ್ಥಳ : ಬೆಂಗಳೂರು

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/5974/ಎಎಎ/2025–26

ಲೆಬನಾನ್‌ಗೆ ನುಗ್ಗಿದ ಇಸ್ರೇಲ್ ಸೇನೆ

ಬೈರೂತ್‌ನ 80 ಗ್ರಾಮಗಳ ನಿವಾಸಿಗಳ ಸ್ಥಳಾಂತರಕ್ಕೆ ಸೂಚನೆ • ಯುದ್ಧಕ್ಕೆ ಸನ್ನದ್ಧ– ಹಿಜ್ಬುಲ್ಲಾ ಬಂಡುಕೋರರ ಘೋಷಣೆ

ಬೈರೂತ್ (ಎಪಿ): ಹಿಜ್ಬುಲ್ಲಾ ಬಂಡುಕೋರರನ್ನು ಬಗ್ಗುಬಡಿಯಲು ವಾಯುದಾಳಿ ನಡೆಸುತ್ತಿದ್ದ ಇಸ್ರೇಲ್ ಸೇನೆಯು ಮಂಗಳವಾರ ಹೆಚ್ಚುವರಿ ಭೂ ಸೇನಾ ಪಡೆಗಳನ್ನು ಕಳುಹಿಸಿದೆ. ಅಲ್ಲದೇ, 80 ಗ್ರಾಮಗಳ ನಿವಾಸಿಗಳಿಗೆ ಖಾಲಿ ಮಾಡುವಂತೆ ಸೂಚನೆ ನೀಡಿದೆ. ಇದರ ಬೆನ್ನಲ್ಲೇ, ಇಸ್ರೇಲ್ ಜೊತೆಗೆ ಯುದ್ಧಕ್ಕೆ ಸಿದ್ಧ ಎಂದು ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರರ ಗುಂಪು ಘೋಷಿಸಿದೆ.

ಉತ್ತರ ಇಸ್ರೇಲ್‌ನ ನಗರಗಳನ್ನು ಗುರಿಯಾಗಿರಿಸಿಕೊಂಡು ಹಿಜ್ಬುಲ್ಲಾ ಬಂಡುಕೋರರು ಸೋಮವಾರ ರಾತ್ರಿಯಿಡೀ ಕ್ಷಿಪಣಿ ಹಾಗೂ ಡ್ರೋನ್‌ಗಳನ್ನು ಹಾರಿಸಿದ್ದರು. ಪ್ರತಿಯಾಗಿ ಇಸ್ರೇಲ್ ವಾಯುದಾಳಿ ನಡೆಸಿದ್ದು, 52 ಮಂದಿ ಮೃತಪಟ್ಟಿದ್ದಾರೆ. ಬೈರೂತ್ ಸುತ್ತಮುತ್ತ ಮೃತಪಟ್ಟವರಲ್ಲಿ ಪ್ಯಾಲೆಸ್ಟೀನ್ ಬಂಡುಕೋರರು ಹಾಗೂ ಹಿಜ್ಬುಲ್ಲಾ ಗುಪ್ತಚರ ಅಧಿಕಾರಿಗಳು ಸೇರಿದ್ದಾರೆ. ದಾಳಿಯಲ್ಲಿ 150ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದು, ಸಾವಿರಾರು ಮಂದಿ ಮನೆ ಕಳೆದುಕೊಂಡಿದ್ದಾರೆ.

‘ಮಂಗಳವಾರ ಬೆಳಿಗ್ಗೆ ಉತ್ತರ ಇಸ್ರೇಲ್‌ನತ್ತ ಎರಡು ರಾಕೆಟ್ ದಾಳಿ ನಡೆಸಿದ್ದೇವೆ’ ಎಂದು ಹಿಜ್ಬುಲ್ಲಾ ತಿಳಿಸಿದೆ. ಇಸ್ರೇಲ್ ರಾತ್ರಿಯಿಡೀ ನಡೆಸಿದ ವಾಯು ದಾಳಿಯಲ್ಲಿ ಹಿಜ್ಬುಲ್ಲಾದ ಟಿವಿ ಹಾಗೂ ರೇಡಿಯೊ ಸ್ಟೇಷನ್‌ಗಳ ಕಟ್ಟಡಗಳಿಗೆ ಹಾನಿಯಾಗಿದೆ. ಬೈರೂತ್‌ನ ದಕ್ಷಿಣ ಉಪನಗರದಲ್ಲಿ ಯಾವುದೇ ಮುನ್ಸೂಚನೆ ನೀಡದೇ, ಇಸ್ರೇಲ್ ಪಡೆಗಳು ಸರಣಿ ದಾಳಿ ನಡೆಸಿವೆ.

ಇಸ್ರೇಲ್ ಟ್ಯಾಂಕ್‌ಗಳ ಮೇಲೆ ದಾಳಿ: ಹಿಜ್ಬುಲ್ಲಾ

ಬೈರೂತ್ (ಎಎಫ್‌ಪಿ): ‘ಲೆಬನಾನ್ ಗಡಿ ಭಾಗದ ಗ್ರಾಮದಲ್ಲಿದ್ದ ಇಸ್ರೇಲ್‌ನ ಟ್ಯಾಂಕ್‌ಗಳನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆಸಿದ್ದೇವೆ’ ಎಂದು ಹಿಜ್ಬುಲ್ಲಾ ತಿಳಿಸಿದೆ.

ಲೆಬನಾನ್ ಒಳಭಾಗ ಪ್ರವೇಶಿಸಿ, ವ್ಯೂಹಾತ್ಮಕವಾಗಿ ಹೆಚ್ಚು ಪ್ರಮುಖವಾದ ಪ್ರದೇಶಗಳಲ್ಲಿ ಹಿಡಿತ ಸಾಧಿಸಿದ್ದೇವೆ ಎಂದು ಇಸ್ರೇಲ್‌ನ ರಕ್ಷಣಾ ಸಚಿವರು ಘೋಷಿಸಿದ ಬೆನ್ನಲ್ಲೇ, ಈ ಮಾಹಿತಿ ನೀಡಿದೆ.

‘ಕ್ರಿಮಿನಲ್ ಇಸ್ರೇಲ್ ಆಕ್ರಮಣ ನಡೆಸಿದ ಕಫರ್ ಕಿಲಾದ ಟೆಲ್ ನಹಾಸ್‌ನಲ್ಲಿ ನಮ್ಮ ಹೋರಾಟಗಾರರು ‘ಮೆರ್ಕಾವಾ ಟ್ಯಾಂಕ್’ಗಳನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆಸುವಲ್ಲಿ ಯಶಸ್ವಿಯಾಗಿದ್ದಾರೆ’ ಎಂದು ಹಿಜ್ಬುಲ್ಲಾ ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

16 ತಿಂಗಳ ನಂತರ ಭೂದಾಳಿ

2024ರ ಅಕ್ಟೋಬರ್ ತಿಂಗಳಲ್ಲಿ ಲೆಬನಾನ್‌ನ ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿರಿಸಿಕೊಂಡು ಇಸ್ರೇಲ್ ಭೂದಾಳಿ ನಡೆಸಿತ್ತು. ಅಮೆರಿಕ ಮಧ್ಯಸ್ಥಿಕೆಯಲ್ಲಿ ನಡೆದ ಮಾತುಕತೆಯ ಬಳಿಕ ಕದನ ವಿರಾಮ ಏರ್ಪಟ್ಟಿತ್ತು. ಆದರೆ ಲೆಬನಾನ್‌ನ ಐದು ಸ್ಥಳಗಳನ್ನು ಇಸ್ರೇಲ್ ಸೇನೆಯು ತನ್ನ ಹಿಡಿತಕ್ಕೆ ತೆಗೆದುಕೊಂಡಿತ್ತು.

ಬಂಡುಕೋರರು ತಮ್ಮ ನೆಲೆಗಳನ್ನು ಮತ್ತೆ ಪುನರ್ ನಿರ್ಮಾಣ ಮಾಡುತ್ತಿದ್ದು, ಅವುಗಳನ್ನು ಗುರಿಯಾಗಿರಿಸಿಕೊಂಡು, ಇಸ್ರೇಲ್ ಸೇನೆಯು ವಾಯು ದಾಳಿ ಮುಂದುವರಿಸಿತ್ತು. ಇದೀಗ 16 ತಿಂಗಳ ನಂತರ ಮತ್ತೆ ಭೂದಾಳಿಗೆ ಇಸ್ರೇಲ್ ಸೇನೆಯು ನಿರ್ಧರಿಸಿದೆ.

‘ಹಿಜ್ಬುಲ್ಲಾದ ಮುಖಂಡರನ್ನು ಗುರಿಯಾಗಿರಿಸಿಕೊಂಡು ಈ ದಾಳಿ ನಡೆಸಲಾಗಿತ್ತು’ ಎಂದು ಇಸ್ರೇಲ್ ಸೇನೆಯು ನಂತರ ಹೇಳಿಕೆ ನೀಡಿದೆ.

ಮನೆ ತೊರೆಯಿರಿ: ಬೈರೂತ್‌ನ 80 ಗ್ರಾಮಗಳು ಹಾಗೂ ಸುತ್ತಲಿನ ಪಟ್ಟಣದ ನಿವಾಸಿಗಳು ಕೂಡಲೇ ಖಾಲಿ ಮಾಡಬೇಕು ಎಂದು ಇಸ್ರೇಲ್ ಸೇನೆಯ ಅರೇಬಿಕ್ ವಕ್ತಾರ ಅವಿಕೆ ಅಡ್ರೇ ಎಚ್ಚರಿಕೆ ಸಂದೇಶ ನೀಡಿದ್ದಾರೆ.

‘ಮುಂದಿನ ಮುನ್ಸೂಚನೆ ನೀಡುವವರೆಗೂ ಈ ಪ್ರದೇಶಗಳಿಗೆ ಹಿಂತಿರುಗಬಾರದು’ ಎಂದು ಈ ವೇಳೆ ಸ್ಪಷ್ಟಪಡಿಸಿದ್ದಾರೆ.

ಹೋರಾಟಕ್ಕೆ ಸಿದ್ಧ: ‘ಕಳೆದ ಒಂದೂವರೆ ವರ್ಷದಿಂದಲೂ ಇಸ್ರೇಲ್ ಜೊತೆಗೆ ಕದನ ವಿರಾಮ ಪಾಲಿಸಿದ್ದೆವು. ಈಗ ಲೆಬನಾನ್‌ನ ಮೇಲೆ ಇಸ್ರೇಲ್ ಏಕಾಏಕಿ ಸೇನಾ ದಾಳಿ ನಡೆಸಿವೆ. ನಮ್ಮ ತಾಳ್ಮೆ ಕೂಡ ಮುಗಿದಿದ್ದು, ನಮಗೆ ಯಾವುದೇ ಆಯ್ಕೆ ಉಳಿದಿಲ್ಲ. ಪ್ರತಿರೋಧ ಒಡ್ಡಲು ಹಾಗೂ ಯುದ್ಧಕ್ಕೆ ಸಿದ್ಧ’ ಎಂದು ಹಿಜ್ಬುಲ್ಲಾ ಮುಖಂಡರು ಘೋಷಿಸಿದ್ದಾರೆ.

‘ಇಸ್ರೇಲ್ ಸೇನೆಯು ಯುದ್ಧಕ್ಕೆ ಸಿದ್ಧವಿದೆ. ಕದನ ವಿರಾಮದ ನಂತರವೂ ನಿಂತಿಲ್ಲ. ಹೀಗಾಗಿ ನಾವು ಕೂಡ ಯುದ್ಧಕ್ಕೆ ಸಿದ್ಧರಿದ್ದೇವೆ’ ಎಂದು ಬಂಡುಕೋರ ಸಂಘಟನೆಯ ವಕ್ತಾರ ಮೊಹಮ್ಮದ್ ಕೊಮಟಿ ತಿಳಿಸಿದ್ದಾರೆ.

ಲಿಟಾನಿ ನದಿಯ ಉತ್ತರ ಭಾಗಗಳಿಂದ ಇಸ್ರೇಲ್ ಮೇಲೆ ಹಿಜ್ಬುಲ್ಲಾ ರಾಕೆಟ್ ದಾಳಿ ನಡೆಸುತ್ತಿದೆ ಎಂದು ಲೆಬನಾನ್‌ನ ಅಧ್ಯಕ್ಷ ಜೋಸೆಫ್ ಔನ್ ಅವರು ಸೌದಿ ಅರೇಬಿಯಾ, ಕತಾರ್, ಅಮೆರಿಕ, ಫ್ರಾನ್ಸ್ ಹಾಗೂ ಈಜಿಪ್ಟ್‌ನ ರಾಯಭಾರಿಗಳಿಗೆ ತಿಳಿಸಿದ್ದಾರೆ.

ನದಿಯ ದಕ್ಷಿಣ ಭಾಗ, ಇಸ್ರೇಲ್‌ಗೆ ಹೊಂದಿಕೊಂಡಿರುವ ಗಡಿಯಲ್ಲಿ ಹಿಜ್ಬುಲ್ಲಾವನ್ನು ಸಂಪೂರ್ಣವಾಗಿ ನಿಶ್ಯಸ್ತ್ರೀಕರಣಗೊಳಿಸಲಾಗಿದೆ. ಅಲ್ಲದೆ, ನದಿ ಹಾಗೂ ಗಡಿಭಾಗದಲ್ಲಿ ಇಡೀ ಸೇನೆಯು ನಿಯಂತ್ರಣಕ್ಕೆ ತೆಗೆದುಕೊಂಡಿದೆ’ ಎಂದು ಜೋಸೆಫ್ ಔನ್ ಸ್ಪಷ್ಟಪಡಿಸಿದ್ದಾರೆ.

ಸೇನೆ ರವಾನೆ: ‘ದಕ್ಷಿಣ ಲೆಬನಾನ್‌ನ ಹಾಗೂ ಗಡಿಭಾಗಕ್ಕೆ ಹೊಂದಿಕೊಂಡಿರುವ ಪ್ರಮುಖ ಆಯಕಟ್ಟಿನ ಸ್ಥಳಗಳಿಗೆ ಹೆಚ್ಚುವರಿ ಸೇನೆ ಕಳುಹಿಸಲಾಗಿದೆ’ ಎಂದು ಇಸ್ರೇಲ್ ಸೇನೆಯು ತಿಳಿಸಿದೆ.

‘ಸೇನಾ ಪಡೆಯು ಲೆಬನಾನ್ ಒಳಭಾಗಕ್ಕೆ ಪ್ರವೇಶಿಸಿದ್ದು, ತಳಮಟ್ಟದಲ್ಲಿ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಲಿದೆ’ ಎಂದು ಅವಿಕೆ ಅಡ್ರೇ ತಿಳಿಸಿದ್ದಾರೆ.

ದೇಶದ ಹಲವು ಪ್ರದೇಶ ಗಳಿಗೆ ಇಸ್ರೇಲ್ ಸೇನೆಯು ಒಳಪ್ರವೇಶಿಸಿರುವುದನ್ನು ಲೆಬನಾನ್ ಸೇನೆಯ ಅಧಿಕಾರಿಗಳು ಖಚಿತಪಡಿಸಿದ್ದಾರೆ.

‘ಲೆಬನಾನ್‌ನ ಹಲವು ಪ್ರದೇಶಗಳಿಗೆ ಇಸ್ರೇಲ್ ಸೇನೆಯು ಪ್ರವೇಶಿಸಿದೆ. ಉಭಯ ದೇಶಗಳ ಗಡಿಭಾಗವನ್ನು ದಾಟಿ ಸೇನೆಯು ಹಿಡಿತಕ್ಕೆ ತೆಗೆದುಕೊಂಡಿದೆ’ ಎಂದು ದಕ್ಷಿಣ ಭಾಗದಲ್ಲಿರುವ ವಿಶ್ವ ಸಂಸ್ಥೆಯ ಶಾಂತಿಪಾಲನಾ ಪಡೆ ಸ್ಪಷ್ಟಪಡಿಸಿದೆ.

ಲೆಬನಾನ್‌ನ ರಾಜಧಾನಿ ಬೈರೂತ್ ನಗರದ ಮೇಲೆ ಇಸ್ರೇಲ್ ಸೇನೆಯು ಮಂಗಳವಾರ ವಾಯುದಾಳಿ ನಡೆಸಿದ ಬಳಿಕ ದಟ್ಟ ಹೊಗೆ ಆವರಿಸಿತ್ತು –ಎಎಫ್‌ಪಿ ಚಿತ್ರ

‘ತುರ್ತು ದಾಳಿ ಅಗತ್ಯವಿತ್ತು’

ಜೆರುಸಲೇಂ (ಪಿಟಿಐ): ‘ಇರಾನ್ ತನ್ನ ಅಣ್ವಸ್ತ್ರ ತಯಾರಿಸುವ ಕಾರ್ಯಕ್ರಮವನ್ನು ಮತ್ತೆ ಆರಂಭಿಸಿತ್ತು. ಕೆಲವೇ ತಿಂಗಳಲ್ಲಿ ಆ ಕಾರ್ಯವನ್ನು ಅದು ಪೂರ್ಣಗೊಳಿಸುತ್ತಿತ್ತು. ಆ ಬಳಿಕ ಅದರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದು ಕಷ್ಟವಾಗುತ್ತಿತ್ತು. ಈ ಕಾರಣಕ್ಕೇ ಇರಾನ್ ಮೇಲೆ ನಾವು ದಾಳಿ ನಡೆಸಿದೆವು’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಂಗಳವಾರ ಹೇಳಿದ್ದಾರೆ.

ಫಾಕ್ಸ್ ನ್ಯೂಸ್ ಜೊತೆ ಮಾತನಾಡಿದ ಅವರು, ‘ತನ್ನ ಕ್ಷಿಪಣಿ ವ್ಯವಸ್ಥೆಗಳು ಹಾಗೂ ಅಣ್ವಸ್ತ್ರಗಳನ್ನು ರಕ್ಷಿಸುವುದಕ್ಕಾಗಿ ಇರಾನ್ ಭೂಮಿಯ ಆಳದಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸುತ್ತಿತ್ತು. ಹೀಗಾಗಿ ಅದರ ಮೇಲೆ ತುರ್ತಾಗಿ ದಾಳಿ ನಡೆಸುವುದು ಅಗತ್ಯವಾಗಿತ್ತು’ ಎಂದು ವಿವರಿಸಿದ್ದಾರೆ.

ಪಶ್ಚಿಮ ಏಷ್ಯಾದ ಶೇಕಡ 95ರಷ್ಟು ಸಮಸ್ಯೆಗಳಿಗೆ ಇರಾನ್ ಕಾರಣ. ಅಲ್ಲಿನ ಆಡಳಿತ ಬದಲಾದಲ್ಲಿ ಅರಬ್ ಹಾಗೂ ನೆರೆಯ ಮುಸ್ಲಿಂ ರಾಷ್ಟ್ರಗಳೊಂದಿಗೆ ಇಸ್ರೇಲ್ ಶಾಂತಿ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಗಲಿದೆ

ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

‘ಇರಾನ್ ವಿರುದ್ಧ ಅಮೆರಿಕ ಹಾಗೂ ಇಸ್ರೇಲ್ ನಡೆಸುತ್ತಿರುವ ಯುದ್ಧ ಕೊನೆಗೊಳ್ಳುವುದಿಲ್ಲ’ ಎಂಬ ಮಾತುಗಳಿಗೆ ಪ್ರತಿಕ್ರಿಯಿಸಿದ ನೆತನ್ಯಾಹು, ‘ಈ ಮಿಲಿಟರಿ ಕಾರ್ಯಾಚರಣೆ ಶೀಘ್ರವೇ ಅಂತ್ಯಗೊಳ್ಳಲಿದೆ’ ಎಂದಿದ್ದಾರೆ.

ಪರಮಾಣು ಸ್ಥಾವರಕ್ಕೆ ತುಸು ಹಾನಿ

ವಿಯೆನ್ನಾ (ಎಪಿ): ಅಮೆರಿಕ ಹಾಗೂ ಇಸ್ರೇಲ್ ಜಂಟಿಯಾಗಿ ನಡೆಸುತ್ತಿರುವ ವೈಮಾನಿಕ ದಾಳಿ ವೇಳೆ, ಇರಾನ್‌ನ ನಟಾಂಜ್ ಪರಮಾಣು ಸ್ಥಾವರದಲ್ಲಿನ ವಿಕಿರಣಶೀಲ ಲೋಹ ಶುದ್ಧೀಕರಣ ಘಟಕಕ್ಕೆ ಸ್ವಲ್ಪ ಮಟ್ಟಿನ ಹಾನಿಯಾಗಿದೆ ಎಂದು ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ (ಐಎಇಎ) ಮಂಗಳವಾರ ಹೇಳಿದೆ.

‘ಪರಮಾಣು ಸ್ಥಾವರದ ಪ್ರವೇಶದಲ್ಲಿನ ಕಟ್ಟಡಗಳಿಗೆ ಹಾನಿಯಾಗಿದೆ. ಈ ಹಾನಿಯಿಂದಾಗಿ ವಿಕಿರಣ ಸೋರಿಕೆಯಾಗುವ ಸಾಧ್ಯತೆಗಳು ಕಡಿಮೆ’ ಎಂದೂ ಏಜೆನ್ಸಿ ಹೇಳಿದೆ.

ರಫೇಲ್ ನಿಯೋಜಿಸಿದ ಫ್ರಾನ್ಸ್

ಪ್ಯಾರಿಸ್/ಫ್ರಾನ್ಸ್ (ಎಎಫ್‌ಪಿ): ಯುಎಇಯಲ್ಲಿರುವ ತನ್ನ ನೌಕಾ ಹಾಗೂ ವಾಯು ನೆಲೆಗಳನ್ನು ಇರಾನ್ ದಾಳಿಯಿಂದ ಸಂರಕ್ಷಿಸಲು ಫ್ರಾನ್ಸ್ ದೇಶವು ರಫೇಲ್ ಯುದ್ಧ ವಿಮಾನಗಳನ್ನು ನಿಯೋಜಿಸಿದೆ.

ಫ್ರಾನ್ಸ್ ವಿದೇಶಾಂಗ ಸಚಿವ ಜೀನ್ ನೋಯೆಲ್ ಬರೂತ್ ಮಂಗಳವಾರ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಫ್ರಾನ್ಸ್‌ನ ವಾಯುನೆಲೆ, ನೌಕಾ ನೆಲೆಯ ಸೌಲಭ್ಯಗಳು ಮಾತ್ರವಲ್ಲದೇ, ಫ್ರಾನ್ಸ್ ಸೇನೆಯ ನೂರಾರು ಸಿಬ್ಬಂದಿಯೂ ಯುಎಇಯಲ್ಲಿ ಇದ್ದಾರೆ.

ಹೀಗಾಗಿ ಫ್ರಾನ್ಸ್ ಸೌಲಭ್ಯಗಳಿರುವ ವಾಯುಪ್ರದೇಶದ ಸುರಕ್ಷತೆಯನ್ನು ಖಾತರಿಪಡಿಸಲು ಅಬುಧಾಬಿಯ ಅಲ್–ಧಫ್ರಾ ವಾಯುನೆಲೆಯಲ್ಲಿ ರಫೇಲ್‌ಗಳನ್ನು ನಿಯೋಜಿಸಲಾಗಿದೆ ಎಂದು ಜೀನ್ ತಿಳಿಸಿದ್ದಾರೆ.

ಯುಎಇಯಲ್ಲಿರುವ ಫ್ರೆಂಚ್ ವಾಯುನೆಲೆಯ ಮೇಲೆ ಭಾನುವಾರ ಡ್ರೋನ್‌ಗಳಿಂದ ದಾಳಿ ನಡೆದಿತ್ತು. ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ದುಬೈನಿಂದ ತವರಿಗೆ ಮರಳಿದ ನಾಗರಿಕರು • ಕೇಂದ್ರ, ರಾಜ್ಯ ಸರ್ಕಾರಕ್ಕೆ ಧನ್ಯವಾದ ಅರ್ಪಣೆ

ಭಯಾನಕ ಅನುಭವ ತೆರೆದಿಟ್ಟ ಪ್ರಯಾಣಿಕರು

ಚೆನ್ನೈ/ ಮುಂಬೈ (ಪಿಟಿಐ/ಎಪಿ/ಎಎಫ್‌ಪಿ): ಸಂಘರ್ಷ ಪೀಡಿತ ಪ್ರದೇಶದಲ್ಲಿ ಬಾಂಬ್ ಮತ್ತು ಕ್ಷಿಪಣಿ ಸ್ಫೋಟದ ಸದ್ದು ಭೀಕರವಾಗಿತ್ತು, ಪ್ರಯಾಣಿಕರಿಲ್ಲದೆ ರಸ್ತೆಗಳು ಬಿಕೋ ಎನ್ನುತ್ತಿದ್ದವು ಎಂದು ದುಬೈನಿಂದ ವಾಪಸಾದ ಭಾರತೀಯರು ಮಂಗಳವಾರ ತಮ್ಮ ಅನುಭವವನ್ನು ಹಂಚಿಕೊಂಡರು.

ದುಬೈಗೆ ಪ್ರವಾಸ ಬಂದಿದ್ದ ಅನೇಕರು ತವರಿಗೆ ವಾಪಸಾಗಲು ಸಾಧ್ಯವಾಗದೆ ಅತಂತ್ರರಾಗಿದ್ದರು. ಭಾರತಕ್ಕೆ ಸುರಕ್ಷಿತವಾಗಿ ವಾಪಸಾದ ಬಳಿಕ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಧನ್ಯವಾದ ತಿಳಿಸಿದರು.

ಭಾನುವಾರವೇ ಚೆನ್ನೈಗೆ ತಲುಪಬೇಕಿದ್ದ ಶುಭಾ ಅವರು ತಾವು ಕಳೆದ ಆತಂಕದ ಕ್ಷಣಗಳನ್ನು ಬಿಚ್ಚಿಟ್ಟರು.

‘ನ್ಯೂಯಾರ್ಕ್‌ನಿಂದ ಪ್ರಯಾಣಿಸುತ್ತಿದ್ದೆ. ದುಬೈನಲ್ಲಿ ವಿಮಾನವು ನಿಂತ ಬಳಿಕ ‘ದುಬೈ ವಾಯುಪ್ರದೇಶವನ್ನು ನಿರ್ಬಂಧಿಸಲಾಗಿದೆ’ ಎಂದು ವಿಮಾನಯಾನ ಸಂಸ್ಥೆ ಘೋಷಿಸಿತು. ಅಲ್ಲಿಂದ ನಮ್ಮನ್ನು ಹೋಟೆಲ್‌ಗೆ ಕರೆದೊಯ್ಯಲಾಗಿತ್ತು. ಸ್ಫೋಟದ ಸದ್ದು ಕೇಳುತ್ತಿತ್ತು. ರಾತ್ರಿ ಹೊತ್ತು ಕ್ಷಿಪಣಿಗಳೂ ಕಾಣಿಸುತ್ತಿದ್ದವು’ ಎಂದು ವಿವರಿಸಿದರು.

ಚೆನ್ನೈ ನಿವಾಸಿ ಕಾರ್ತಿಕ್ ಅವರು, ‘ಕುಟುಂಬದೊಂದಿಗೆ ದುಬೈಗೆ ಪ್ರವಾಸ ಹೋಗಿದ್ದೆವು. ಶನಿವಾರವೇ ನಾವು ಮರಳಬೇಕಿತ್ತು. ಅಲ್ಲಿ ಕಳೆದಷ್ಟೂ ಸಮಯ ಭಯಾನಕವಾಗಿತ್ತು’ ಎಂದು ತಿಳಿಸಿದರು.

ಮತ್ತೊಬ್ಬ ಪ್ರಯಾಣಿಕ ಸೈಯದ್ ಅಲಿ ಅವರು, ‘ದುಬೈ ವಿಮಾನ ನಿಲ್ದಾಣದಲ್ಲಿ ಉಂಟಾದ ಸನ್ನಿವೇಶದಿಂದ ಗಾಬರಿಗೊಂಡು ಕೆಲವು ಮಕ್ಕಳು ಅಳಲು ಆರಂಭಿಸಿದ್ದರು’ ಎಂದು ತಿಳಿಸಿದರು.

ಕೊಲ್ಹಾಪುರದಿಂದ ದುಬೈಗೆ ತೆರಳಿದ್ದ 23 ಪ್ರವಾಸಿಗರೂ ಮಂಗಳವಾರ ಮುಂಬೈಗೆ ಮರಳಿದರು. ‘ದುಬೈನಲ್ಲಿ ನಾವು ಉಳಿದುಕೊಂಡಿದ್ದ ಹೋಟೆಲ್ ಸಮೀಪ ಡ್ರೋನ್ ದಾಳಿ ನಡೆದಿತ್ತು. ಇದರಿಂದ ಆತಂಕಗೊಂಡಿದ್ದೆವು’ ಎಂದು ಅವರು ತಿಳಿಸಿದರು.

‘ನಮ್ಮ ಗುಂಪಿನ ಸದಸ್ಯರಿಗೆ ಯುಎಇ ಸರ್ಕಾರವು ₹25,000 ಮೌಲ್ಯದ ಉಡುಗೊರೆ ನೀಡಿದೆ’ ಎಂದು ಪ್ರವಾಸಿಗರೊಬ್ಬರು ತಿಳಿಸಿದರು.

ನಾಗರಿಕರಿಗೆ ಅಮೆರಿಕ ತಾಕೀತು (ಬರ್ಲಿನ್ ವರದಿ): ಬಿಕ್ಕಟ್ಟು ತೀವ್ರಗೊಂಡಿರುವ ಕಾರಣ ಸುರಕ್ಷತೆಯ ಹಿತದೃಷ್ಟಿಯಿಂದ ಪಶ್ಚಿಮ ಏಷ್ಯಾ ದೇಶಗಳಿಂದ ವಾಪಸ್ ಬರುವಂತೆ ತನ್ನ ನಾಗರಿಕರಿಗೆ ಅಮೆರಿಕ ಸೂಚಿಸಿದೆ.

ಪಶ್ಚಿಮ ಏಷ್ಯಾದಿಂದ ಬರುವ ಮತ್ತು ಹೋಗುವ ವಿಮಾನಗಳು ರದ್ದಾಗಿವೆ. ಗಲ್ಫ್‌ನ ವಾಯು ಪ್ರದೇಶವನ್ನು ನಿರ್ಬಂಧಿಸಲಾಗಿದೆ. ಹೀಗಾಗಿ ಯಾತ್ರಾರ್ಥಿಗಳು, ಪ್ರವಾಸಿಗರು, ರಾಜತಾಂತ್ರಿಕರು ಮತ್ತು ಅವರ ಕುಟುಂಬಸ್ಥರು ಸೇರಿದಂತೆ ಸಾವಿರಾರು ಮಂದಿ ಅತಂತ್ರರಾಗಿದ್ದಾರೆ.

ದುಬೈನಿಂದ ಮಂಗಳವಾರ ನವದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಏರ್ ಇಂಡಿಯಾ ವಿಮಾನದ ಸಿಬ್ಬಂದಿಯು ಪ್ರಯಾಣಿಕರೊಂದಿಗೆ ಸೆಲ್ಫಿ ತೆಗೆಸಿಕೊಂಡರು –ಪಿಟಿಐ ಚಿತ್ರ

ಸೀಮಿತ ಪ್ರಮಾಣದ ವಿಮಾನ ಸೇವೆ ಆರಂಭ

ನವದೆಹಲಿ: ಗಲ್ಫ್ ರಾಷ್ಟ್ರಗಳಲ್ಲಿ ಅತಂತ್ರರಾಗಿರುವ ಪ್ರಯಾಣಿಕರನ್ನು ಕರೆತರಲು ಸೀಮಿತ ಪ್ರಮಾಣದಲ್ಲಿ ವಿಮಾನಯಾನ ಸೇವೆಯನ್ನು ಮರು ಆರಂಭಿಸಲಾಗಿದೆ ಎಂದು ಭಾರತೀಯ ವಿಮಾನಯಾನ ಸಂಸ್ಥೆಗಳು ಮಂಗಳವಾರ ತಿಳಿಸಿವೆ.

ಸೌದಿ ಅರೇಬಿಯಾದ ಜೆಡ್ಡಾದಿಂದ ನಾಲ್ಕು ವಿಮಾನಗಳನ್ನು ಆರಂಭಿಸಲಾಗಿದೆ ಎಂದು ‘ಇಂಡಿಗೊ’ ತಿಳಿಸಿದೆ. ಮಸ್ಕತ್ ರಾಜಧಾನಿ ಒಮಾನಿಯಿಂದ ವಿಮಾನಯಾನ ಸೇವೆ ಮರು ಆರಂಭಿಸಲಾಗಿದೆ ಎಂದು ‘ಏರ್ ಇಂಡಿಯಾ ಎಕ್ಸ್‌ಪ್ರೆಸ್’ ತಿಳಿಸಿದೆ.

ಅಬುಧಾಬಿ: ಹಾವೇರಿ ಕುಟುಂಬ ಅತಂತ್ರ

ಪ್ರಜಾವಾಣಿ ವಾರ್ತೆ

ಹಾವೇರಿ: ಯುದ್ಧ ಪೀಡಿತ ಯುಎಇಯ ಅಬುಧಾಬಿಯಲ್ಲಿ ಹಾವೇರಿಯ ಎಂಜಿನಿಯರ್ ರಾಘವೇಂದ್ರ ಕುದರಿ ಅವರ ಕುಟುಂಬ ಸಿಲುಕಿದ್ದು, ತಾವು ವಾಸವಿದ್ದ ಮನೆಯನ್ನು ಬಿಟ್ಟು ಹೋಟೆಲ್‌ನಲ್ಲಿ ಆಶ್ರಯ ಪಡೆದಿದ್ದಾರೆ

ತಾಲ್ಲೂಕಿನ ಕನವಳ್ಳಿ ಗ್ರಾಮದ ರಾಘವೇಂದ್ರ ಕುದರಿ, ಉದ್ಯೋಗ ಅರಸಿ ಅಬುಧಾಬಿಗೆ ಹೋಗಿದ್ದಾರೆ. ಅಲ್ಲಿಯ ಮೊಹಮ್ಮದ್ ಬಿನ್ ಜಾಯೆದ್ ನಗರದ ಅಪಾರ್ಟ್‌ಮೆಂಟ್‌ನಲ್ಲಿ ಪತ್ನಿ, ಮಕ್ಕಳ ಜೊತೆ ವಾಸವಿದ್ದಾರೆ.

ರಾಘವೇಂದ್ರ ವಾಸವಿದ್ದ ಮನೆ ಬಳಿಯೇ ಕ್ಷಿಪಣಿ ದಾಳಿ ನಡೆದಿದೆ. ಇದರಿಂದ ರಾಘವೇಂದ್ರ ಅವರ ಮನೆಗೂ ಹಾನಿಯಾಗಿದೆ. ಸುರಕ್ಷತೆ ದೃಷ್ಟಿಯಿಂದ ಅವರು ಮನೆ ತೊರೆದು ಹೋಟೆಲ್‌ನಲ್ಲಿ ಉಳಿದುಕೊಂಡಿದ್ದಾರೆ. ಅಬುಧಾಬಿಯಲ್ಲಿನ ಪರಿಸ್ಥಿತಿ ಬಗ್ಗೆ ವಿಡಿಯೊ ಚಿತ್ರೀಕರಿಸಿ ಸಂಬಂಧಿಕರಿಗೆ ಕಳುಹಿಸಿದ್ದಾರೆ.

‘ನಾವು ನೆಲಸಿದ್ದ ಸ್ಥಳದಿಂದ 15 ಕಿ.ಮೀ. ದೂರದಲ್ಲಿ ಅಮೆರಿಕ ಸೇನಾ ನೆಲೆಯಿದೆ. ಅದನ್ನು ಗುರಿಯಾಗಿಸಿ ಕ್ಷಿಪಣಿ ದಾಳಿ ನಡೆಯುತ್ತಿದೆ. ನಾವು ಸುರಕ್ಷಿತ ಎಂಬ ಭಾವನೆಯಿದೆ’ ಎಂದೂ ಹೇಳಿದ್ದಾರೆ.

‘ಕುದರಿ ಕುಟುಂಬದವರನ್ನು ಸಂಪರ್ಕಿಸಿದ್ದೇವೆ. ಅವರು ಊರಿಗೆ ಬರಲು ಸಿದ್ಧರಿದ್ದರೆ, ವ್ಯವಸ್ಥೆ ಮಾಡಲಾಗುವುದು’ ಎಂದು ಎಡಿಸಿ ನಾಗರಾಜ್ ತಿಳಿಸಿದ್ದಾರೆ.

ಯುಎಇಯ ಅಬುಧಾಬಿಯಲ್ಲಿರುವ ಹಾವೇರಿ ತಾಲ್ಲೂಕಿನ ಕಳ್ಳಿಹಾಳದ ರಾಘವೇಂದ್ರ ಕುದರಿ ಕುಟುಂಬ

ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಹೇಳಿಕೆ

‘ಸೌದಿ– ಇರಾನ್ ನಡುವೆ ಮಧ್ಯಸ್ಥಿಕೆ’

ಇಸ್ಲಾಮಾಬಾದ್ (ಪಿಟಿಐ): ‘ಸೌದಿ ಅರೇಬಿಯಾ ಹಾಗೂ ಇರಾನ್ ನಡುವೆ ಮಧ್ಯಸ್ಥಿಕೆಯ ಮಾತುಕತೆ ನಡೆಸಿದ್ದೇನೆ’ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಅವರು ಮಂಗಳವಾರ ಹೇಳಿದ್ದಾರೆ.

‘ಎರಡೂ ದೇಶಗಳ ನಡುವೆ ಯುದ್ಧ ಆರಂಭವಾದಾಗ ಇಸ್ಲಾಮಿಕ್ ಸಹಕಾರ ಸಂಘಟನೆ (ಒಐಸಿ) ಸಭೆಯಲ್ಲಿ ಪಾಲ್ಗೊಳ್ಳಲು ಸೌದಿ ಅರೇಬಿಯಾದಲ್ಲಿದ್ದೆ. ಉಭಯ ದೇಶಗಳ ವಿದೇಶಾಂಗ ಸಚಿವರೊಂದಿಗೆ ಅಲ್ಲಿಯೇ ಸಂಪರ್ಕ ಸಾಧಿಸಿದ್ದೇನೆ’ ಎಂದು ಅವರು ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

‘ಸೌದಿ ಅರೇಬಿಯಾದೊಂದಿಗೆ ನಾವು ಪರಸ್ಪರ ರಕ್ಷಣಾ ಒಪ್ಪಂದ ಹೊಂದಿದ್ದೇವೆ ಎಂದು ನಾನು ಇರಾನಿನ ವಿದೇಶಾಂಗ ಸಚಿವರಿಗೆ ತಿಳಿಸಿದೆ. ಅವರು ನಮ್ಮ ವಿರುದ್ಧ ಸೌದಿಯ ನೆಲ ಬಳಕೆ ಆಗದಂತೆ ನೋಡಿಕೊಳ್ಳಿ ಎಂದು ನನ್ನನ್ನು ಕೇಳಿದರು’ ಎಂದು ಅವರು ಹೇಳಿದರು.

ಯುಎಇಯಲ್ಲಿ ನಡೆದ ಕ್ಷಿಪಣಿ ದಾಳಿಯಲ್ಲಿ ಪಾಕಿಸ್ತಾನದ ಪ್ರಜೆಯೊಬ್ಬರು ಮೃತಪಟ್ಟಿದ್ದಾರೆ

ಇಶಾಕ್ ದಾರ್, ವಿದೇಶಾಂಗ ಸಚಿವ, ಪಾಕಿಸ್ತಾನ

‘ಯುದ್ಧ ಕೊನೆಗಾಣಿಸಲು ಪಾಕಿಸ್ತಾನ ತನ್ನ ಪಾತ್ರವನ್ನು ಸಕ್ರಿಯವಾಗಿ ನಿರ್ವಹಿಸುತ್ತಿದೆ. ನನ್ನ ಮಾತುಕತೆಯ ಬಳಿಕ ಸೌದಿ ಅರೇಬಿಯಾದ ಮೇಲೆ ಯುದ್ಧದ ಕನಿಷ್ಠ ಪರಿಣಾಮವಿದೆ’ ಎಂದು ದಾರ್ ಹೇಳಿದರು.

‘ಯುದ್ಧ ಆರಂಭಗೊಂಡ ನಂತರ ಟರ್ಕಿ, ಬಾಂಗ್ಲಾದೇಶ, ಪ್ಯಾಲೆಸ್ಟೀನ್, ಇರಾನ್, ಉಜ್ಬೇಕಿಸ್ತಾನ್, ಸೌದಿ ಅರೇಬಿಯಾ, ಕತಾರ್, ಒಮಾನ್, ಇರಾಕ್, ಬಹರೇನ್ ಮತ್ತು ಅಜರ್‌ಬೈಜಾನ್‌ನ ವಿದೇಶಾಂಗ ಸಚಿವರು, ಅರಬ್ ಸಂಯುಕ್ತ ಸಂಸ್ಥಾನದ ಉಪ ಪ್ರಧಾನಿ ಹಾಗೂ ಐರೋಪ್ಯ ಒಕ್ಕೂಟದ ಉಪಾಧ್ಯಕ್ಷರೊಂದಿಗೂ ದೂರವಾಣಿ ಸಂಭಾಷಣೆ ನಡೆಸಿದ್ದೇನೆ’ ಎಂದು ಅವರು ತಿಳಿಸಿದರು.

ಕೊಲ್ಲಿ ರಾಷ್ಟ್ರಗಳಲ್ಲಿ ಲಕ್ಷಾಂತರ ಪಾಕಿಸ್ತಾನೀಯರಿದ್ದಾರೆ. ಅವರ ರಕ್ಷಣೆ ಹಾಗೂ ಕಲ್ಯಾಣವನ್ನು ಖಚಿತಪಡಿಸಿಕೊಳ್ಳಲು ಪಾಕಿಸ್ತಾನ ಸರ್ಕಾರವು ಆತಿಥೇಯ ದೇಶಗಳೊಂದಿಗೆ ಸಂಪರ್ಕದಲ್ಲಿದೆ ಎಂದು ಹೇಳಿದರು.

ಯುದ್ಧಪೀಡಿತ ದೇಶಗಳಲ್ಲಿರುವ ಪಾಕಿಸ್ತಾನೀಯರನ್ನು ತಾಯ್ನಾಡಿಗೆ ಮರಳಿ ಕರೆತರಲಾಗುತ್ತಿದೆ. ಅಗತ್ಯ ಸಹಾಯ ನೀಡಲಾಗುತ್ತಿದೆ. ಇದಕ್ಕಾಗಿಯೇ 24X7 ಸಹಾಯವಾಣಿ ಆರಂಭಿಸಲಾಗಿದೆ. ಇದುವರೆಗೂ ಇರಾನ್‌ನಿಂದ 792 ಜನರು ಮರಳಿದ್ದಾರೆ ಎಂದು ದಾರ್ ಮಾಹಿತಿ ನೀಡಿದರು.

ಇರಾನ್ ಮೇಲೆ ಯುದ್ಧದ ಮಾಹಿತಿ ನೀಡುವಲ್ಲಿ ವಿಳಂಬ

ಟ್ರಂಪ್ ನಡೆಗೆ ವ್ಯಾಪಕ ಟೀಕೆ

ವಾಷಿಂಗ್ಟನ್ (ಎಪಿ): ಇಸ್ರೇಲ್ ಜೊತೆಗೂಡಿ ಇರಾನ್ ಮೇಲೆ ಅಮೆರಿಕ ನಡೆಸುತ್ತಿರುವ ದಾಳಿಗಳ ಕುರಿತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದೇಶದ ಜನತೆಗೆ ಮಾಹಿತಿ ನೀಡುವುದಕ್ಕೆ ಅಸಾಂಪ್ರದಾಯಿಕ ವಿಧಾನದ ಮೊರೆ ಹೋಗಿರುವುದು ಚರ್ಚೆಗೆ ಗ್ರಾಸವಾಗಿದೆ.

ಡೊನಾಲ್ಡ್ ಟ್ರಂಪ್

ಇರಾನ್ ಮೇಲೆ ದಾಳಿ ಆರಂಭಗೊಂಡ 48 ಗಂಟೆಗಳ ಬಳಿಕ ಅವರು, ದಾಳಿ ನಡೆಸುವುದಕ್ಕೆ ಏನು ಕಾರಣಗಳು ಹಾಗೂ ಈ ಕುರಿತು ಯಾವಾಗ ನಿರ್ಧರಿಸಲಾಯಿತು ಎಂಬ ಬಗ್ಗೆ ದೇಶದ ಜನತೆಗೆ ಮಾಹಿತಿ ನೀಡಿದ್ದಾರೆ.

ಅಮೆರಿಕದ ಹಿಂದಿನ ಅಧ್ಯಕ್ಷರು ಇಂತಹ ಸಂದರ್ಭಗಳಲ್ಲಿ, ದೇಶದ ಜನತೆಗೆ ಕೂಡಲೇ ಮಾಹಿತಿ ನೀಡುತ್ತಿದ್ದರು. ಹೀಗಾಗಿ ಟ್ರಂಪ್ ಅವರ ಈ ನಡೆ ಟೀಕೆಗೆ ಗುರಿಯಾಗಿದೆ.

ಅಸಾಧಾರಣ ಶೌರ್ಯ ಪ್ರದರ್ಶಿಸಿದ ಯೋಧರನ್ನು ಸನ್ಮಾನಿಸಲು ಶ್ವೇತ ಭವನದಲ್ಲಿ ಸೋಮವಾರ ಸಮಾರಂಭ ನಡೆದಿತ್ತು. ಇದಕ್ಕೂ ಮುನ್ನ ನಡೆದ ಸಭೆಯಲ್ಲಿ, ಇರಾನ್ ಮೇಲೆ ದಾಳಿ ನಡೆಸಲು ಏನು ಕಾರಣ ಎಂಬ ಬಗ್ಗೆ ಟ್ರಂಪ್ ಮಾತನಾಡಿದ್ದರು. ಆದರೆ, ಸಮಾರಂಭದ ಬಳಿಕ ಸುದ್ದಿಗಾರರು ಈ ಕುರಿತು ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರಿಸಲಿಲ್ಲ.

ಈ ಸಮಾರಂಭಕ್ಕೂ ಮುನ್ನ, ಪೆಂಟಗಾನ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ್ದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್‌ಸೆತ್ ಹಾಗೂ ಸೇನಾ ಸಿಬ್ಬಂದಿ ಜಂಟಿ ಮುಖ್ಯಸ್ಥ ಡ್ಯಾನ್ ಕೇನ್ ಅವರು ಇರಾನ್ ಮೇಲಿನ ದಾಳಿಗಳ ಕುರಿತು ವಿವರಿಸಿದ್ದರು.

ದಾಳಿ ಕುರಿತು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ ‘ಟ್ರುತ್ ಸೋಷಿಯಲ್’ನಲ್ಲಿ ಟ್ರಂಪ್ ಮಾಹಿತಿ ಹಂಚಿಕೊಂಡಿದ್ದರು.

ಈ ಎಲ್ಲ ಕಾರಣದಿಂದಾಗಿ, ಯುದ್ಧ ಕುರಿತಾದ ಮಾಹಿತಿ ನೀಡುವುದಕ್ಕೆ ಟ್ರಂಪ್ ಅನುಸರಿಸಿದ ವಿಧಾನದ ಬಗ್ಗೆ ಟೀಕೆಗಳು ವ್ಯಕ್ತವಾಗುತ್ತಿವೆ.

‘ಇರಾನ್ ವಿರುದ್ಧ ಯುದ್ಧ ಮಾಡುವುದರ ನಿರ್ಧಾರದ ಹಿಂದಿನ ತರ್ಕ ಹಾಗೂ ಉದ್ದೇಶದ ಬಗ್ಗೆ ಟ್ರಂಪ್ ಸಮರ್ಪಕ ವಿವರಣೆ ನೀಡಿಲ್ಲ. ಅದೇ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಯುದ್ಧ ಆರಂಭಗೊಂಡ ದಿನವೇ ಎರಡು ಹೇಳಿಕೆಗಳನ್ನು ಬಿಡುಗಡೆ ಮಾಡಿ, ವಿವರಣೆ ನೀಡಿದ್ದರು. ಇರಾನ್‌ನ ಕ್ಷಿಪಣಿ ಬಿದ್ದು, 9 ಜನರು ಸಾವನ್ನಪ್ಪಿದ ಸ್ಥಳದಲ್ಲಿಯೇ ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿ, ಮಾಹಿತಿ ನೀಡಿದ್ದರು’ ಎಂದು ಜನರು ಹೇಳುತ್ತಿದ್ದಾರೆ.

ಸ್ಟಾರ್ಮರ್ ನಿಲುವಿಗೆ ಟ್ರಂಪ್ ಟೀಕೆ

ಲಂಡನ್ (ಪಿಟಿಐ): ಇಸ್ರೇಲ್ ಜೊತೆ ಸೇರಿ ಇರಾನ್ ಮೇಲೆ ನಡೆಸುತ್ತಿರುವ ದಾಳಿ ಕುರಿತಂತೆ ಅಪಸ್ವರ ಎತ್ತಿದ್ದ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಟೀಕಿಸಿದ್ದಾರೆ.

ಇಲ್ಲಿನ ‘ದಿ ಸನ್’ ಪತ್ರಿಕೆಗೆ ಶ್ವೇತ-ಭವನದಿಂದ ದೂರವಾಣಿ ಮೂಲಕ ಸಂದರ್ಶನ ನೀಡಿರುವ ಟ್ರಂಪ್, ‘ಇರಾನ್ ಮೇಲೆ ನಡೆಸುತ್ತಿರುವ ದಾಳಿಗಳ ವಿಚಾರದಲ್ಲಿ ಫ್ರಾನ್ಸ್, ಜರ್ಮನಿ ಸೇರಿ ಬ್ರಿಟನ್‌ನ ನೆರೆ ದೇಶಗಳು ನೀಡಿರುವ ಪ್ರತಿಕ್ರಿಯೆ ಶ್ಲಾಘನೀಯ’ ಎಂದು ಹೇಳಿದ್ದಾರೆ.

‘ಅಮೆರಿಕ ಮತ್ತು ಬ್ರಿಟನ್ ನಡುವಿನ ಬಾಂಧವ್ಯ ಈ ಹಿಂದೆ ಬಹಳ ಉತ್ತಮವಾಗಿತ್ತು. ಕಿಯರ್ ಸ್ಟಾರ್ಮರ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ಉಭಯ ದೇಶಗಳ ನಡುವಿನ ಸಂಬಂಧಕ್ಕೆ ಧಕ್ಕೆ ಉಂಟಾಗಿದೆ. ಇರಾನ್ ಮೇಲಿನ ದಾಳಿ ವಿಚಾರದಲ್ಲಿ ಸ್ಟಾರ್ಮರ್ ನಮ್ಮ ಸಹಾಯಕ್ಕೆ ಬರಲಿಲ್ಲ’ ಎಂದಿದ್ದಾರೆ.

‘ಇರಾನ್ ಮೇಲೆ ವಾಯು ದಾಳಿಗಳನ್ನು ನಡೆಸುವ ಮೂಲಕ, ಅಲ್ಲಿನ ಸರ್ಕಾರವನ್ನು ಕಿತ್ತೊಗೆಯುವ ಜಂಟಿ ಕಾರ್ಯಾಚರಣೆಗೆ ಬ್ರಿಟನ್ ಕೈಜೋಡಿಸುವುದಿಲ್ಲ. ಆಡಳಿತ ಬದಲಿಸುವ ಇಂತಹ ತಂತ್ರಗಳಲ್ಲಿ ಬ್ರಿಟನ್‌ಗೆ ನಂಬಿಕೆ ಇಲ್ಲ’ ಎಂದು ಸಂಸತ್‌ನಲ್ಲಿ ಸ್ಟಾರ್ಮರ್ ಸೋಮವಾರ ಹೇಳಿದ್ದರು.

ಮೋದಿ ವಿರುದ್ಧ ಪೋಸ್ಟ್: ಪ್ರಕರಣ ದಾಖಲು

ಯಾದಗಿರಿ: ಪ್ರಧಾನಿ ನರೇಂದ್ರ ಮೋದಿ ಹಾಗೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ಪೋಸ್ಟ್ ಮಾಡಿದ್ದ ಆರೋಪದಡಿ ನಗರದ ಅಬ್ದುಲ್‌ನಬಿ ಜಾಕೀರ್ ವಿರುದ್ಧ ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾನ್‌ಸ್ಟೆಬಲ್ ರವಿ ರಾಠೋಡ್ ಅವರು ಈ ಪೋಸ್ಟ್ ಗಮನಿಸಿದ್ದರು. ‘ವಿವಿಧ ಸಮುದಾಯಗಳ ನಡುವೆ ದ್ವೇಷ ಉಂಟುಮಾಡಿ, ಸೌಹಾರ್ದಕ್ಕೆ ಧಕ್ಕೆ ತರುವ ಕೃತ್ಯವನ್ನು ಆರೋಪಿ ಎಸಗಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಪರ್ಕಕ್ಕೆ ಸಿಗದ ಇರಾನ್‌ಗೆ ತೆರಳಿದ್ದ ಗಣಪತಿಕಟ್ಟೆ ನಿವಾಸಿ

ಕೊಪ್ಪ (ಚಿಕ್ಕಮಗಳೂರು): ಉದ್ಯೋಗದ ನಿಮಿತ್ತ ಇರಾನ್‌ಗೆ ಹೋಗಿರುವ ಮಗ ನಿಶ್ಚಿತ್ ಜಿ.ಎಂ. ದೂರವಾಣಿ ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ತಾಲ್ಲೂಕಿನ ಹಿರೇಕೊಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿ ಗಣಪತಿಕಟ್ಟೆ ನಿವಾಸಿ ಮಹೇಶ್ ತಿಳಿಸಿದ್ದಾರೆ.

‘ಐದು ತಿಂಗಳ ಹಿಂದೆ ಕೆಲಸಕ್ಕೆ ಹೋಗಿದ್ದು, ವಾರಕ್ಕೊಮ್ಮೆ ಫೋನ್ ಮಾಡುತ್ತಿದ್ದ. ಕಳೆದ ಬುಧವಾರ ಕೊನೆಯ ಬಾರಿ ಮಾತನಾಡಿದ್ದ. ಆತ ಟೈಲ್ಸ್, ಗ್ರಾನೈಟ್ ಸರಕು ಸಾಗಣೆ ಹಡಗಿನಲ್ಲಿ ಕೆಲಸ ಮಾಡಿಕೊಂಡಿದ್ದು, ಕೊನೆಯ ಬಾರಿ ಮಾತನಾಡಿದ್ದ ವೇಳೆ, ನಾಳೆ ಕುವೈತ್‌ಗೆ ಹೋಗುತ್ತಿರುವುದಾಗಿ ಹೇಳಿದ್ದ’ ಎಂಬುದಾಗಿ ತಿಳಿಸಿದ್ದಾರೆ.

‘ತಾಲ್ಲೂಕು ಆಡಳಿತ, ಪೊಲೀಸ್ ಇಲಾಖೆಗೆ ಅಗತ್ಯ ಮಾಹಿತಿ ನೀಡಿದ್ದೇನೆ’ ಎಂದು ಅವರು ಹೇಳಿದ್ದಾರೆ.

ಆರು ರಾಷ್ಟ್ರಗಳಲ್ಲಿನ ಸಿಬ್ಬಂದಿ ಸ್ಥಳಾಂತರಿಸಿದ ಅಮೆರಿಕ

ದುಬೈ (ಎಪಿ): ಅರಬ್ ಸಂಯುಕ್ತ ಸಂಸ್ಥಾನದಲ್ಲಿರುವ (ಯುಎಇ) ತುರ್ತು ಕಾರ್ಯಕ್ಕೆ ನಿಯೋಜನೆಗೊಳ್ಳದ ತನ್ನ ಸಿಬ್ಬಂದಿ ಹಾಗೂ ಅವರ ಕುಟುಂಬ ವರ್ಗದವರನ್ನು ಅಮೆರಿಕದ ವಿದೇಶಾಂಗ ಇಲಾಖೆ ಮಂಗಳವಾರ ಸ್ಥಳಾಂತರಿಸಿದೆ.

ಯುಎಇಯ ದುಬೈ ಮತ್ತು ಅಬು ಧಾಬಿ ನಗರಗಳು ಪಶ್ಚಿಮ ಏಷ್ಯಾದ ಸುರಕ್ಷಿತ ನೆಲೆ ಎಂದು ದೀರ್ಘಕಾಲದಿಂದ ಪರಿಗಣಿಸಲ್ಪಟ್ಟಿದ್ದವು. ಆದರೆ, ಇರಾನ್ ಈ ನಗರಗಳ ಮೇಲೂ ದಾಳಿ ನಡೆಸುವ ಮೂಲಕ ಯುದ್ಧವನ್ನು ವಿಸ್ತರಿಸಿದೆ.

ಪಶ್ಚಿಮ ಏಷ್ಯಾದ ಕೊಲ್ಲಿ ರಾಷ್ಟ್ರಗಳಲ್ಲಿ ಸಂಘರ್ಷ ಆರಂಭವಾದ ಬೆನ್ನಿಗೆ ಅಮೆರಿಕವು ತುರ್ತು ಕಾರ್ಯಕ್ಕೆ ನಿಯೋಜನೆಗೊಳ್ಳದ ತನ್ನ ಸಿಬ್ಬಂದಿ ಹಾಗೂ ಕುಟುಂಬಗಳ ಸ್ಥಳಾಂತರದ ಕಾರ್ಯಾಚರಣೆಯನ್ನು ಆರಂಭಿಸಿತ್ತು. ಇದೀಗ ಯುಎಇ ಸೇರ್ಪಡೆಯಿಂದಾಗಿ ಆರು ರಾಷ್ಟ್ರಗಳಲ್ಲಿ ಕಾರ್ಯಾಚರಣೆ ನಡೆದಂತಾಗಿದೆ.

ಬಹರೇನ್, ಇರಾಕ್, ಜೋರ್ಡಾನ್, ಕುವೈತ್, ಕತಾರ್‌ನಲ್ಲಿದ್ದ ತುರ್ತು ಕಾರ್ಯಕ್ಕೆ ನಿಯೋಜನೆಗೊಳ್ಳದ ತನ್ನ ಸಿಬ್ಬಂದಿ ಹಾಗೂ ಅವರ ಕುಟುಂಬ ವರ್ಗದವರನ್ನು ಅಮೆರಿಕ ಈಗಾಗಲೇ ಸ್ಥಳಾಂತರಿಸಿದೆ.

ಉದ್ವಿಗ್ನ ನಿವಾರಣೆಗೆ ಯತ್ನ

ಮಾಸ್ಕೊ (ರಾಯಿಟರ್ಸ್): ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಂಡಿರುವ ಉದ್ವಿಗ್ನತೆಯನ್ನು ನಿವಾರಿಸಲು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಯತ್ನಿಸಲಿದ್ದಾರೆ ಎಂದು ಕ್ರೆಮ್ಲಿನ್ ಮಂಗಳವಾರ ತಿಳಿಸಿದೆ.

ವ್ಲಾದಿಮಿರ್ ಪುಟಿನ್

ಕೊಲ್ಲಿ ದೇಶಗಳ ತೈಲ ಘಟಕಗಳು, ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಇರಾನ್ ದಾಳಿ ನಡೆಸುತ್ತಿದೆ.

ಈ ದಾಳಿಗೆ ಅರಬ್ ರಾಷ್ಟ್ರಗಳ ಮುಖಂಡರು ಕಳವಳ ವ್ಯಕ್ತಪಡಿಸಿದ್ದು, ಇದನ್ನು ಇರಾನ್‌ನ ಗಮನಕ್ಕೆ ಪುಟಿನ್ ತರಲಿದ್ದಾರೆ ಎಂದೂ ಹೇಳಿದೆ.

ಪಾಕಿಸ್ತಾನ: ಅಮೆರಿಕ ರಾಯಭಾರ ಕಚೇರಿ ಬಳಿ ಪ್ರತಿಭಟನೆ

ಲಾಹೋರ್/ಕರಾಚಿ (ಪಿಟಿಐ): ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಹತ್ಯೆ ಹಾಗೂ ಇದನ್ನು ಖಂಡಿಸಿ ಕರಾಚಿಯ ಅಮೆರಿಕ ರಾಯಭಾರ ಕಚೇರಿ ಬಳಿ ಪ್ರತಿಭಟನೆ ನಡೆಸುತ್ತಿದ್ದ 12 ಪಾಕಿಸ್ತಾನೀಯರನ್ನು ಅಮೆರಿಕ ಭದ್ರತಾ ಪಡೆ ಹತ್ಯೆ ಮಾಡಿರುವುದನ್ನು ವಿರೋಧಿಸಿ ವಿದ್ಯಾರ್ಥಿಗಳು, ಇತರ ಕಾರ್ಯಕರ್ತರು ರಾಯಭಾರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನಕಾರರನ್ನು ನಿಯಂತ್ರಿಸಲು ಮಹಿಳಾ ಪೊಲೀಸರು ಸೇರಿದಂತೆ ಕಚೇರಿ ಬಳಿ ಭಾರಿ ಪೊಲೀಸ್ ಭದ್ರತೆ ನಿಯೋಜಿಸಲಾಗಿತ್ತು. ಪ್ರತಿಭಟನಕಾರರು ಅಮೆರಿಕ ಹಾಗೂ ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಪಾಕಿಸ್ತಾನದಲ್ಲಿರುವ ಅಮೆರಿಕ ರಾಯಭಾರ ಕಚೇರಿಯನ್ನು ತೆಗೆದು ಹಾಕಬೇಕು ಎಂದೂ ಒತ್ತಾಯಿಸಿದರು.

ಅಲ್ಲದೇ ಪಾಕಿಸ್ತಾನ ಹಾಗೂ ಅಫ್ಗಾನಿಸ್ತಾನದ ನಡುವಿನ ಸಂಘರ್ಷಕ್ಕೆ ಶೀಘ್ರವೇ ಕದನ ವಿರಾಮ ಘೋಷಿಸಬೇಕು ಎಂದರು.

ಖಮೇನಿ ಹತ್ಯೆ ಖಂಡಿಸಿ ಪಾಕಿಸ್ತಾನದಲ್ಲಿ ನಡೆದ ಪ್ರತಿಭಟನೆಗಳಲ್ಲಿ ಈವರೆಗೆ 34 ಮಂದಿ ಸಾವಿಗೀಡಾಗಿದ್ದು, 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ದುಬೈ: ಕನ್ನಡಿಗರ ಜತೆ ಮಾತನಾಡಿದ ವಿಜಯೇಂದ್ರ



ಬಿ.ವೈ. ವಿಜಯೇಂದ್ರ

ಬೆಂಗಳೂರು: ಇಸ್ರೇಲ್–ಇರಾನ್ ಯುದ್ಧದ ಕಾರಣ ದುಬೈನಲ್ಲಿ ಸಿಲುಕಿರುವ ಕನ್ನಡಿಗರ ಜತೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮಾತನಾಡಿ ಧೈರ್ಯ ತುಂಬಿದರು.

ವಿಡಿಯೊ ಕರೆ ಮೂಲಕ ಮಾತನಾಡಿದ ಅವರು, ‘ಸಂಕಷ್ಟದಲ್ಲಿ ಸಿಲುಕಿದ ಕನ್ನಡಿಗರನ್ನು ತಕ್ಷಣ ಕರ್ನಾಟಕಕ್ಕೆ ಕರೆದುಕೊಂಡು ಬರಲು ಕೇಂದ್ರ ಸರ್ಕಾರದ ಮಾತನಾಡುತ್ತೇನೆ’ ಎಂದರು.

‘ಕೇಂದ್ರ ಸರ್ಕಾರ ಈ ಸಂಬಂಧ ಹೆಚ್ಚಿನ ಗಮನಹರಿಸಿದೆ. ಹಿಂದೆ ಉಕ್ರೇನ್‌ನಲ್ಲಿ ಯುದ್ಧ ಆರಂಭವಾದಾಗ ಅಲ್ಲಿದ್ದ ಎಲ್ಲ ಭಾರತೀಯರನ್ನು ಕರೆತರುವ ಮೂಲಕ ಸಮಸ್ಯೆ ಬಗೆಹರಿಸಿತ್ತು. ಈಗ ಯುದ್ಧ ಅಚಾನಕ್ ಆಗಿ ಆರಂಭವಾಗಿದೆ. ದೆಹಲಿಯಲ್ಲಿ ಸಂಬಂಧಪಟ್ಟವರ ಜತೆ ನಾನೂ ಮಾತನಾಡುತ್ತೇವೆ. ಎಲ್ಲರೂ ಸುರಕ್ಷಿತವಾಗಿ ವಾಪಸ್ ಬರಲು ಅಗತ್ಯ ಕ್ರಮ ಕೈಗೊಳ್ಳುತ್ತೇನೆ’ ಎಂದು ಭರವಸೆ ನೀಡಿದರು.

ಟ್ರಂಪ್‌ಗೆ ವಿದೇಶಾಂಗ ನೀತಿ ಅಡವಿಟ್ಟ ಮೋದಿ: ಸಚಿವ ಪ್ರಿಯಾಂಕ್ ವಾಗ್ದಾಳಿ

ಕಲಬುರಗಿ: ‘ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ವಿದೇಶಾಂಗ ನೀತಿ, ಹಿತಾಸಕ್ತಿಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಅಡ ಇಟ್ಟಿದ್ದಾರೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಂಗಳವಾರ ವಾಗ್ದಾಳಿ ನಡೆಸಿದರು.

ಪ್ರಿಯಾಂಕ್ ಖರ್ಗೆ

ಮಾಧ್ಯಮಗಳೊಂದಿಗೆ ಮಾತನಾಡಿ, ‘ಸ್ವಾತಂತ್ರ್ಯಾನಂತರದಲ್ಲಿ ಭಾರತವು ವಿದೇಶಾಂಗ ನೀತಿಯಲ್ಲಿ ಅಲಿಪ್ತ ನೀತಿ ಅನುಸರಿಸುತ್ತಿದೆ. ದೇಶದ ಈಗಿನ ವಿದೇಶಾಂಗ ನೀತಿಯೇ ಗೊತ್ತಾಗುತ್ತಿಲ್ಲ’ ಎಂದಿದ್ದಾರೆ.

‘ರಷ್ಯಾದಿಂದ ಕಚ್ಚಾ ತೈಲ ಆಮದಿಗೆ ಅಮೆರಿಕಕ್ಕೆ ಮನವಿ ಮಾಡಿಕೊಳ್ಳಬೇಕಾಗುತ್ತದೆ ಅಂತ ವಿದೇಶಾಂಗ ಸಚಿವಾಲಯ ಅಧಿಕಾರಿಗಳೇ ಹೇಳಿಕೆ ಕೊಟ್ಟಿದ್ದಾರೆ. ನಾವು ಯಾರಿಂದ ಖರೀದಿಸಬೇಕು, ವಹಿವಾಟು ನಡೆಸಬೇಕು ಎಂಬುದನ್ನು ಅಮೆರಿಕ ಕೇಳಿ ಮಾಡ್ಬೇಕಾ?’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಹಿಂದಿನ ಪ್ರಧಾನಿಗಳಾದ ಇಂದಿರಾ ಗಾಂಧಿ, ಮನಮೋಹನ್ ಸಿಂಗ್ ಅವರೆಲ್ಲ ಅಮೆರಿಕದ ಅಧ್ಯಕ್ಷರ ಎದುರೇ ಇರಾಕ್, ಇರಾನ್ ವಿರುದ್ಧದ ಅಮೆರಿಕ ದಾಳಿಗಳನ್ನು ಖಂಡಿಸುತ್ತಿದ್ದರು. ಪ್ರಧಾನಿ ಮೋದಿ ಅವರು ಟ್ರಂಪ್‌ಗೆ ಹೆದರುತ್ತಿದ್ದಾರೆ. ಏಕೆ ಅನ್ನೋದು ಗೊತ್ತಿಲ್ಲ?’ ಎಂದರು.

ಕಾಮದಹನ

ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ

ದಾವಣಗೆರೆಯ ರಾಂ ಆ್ಯಂಡ್ ಕೋ ವೃತ್ತದಲ್ಲಿ ಹೋಳಿ ಹಬ್ಬದ ಅಂಗವಾಗಿ ಅಪಾರ ಜನರ ಸಮ್ಮುಖದಲ್ಲಿ ಮಂಗಳವಾರ ರಾತ್ರಿ ಕಾಮದಹನ ನಡೆಸಲಾಯಿತು

‘ಒಗ್ಗಟ್ಟಿನಿಂದ ಒಕ್ಕೂಟ ವ್ಯವಸ್ಥೆಗೆ ಬಲ’

ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರಿಗೆ ಸಿದ್ದರಾಮಯ್ಯ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಮತ್ತು ರಾಜ್ಯಗಳ ನಡುವಿನ ಅಧಿಕಾರ ಹಾಗೂ ಆರ್ಥಿಕ ಹಂಚಿಕೆಯ ಅಸಮತೋಲನ ಸರಿಪಡಿಸಲು ಬಲವಾದ ಸಾಂಸ್ಥಿಕ ವೇದಿಕೆಯೊಂದನ್ನು ರಚಿಸಬೇಕಿದೆ’ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಈ ಪತ್ರ ಹಂಚಿಕೊಂಡಿರುವ ಸಿದ್ದರಾಮಯ್ಯ, ‘ಪ್ರಸ್ತುತ ನಿಷ್ಕ್ರಿಯ ಆಗಿರುವ ‘ಅಂತರರಾಜ್ಯ ಮಂಡಳಿ’ಯನ್ನು ತಕ್ಷಣ ಪುನರುಜ್ಜೀವನಗೊಳಿಸಿ, ಸಮಾನ ಮನಸ್ಕ ರಾಜ್ಯಗಳು ಒಟ್ಟುಗೂಡಿ ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಲು ಅವಕಾಶ ಕಲ್ಪಿಸಬೇಕಿದೆ’ ಎಂದಿದ್ದಾರೆ.

ಭಾರತದ ಸಾಂವಿಧಾನಿಕ ಚೌಕಟ್ಟಿನಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಕೇಂದ್ರ- ರಾಜ್ಯ ಸಂಬಂಧದ ಕುರಿತು ರಾಷ್ಟ್ರಮಟ್ಟದ ಚರ್ಚೆಗೆ ಬೆಂಬಲ ವ್ಯಕ್ತಪಡಿಸಿರುವ ಸಿದ್ದರಾಮಯ್ಯ, ‘ಒಕ್ಕೂಟ ವ್ಯವಸ್ಥೆಯ ಸಮತೋಲನವನ್ನು ಮರುಸ್ಥಾಪಿಸುವ ಹಾಗೂ ಭಾರತದ ಪ್ರಜಾಸತ್ತಾತ್ಮಕ ಚೌಕಟ್ಟನ್ನು ಬಲಪಡಿಸುವ ಯಾವುದೇ ರಚನಾತ್ಮಕ ಮತ್ತು ಸಕಾರಾತ್ಮಕ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಕರ್ನಾಟಕ ಸದಾ ಸಿದ್ಧವಾಗಿದೆ’ ಎಂದೂ ಹೇಳಿದ್ದಾರೆ.

ಮುಖ್ಯಾಂಶಗಳು
- ಸಮಾನ ಮನಸ್ಕ ರಾಜ್ಯಗಳು ಒಟ್ಟುಗೂಡಿ ಚರ್ಚೆ ನಡೆಸೋಣ
- ಪ್ರಬಲವಾದ ಸಾಂಸ್ಥಿಕ ವೇದಿಕೆ ರಚನೆಗೆ ಒಲವು

‘ಒಕ್ಕೂಟ ವ್ಯವಸ್ಥೆ ಎನ್ನುವುದು ಕೇವಲ ಒಂದು ರಾಜಕೀಯ ಬೇಡಿಕೆಯಲ್ಲ, ಅದು ನಮ್ಮ ಸಂವಿಧಾನದ ಮೂಲಭೂತ ರಚನೆಯ ಅವಿಭಾಜ್ಯ ಅಂಗ. ಕಳೆದ ಕೆಲವು ವರ್ಷಗಳಿಂದ ಆರ್ಥಿಕ ಮತ್ತು ಶಾಸಕಾಂಗ ವಿಷಯಗಳಲ್ಲಿ ಅಧಿಕಾರವು ಕೇಂದ್ರದತ್ತ ಹೆಚ್ಚು ಕೇಂದ್ರೀಕೃತವಾಗುತ್ತಿದೆ. ಇದು ಸಂವಿಧಾನ ರಚನೆಕಾರರು ರೂಪಿಸಿದ್ದ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸೂಕ್ಷ್ಮ ಸಮತೋಲನವನ್ನು ಕದಡಿದೆ. ರಾಜ್ಯಗಳಿಗೆ ವಹಿಸಲಾಗಿರುವ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಲು ಮತ್ತು ಜನಪರ ಯೋಜನೆಗಳನ್ನು ಜಾರಿಗೊಳಿಸಲು ಅವುಗಳಿಗೆ ಅಗತ್ಯವಿರುವ ಅಧಿಕಾರ ಹಾಗೂ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸುವುದು ಇಂದಿನ ತುರ್ತು ಅಗತ್ಯವಾಗಿದೆ’ ಎಂದೂ ಪತ್ರದಲ್ಲಿ ಸಿದ್ದರಾಮಯ್ಯ ಹೇಳಿದ್ದಾರೆ.

‘ರಾಜ್ಯಗಳು ಕೇವಲ ಕೇಂದ್ರದ ಯೋಜನೆಗಳನ್ನು ಜಾರಿಗೊಳಿಸುವ ಮತ್ತು ಅನುದಾನಕ್ಕಾಗಿ ಕಾಯುವ ಏಜೆನ್ಸಿಗಳಾಗಬಾರದು. ತಮ್ಮದೇ ಆದ ಆರ್ಥಿಕ ಸ್ವಾಯತ್ತತೆ ಹೊಂದಿರಬೇಕು. ವೈವಿಧ್ಯದಲ್ಲಿ ಏಕತೆ ಸಾಧಿಸಿರುವ ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ, ಎಲ್ಲ ರಾಜ್ಯಗಳ ಭೌಗೋಳಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳನ್ನು ಸಮಾನವಾಗಿ ಗೌರವಿಸಿದಾಗ ಮಾತ್ರ ದೇಶದ ಒಟ್ಟಾರೆ ಮತ್ತು ಸಮಗ್ರ ಅಭಿವೃದ್ಧಿ ಸಾಧ್ಯ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಚಿಟಿಕೆ ಸುದ್ದಿ

ಕಾರು ಹತ್ತಿಸಿ ಯುವಕನ ಕೊಲೆ

ಮನು

ಹೊಳೆನರಸೀಪುರ: ನಿಧಾನವಾಗಿ ಚಲಿಸಿ ಎಂದಿದ್ದಕ್ಕೆ ಕೋಪಗೊಂಡ ಫಾರ್ಚುನರ್ ವಾಹನದ ಚಾಲಕ ಗುಂಪಿನ ಮೇಲೆ ಸೋಮವಾರ ಮಧ್ಯರಾತ್ರಿ ಕಾರು ಹತ್ತಿಸಿದ್ದು, ಸೂರನಹಳ್ಳಿಯ ಮನು (27) ಸ್ಥಳದಲ್ಲೇ ಮೃತಪಟ್ಟರು.

ಅವರ ಗೆಳೆಯರಾದ ಅಭಿಷೇಕ್, ರಾಕೇಶ್, ಕುಶಾಲ್ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಚಾಲಕನ ಪತ್ತೆಗೆ ಕಾರ್ಯಾಚರಣೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಂಬ್ ಬೆದರಿಕೆ ಆರೋಪಿ ಬಂಧನ

ಶಂಕರ್ ಮೊಗೇರ್

ಮಂಗಳೂರು: ‘ಉಳ್ಳಾಲ ಮಸೀದಿ ಹತ್ತಿರ ಬಾಂಬ್ ಬ್ಲಾಸ್ಟ್ ಮಾಡುತ್ತೇನೆ’ ಎಂದು ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದ ಆರೋಪಿಯನ್ನು ಉಳ್ಳಾಲ ಠಾಣೆಯ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

‘ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಜಾಲಿ ದೇವಿನಗರದ ಶಂಕರ್ ಮಸ್ತಪ್ಪ ಮೊಗೇರ್ (35) ಬಂಧಿತ. ಕೃತ್ಯಕ್ಕೆ ಬಳಸಿದ ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ’ ಎಂದು ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಆರೋಪಿಯ ಪೋಸ್ಟ್ ಗಮನಿಸಿ ಪೊಲೀಸರು ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಸ್ವಯಂಪ್ರೇರಿತವಾಗಿ ಎಫ್‌ಐಆರ್ ದಾಖಲಿಸಿಕೊಂಡಿದ್ದರು.

ಮುಸ್ಲಿಮರಿಂದ ಹಿಂದೂ ಯುವಕನ ಶವ ಸಂಸ್ಕಾರ

ಬಾಳೆಹೊನ್ನೂರು (ಚಿಕ್ಕಮಗಳೂರು ಜಿಲ್ಲೆ): ಇಲ್ಲಿನ ಮಸೀದಿಕೆರೆ ಬಳಿ ಮೃತಪಟ್ಟಿದ್ದ ಹಿಂದೂ ಯುವಕನ ಶವ ಸಂಸ್ಕಾರವನ್ನು ಮುಸ್ಲಿಂ ಯುವಕರು ನಡೆಸಿದರು.

ಮೆಣಸುಕೊಡಿಗೆ ನಿವಾಸಿ ರಮೇಶ್ ಮಸೀದಿಕೆರೆಯ ಪಾಳುಬಿದ್ದ ಮನೆಯಲ್ಲಿ ಮೂರ್ನಾಲ್ಕು ದಿನಗಳ ಹಿಂದೆ ಮೃತರಾಗಿದ್ದರು. ದುರ್ವಾಸನೆ ಹರಡಿದ್ದರಿಂದ ಅವರ ಸಾವಿನ ಬಗ್ಗೆ ಗೊತ್ತಾಗಿತ್ತು. ಸಂಬಂಧಿಕರು ಶವ ಸಂಸ್ಕಾರಕ್ಕೆ ಮುಂದಾಗಿರಲಿಲ್ಲ.

ತುರ್ತು ರಕ್ಷಣಾ ಪಡೆಯ ಮುಖ್ಯಸ್ಥ ಅಸ್ಲಾಂ ಅವರ ಜತೆಗೂಡಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಇಬ್ರಾಹಿಂ ಶಾಫಿ, ಮಸೀದಿಕೆರೆ ರಫೀಕ್, ಸುಲೈಮಾನ್, ನೀರುಗಂಟಿ ನಾಗೇಂದ್ರ ಅವರೆಲ್ಲ ಸೇರಿ ಆಂಬುಲೆನ್ಸ್‌ನಲ್ಲಿ ಬೈರೇಗುಡ್ಡದ ಹಿಂದೂ ರುದ್ರಭೂಮಿಗೆ ಒಯ್ದು ಹಿಂದೂ ಸಂಪ್ರದಾಯದಂತೆ ಅಂತ್ಯ ಸಂಸ್ಕಾರ ನೆರವೇರಿಸಿದರು.

ಪೊಲೀಸ್ ಅಧಿಕಾರಿಗಳಾದ ಮಂಜುನಾಥ್ ಹಾಗೂ ಧರ್ಮರಾಜ್ ಸಹ ಪಾಲ್ಗೊಂಡಿದ್ದರು.

ವಿಮಾನಗಳ ಸಂಚಾರ ರದ್ದು

ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದಾಗಿ ಬೆಂಗಳೂರು, ಚೆನ್ನೈ, ಮುಂಬೈ, ದೆಹಲಿ, ಕೋಲ್ಕತ್ತಾದಲ್ಲಿ ಒಟ್ಟು 260ಕ್ಕೂ ಅಧಿಕ ವಿಮಾನಗಳ ಪ್ರಯಾಣವನ್ನು ಮಂಗಳವಾರ ರದ್ದುಗೊಳಿಸಲಾಗಿದೆ.

ಇರಾನ್ ಮೇಲೆ ಅಮೆರಿಕ ಹಾಗೂ ಇಸ್ರೇಲ್ ದಾಳಿ ಮುಂದುವರಿದ ಕಾರಣ ಹಲವು ವಿಮಾನಯಾನ ಸಂಸ್ಥೆಗಳು ಪ್ರಯಾಣ ರದ್ದುಗೊಳಿಸಿವೆ. ಹೀಗಾಗಿ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ. ಬೆಂಗಳೂರಿನಲ್ಲಿ 42 ವಿಮಾನಗಳ ಪ್ರಯಾಣ ರದ್ದಾಗಿದ್ದರೆ, ಚೆನ್ನೈನಲ್ಲಿ 30, ಮುಂಬೈನಲ್ಲಿ 107 ವಿಮಾನಗಳ ಸೇವೆಯನ್ನು ರದ್ದುಗೊಳಿಸಲಾಗಿದೆ. ದೆಹಲಿ ವಿಮಾನ ನಿಲ್ದಾಣಗಳಲ್ಲಿ 80 ವಿಮಾನ ರದ್ದಾಗಿದ್ದು, ಈ ಪೈಕಿ 36 ನಿರ್ಗಮನ ಹಾಗೂ 44 ಆಗಮಿಸಬೇಕಿದ್ದ ವಿಮಾನಗಳೂ ಸೇರಿವೆ.

ತಾಯ್ನಾಡಿಗೆ ಮರಳಿದ ಕನ್ನಡಿಗರು

ಒಂದನೇ ಪುಟದಿಂದ...

‘ಕೊಲ್ಲಿ ರಾಷ್ಟ್ರಗಳಲ್ಲಿ ಕ್ಷಿಪಣಿ ದಾಳಿಯಿಂದ ವಿಮಾನಯಾನ ಸೇವೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ಹೋಟೆಲ್, ವಿಮಾನ ನಿಲ್ದಾಣಗಳಲ್ಲಿ ಉಳಿದುಕೊಂಡಿದ್ದವು. ಆಗಸದಲ್ಲಿ ಕ್ಷಿಪಣಿಗಳು ಕಾಣಿಸಿಕೊಂಡ ತಕ್ಷಣ ವಿಮಾನ ನಿಲ್ದಾಣದಲ್ಲಿ ಜೋರಾಗಿ ಮೊಳಗುತ್ತಿದ್ದ ಸೈರನ್ ಸದ್ದು ಕೇಳುತ್ತಲೇ ಎದೆಬಡಿತ ತೀವ್ರವಾಗಿ ಭಯ ಕಾಡುತ್ತಿತ್ತು. ಸುರಕ್ಷಿತವಾಗಿ ಮನೆ ಸೇರಿದರೆ ಸಾಕು ಎಂದು ಪ್ರಾರ್ಥಿಸಿಕೊಳ್ಳುತ್ತಿದ್ದೆವು’ ಎಂದು ಬೆಂಗಳೂರಿಗೆ ಬಂದಿಳಿದ ಪ್ರಯಾಣಿಕರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ವಿಮಾನ ಹತ್ತಲು ಬಂದಾಗ ಏಕಾಏಕಿ ಸೈರನ್ ಮೊಳಗಿತು. ಕ್ಷಿಪಣಿ ಭೀತಿ ಇದೆ ಎಂದು ಹೇಳಿದರು. ಆಕಾಶದಲ್ಲಿ ಸಿಡಿಮದ್ದುಗಳು ಸಿಡಿಯುತ್ತಿದ್ದಂತೆ ಕಂಡಿತು. ನಾವು ಬೆಚ್ಚಿಬಿದ್ದೆವು. ಸುರಕ್ಷಿತವಾಗಿ ಮನೆ ತಲುಪಿದ್ದೇವೆ ಎಂಬುದೇ ನೆಮ್ಮದಿ’ ಎಂದು ಅಬುಧಾಬಿಯ ತೈಲ ಕಂಪನಿಯೊಂದರ ಉದ್ಯೋಗಿ ಮಂಗಳೂರಿನ ಸೌರಭ್ ಶೆಟ್ಟಿ ಅನುಭವ ಹಂಚಿಕೊಂಡರು.

ವಿಮಾನಯಾನ ಸಂಸ್ಥೆ ಉತ್ತಮ ವಸತಿ ಮತ್ತು ಆಹಾರ ವ್ಯವಸ್ಥೆ ಮಾಡಿತ್ತು. ಸುಮಾರು 15 ರಿಂದ 16 ವಿಮಾನಗಳು ಸಂಚರಿಸುತ್ತಿವೆ. ಭಾಗಶಃ ವಾಯುಪ್ರದೇಶ ಮಾತ್ರ ತೆರೆಯಲಾಗಿದೆ ಎಂದು ಬಾಸ್ಟನ್‌ನಿಂದ ಅಬುಧಾಬಿ ಮೂಲಕ ಬಂದ ಮಹೇಶ್ ತಿಳಿಸಿದರು.

ಡ್ರೋನ್ ದಾಳಿಯಿಂದ ಪ್ರಯಾಣ ಸ್ವಲ್ಪ ವಿಳಂಬವಾಯಿತು. ಆದರೆ ಸುರಕ್ಷಿತವಾಗಿ ತಾಯ್ನಾಡಿಗೆ ಸುರಕ್ಷಿತವಾಗಿ ಹಿಂತಿರುಗುವ ವ್ಯವಸ್ಥೆ ಮಾಡಿದರು ಎಂದು ಕೊಯಮತ್ತೂರಿನ ನಿರೂಬನ್ ಹೇಳಿದರು.

ಮರಳಲು ಕಾರಣರಾದ ಎತಿಹಾದ್ ಏರ್‌ವೇಸ್, ಸೌದಿ ಅರೇಬಿಯಾ ಹಾಗೂ ಭಾರತ ಸರ್ಕಾರಗಳಿಗೆ ಪ್ರಯಾಣಿಕರು ಕೃತಜ್ಞತೆ ಸಲ್ಲಿಸಿದರು.

ಕೊಲ್ಲಿಯಲ್ಲಿ ಚಿಕ್ಕಬಳ್ಳಾಪುರದ ಇನ್ನೂ 20 ಪ್ರವಾಸಿಗರು

ಚಿಕ್ಕಬಳ್ಳಾಪುರ: ಯುದ್ಧ ಪೀಡಿತ ಅಬುಧಾಬಿ ಮತ್ತು ದುಬೈನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ 20 ಪ್ರವಾಸಿಗರು ಸಿಲುಕಿದ್ದಾರೆ. ಕುಟುಂಬ ಸದಸ್ಯರೊಂದಿಗೆ ತೆರಳಿದ್ದ ಬಾಗೇಪಲ್ಲಿಯ ಎಂಟು ಮತ್ತು ಶಿಡ್ಲಘಟ್ಟದ 12 ಪ್ರವಾಸಿಗರು ಸುರಕ್ಷಿತವಾಗಿದ್ದಾರೆ.

ಬಾಗೇಪಲ್ಲಿಯ ಬಾಬುರೆಡ್ಡಿ, ನರೇಂದ್ರ ರೆಡ್ಡಿ ಮತ್ತು ಅಶೋಕ್ ಕುಟುಂಬ ಸದಸ್ಯರ ಜೊತೆ ಫೆ.24ರಂದು ಅಬುಧಾಬಿಗೆ ತೆರಳಿದ್ದರು. ಅಲ್ಲಿಂದ ಅವರು ಮಾರ್ಚ್ 1ರಂದು ಬೆಂಗಳೂರಿಗೆ ಮರಳಬೇಕಿತ್ತು. ಆದರೆ, ಯುದ್ಧ ಆರಂಭವಾದ ಕಾರಣ ಅಲ್ಲಿಯೇ ಸಿಲುಕಿದ್ದು, ಹೋಟೆಲ್‌ನಲ್ಲಿ ಉಳಿದುಕೊಂಡಿದ್ದು, ತಮ್ಮ ಕುಟುಂಬ ಸದಸ್ಯರೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ.

ಅದೇ ರೀತಿ ಶಿಡ್ಲಘಟ್ಟ ತಾಲ್ಲೂಕಿನ ಗಂಗನಹಳ್ಳಿಯ ವೈದ್ಯ ದಂಪತಿ ಡಾ. ಮಧುಕರ್, ಡಾ. ನಮಿತಾ ಮತ್ತು ಮಗಳು ಸೇರಿದಂತೆ ಒಟ್ಟು 12 ಪ್ರವಾಸಿಗರು ಎಂಟು ದಿನಗಳ ಪ್ರವಾಸಕ್ಕೆ ದುಬೈಗೆ ತೆರಳಿದ್ದರು. ಭಾನುವಾರ ಮರಳಬೇಕಿತ್ತು. ಆದರೆ, ವಿಮಾನ ಸಂಚಾರ ದಿಢೀರ್ ರದ್ದುಗೊಂಡಿದ್ದರಿಂದ 12 ಜನ ದುಬೈ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದಾರೆ. ಎಲ್ಲರೂ ಸುರಕ್ಷಿತವಾಗಿರುವುದಾಗಿ ಡಾ. ಮಧುಕರ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಗಂಗನಹಳ್ಳಿಯಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಡಾ. ಮಧುಕರ್ ತಮ್ಮ ತಂದೆ ಮತ್ತು ತಾಯಿ ಜೊತೆ ನಿರಂತರ ಸಂಪರ್ಕದಲ್ಲಿದ್ದು, ನಿತ್ಯದ ಬೆಳವಣಿಗೆಗಳ ಬಗ್ಗೆ ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ.

42 ವಿಮಾನ ಹಾರಾಟ ರದ್ದು

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮಂಗಳವಾರ ಬೆಳಗಿನ ಜಾವ 4.30ಕ್ಕೆ 56 ಪ್ರಯಾಣಿಕರನ್ನು ಹೊತ್ತು ದುಬೈಗೆ ಹೊರಟಿದ್ದ ಎಮಿರೆಟ್ಸ್ ವಿಮಾನ ಕೆಲವೇ ಹೊತ್ತಿನಲ್ಲಿ ಸುರಕ್ಷಿತವಾಗಿ ಬೆಂಗಳೂರಿಗೆ ಮರಳಿ ಬಂದಿದೆ.

ಪಶ್ಚಿಮ ಏಷ್ಯಾದ ವಾಯು ಪ್ರದೇಶವನ್ನು ತಾತ್ಕಾಲಿಕವಾಗಿ ಬಂದ್ ಮಾಡಿರುವ ಹಿನ್ನೆಲೆಯಲ್ಲಿ ವಿಮಾನ ಹಿಂದಿರುಗಿ ಬಂತು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ. ದುಬೈಗೆ ಹೊರಟಿದ್ದ ಪ್ರಯಾಣಿಕರಲ್ಲಿ ಹೆಚ್ಚಿನವರು ಅಲ್ಲಿಯ ನಾಗರಿಕರಾಗಿದ್ದರು ಎಂದು ತಿಳಿದು ಬಂದಿದೆ.

ಮಂಗಳವಾರ ಮಧ್ಯಾಹ್ನ 3ರವರೆಗೆ ಒಟ್ಟು 42 ವಿಮಾನಗಳ ಸಂಚಾರ ರದ್ದಾಗಿದೆ. ಅಬುಧಾಬಿ, ದುಬೈ, ರಿಯಾದ್, ಜೆದ್ದಾ ಹಾಗೂ ದೋಹಾ ಮಾರ್ಗಗಳ ಸಂಚಾರ ಅಸ್ತವ್ಯಸ್ತವಾಗಿದೆ ಎಂದು ವಿಮಾನ ನಿಲ್ದಾಣ ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕ ರಾಯಭಾರ ಕಚೇರಿ ಗುರಿ

ಒಂದನೇ ಪುಟದಿಂದ...

ರಿಯಾದ್ ಸೇರಿದಂತೆ ಎರಡು ನಗರಗಳಲ್ಲಿ ಎಂಟು ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಸೌದಿ ಅರೇಬಿಯಾ ಹೇಳಿದೆ. ಆದರೂ ಎರಡು ಡ್ರೋನ್‌ಗಳು ವಾಯು ರಕ್ಷಣಾ ವ್ಯವಸ್ಥೆಯನ್ನು ದಾಟಿ ರಾಯಭಾರ ಕಚೇರಿಗೆ ಅಪ್ಪಳಿಸಿವೆ.

ಕುವೈತ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿ ಗುರಿಯಾಗಿಸಿ ಇರಾನ್, ಸೋಮವಾರ ದಾಳಿ ನಡೆಸಿತ್ತು. ಮುಂದಿನ ಸೂಚನೆ ಬರುವವರೆಗೂ ರಾಯಭಾರ ಕಚೇರಿಯನ್ನು ಮುಚ್ಚಲಾಗಿದೆ ಎಂದು ಕುವೈತ್ ಹೇಳಿದೆ.

ಕುವೈತ್, ಬಹರೇನ್, ಇರಾಕ್, ಕತಾರ್ ಮತ್ತು ಜೋರ್ಡಾನ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿಗಳ ಕೆಲವು ಸಿಬ್ಬಂದಿ ಮತ್ತು ಅವರ ಕುಟುಂಬ ಸದಸ್ಯರನ್ನು ಮುನ್ನೆಚ್ಚರಿಕೆ ಕ್ರಮವಾಗಿ ಸುರಕ್ಷಿತ ತಾಣಕ್ಕೆ ಸ್ಥಳಾಂತರಿಸಲಾಗಿದೆ.

ಇಸ್ರೇಲ್‌ನ ಕೆಲವು ಗುರಿಗಳ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಜೆರುಸಲೇಂ ಮತ್ತು ಟೆಲ್ ಅವೀವ್‌ನಲ್ಲಿ ಸ್ಫೋಟದ ಸದ್ದು ಕೇಳಿಬಂದಿದೆ. ಬಹುತೇಕ ಕ್ಷಿಪಣಿಗಳನ್ನು ಇಸ್ರೇಲ್ ವಾಯು ರಕ್ಷಣಾ ವ್ಯವಸ್ಥೆ ಹೊಡೆದುರುಳಿಸಿದೆ.

‘ಇಸ್ರೇಲ್‌ನ ಕೇಂದ್ರ ಭಾಗದ ಮೂರು ತಾಣಗಳಲ್ಲಿ ಕ್ಷಿಪಣಿ ಬಿದ್ದು ಏಳು ಮಂದಿ ಗಾಯಗೊಂಡಿದ್ದಾರೆ’ ಎಂದು ಮಗೇನ್ ಡೇವಿಡ್ ಅಡೋಮ್ ತುರ್ತು ಸೇವೆಗಳ ಸಂಸ್ಥೆ ತಿಳಿಸಿದೆ.

ಟೆಹರಾನ್ ಮೇಲೆ ಭಾರಿ ದಾಳಿ: ಇರಾನ್ ರಾಜಧಾನಿ ಟೆಹರಾನ್‌ನಲ್ಲಿ ತಡರಾತ್ರಿಯಿಂದ ಬೆಳಗಿನ ಜಾವದವರೆಗೂ ಸ್ಫೋಟಗಳು ಸಂಭವಿಸಿದವು. ಯುದ್ಧ ವಿಮಾನಗಳ ನಿರಂತರ ಹಾರಾಟದ ಸದ್ದು ಕೇಳಿಬಂದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಯಾವೆಲ್ಲಾ ತಾಣಗಳನ್ನು ಗುರಿಯಾಗಿಸಲಾಗಿದೆ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಯುದ್ಧ ಆರಂಭವಾದಾಗಿನಿಂದ 787 ಮಂದಿ ಮೃತಪಟ್ಟಿದ್ದಾರೆ ಎಂದು ಇರಾನ್‌ನ ರೆಡ್ ಕ್ರೆಸೆಂಟ್ ಸಂಸ್ಥೆ ತಿಳಿಸಿದೆ.

ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ತಜ್ಞರ ಸಮಿತಿಯ ಕಟ್ಟಡದ ಮೇಲೆ ದಾಳಿ ನಡೆದಿದೆ ಎಂದು ಇರಾನ್‌ನ ಮಾಧ್ಯಮಗಳು ವರದಿ ಮಾಡಿವೆ. ಟೆಹರಾನ್‌ನ ಮೆಹರಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೂ ದಾಳಿಗೆ ಗುರಿಯಾಗಿದೆ.

13 ಯೋಧರು ಬಲಿ: ಟೆಹರಾನ್‌ನ 800 ಕಿ.ಮೀ ನಷ್ಟು ಆಗ್ನೇಯ ಭಾಗದ ಕೆರ್ಮನ್‌ನಲ್ಲಿರುವ ಸೇನಾ ನೆಲೆಯ ಮೇಲೆ ನಡೆದ ದಾಳಿಯಲ್ಲಿ ಇರಾನ್‌ನ 13 ಯೋಧರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಕೆರ್ಮನ್ ಸೇನಾ ನೆಲೆಯಲ್ಲಿ ಇರಾನ್ ತನ್ನ ಮಿಲಿಟರಿ ಹೆಲಿಕಾಪ್ಟರ್‌ಗಳನ್ನು ಇರಿಸಿದೆ.

ಇರಾನ್‌ನ ಪಶ್ಚಿಮ ಭಾಗದಲ್ಲಿರುವ ಹಮ್ದಾನ್ ನಗರದ ಮೇಲೆ ನಡೆದ ದಾಳಿಯಲ್ಲಿ ಐವರು ಮೃತಪಟ್ಟಿದ್ದಾರೆ. ಇಸ್ಫಹಾನ್ ಮತ್ತು ಶಿರಾಜ್ ನಗರಗಳ ಮೇಲೂ ದಾಳಿ ನಡೆದಿದೆ.

ಐಆರ್‌ಜಿಸಿ ಎಚ್ಚರಿಕೆ: ಇಸ್ರೇಲ್ ಹಾಗೂ ಅಮೆರಿಕದ ವಿರುದ್ಧದ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸುವುದಾಗಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ಎಚ್ಚರಿಸಿದೆ. ‘ಅಮೆರಿಕ ಮತ್ತು ಇಸ್ರೇಲ್‌ಗೆ ನರಕದ ಬಾಗಿಲು ಕ್ಷಣ ಕ್ಷಣಕ್ಕೂ ತೆರೆದುಕೊಳ್ಳಲಿದೆ’ ಎಂದು ಐಆರ್‌ಜಿಸಿ ವಕ್ತಾರ ಅಲಿ ಮೊಹಮ್ಮದ್ ನೈನಿ ಹೇಳಿದ್ದಾರೆ.

‘ಹೊರ್ಮುಜ್ ಜಲಸಂಧಿ ಮೂಲಕ ಹಾದುಹೋಗಲು ಪ್ರಯತ್ನಿಸುವ ಯಾವುದೇ ಹಡಗನ್ನು ನಾವು ಸುಡುತ್ತೇವೆ’ ಎಂದು ಐಆರ್‌ಜಿಸಿ ಜನರಲ್ ಸರ್ದಾರ್ ಜಬ್ಬಾರಿ ಎಚ್ಚರಿಸಿದ್ದಾರೆ.

ಯೂರೋಪ್ ರಾಷ್ಟ್ರಗಳಿಗೆ ಎಚ್ಚರಿಕೆ

ಇಸ್ರೇಲ್ ಮತ್ತು ಅಮೆರಿಕ ನಡೆಸುತ್ತಿರುವ ಮಿಲಿಟರಿ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳದಂತೆ ಯೂರೋಪಿನ ರಾಷ್ಟ್ರಗಳಿಗೆ ಇರಾನ್ ಮಂಗಳವಾರ ಎಚ್ಚರಿಕೆ ನೀಡಿದೆ.

ಇರಾನ್‌ನ ಕ್ಷಿಪಣಿ ವ್ಯವಸ್ಥೆಗಳನ್ನು ನಾಶ ಮಾಡಲು ‘ರಕ್ಷಣಾತ್ಮಕ ಕ್ರಮ’ ತೆಗೆದುಕೊಳ್ಳಲಾಗುವುದು ಎಂದು ಜರ್ಮನಿ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಹೇಳಿಕೆ ನೀಡಿರುವ ಬೆನ್ನಲ್ಲೇ ಇರಾನ್‌ನಿಂದ ಈ ಎಚ್ಚರಿಕೆ ಬಂದಿದೆ.

‘ಯೂರೋಪಿನ ರಾಷ್ಟ್ರಗಳು ಇರಾನ್ ವಿರುದ್ಧ ಕೈಗೊಳ್ಳುವ ಯಾವುದೇ ಕ್ರಮವನ್ನು ಆಕ್ರಮಣಕಾರರಿಗೆ ನೀಡಿದ ಬೆಂಬಲ ಎಂದೇ ಪರಿಗಣಿಸಲಾಗುತ್ತದೆ. ಅಂತಹ ಕ್ರಮ ಇರಾನ್ ವಿರುದ್ಧದ ಯುದ್ಧಕ್ಕೆ ಸಮನಾದ ಕೃತ್ಯ’ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯಿ ಹೇಳಿದ್ದಾರೆ.

‘ಸುರಕ್ಷತೆಯೇ ಪರಮ ಆದ್ಯತೆ’

ನವದೆಹಲಿ (ಪಿಟಿಐ): ‘ಇರಾನ್ ಮೇಲೆ ಅಮೆರಿಕ ಹಾಗೂ ಇಸ್ರೇಲ್ ಜಂಟಿಯಾಗಿ ದಾಳಿ ನಡೆಸುತ್ತಿರುವ ಈ ವೇಳೆಯಲ್ಲಿ, ಕೊಲ್ಲಿ ರಾಷ್ಟ್ರಗಳಲ್ಲಿ ನೆಲಸಿರುವ ಕೋಟಿ ಭಾರತೀಯರ ಸುರಕ್ಷತೆಯೇ ನಮ್ಮ ಪರಮ ಆದ್ಯತೆ’ ಎಂದು ಭಾರತ ಮಂಗಳವಾರ ಹೇಳಿದೆ.

ಈ ಸಂಘರ್ಷ ಆರಂಭಗೊಂಡ ನಂತರ ಎರಡನೇ ಹೇಳಿಕೆ ಬಿಡುಗಡೆ ಮಾಡಿರುವ ಭಾರತ, ‘ಪಶ್ಚಿಮ ಏಷ್ಯಾದಲ್ಲಿನ ಈ ಬೆಳವಣಿಗೆಗಳಿಂದ ಇಂಧನ ಪೂರೈಕೆಯಲ್ಲಿಯೂ ವ್ಯತ್ಯಯ ಆಗುವ ಸಾಧ್ಯತೆ ಇದೆ. ಇದು ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರಲಿದೆ’ ಎಂದು ಕಳವಳ ವ್ಯಕ್ತಪಡಿಸಿದೆ.

‘ರಾಜತಾಂತ್ರಿಕ ಮಾರ್ಗಗಳ ಮೂಲಕ ಸಂಘರ್ಷವನ್ನು ಶೀಘ್ರವೇ ಶಮನಗೊಳಿಸಲು ಮುಂದಾಗಬೇಕು’ ಎಂದೂ ಒತ್ತಾಯಿಸಿದೆ.

‘ಭಾರತವು ಪಶ್ಚಿಮ ಏಷ್ಯಾದ ನೆರೆ ರಾಷ್ಟ್ರ. ಈ ಪ್ರದೇಶದಲ್ಲಿನ ಸುರಕ್ಷತೆ ಹಾಗೂ ಸ್ಥಿರತೆಯು ಭಾರತದ ಪಾಲಿಗೆ ನಿರ್ಣಾಯಕವಾಗಿದೆ. ಆದರೆ, ಈಗಿನ ಬೆಳವಣಿಗೆ ಆತಂಕ ಹೆಚ್ಚಿಸಿವೆ’ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

‘ವಿಶ್ವದ ಹಲವೆಡೆ ಭಾರತೀಯರು ಉದ್ಯೋಗದಲ್ಲಿದ್ದಾರೆ. ಸರಕು ಸಾಗಣೆ ನೌಕೆಗಳಲ್ಲಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಂತಹ ನೌಕೆಗಳ ಮೇಲೆ ನಡೆದ ದಾಳಿಗಳಿಂದಾಗಿ ಕೆಲ ಭಾರತೀಯರು ಮೃತಪಟ್ಟಿದ್ದಾರೆ ಇಲ್ಲವೇ ನಾಪತ್ತೆಯಾಗಿದ್ದಾರೆ. ಹೀಗಾಗಿ, ಸರಕು ಸಾಗಿಸುವ ಹಡಗುಗಳ ಮೇಲೆ ದಾಳಿ ನಡೆಸುವುದನ್ನು ಭಾರತ ವಿರೋಧಿಸುತ್ತದೆ’ ಎಂದು ಸಚಿವಾಲಯ ಹೇಳಿದೆ.

ಇರಾನ್ ಸರ್ವೋಚ್ಚ ನಾಯಕ ಖಮೇನಿ ಹತ್ಯೆ: ಸಂಸತ್ತಿನಲ್ಲಿ ಚರ್ಚೆಗೆ ಆಗ್ರಹ

ಸರ್ಕಾರದ ಮೌನಕ್ಕೆ ಸೋನಿಯಾ ಟೀಕೆ

ಸೋನಿಯಾ ಗಾಂಧಿ

ನವದೆಹಲಿ (ಪಿಟಿಐ): ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆ ಕುರಿತು ಕೇಂದ್ರ ಸರ್ಕಾರ ಮೌನ ವಹಿಸಿರುವುದನ್ನು ಕಾಂಗ್ರೆಸ್ ಟೀಕಿಸಿದೆ.

‘ಸರ್ಕಾರ ಮೌನವಹಿಸಿರುವುದು ಭಾರತದ ವಿದೇಶಾಂಗ ನೀತಿಯ ವಿಶ್ವಾಸಾರ್ಹತೆಯ ಬಗ್ಗೆ ಗಂಭೀರ ಅನುಮಾನಗಳನ್ನು ಹುಟ್ಟು ಹಾಕುತ್ತದೆ. ಇದು, ತಟಸ್ಥ ನಿಲುವಲ್ಲ. ಬದಲಿಗೆ ಪದತ್ಯಾಗವಾಗಿದೆ’ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಕಟುವಾಗಿ ಟೀಕಿಸಿದ್ದಾರೆ.

‘ದಿ ಇಂಡಿಯನ್ ಎಕ್ಸ್‌ಪ್ರೆಸ್’ ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ ಲೇಖನದಲ್ಲಿ ಸೋನಿಯಾ ಗಾಂಧಿ ಈ ವಿಷಯ ಪ್ರಸ್ತಾಪಿಸಿದ್ದಾರೆ.

‘ಅಂತರರಾಷ್ಟ್ರೀಯ ವ್ಯವಸ್ಥೆಯ ಕುರಿತು ಸರ್ಕಾರದ ಗೊಂದಲ ಮೂಡಿಸುವ ಮೌನದ ಬಗ್ಗೆ ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಅವಧಿಯಲ್ಲಿ ಮುಕ್ತವಾಗಿ ಚರ್ಚಿಸಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

’ಖಮೇನಿ ಹತ್ಯೆ ಬಗ್ಗೆ ಭಾರತ ಸರ್ಕಾರ ಖಂಡಿಸಲಿಲ್ಲ. ರಾಷ್ಟ್ರವೊಂದರ ಹಾಲಿ ಮುಖ್ಯಸ್ಥರ ಹತ್ಯೆ ಕುರಿತು ಚರ್ಚೆ ನಡೆಯದಿದ್ದರೆ, ಅದು ಸಮಕಾಲೀನ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಬಿರುಕು ಮೂಡಿಸುತ್ತದೆ. ಆದರೂ, ಕೇಂದ್ರ ಸರ್ಕಾರ ಈ ವಿಷಯದಲ್ಲಿ ಮೌನವಹಿಸಿರುವುದು ಎದ್ದು ಕಾಣುತ್ತಿದೆ’ ಎಂದು ಸೋನಿಯಾ ಗಾಂಧಿ ಲೇಖನದಲ್ಲಿ ವಿವರಿಸಿದ್ದಾರೆ.

‘ಆರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ–ಇಸ್ರೇಲ್ ದಾಳಿಯನ್ನು ನಿರ್ಲಕ್ಷ್ಯಿಸಿ, ನಂತರ ಯುಎಇ ಮೇಲೆ ಇರಾನ್ ನಡೆಸಿದ ಪ್ರತಿಕಾರದ ದಾಳಿಯನ್ನು ಖಂಡಿಸುವುದಕ್ಕಷ್ಟೇ ಸೀಮಿತರಾದರು. ಆದರೆ, ಹಿಂದಿನ ಘಟನೆಗಳನ್ನು ಉಲ್ಲೇಖಿಸಲಿಲ್ಲ. ನಂತರ ಅವರು, ಈ ಘಟನೆಗಳ ಕುರಿತು ಕಳವಳ ವ್ಯಕ್ತಪಡಿಸಿ ‘ಸಂವಾದ ಮತ್ತು ರಾಜತಾಂತ್ರಿಕತೆ’ಯ ಬಗ್ಗೆ ಮಾತನಾಡಿದರು’ ಎಂದು ಸೋನಿಯಾ ಗಾಂಧಿ ವಿವರಿಸಿದ್ದಾರೆ.

‘ರಾಷ್ಟ್ರನಾಯಕನ ಹತ್ಯೆಯನ್ನು ಮೋದಿ ಬೆಂಬಲಿಸುತ್ತಾರೆಯೇ’

ರಾಹುಲ್ ಗಾಂಧಿ

ಪ್ರಧಾನಿ ನರೇಂದ್ರ ಮೋದಿಯವರು ಜಾಗತಿಕ ವಿದ್ಯಮಾನಗಳನ್ನು ವ್ಯಾಖ್ಯಾನಿಸುವಾಗ ಒಂದು ರಾಷ್ಟ್ರದ ಮುಖ್ಯಸ್ಥರ ಹತ್ಯೆಯನ್ನು ಬೆಂಬಲಿಸುತ್ತಾರೆಯೇ ಎಂಬ ಪ್ರಶ್ನೆಗೆ ಉತ್ತರ ನೀಡಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಒತ್ತಾಯಿಸಿದ್ದಾರೆ.

ಅಮೆರಿಕ–ಇಸ್ರೇಲ್–ಇರಾನ್ ಸಂಘರ್ಷದ ಬಗ್ಗೆ ‘ಎಕ್ಸ್’ ಮಾಡಿರುವ ಅವರು ‘ರಾಷ್ಟ್ರವೊಂದರ ನಾಯಕನ ಹತ್ಯೆ ಕುರಿತು ಪ್ರಧಾನಿಯವರು ಮಾತನಾಡಬೇಕು. ಇರಾನ್ ಹಾಗೂ ಪಶ್ಚಿಮ ಏಷ್ಯಾ ರಾಷ್ಟ್ರಗಳ ಮೇಲೆ ನಡೆಯುತ್ತಿರುವ ಏಕಪಕ್ಷೀಯ ದಾಳಿಯನ್ನು ಪ್ರಧಾನಿ ಮೋದಿಯವರು ಖಂಡಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರ ಮೌನವು ವಿಶ್ವದಲ್ಲಿ ಭಾರತದ ಸ್ಥಾನಮಾನವನ್ನು ಕುಗ್ಗಿಸುತ್ತಿದೆ’ ಅವರು ಎಂದು ಹೇಳಿದ್ದಾರೆ.

ಪಿಎಸ್ಐ, ಎಎಸ್ಐ ಲೋಕಾಯುಕ್ತ ಬಲೆಗೆ

ಚಿಕ್ಕಬಳ್ಳಾಪುರ: 'ಬಿ' ರಿಪೋರ್ಟ್ ಹಾಕಲು ಲಂಚಕ್ಕೆ ಬೇಡಿಕೆ ಇಟ್ಟ ಆರೋಪದ ಮೇಲೆ ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆ ಪಿಎಸ್‌ಐ ಶರಣಪ್ಪ ಮತ್ತು ಎಎಸ್‌ಐ ವೆಂಕಟೇಶಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮೊಟ್ಲೂರು ಗ್ರಾಮದ ರಘು ಎಂಬುವವರ ಪ್ರಕರಣಕ್ಕೆ ಸಂಬಂಧಿಸಿದ ಪ್ರಕರಣಕ್ಕೆ ‘ಬಿ’ ರಿಪೋರ್ಟ್ ಹಾಕಲು ₹1 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ₹80 ಸಾವಿರ ಪಡೆಯುವಾಗ ಕನ್ನಡ ಭವನದಲ್ಲಿ ಬಳಿ ಎಎಸ್‌ಐ ವೆಂಕಟೇಶಪ್ಪ ಮತ್ತು ನಗರ ಹೊರವಲಯದ ಚಿತ್ರಾವತಿ ಬಳಿ ಶರಣಪ್ಪ ಅವರನ್ನು ವಶಕ್ಕೆ ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಉಪ ನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂಖ್ಯೆ:ಡಿಡಿಪಿಐ/ವಿಜಯನಗರ/ಟೆಂಡರ್/2025-26/ ದಿನಾಂಕ: 27-02-2026

ಜೆಮ್ ಪೋರ್ಟಲ್ ಟೆಂಡರ್ ಪ್ರಕಟಣೆ

2024-25ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಅನುದಾನದಡಿ ವಿಜಯನಗರ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಈ ಕೆಳಗಿನ 5 ಕಾಮಗಾರಿ/ಸೇವೆಗಳಿಗಾಗಿ ಅರ್ಹನೋಂದಾಯಿತ ಗುತ್ತಿಗೆದಾರರಿಂದ/ಅಧಿಕೃತ ಸಂಸ್ಥೆಗಳಿಂದ ಜೆಮ್ (GEM PORTAL) ಪೋರ್ಟಲ್ ಮೂಲಕ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ/ಸೇವೆಯ ಹೆಸರು: 1.ಸರ್ಕಾರಿ ಶಾಲೆಗಳಿಗೆ ಸ್ಮಾರ್ಟ್‌ಕ್ಲಾಸ್ ಸಾಮಗ್ರಿಗಳ ಖರೀದಿ GEM/2026/B/7279746. **ಅಂದಾಜು ಮೊತ್ತ (ಲಕ್ಷಗಳಲ್ಲಿ):** 128.00. **ಬಿಡ್ ಪ್ರಾರಂಭದ ದಿನಾಂಕ:** 24/02/2026. **ಬಿಡ್ ಕೊನೆಯ ದಿನಾಂಕ:** 17/03/2026
2.ಸರ್ಕಾರಿ ಶಾಲೆಗಳಿಗೆ ಸ್ಮಾರ್ಟ್‌ಕ್ಲಾಸ್ ಸಾಮಗ್ರಿಗಳ ಖರೀದಿ GEM/2026/B/7282884. **ಅಂದಾಜುಮೊತ್ತ (ಲಕ್ಷಗಳಲ್ಲಿ):** 144.00. **ಬಿಡ್ ಪ್ರಾರಂಭದ ದಿನಾಂಕ:** 25/02/2026. **ಬಿಡ್ ಕೊನೆಯ ದಿನಾಂಕ:**18/03/2026
3.ಸರ್ಕಾರಿ ಶಾಲೆಗಳಿಗೆ ಸ್ಮಾರ್ಟ್‌ಕ್ಲಾಸ್ ಸಾಮಗ್ರಿಗಳ ಖರೀದಿ GEM/2026/B/7299541. **ಅಂದಾಜುಮೊತ್ತ (ಲಕ್ಷಗಳಲ್ಲಿ):** 32.00. **ಬಿಡ್ ಪ್ರಾರಂಭದ ದಿನಾಂಕ:** 27/02/2026. **ಬಿಡ್ ಕೊನೆಯ ದಿನಾಂಕ:**20/03/2026
4.ಸರ್ಕಾರಿ ಇ.ಸಿ.ಸಿ. ಇಶಾಲೆಗಳಿಗೆ ಪೀಠೋಪಕರಣಗಳ ಪೂರೈಕೆ ಹಾಗೂ ಇತರೆ GEM/2026/B/7280761. **ಅಂದಾಜುಮೊತ್ತ (ಲಕ್ಷಗಳಲ್ಲಿ):** 37.50. **ಬಿಡ್ ಪ್ರಾರಂಭದ ದಿನಾಂಕ:** 24/02/2026 **ಬಿಡ್ ಕೊನೆಯ ದಿನಾಂಕ:** 26/03/2026
5.ಸರ್ಕಾರಿ ಇ.ಸಿ.ಸಿ. ಇಶಾಲೆಗಳಿಗೆ ಪೀಠೋಪಕರಣಗಳ ಪೂರೈಕೆ ಹಾಗೂ ಇತರೆ GEM/2026/B/7277402. **ಅಂದಾಜುಮೊತ್ತ (ಲಕ್ಷಗಳಲ್ಲಿ):** 7.50. **ಬಿಡ್ ಪ್ರಾರಂಭದ ದಿನಾಂಕ:** 23/02/2026. **ಬಿಡ್ ಕೊನೆಯ ದಿನಾಂಕ:** 25/03/2026

ಸೂಚನೆಗಳು: 1.ಟೆಂಡರ್‌ನಲ್ಲಿ ಭಾಗವಹಿಸಲು ಮಾರಾಟಗಾರರು ಕಡ್ಡಾಯವಾಗಿ GeM Portal (suspicious link removed) ನಲ್ಲಿ ನೋಂದಾಯಿತರಾಗಿರಬೇಕು. 2.ಆಸಕ್ತರು ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ಫಾರಂಗಳನ್ನು (GEM PORTAL) ಪೋರ್ಟಲ್ (https://https://gem.gov.in) ಮೂಲಕ ಪಡೆಯಬಹುದು (Search by Bid Number). 3.ಟೆಂಡರನ್ನು ಕಾರಣ ನೀಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಪ್ರಾಧಿಕಾರ ಹೊಂದಿರುತ್ತದೆ. 4.ಅರ್ಹ ಬಿಡ್‌ದಾರರು 5% ಇ.ಎಂ.ಡಿ ಮೊತ್ತವನ್ನು ಕಾಮಗಾರಿವಾರು ಪ್ರತ್ಯೇಕವಾಗಿ ಬ್ಯಾಂಕ್ ಹುಂಡಿ ಮೂಲಕ ಸಲ್ಲಿಸುವುದು. 5.ಕಛೇರಿಯ ಕೆಲಸದ ಅವಧಿಯಲ್ಲಿ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು.

ಸಹಿ/-ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ವಿಜಯನಗರಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/564

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು- 560 009. ದೂ.ಸಂಖ್ಯೆ: 080-22265383, ವೆಬ್‌ಸೈಟ್: www.kiadb.in,

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಬಾಡಿಗೆ-ಸೇವೆ-01/3727/2025-26 ದಿನಾಂಕ: 02.03.2026

ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಕೆಐಎಡಿಬಿಯು ಪ್ಲಗ್ ಮತ್ತು ಪ್ಲೇ ಕಟ್ಟಡವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999 ಮತ್ತು ನಿಯಮ 2000ರನ್ವಯ ದ್ವಿ-ಲಕೋಟೆ ಪದ್ಧತಿಯಡಿಯಲ್ಲಿ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಸರ್ವೀಸ್‌ನ ವಿವರಗಳು : 1) ಬೆಂಗಳೂರು ಗ್ರಾಮಾಂತರ ಜಿಲ್ಲೆ , ದೊಡ್ಡಬಳ್ಳಾಪುರ ತಾಲ್ಲೂಕು, ಅಪಾರಲ್ ಪಾರ್ಕ್ 1ನೇ ಹಂತ ಕೈಗಾರಿಕಾ ಪ್ರದೇಶದ ಮಿನಿ ಟೆಕ್ಸ್‌ಟೈಲ್ ಪಾರ್ಕ್‌ನ ಪ್ಲಾಟ್ ನಂ. AM-02 ನಲ್ಲಿರುವ ಪ್ಲಗ್ ಮತ್ತು ಪ್ಲೇ ಕಟ್ಟಡವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡುವುದು. **2)** ಬೆಂಗಳೂರು ಗ್ರಾಮಾಂತರ ಜಿಲ್ಲೆ , ದೊಡ್ಡಬಳ್ಳಾಪುರ ತಾಲ್ಲೂಕು, ಅಪಾರಲ್ ಪಾರ್ಕ್ 1ನೇ ಹಂತ ಕೈಗಾರಿಕಾ ಪ್ರದೇಶದ ಮಿನಿ ಟೆಕ್ಸ್‌ಟೈಲ್ ಪಾರ್ಕ್‌ನ ಪ್ಲಾಟ್ ನಂ. AM-03-P4 ನಲ್ಲಿರುವ ಪ್ಲಗ್ ಮತ್ತು ಪ್ಲೇ ಕಟ್ಟಡವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡುವುದು..

ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ 26.03.2026ರ ಸಂಜೆ 4:00 ಗಂಟೆವರೆಗೆ.**

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು

DIPR/CP/5978/SA/2025-26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಯಾದಗಿರಿ.
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯ ಯಾದಗಿರಿ.
E-mail:bcmyadgiri03@gmail.com ದೂರವಾಣಿ ಸಂ:08473:253742.
ಜಿಲ್ಲಾಡಳಿತ ಭವನ, ಎರಡನೇ ಮಹಡಿ,ಕೋಣೆ ಸಂಖ್ಯೆ : ಸಿ-4, ಚಿತ್ತಾಪೂರ ರಸ್ತೆ, ಯಾದಗಿರಿ

ಜಿಹಿಂವಕಇಯಾ/ಲೆಕ್ಕ/ಹೊ.ಮೂ.ಟೆಂಡರ್/ಸಿಆರ್- /2025-26 ದಿನಾಂಕ:26.02.2026

:: ಟೆಂಡರ್ ಪ್ರಕಟಣೆ ::

ವಿಷಯ: 2026-27ನೇ ಸಾಲಿಗೆ ಯಾದಗಿರಿ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್-ಡಿ ಅಡುಗೆಯವರು, ಅಡುಗೆ ಸಹಾಯಕರು ಮತ್ತು ರಾತ್ರಿ ಕಾವಲುಗಾರರು ಹಾಗೂ ತಾಲ್ಲೂಕು ಕಚೇರಿಗಳಿಗೆ ಕಂಪ್ಯೂಟರ್ ಆಪ್‌ರೇಟರ್ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡುವ ಸಲುವಾಗಿ ನೊಂದಾಯಿತ ಅರ್ಹ ಮಾನವಸಂಪನ್ಮೂಲ ಸಂಸ್ಥೆಗಳಿಂದ ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಕುರಿತು.

2026-27ನೇ ಸಾಲಿಗೆ ಯಾದಗಿರಿ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್-ಡಿ ಅಡುಗೆಯವರು, ಅಡುಗೆ ಸಹಾಯಕರು ಮತ್ತು ರಾತ್ರಿ ಕಾವಲುಗಾರರು ಹಾಗೂ ತಾಲ್ಲೂಕು ಕಚೇರಿಗಳಿಗೆ ಕಂಪ್ಯೂಟರ್ ಆಪ್‌ರೇಟರ್ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಅರ್ಹ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ (E-Procurement) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಬುಕ್‌ಲೆಟ್ ಒಟ್ಟು (16) ಪುಟಗಳು ಹೊಂದಿರುತ್ತದೆ. ಟೆಂಡರ್‌ದಾರರು ಎಲ್ಲಾ ಪುಟಗಳನ್ನು ಕಡ್ಡಾಯವಾಗಿ ಓದಿ ಅದರಂತೆ ಕ್ರಮವಹಿಸುವುದು.

::ಇ-ಪ್ರೊಕ್ಯೂರಮೆಂಟ್‌ನಲ್ಲಿ ವಿವಿಧ ಹಂತದ ಘಟನಾವಳಿಗಳನ್ನು ಜರುಗಿಸಲು ಸಿದ್ದಪಡಿಸಿದ ಕಾಲಬದ್ಧ ವೇಳಾಪಟ್ಟಿ::

1) ಟೆಂಡರ್ ಪ್ರಕಟಣೆ ಹೊರಡಿಸುವ ದಿನಾಂಕ: 26.02.2026 2) ಟೆಂಡರ್‌ಗಿಟ್ಟ ಅಂದಾಜು ಮೊತ್ತ: ವಾರ್ಷಿಕವಾಗಿ ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 320.00 ಲಕ್ಷ (ಪ್ರತಿ ತಿಂಗಳಿಗೆ ಅಂದಾಜು ರೂ 27.00 ಲಕ್ಷದಂತೆ) 3) ಟೆಂಡರ್‌ನಲ್ಲಿ ಪಾವತಿಸಬೇಕಾದ ಇ.ಎಮ್.ಡಿ ಮೊತ್ತ: ರೂ. 4.80 ಲಕ್ಷ 4) ಆನ್‌ಲೈನ್ ಮೂಲಕ ಟೆಂಡರ್ ಬಿಡ್‌ಗಳನ್ನು, ಆಸಕ್ತ ಟೆಂಡರ್‌ದಾರರಿಗೆ ಒದಗಿಸುವಂತೆ ಮಾಡುವುದು.: 27.02.2026 5) ಟೆಂಡರ್ ಬಿಡ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 27.02.2026 6) ಪ್ರಿ-ಬಿಡ್ ದಿನಾಂಕ: 13.03.2026 7) ಟೆಂಡರ್ ಬಿಡ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ವೇಳೆ: 13.04.2026 8) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ(TENATIVE): 15.04.2026 9) ಆರ್ಥಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ (TENATIVE): 23.04.2026 10) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಿಲ್ಲಾ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಯಾದಗಿರಿ. ದೂರವಾಣಿ ಸಂಖ್ಯೆ: 08473-253742

1) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಿದ ಟೆಂಡರ್‌ಗಳನ್ನು ಮಾತ್ರ ಪರಿಗಣಿಸಲಾಗುವುದು. 2) ಕಾರ್ಯಾಲಯದಲ್ಲಿ ಭೌತಿಕವಾಗಿ ಟೆಂಡರ್ ಕವರ್‌ಗಳನ್ನು ನೀಡಿದವುಗಳನ್ನು ಪರಿಗಣಿಸಲಾಗುವುದಿಲ್ಲ. 3) ಕ್ರಮ ಸಂಖ್ಯೆ 6 ಮತ್ತು 7 ರಲ್ಲಿ ಇರುವ ದಿನಾಂಕಗಳನ್ನು ಟೆಂಡರ್ ಸಮಿತಿಯ/ಟೆಂಡರ್ ಸಮಿತಿಯ ಅಧ್ಯಕ್ಷರ ಆಡಳಿತಾತ್ಮಕ ಅನುಕೂಲತೆಗೆ ಅನುಗುಣವಾಗಿ (ಅನಿವಾರ್ಯ ಸಂದರ್ಭದಲ್ಲಿ) ಬದಲಾವಣೆಗೊಳಿಸಬಹುದಾಗಿದೆ. 4) ಟೆಂಡರ್ ಬಿಡ್‌ಗಳನ್ನು ತೆರೆಯುವ ದಿನಾಂಕ ಬದಲಾದಲ್ಲಿ ಅದನ್ನು ಕಾರ್ಯಾಲಯದಿಂದ ಅಧಿಕೃತವಾಗಿ ಬಿಡ್‌ದಾರರ ಇ ಮೇಲ್ ವಿಳಾಸಕ್ಕೆ ಕಳುಹಿಸಲಾಗುವುದು. 5) ಟೆಂಡರ್ ತೆರೆಯುವ ಸಂದರ್ಭದಲ್ಲಿ ಆಸಕ್ತ ಹಾಗೂ ಉಪಸ್ಥಿತರಿದ್ಧ ಟೆಂಡರ್‌ದಾರರ ಸಮಕ್ಷಮಲ್ಲಿ ತೆರೆಯಲಾಗುವುದು. (ಅನಿವಾರ್ಯ ಕಾರಣದಿಂದಾಗಿ ಟೆಂಡರದಾರರು ಅನುಪಸ್ಥಿತಿ ಇದ್ದರೂ ಕೂಡ ಟೆಂಡರ್ ತೆರೆಯುವ ಕಾರ್ಯ ಮುಂದುವರೆಯುತ್ತದೆ.) 6) ಟೆಂಡರ್‌ನಲ್ಲಿ ನಿಗದಿತ ಇ.ಎಂ.ಡಿ/ಟೆಂಡರ್ ಬುಕ್‌ಲೆಟ್‌ಗಾಗಿ ನಿಗದಿಪಡಿಸಿದ ಶುಲ್ಕಗಳಿಗಾಗಿ ಬ್ಯಾಂಕ್ ಡಿಡಿ(ಹುಂಡಿ)ಯನ್ನು ಇ-ಪ್ರೊಕ್ಯೂರಮೆಂಟ್ ಮೂಲಕವೇ ಸಲ್ಲಿಸತಕ್ಕದ್ದು. 7) ಸದರಿ ಟೆಂಡರ್‌ನ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಯಾದಗಿರಿ ಇದ್ದು ಟೆಂಡರ್ ಸ್ವೀಕರಿಸುವ ಪ್ರಾಧಿಕಾರ ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ ರವರು ಆಗಿರುತ್ತಾರೆ.

ಸಹಿ/- ಜಿಲ್ಲಾ ಹಿಂದುಳಿದ ವರ್ಗಗಳ
ಕಲ್ಯಾಣಾಧಿಕಾರಿಗಳು ಯಾದಗಿರಿ

ವಾ.ಸಾ.ಸಂ.ಇ/ಯಾದಗಿರ/562/ಕೆ.ಎಸ್.ಎಂ.ಸಿ.&ಎ/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಚಿಂತನೆ ಇಲ್ಲದೆ ಕಲಿಯುವುದು ವ್ಯರ್ಥ. ಕಲಿಯದೇ ಚಿಂತನೆ ಮಾಡುವುದು ಅಪಾಯಕರ.

-ಕನ್‌ಫ್ಯೂಷಿಯಸ್

ಸಂಪಾದಕೀಯ

ತನಿಖಾ ಸಂಸ್ಥೆಗಳ ದುರುಪಯೋಗಕ್ಕೆ 'ಕೇಜ್ರಿವಾಲ್ ಪ್ರಕರಣ' ಹಿಡಿದ ಕನ್ನಡಿ

ತನಿಖಾ ಸಂಸ್ಥೆಗಳ ದುರುಪಯೋಗದ ಮೂಲಕ ವಿರೋಧ ಪಕ್ಷಗಳ ನಾಯಕರ ಮೇಲೆ ಕೇಂದ್ರ ಸರ್ಕಾರ ಹಿಂಬಾಗಿಲ ಅಭಿಯಾನ ನಡೆಸುತ್ತಿದೆ ಎನ್ನುವ ಆರೋಪಗಳಿಗೆ ದೆಹಲಿ ವಿಶೇಷ ನ್ಯಾಯಾಲಯದ ಇತ್ತೀಚಿನ ತೀರ್ಪು ಪುಷ್ಟಿ ನೀಡುವಂತಿದೆ. ಅಬಕಾರಿ ನೀತಿಗೆ ಸಂಬಂಧಿಸಿದ ಪ್ರಕರಣದಲ್ಲಿ, ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ ಹಾಗೂ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಇತರ ಇಪ್ಪತ್ತೆರಡು ಜನರನ್ನು ನ್ಯಾಯಾಲಯ ಆರೋಪಗಳಿಂದ ಬಿಡುಗಡೆ ಮಾಡಿದೆ. ಸಿಬಿಐ ವಿಶೇಷ ನ್ಯಾಯಾಲಯ ನೀಡಿರುವ ತೀರ್ಪು ಮತ್ತು ಅವಲೋಕನಗಳು, ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ, 'ತೆಲಂಗಾಣ ಜಾಗೃತಿ' ಸಂಘಟನೆಯ ಅಧ್ಯಕ್ಷೆ ಕೆ. ಕವಿತಾ ಸೇರಿದಂತೆ ವಿಚಾರಣೆ ಎದುರಿಸಿದವರೆಲ್ಲರೂ ನಿರ್ದೋಷಿಗಳು ಎಂದು ಬಿಡುಗಡೆ ಮಾಡಿದೆ; ಈ ತೀರ್ಪು, ತನಿಖೆ ನಡೆಸಿದ ಕೇಂದ್ರೀಯ ತನಿಖಾ ತಂಡದ (ಸಿಬಿಐ) ಕಾರ್ಯನಿರ್ವಹಣೆಯ ಬಗೆಗಿನ ಕಟುಟೀಕೆಯೂ ಆಗಿದೆ. ಆರೋಪಿಗಳು ಸಂಚು ರೂಪಿಸಿದ ಅಥವಾ ಅಪರಾಧ ಎಸಗುವ ಉದ್ದೇಶ ಹೊಂದಿದ್ದರು ಎನ್ನುವುದನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿರುವ ತನಿಖಾ ಸಂಸ್ಥೆ, ಊಹೆಗಳ ಆಧಾರದಲ್ಲಿ ಸಂಚಿನ ಸಂಕಥನವೊಂದನ್ನು ಕಟ್ಟಲು ಪ್ರಯತ್ನಿಸಿದೆ ಎಂದು ಕಟು ಶಬ್ದಗಳಲ್ಲಿ ಟೀಕಿಸಿದೆ. ಪ್ರಕರಣದಲ್ಲಿನ ವಿರೋಧಾಭಾಸಗಳು ಮತ್ತು ಸಿಬಿಐ ತನಿಖಾ ವಿಧಾನದಲ್ಲಿನ ಲೋಪಗಳನ್ನು ನ್ಯಾಯಾಲಯ ತನ್ನ ತೀರ್ಪಿನಲ್ಲಿ ಗುರುತಿಸಿದೆ.

ಅಬಕಾರಿ ನೀತಿ ಪ್ರಕರಣದಲ್ಲಿ ಕೇಜ್ರಿವಾಲ್ ಅವರು ಬಿಡುಗಡೆ ಆಗಿರುವುದು, ತನಿಖಾ ಸಂಸ್ಥೆಗಳನ್ನು ರಾಜಕೀಯ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರ ಬಳಸಿಕೊಳ್ಳುತ್ತಿದೆ ಎನ್ನುವ ಆರೋಪಗಳನ್ನು ಬಲಪಡಿಸುತ್ತಿದೆ

ನಿರ್ದಿಷ್ಟ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಪೂರಕವಾಗಿ ಅಬಕಾರಿ ನೀತಿಯನ್ನು ರೂಪಿಸಲು ₹100 ಕೋಟಿ ಪಡೆಯಲಾಗಿದೆ ಎಂದು ಆರೋಪಿಸಿ, ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಸಿಬಿಐ 2022ರ ಆಗಸ್ಟ್‌ನಲ್ಲಿ ಪ್ರಕರಣ ದಾಖಲಿಸಿತ್ತು. ಆ ಪ್ರಕರಣದಲ್ಲಿ, ಆಗ ದೆಹಲಿಯ ಮುಖ್ಯಮಂತ್ರಿಯಾಗಿದ್ದ ಅರವಿಂದ ಕೇಜ್ರಿವಾಲ್ ಹಾಗೂ ಮತ್ತಿತರ ನಾಯಕರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ಕೇಜ್ರಿವಾಲ್ ಅವರು ಆರು ತಿಂಗಳು ಹಾಗೂ ಸಿಸೋಡಿಯಾ ಅವರು ಎರಡು ವರ್ಷಗಳ ಕಾಲ ಜೈಲಿನಲ್ಲಿದ್ದರು. ಜಾಮೀನು ಪಡೆಯುವುದಕ್ಕಾಗಿ ಆರೋಪಿಗಳು ದೀರ್ಘ ಕಾಲದ ಕಾನೂನು ಹೋರಾಟ ನಡೆಸಬೇಕಾಯಿತು. ವಿಚಾರಣೆಯ ನಂತರ ನಿರ್ದೋಷಿಗಳ ಬಿಡುಗಡೆಯಾಗಿದೆ ಎಂದು ಈ ಪ್ರಕರಣವನ್ನು ಭಾವಿಸುವಂತಿಲ್ಲ. ಆರೋಪಗಳ ಜೊತೆಗೆ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಗಳನ್ನು ರದ್ದುಪಡಿಸಿರುವ ಕೋರ್ಟ್, ಇದು ವಿಚಾರಣೆಗೆ ಅರ್ಹವಾದ ಪ್ರಕರಣವೇ ಅಲ್ಲ ಎಂದು ಹೇಳಿರುವುದನ್ನು ಗಮನಿಸಬೇಕು.

ತೀರ್ಪು ಪ್ರಕಟವಾದ ನಂತರ ಭಾವೋದ್ವೇಗದಿಂದ ಕಣ್ಣೀರು ಸುರಿಸಿದ ಕೇಜ್ರಿವಾಲ್ ಅವರು, ತಮ್ಮ ವಿರುದ್ಧದ ಭ್ರಷ್ಟಾಚಾರ ಪ್ರಕರಣವು ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಬಹುದೊಡ್ಡ ರಾಜಕೀಯ ಪಿತೂರಿ ಎಂದು ಹೇಳಿದ್ದಾರೆ. ಅವರ ವಾದಕ್ಕೆ ನ್ಯಾಯಾಲಯದ ತೀರ್ಪು ಇಂಬು ನೀಡುವಂತಿದೆ. ಇಷ್ಟಾದರೂ, ವಿಶೇಷ ನ್ಯಾಯಾಲಯದ ತೀರ್ಪನ್ನು ಹೈಕೋರ್ಟ್‌ನಲ್ಲಿ ಸಿಬಿಐ ಪ್ರಶ್ನಿಸಿದೆ. ಈ ಪ್ರಕರಣ ಮಾತ್ರವಲ್ಲದೆ, ಕೇಜ್ರಿವಾಲ್ ಮತ್ತು ಇತರರು ಇದೇ ಬಗೆಯ ಆರೋಪಗಳನ್ನು ಜಾರಿ ನಿರ್ದೇಶನಾಲಯದಿಂದಲೂ (ಇಡಿ) ಎದುರಿಸುತ್ತಿದ್ದಾರೆ. ವಿಶೇಷ ನ್ಯಾಯಾಲಯದ ತೀರ್ಪು ಅತ್ಯಂತ ಸ್ಪಷ್ಟವಾಗಿದೆ; ನ್ಯಾಯಾಂಗ ಪರಿಶೀಲನೆಯಲ್ಲಿ ಪ್ರಕರಣವು ವಿಫಲವಾಗಿದೆ ಎನ್ನುವ ಅಭಿಪ್ರಾಯವು ಪ್ರಕರಣದ ಹಿಂದಿನ ರಾಜಕೀಯ ಪ್ರೇರಣೆ ಆರೋಪಗಳನ್ನು ದೃಢಗೊಳಿಸುವಂತಿದೆ. ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ, 'ಅನ್ಯಾಯವು ಎಲ್ಲಿದೆಯೋ ನ್ಯಾಯಕ್ಕೆ ಬೆದರಿಕೆಯಾಗಿದೆ' ಎನ್ನುವ ಪ್ರಸಿದ್ಧ ಮಾತನ್ನು ನ್ಯಾಯಮೂರ್ತಿ ಜಿತೇಂದ್ರ ಸಿಂಗ್ ಅವರು ತಮ್ಮ ತೀರ್ಪಿನ ಕೊನೆಯಲ್ಲಿ ಉಲ್ಲೇಖಿಸಿದ್ದಾರೆ. ಅಬಕಾರಿ ನೀತಿ ಪ್ರಕರಣದಲ್ಲಿ ಕೇಜ್ರಿವಾಲ್ ಅವರಿಗೆ ಗಂಭೀರ ಹಿನ್ನಡೆ ಉಂಟಾಗುವಂತೆ ರಾಜಕೀಯ ಸಂಕಥನವನ್ನು ಬಿಜೆಪಿ ಹಾಗೂ ಕೇಂದ್ರ ಸರ್ಕಾರ ವಿನ್ಯಾಸಗೊಳಿಸಿದ್ದವು. ಅದರಿಂದಾಗಿ ಕೇಜ್ರಿವಾಲ್ ಅವರ ವರ್ಚಸ್ಸಿಗೆ ಧಕ್ಕೆಯಾಗಿತ್ತು ಹಾಗೂ ಅವರು ಅಧಿಕಾರ ಕಳೆದುಕೊಂಡರು. ಪ್ರಸಕ್ತ ತೀರ್ಪು ಮಾಜಿ ಮುಖ್ಯಮಂತ್ರಿಯ ರಾಜಕೀಯ ಭವಿಷ್ಯದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎನ್ನುವುದನ್ನು ಕಾದುನೋಡಬೇಕು. ಆದರೆ, ತನಿಖಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ತನ್ನ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದೆ ಎನ್ನುವ ವಿರೋಧ ಪಕ್ಷಗಳ ದೀರ್ಘಕಾಲದ ವಾದವನ್ನು ಪ್ರಸಕ್ತ ತೀರ್ಪು ದೃಢಪಡಿಸುತ್ತಿದೆ.

ಚಾಟಿ

ಬೆವರಿನ ಶಕ್ತಿ

ಯಾರು ನೀರಿನಲ್ಲಿ ಮೀಯುತ್ತಾರೋ ಅವರು ತಮ್ಮ ಬಟ್ಟೆ ಬದಲಿಸುತ್ತಾರೆ. ಯಾರು ಬೆವರಿನಲ್ಲಿ ಮೀಯುತ್ತಾರೋ ಅವರು ಇತಿಹಾಸ ಬದಲಿಸುತ್ತಾರೆ.

ಮೀನಾಕ್ಷಿ ಬಾಳಿ, ಲೇಖಕಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ನಮ್ಮದು ಆಂತರಿಕ ಪ್ರಜಾಪ್ರಭುತ್ವ ಇರುವ ಪಕ್ಷ. ಕಾಂಗ್ರೆಸ್ ಪಕ್ಷ ಎನ್ನುವುದು ಪ್ರಧಾನಿ ಎದುರು ಬಾಯಿ ಬಿಡಲಾಗದೆ ಕೈಕಾಲು ನಡುಗುವಂತಹ ಸ್ಥಿತಿ ಇರುವ ಬಿಜೆಪಿಯೂ ಅಲ್ಲ; ಏಕ ಕುಟುಂಬದ ಆಧಿಪತ್ಯ ಇರುವ ಜೆಡಿಎಸ್ ಕೂಡ ಅಲ್ಲ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 4-3-2001

• ಕೃಷಿ ವಿದ್ಯುತ್ ದರ ಹೆಚ್ಚಳಕ್ಕೆ ಸಲಹೆ

ನವದೆಹಲಿ, ಮಾರ್ಚ್ 3 (ಪಿಟಿಐ)– ರಾಜ್ಯ ವಿದ್ಯುತ್ ಮಂಡಳಿಗಳನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಕೃಷಿಗೆ ಬಳಸುವ ವಿದ್ಯುತ್ ದರವನ್ನು ಸರಾಸರಿ ವೆಚ್ಚದ ಶೇ 50ಕ್ಕೆ ಏರಿಸಬೇಕು ಎಂದು ಪ್ರಧಾನಿ ವಾಜಪೇಯಿ ಅವರು, ಇಂದು ರಾಜ್ಯಗಳಿಗೆ ಕರೆ ನೀಡಿದ್ದಾರೆ.

ಇಂದು ಇಲ್ಲಿ ನಡೆದ ವಿದ್ಯುತ್ ವಲಯದ ಸುಧಾರಣೆಗಳ ಕುರಿತ ಮುಖ್ಯಮಂತ್ರಿಗಳ ಸಮಾವೇಶದಲ್ಲಿ ಮಾತನಾಡಿದ ವಾಜಪೇಯಿ, ಒಂದು ಯೂನಿಟ್ ವಿದ್ಯುತ್‌ಗೆ 50 ಪೈಸೆ ದರ ಏರಿಸಬೇಕು ಎಂದು 1996ರ ಮುಖ್ಯಮಂತ್ರಿಗಳ ಸಮಾವೇಶದಲ್ಲಿ ಕೈಗೊಂಡಿದ್ದ ನಿರ್ಣಯವು ಸಂಪೂರ್ಣವಾಗಿ ಜಾರಿಗೊಳ್ಳದಿರುವ ಬಗ್ಗೆ ವಿಷಾದಿಸಿದರು.

ಕೇಂದ್ರ ಮತ್ತು ರಾಜ್ಯಗಳ ನಡುವೆ ಉತ್ತಮ ಸಹಕಾರವಿದ್ದರೆ ಮಾತ್ರ ವಿದ್ಯುತ್ ಕ್ಷೇತ್ರದ ಸುಧಾರಣೆ ಸಾಧ್ಯ ಎಂದರು.

• ಸಂಪನ್ಮೂಲ ಅಭಿವೃದ್ಧಿಗೆ ಖಾಸಗಿ ನೆರವು: ಲಕ್ಕಪ್ಪಗೌಡ

ಬೆಂಗಳೂರು, ಮಾರ್ಚ್ 3– 'ಕೇವಲ ಸರ್ಕಾರದ ಅನುದಾನದ ಮೇಲೆಯೇ ಅವಲಂಬಿತವಾಗದೆ ಖಾಸಗಿಯವರ ನೆರವನ್ನೂ ಪಡೆದುಕೊಂಡು ವಿಶ್ವ ವಿದ್ಯಾಲಯದ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು' ಹಂಪಿ ಕನ್ನಡ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ನೇಮಕಗೊಂಡಿರುವ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರ ಆಶಯ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೂರನೇ ಕುಲಪತಿಯಾಗಿ ಮಾರ್ಚ್ 7ರಂದು ಅಧಿಕಾರ ವಹಿಸಿಕೊಳ್ಳಲಿರುವ ಅವರು, ಇಂದು 'ಪ್ರಜಾವಾಣಿ'ಯ ಜತೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

'ಸರ್ಕಾರದ ಅನುದಾನದ ಜೊತೆಗೆ ವಿ.ವಿ ಸಂಪನ್ಮೂಲ ಕ್ರೋಢೀಕರಿಸುವ ಅಗತ್ಯ ಹೆಚ್ಚಿದೆ ಇದೆ' ಎಂದರು.

75 ವರ್ಷಗಳ ಹಿಂದೆ

ಭಾನುವಾರ, 4-3-1951

• ಭಾರತ-ಇಂಡೋನೇಷಿಯ ಮೈತ್ರಿ ಒಪ್ಪಂದಕ್ಕೆ ಸಹಿ

ಜಕಾರ್ತಾ, ಮಾ. 3– ಭಾರತ-ಇಂಡೋನೇಷಿಯ ನಡುವೆ ಶಾಂತಿ ಮತ್ತು ಚಿರಸಖ್ಯವಿರಲೋಸುಗ ಇಂಡೋನೇಷಿಯವು ಭಾರತದೊಂದಿಗೆ ಸೌಹಾರ್ದ ಒಪ್ಪಂದಕ್ಕೆ ಈ ದಿನ ಇಲ್ಲಿ ಸಹಿ ಹಾಕಿತು.

ಒಪ್ಪಂದಕ್ಕೆ ಸಹಿ ಹಾಕಿದ ಮೇಲೆ ಇಂಡೋನೇಷಿಯದ ವಿದೇಶಾಂಗ ಸಚಿವ ಡಾ. ಮಹಮದ್ ರೋಯೆಮ್‌ರು ಭಾರತದ ರಾಯಭಾರಿ ಡಾ. ಪಿ. ಸುಬ್ಬರಾಯನ್ ರೊಡನೆ ಕೈಕುಲುಕುತ್ತ ಅನೇಕ ಶತಮಾನಗಳಿಂದ ಭಾರತ- ಇಂಡೊನೇಷಿಯಾವನ್ನು ಬಂಧಿಸಿದ್ದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಬಂಧನಗಳನ್ನು ನೆನಪಿಸಿ, ಇಂಡೋನೇಷಿಯದ ಸ್ವಾತಂತ್ರ್ಯ ಸಮರದಲ್ಲಿ ಭಾರತ ನೀಡಿದ ನೆರವನ್ನು ಒತ್ತಿ ಹೇಳಿದರು.

ಶಿಕ್ಷಣಕ್ಕೂ ಬಜೆಟ್ ಅಗತ್ಯವೆ?

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

> ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸುವ ಬಂಡವಾಳವು ತಕ್ಷಣದ ರಾಜಕೀಯ ಲಾಭ ತಂದುಕೊಡುವುದಿಲ್ಲ. ಆದರೆ, ಅದರಿಂದ ಉಂಟಾಗುವ ದೀರ್ಘಕಾಲದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಲಾಭ ಮೌಲ್ಯಕ್ಕೆ ಸಿಗದಂತಹದ್ದು. ಸಮಾನ ಅವಕಾಶಗಳ ಸಮಾಜದ ಬಗ್ಗೆ ನಂಬಿಕೆಯುಳ್ಳ ಸರ್ಕಾರಗಳು 'ಶಿಕ್ಷಣ ಕೇಂದ್ರಿತ ಬಜೆಟ್'ಗೆ ಆದ್ಯತೆ ನೀಡುವುದು ಅನಿವಾರ್ಯ.

ಬಜೆಟ್ ಎನ್ನುವುದು ಆರ್ಥಿಕ ವರ್ಷದ ಆದಾಯ-ವೆಚ್ಚಗಳ ಲೆಕ್ಕಾಚಾರ ಮಾತ್ರವಲ್ಲ; ಅದು ನಾಡಿನ ಅಭಿವೃದ್ಧಿಯ ಈ ಹಿಂದೆ ಕೈಗೊಂಡ ಕಾರ್ಯಕ್ರಮಗಳನ್ನು ಪರಾಮರ್ಶಿಸಿ, ನಿರಂತರ ಮತ್ತು ನಾವೀನ್ಯದ ಮೂಲಕ ಭವಿಷ್ಯದಲ್ಲಿ ಎಲ್ಲರನ್ನೊಳಗೊಳ್ಳುವ ಬಲಿಷ್ಠ ಕರ್ನಾಟಕವನ್ನು ಕಟ್ಟಿಕೊಳ್ಳಲು ಯಾವ ದಿಕ್ಕಿನಲ್ಲಿ ಸಾಗಬೇಕೆಂದು ನಿರ್ಧರಿಸುವ ನೀತಿ ದರ್ಶಕ ದಸ್ತಾವೇಜು. ಮುಖ್ಯವಾಗಿ ದಾರಿದೀಪ. ಸಾಮಾನ್ಯವಾಗಿ ಒಂದು ಸರ್ಕಾರ ತನ್ನ ಮೌಲ್ಯ, ಆದ್ಯತೆ, ಸಾಮಾಜಿಕ ದೃಷ್ಟಿಕೋನ ಮತ್ತು ಅಭಿವೃದ್ಧಿಯ ಮಾದರಿಯನ್ನು ಬಜೆಟ್ ಮೂಲಕವೇ ವ್ಯಕ್ತಪಡಿಸುತ್ತದೆ. ಬಜೆಟ್ ಜನತೆಯ ಮೂಲಭೂತ ಹಕ್ಕುಗಳಾದ ಶಿಕ್ಷಣ, ಆರೋಗ್ಯ, ಉದ್ಯೋಗ, ವಸತಿ, ಪೌಷ್ಟಿಕ ಆಹಾರ ಇತ್ಯಾದಿ ಕ್ಷೇತ್ರಗಳನ್ನು ಯಾವ ರೀತಿಯಲ್ಲಿ ಆದ್ಯತೀಕರಿಸುತ್ತದೆ ಹಾಗೂ ಪ್ರಜಾಪ್ರಭುತ್ವದ ಮೂಲ ಆಶಯಗಳನ್ನು ಪ್ರತಿಬಿಂಬಿಸುವ ಮೂಲಕ ಎಷ್ಟರಮಟ್ಟಿಗೆ ಜನಪರವಾಗಿದೆ ಎಂಬುದರ ಪ್ರತೀಕವಾಗುತ್ತದೆ. ಈ ಲೇಖನದ ಆಶಯ ಬಜೆಟ್ಟೊಂದನ್ನು ಶಿಕ್ಷಣದ ಕಣ್ಣಿನಿಂದ ನೋಡುವುದಾಗಿದೆ.

ಒಂದು ಹಂತದವರೆಗಿನ ಉಚಿತ ಕಡ್ಡಾಯ ಗುಣಾತ್ಮಕ ಶಿಕ್ಷಣವು ಸಮಾನತೆ, ಸಾಮಾಜಿಕ ನ್ಯಾಯ, ಸಾಮಾಜಿಕ-ಆರ್ಥಿಕ ಚಲನೆ ಮತ್ತು ಪ್ರಜಾಪ್ರಭುತ್ವದ ಬಲವರ್ಧನೆಗೆ ಅಡಿಪಾಯವಾಗುತ್ತದೆ. ಉತ್ತಮ ನಾಗರಿಕ ಸಮಾಜವನ್ನು ಕಟ್ಟಿಕೊಳ್ಳುವ ದಿಸೆಯಲ್ಲಿ, ಶಿಕ್ಷಣಕ್ಕೆ ಹೂಡುವ ಬಜೆಟ್ ಒಂದು ಪರಿವರ್ತನಾ ಸಾಧನವಾಗುತ್ತದೆ. ಲಿಂಗ, ಜಾತಿ, ಧರ್ಮ, ಭೌಗೋಳಿಕ ಮತ್ತು ಸಾಮಾಜಿಕ-ಆರ್ಥಿಕ ನೆಲೆಯಲ್ಲಿನ ಅಂತರವನ್ನು ತೊಡೆದು ಸಮಸಮಾಜದ ನಿರ್ಮಾಣಕ್ಕೆ ಬಜೆಟ್ ಸೇತುವೆಯಾಗುತ್ತದೆ.

ನ್ಯೂಜಿಲೆಂಡ್‌ನ ಶಿಕ್ಷಣ ವ್ಯವಸ್ಥೆ ಗಮನಿಸಿ. ಅದು, ಜಾತಿ ಆಧಾರಿತ ನೆಲೆಯಲ್ಲಿ 'ಹಿಂದುಳಿದ ವರ್ಗ' ವ್ಯವಸ್ಥೆಯನ್ನು ಬಳಸುವ ಬದಲು, ಸಾಮಾಜಿಕ-ಆರ್ಥಿಕವಾಗಿ ಅತ್ಯಂತ ನಿರ್ಲಕ್ಷ್ಯಕ್ಕೊಳಗಾದ ಸಮುದಾಯಗಳಲ್ಲಿರುವ ಅಸಮಾನತೆ ಹಾಗೂ ತಾರತಮ್ಯದ ಅಂತರವನ್ನು ಪರಿಹರಿಸುವತ್ತ ಗಮನ ಹರಿಸುತ್ತದೆ. ಆ ಸಮುದಾಯಗಳ ಮಕ್ಕಳಿಗೆ ಹೆಚ್ಚುವರಿ ಸಂಪನ್ಮೂಲಗಳನ್ನು ಒದಗಿಸುತ್ತದೆ. ಅದರಿಂದ ಸಾಮಾಜಿಕ ಅಂತರ ಕಡಿಮೆಯಾಗಿ, ಮಾನವ ಅಭಿವೃದ್ಧಿಯ ಕಣದಲ್ಲಿ ಎಲ್ಲರಿಗೂ ಸಮಾನ ಮತ್ತು ನ್ಯಾಯಯುತ ಅವಕಾಶ ಸೃಷ್ಟಿಯಾಗುತ್ತದೆ. ಇದೇ ಮಾದರಿಯಲ್ಲಿ, ಕರ್ನಾಟಕದಲ್ಲಿ ಅಲೆಮಾರಿ ಸಮುದಾಯಗಳಿಗೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ, ವಲಸೆ ಸಮುದಾಯಗಳಿಗೆ, ಲೈಂಗಿಕ ಅಲ್ಪಸಂಖ್ಯಾತರಿಗೆ ಮತ್ತು ಸಂಖ್ಯಾಬಲವಿಲ್ಲದ ಸಣ್ಣ ಸಮುದಾಯಗಳಿಗೆ ಹೆಚ್ಚಿನ ಅನುದಾನ ಹಂಚಿಕೆ ಮಾಡಿದರೆ, ಶಾಲಾ ಶಿಕ್ಷಣದಲ್ಲಿನ ಅಸಮಾನತೆ ಮತ್ತು ತಾರತಮ್ಯವನ್ನು ತೊಡೆದು ಹಾಕಬಹುದಾಗಿದೆ.

ಇಂದು ಸರ್ಕಾರಿ ಶಾಲೆಗಳೆಂದರೆ ಶೋಷಿತ ವರ್ಗಗಳಾದ ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ಸಮುದಾಯ, ಹೆಣ್ಣುಮಕ್ಕಳು ಮತ್ತು ವಿಶೇಷ ಅಗತ್ಯಗಳಿರುವ ಮಕ್ಕಳು ಕಲಿಯುವ ಶಾಲೆಗಳೆಂಬಂತಾಗಿದೆ. ಈ ಶಾಲೆಗಳಿಗೆ ಆದ್ಯತೆಯ ಮೇಲೆ ಹಣ ಹೂಡುವುದೆಂದರೆ ಸಮಾನ ಅವಕಾಶ, ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಸಾಧನೆಗಾಗಿ ಹಣ ಹೂಡಿದಂತಾಗುತ್ತದೆ. ಇಂಥ ಘನ ಕಾರ್ಯಕ್ಕೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಸಂಪನ್ಮೂಲ ಸಂಘಟಿಸುತ್ತೇವೆಂಬುದು ಸಾಂವಿಧಾನಿಕ ಹೊಣೆಯಿಂದ ನುಣುಚಿಕೊಂಡಂತೆ ಆಗುತ್ತದೆ. ಅದೊಂದು ಪೂರಕ ಸಂಪನ್ಮೂಲವಷ್ಟೆ.

ವಿಶ್ವದ ಹಲವು ರಾಷ್ಟ್ರಗಳು ಶಿಕ್ಷಣ ಕೇಂದ್ರೀಕೃತ ಬಜೆಟ್ ಮಾದರಿಗಳನ್ನು ಅನುಸರಿಸಿ ಗಮನಾರ್ಹ ಫಲಿತಾಂಶಗಳನ್ನು ಕಂಡಿವೆ. ಈ ರಾಷ್ಟ್ರಗಳು ತಮ್ಮ ಬಜೆಟ್ ರೂಪುರೇಷೆಯಲ್ಲಿ ಶಿಕ್ಷಣವನ್ನು ಪ್ರಥಮ ಆದ್ಯತೆಯಾಗಿ ಪರಿಗಣಿಸಿವೆ; ದೀರ್ಘಕಾಲಿಕ ಮಾನವ ಸಂಪನ್ಮೂಲ ಅಭಿವೃದ್ಧಿಯ ಮೂಲಕ ಸುಸ್ಥಿರ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡಿವೆ. ಎಸ್ಟೋನಿಯಾ, ಫ್ರಾನ್ಸ್, ಭೂತಾನ್, ಫಿನ್ಲೆಂಡ್‌ನಂತಹ ದೇಶಗಳು ಮೂಲ ಸೌಕರ್ಯಕ್ಕಿಂತ ಹೆಚ್ಚಿನ ಆದ್ಯತೆಯನ್ನು ಶಿಕ್ಷಕರ ನೇಮಕಾತಿ, ಶಿಕ್ಷಕರ ವೇತನ, ನಿರಂತರ ವೃತ್ತಿಪರ ಅಭಿವೃದ್ಧಿ ಮತ್ತು ಸಮಾನತೆಗೆ ನೀಡುತ್ತವೆ.

ಫಿನ್ಲೆಂಡ್‌ನ ಬಜೆಟ್ ಯೋಜನೆಗಳು ಕಟ್ಟಡ ಅಥವಾ ತಂತ್ರಜ್ಞಾನಕ್ಕಿಂತ ಹೆಚ್ಚಾಗಿ ಶಿಕ್ಷಕರ ಗುಣಮಟ್ಟ ಮತ್ತು ಕಲಿಕಾ ಸಮಾನತೆಗೆ ಒತ್ತು ನೀಡುತ್ತವೆ. ಕೆನಡಾ ದೇಶವು ಪ್ರಾಂತ್ಯಾಧಾರಿತ ಶಿಕ್ಷಣ ಬಜೆಟ್ ವ್ಯವಸ್ಥೆಯನ್ನು ಹೊಂದಿದ್ದು, ಬಹುಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯವನ್ನು ಪರಿಗಣಿಸಿ ಸ್ಥಳೀಯ ಸಮುದಾಯಗಳ ಪಾಲ್ಗೊಳ್ಳುವಿಕೆಯ ಮೂಲಕ ಬಲಿಷ್ಠ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ. ಸಿಂಗಪುರ ಮತ್ತು ಹಾಂಗ್‌ಕಾಂಗ್‌ನಂತಹ ದೇಶಗಳು ಉನ್ನತ ಕಾರ್ಯಕ್ಷಮತೆಯ ವ್ಯವಸ್ಥೆಗಳೊಂದಿಗೆ, ಶೈಕ್ಷಣಿಕ ಫಲಿತಾಂಶ ಹೆಚ್ಚಿಸಲು ಶಿಕ್ಷಕರ ಗುಣಮಟ್ಟದ ಮೇಲೆ ಕೇಂದ್ರೀಕರಿಸುತ್ತವೆ. ಇದೇ ಮಾದರಿಯಲ್ಲಿ ನಮ್ಮ ದೇಶದ ಕೆಲವು ರಾಜ್ಯಗಳು ಮೂಲಸೌಕರ್ಯದ ಜೊತೆ ಜೊತೆಗೆ ಶಿಕ್ಷಕರ ಗುಣಮಟ್ಟ ಮತ್ತು ಸಮಾನತೆಯತ್ತ ಗಮನಹರಿಸುತ್ತಿವೆ. ದೆಹಲಿ, ಕೇರಳ ಮತ್ತು ಹಿಮಾಚಲಪ್ರದೇಶ ಅತಿಯಾದ ಶೈಕ್ಷಣಿಕ ತಂತ್ರಜ್ಞಾನ ಅಥವಾ ನಿರ್ಮಾಣ ವೆಚ್ಚದ ಬದಲಾಗಿ, ಶಿಕ್ಷಕರ ತರಬೇತಿ, ನೇಮಕಾತಿ ಮತ್ತು ಶಿಕ್ಷಣ ಸುಧಾರಣೆಗೆ ಆದ್ಯತೆ ನೀಡುತ್ತಿವೆ.

ಈ ತತ್ವಗಳನ್ನು ನಾವು ಕರ್ನಾಟಕಕ್ಕೆ ಅನ್ವಯಿಸಿ ನೋಡುವುದಾದರೆ, ಕರ್ನಾಟಕಕ್ಕೊಂದು 'ಶಿಕ್ಷಣ ಬಜೆಟ್' ಕಾರ್ಯಸಾಧುವಲ್ಲ ಎನ್ನಿಸುತ್ತದೆ. ಕರಾವಳಿ, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ, ಮಲೆನಾಡು, ಬಯಲುಸೀಮೆ, ಹಳೆಯ ಮೈಸೂರು, ಇತ್ಯಾದಿ ಭಾಗಗಳಿಗೆ ಯಾವ ಬಗೆಯ ಸಂಪನ್ಮೂಲ ಹೂಡಬೇಕೆಂಬುದು ಬಜೆಟ್‌ನ ಆಶಯವಾಗಬೇಕು. ಉದಾಹರಣೆಗೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಹಂತದಲ್ಲಿ ಖಾಲಿ ಇರುವ ಸುಮಾರು 63,000 ಶಿಕ್ಷಕರ ಹುದ್ದೆಗಳ ಪೈಕಿ 22,595 ಹುದ್ದೆಗಳು ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿವೆ. ಸ್ವಾಭಾವಿಕವಾಗಿ ಆ ಭಾಗದ ತಕ್ಷಣದ ಆದ್ಯತೆ ಶಿಕ್ಷಕರ ನೇಮಕಾತಿ. ಕರಾವಳಿ ಹಾಗೂ ಮಲೆನಾಡು ಪ್ರದೇಶದಲ್ಲಿ ನಿರಂತರ ಮಳೆಯ ಕಾರಣದಿಂದ ಶಿಥಿಲಾವಸ್ಥೆಯಲ್ಲಿನ ಕಟ್ಟಡಗಳು ಮಕ್ಕಳ ಪ್ರಾಣಕ್ಕೆ ಮಾರಕವಾಗಿವೆ. ಎಲ್ಲ ಬಗೆಯ ಹವಾಮಾನಕ್ಕೆ ಹೊಂದಿಕೊಳ್ಳಬಲ್ಲ ದೀರ್ಘಕಾಲಿಕ ಉತ್ತಮ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ ಇಲ್ಲಿನ ಆದ್ಯತೆ. ಹಳೇ ಮೈಸೂರು ಮತ್ತು ಬೆಂಗಳೂರಿನ ಸುತ್ತಮುತ್ತಲ ಭಾಗದಲ್ಲಿ ಸ್ವಲ್ಪಮಟ್ಟಿಗೆ ಉತ್ತಮ ಮೂಲ ಸೌಲಭ್ಯಗಳಿದ್ದರೂ, ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಖಾಸಗೀಕರಣಕ್ಕೆ ತಡೆಯೊಡ್ಡಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಮೇಲೆ ಪಾಲಕ-ಪೋಷಕರಿಗೆ ಮತ್ತಷ್ಟು ಭರವಸೆ ಮೂಡಿಸುವ ಕೆಲಸಗಳು ಈ ಭಾಗದ ಆದ್ಯತೆಗಳಾಗಬೇಕಿದೆ.

ಶಿಕ್ಷಣ ಕೇಂದ್ರಿತ ಬಜೆಟ್ ಮಾದರಿಯೆಂದರೆ ಶಿಕ್ಷಣಕ್ಕೆ ಹೆಚ್ಚಿನ ಹಣ ಹೂಡಿಕೆ ಮಾತ್ರವಲ್ಲ. ಬದಲಿಗೆ, ಶಿಕ್ಷಣದಿಂದ ಎಲ್ಲವೂ ಸಾಧ್ಯವೆಂಬ ಬಲವಾದ ನಂಬಿಕೆ, ರಾಜಕೀಯ ಬದ್ಧತೆ, ಸ್ಪಷ್ಟ ಗುರಿ, ವಿಕೇಂದ್ರೀಕೃತ ಶೈಕ್ಷಣಿಕ ಆಡಳಿತ, ವಿದ್ಯಾರ್ಥಿ ಕೇಂದ್ರಿತ ಕಲಿಕೆ, ನಿರಂತರ ಮೌಲ್ಯಮಾಪನ, ಆದರ್ಶಪ್ರಾಯ ದಕ್ಷ ಶಿಕ್ಷಕರು ಮತ್ತು ಸಮರ್ಥ ನಾಯಕತ್ವ ಮುಖ್ಯವಾಗುತ್ತದೆ. ಬಹುತೇಕ ಸಂದರ್ಭದಲ್ಲಿ ನಮ್ಮ ಬಜೆಟ್ ಹಣದ ಬಹುಭಾಗ ಕಟ್ಟಡ ನಿರ್ಮಾಣ, ಸ್ಮಾರ್ಟ್ ತರಗತಿ ಕೋಣೆ ಅಗತ್ಯಗಳಾದ ಕಂಪ್ಯೂಟರ್ ತಂತ್ರಜ್ಞಾನ ಮತ್ತು ಪೂರಕ ಸಾಮಗ್ರಿಗಳ ಖರೀದಿ, ಮುಖ ಗುರುತಿಸುವಿಕೆ ತಂತ್ರಜ್ಞಾನ ವ್ಯವಸ್ಥೆಯ (ಎಫ್‌ಆರ್‌ಎಸ್) ಅಳವಡಿಕೆ ಇತ್ಯಾದಿಗಳಲ್ಲೇ ಕಳೆದು ಹೋಗುತ್ತದೆ. ಮೂಲ ಸೌಕರ್ಯ ಸುಧಾರಣೆಗಳು ಅಗತ್ಯ. ಆದರೆ, ಬಜೆಟ್ ಕಟ್ಟಡ ನಿರ್ಮಾಣಕ್ಕೆ ಮತ್ತು ವಸ್ತುಗಳನ್ನು ಕೊಳ್ಳಲು ಸೀಮಿತವಾಗಬಾರದು.

2011-12ರಲ್ಲಿ ಶಾಲಾ ಶಿಕ್ಷಣಕ್ಕೆ ಮೀಸಲಿಟ್ಟ ಅನುದಾನ ₹11,064 ಕೋಟಿ. 2025-26ರಲ್ಲಿ ಆ ಮೊತ್ತ ₹45,286 ಕೋಟಿಗೆ ಏರಿದೆ. ಈಗಿನ ವಾಸ್ತವಿಕ ಮೌಲ್ಯ ಮತ್ತು ನೈಜ ಮೌಲ್ಯದ ವ್ಯತ್ಯಾಸಗಳನ್ನು ಪರಿಗಣಿಸಿದ್ದಾಗ್ಯೂ, ಗಣನೀಯ ಏರಿಕೆಯಾಗಿರುವುದು ಸತ್ಯ. ಏರಿಕೆಗೆ ಅನುಗುಣವಾದ ಫಲಿತಾಂಶ ದೊರೆತಿದೆಯೇ ಎಂದು ನೋಡಿದರೆ, ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಮಾಣ ಹಾಗೂ ಶಿಕ್ಷಕರ ಕೊರತೆ ಗಣನೀಯವಾಗಿ ಹೆಚ್ಚಿದೆ; ಕಲಿಕೆಯ ಗುಣಮಟ್ಟ ಮತ್ತು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಮೇಲಿನ ನಂಬಿಕೆ ಕುಸಿದಿದೆ. ಕನ್ನಡದ ಮಕ್ಕಳು ಕನ್ನಡ ಭಾಷೆಯಲ್ಲಿ ಅನುತ್ತೀರ್ಣರಾಗುವ ಕಾಲವಿದು. 2024-25ರ ಯುಡೈಸ್ ವರದಿ ಅನ್ವಯ ಪ್ರೌಢ ಶಿಕ್ಷಣದ ಹಂತದಲ್ಲಿ ಶೇ 22.9ರಷ್ಟು ಮಕ್ಕಳು ಶಾಲೆ ತೊರೆಯುತ್ತಿರುವುದು ಆತಂಕ ಮೂಡಿಸುತ್ತದೆ. ಹಾಗಾದರೆ, ನಮ್ಮ ಹೂಡಿಕೆಯೆಲ್ಲ ಏನಾಯಿತೆಂದು ಗಂಭೀರವಾಗಿ ಯೋಚಿಸಬೇಕಿದೆ. ಈ ಹಿಂದೆ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ನೀಡುತ್ತಿದ್ದ ಉಚಿತ ಬೈಸಿಕಲ್ ವ್ಯವಸ್ಥೆಯ ಮರುಪ್ರಾರಂಭ ಸಹಾಯಕ ಆಗಬಲ್ಲುದೇ ಎಂದು ನೋಡಬೇಕಿದೆ.

ಸಾಂಪ್ರದಾಯಿಕವಾಗಿ ಬಜೆಟ್‌ಗಳು, ಬಜೆಟ್ ಸಂದರ್ಭದಲ್ಲಿ ಎಷ್ಟು ಅನುದಾನ ನೀಡಲಾಗಿದೆ ಎಂಬ ಚರ್ಚೆಗೆ ಸೀಮಿತವಾಗುತ್ತವೆ. ಒದಗಿಸಿದ ಹಣ ಎಷ್ಟು ಪರಿಣಾಮಕಾರಿಯಾಗಿ ಖರ್ಚಾಗಿದೆ ಎಂಬ ಬಗ್ಗೆ ಅಳತೆಗಳಾಗಲೀ ಚರ್ಚೆಗಳಾಗಲೀ ವಿರಳ. ಶಿಕ್ಷಣ ಕ್ಷೇತ್ರದಲ್ಲಿ ಕಲಿಕಾ ಕೇಂದ್ರಿತ ಬಜೆಟ್ ಅಳವಡಿಸಿದರೆ, ಕಲಿಕಾ ಗುಣಮಟ್ಟವನ್ನು ನಿಖರವಾಗಿ ಅಳೆಯಬಹುದು. ಉದಾಹರಣೆಗೆ, ತರಗತಿ 3, 5 ಮತ್ತು 7ರ ವಿದ್ಯಾರ್ಥಿಗಳ ನಿಗದಿತ ಗಣಿತ ಸಾಮರ್ಥ್ಯ ಎಷ್ಟರಮಟ್ಟಿಗೆ ಈಡೇರಿದೆ ಎಂಬುದನ್ನು ವಾರ್ಷಿಕವಾಗಿ ಮೌಲ್ಯಮಾಪನ ಮಾಡಿ ಶಾಲಾ ಹಂತದಿಂದ ಜಿಲ್ಲಾ ಹಂತದವರೆಗೆ ಕ್ರೋಡೀಕರಿಸಿ, ಆ ಫಲಿತಾಂಶಗಳ ಆಧಾರದಲ್ಲಿ ಬಜೆಟ್‌ನಲ್ಲಿ ಜಿಲ್ಲಾವಾರು ಅನುದಾನ ಹಂಚಿಕೆಯಾದರೆ, ಅದು ಪರಿಮಾಣಾತ್ಮಕ ಮಾತ್ರವಾಗಿರದೆ, ಗುಣಾತ್ಮಕವಾಗಿರುತ್ತದೆ. ಇದರಿಂದ ಬಜೆಟ್ ಬರೀ ವೆಚ್ಚದ ದಾಖಲೆಯಾಗದೆ ಗುಣಮಟ್ಟ ಸುಧಾರಣೆಯ ಸಾಧನವೂ ಆಗುತ್ತದೆ.



ವಾಚಕರ ವಾಣಿ

ಗ್ರಾಮೀಣ ಸಾರಿಗೆ ಸಂಚಾರಕ್ಕೆ 'ನಿಶ್ಶಕ್ತಿ'

'ಶಕ್ತಿ' ಯೋಜನೆ ಜಾರಿಗೆ ಬಂದ ನಂತರ ಗ್ರಾಮೀಣ ಪ್ರದೇಶದಲ್ಲಿ ಖಾಸಗಿ ಬಸ್‌ಗಳ ಸಂಚಾರ ಬಹುತೇಕ ನಿಂತುಹೋಗಿದೆ. ಇದಕ್ಕೆ ಹಲವು ಉದಾಹರಣೆ ನೀಡಬಹುದು. ಹೊಳಲ್ಕೆರೆಯಿಂದ ಬೆಂಗಳೂರಿಗೆ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಆರಂಭಿಸ ಲಾಗಿದೆ. ಇದರಿಂದ ಹೊಳಲ್ಕೆರೆ, ಚಿತ್ರಹಳ್ಳಿ, ಹೊರಕೇದೇವಪುರ, ಉಪ್ಪರಿಗೇನ ಹಳ್ಳಿ, ಹಿರಿಯೂರು ಮಾರ್ಗವಾಗಿ ಬೆಂಗಳೂರಿಗೆ ಬರುವ 75ಕ್ಕೂ ಹೆಚ್ಚು ಹಳ್ಳಿಗಳ ಜನರಿಗೆ ಅನುಕೂಲವಾಗಿದೆ. ಆದರೆ, ಈ ಹಳ್ಳಿಗಳಿಗೆ ತಲಪಲು ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲ. ರಾಜ್ಯದ ಬಹುತೇಕ ಗ್ರಾಮಗಳ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಪ್ರತಿದಿನ ಹಳ್ಳಿಗರು ಸರಕು ಸಾಗಣೆ ಆಟೊವನ್ನು ಅವಲಂಬಿಸುವಂತೆ ಆಗಿದೆ. ಗ್ರಾಮೀಣ ಸಾರಿಗೆ ಸಂಪರ್ಕ ಬಲಗೊಂಡರಷ್ಟೇ ಗ್ರಾಮಾಭಿವೃದ್ಧಿ ಸಾಧ್ಯ. ಸರ್ಕಾರಕ್ಕೆ ಈ ಸತ್ಯ ಮನದಟ್ಟಾಗಲಿ.

ಮಂಜುನಾಥ ಜಿ.ಎಂ., ಹೊಳಲ್ಕೆರೆ

ಘನತೆಯ ಬದುಕು ಮತ್ತು ಅಲ್ಪ ಗೌರವಧನ

ಚಿಣ್ಣರ ಭವಿಷ್ಯವನ್ನು ರೂಪಿಸುವಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಪಾತ್ರ ಹಿರಿದು. ಗಣತಿ, ಮತದಾರರ ನೋಂದಣಿಯಲ್ಲೂ ಅವರ ಕಾರ್ಯ ಶ್ಲಾಘನೀಯ. ಆದರೆ, ಅತ್ಯಲ್ಪ ಗೌರವಧನ ನಂಬಿಕೊಂಡೇ ಅವರು ಬದುಕು ಸವೆಸುತ್ತಿದ್ದಾರೆ. ಗ್ರ್ಯಾಚುಟಿ ಸೇರಿದಂತೆ ಯಾವುದೇ ಸೌಲಭ್ಯ ಅವರಿಗೆ ದೊರೆಯುತ್ತಿಲ್ಲ. ಮನೆ ನಿರ್ಮಾಣದ ಕೆಲಸ ಮಾಡುವ ಮಹಿಳೆಯರಿಗೆ ದಿನವೊಂದಕ್ಕೆ ₹800 ಕೂಲಿ ಸಿಗುತ್ತದೆ. ಎಲೆಕ್ಟ್ರಿಷಿಯನ್, ಕಾರ್ಪೆಂಟರ್, ಪ್ಲಂಬರ್, ಹೌಸ್ ಕೀಪರ್‌ಗಳಿಗೆ ಒಂದು ಸಾವಿರ ರೂಪಾಯಿವರೆಗೂ ಕೂಲಿ ನೀಡಲಾಗುತ್ತದೆ. ಮಕ್ಕಳ ಶಿಕ್ಷಣ, ಆರೋಗ್ಯಕ್ಕೆ ದುಡಿಯುವ ಕಾರ್ಯಕರ್ತೆಯರು ಅತ್ಯಲ್ಪ ಗೌರವಧನದಿಂದ ಘನತೆಯ ಬದುಕು ನಡೆಸಲು ಸಾಧ್ಯವೆ?

ಬಿ.ಎಚ್.ಎಸ್. ಮೂರ್ತಿ, ಬೆಂಗಳೂರು

ರೈಲುಗಳಲ್ಲಿ ಹೆಚ್ಚುತ್ತಿರುವ 'ಕಾಗದ ತ್ಯಾಜ್ಯ'

ಭಾರತೀಯ ರೈಲ್ವೆಯು ಡಿಜಿಟಲ್ ತಂತ್ರಜ್ಞಾನ ಬಳಸಿಕೊಂಡು ಕಾಗದರಹಿತ ರೈಲು ಟಿಕೆಟ್ ಹಾಗೂ ಇತರೆ ಕ್ರಮಗಳ ಮೂಲಕ ರೈಲಿನಲ್ಲಿ ಕಾಗದದ ಬಳಕೆಯನ್ನು ಕಡಿಮೆ ಮಾಡಿದೆ. ಪ್ರಯಾಣಿಕಸ್ನೇಹಿ ಕ್ರಮಗಳ ಮೂಲಕ ಸಾಕಷ್ಟು ಸೌಲಭ್ಯ ಒದಗಿಸುತ್ತಿದೆ. ದೂರ ಪ್ರಯಾಣದ ವಾತಾನುಕೂಲಿತ ರೈಲು ಬೋಗಿಗಳಲ್ಲಿ ಒದಗಿಸಲಾಗುವ ಶುಚಿಯಾದ ಬೆಡ್‌ಶೀಟ್‌ಗಳನ್ನು ದಪ್ಪನೆಯ ಕಾಗದದ ಕವರ್‌ಗಳಲ್ಲಿ ಹಾಕಿ ಕೊಡಲಾಗುತ್ತದೆ. ಇದರಿಂದ ಅಪಾರ ಪ್ರಮಾಣದ ಕಾಗದದ ಕವರ್‌ಗಳ ತ್ಯಾಜ್ಯ ರೈಲುಗಳಲ್ಲಿ ದಿನವೂ ಉತ್ಪತ್ತಿಯಾಗಿ, ಪ್ರಯಾಣಿಕರಿಗೆ ಕಾಲ ಕಸವಾಗಿ, ಬೋಗಿಗಳಲ್ಲಿ ಕಿರಿಕಿರಿ ಅನಿಸುವಷ್ಟು ಸಂಗ್ರಹವಾಗುತ್ತದೆ. ಅದರ ಸೂಕ್ತ ನಿರ್ವಹಣೆ ಇರುವುದಿಲ್ಲ. ಈ ಕುರಿತಂತೆ ಇಲಾಖೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಿ.

ವೆಂಕಟೇಶ ಮಾಚಕನೂರ, ಧಾರವಾಡ

ಎಸ್ಸೆಸ್ಸೆಲ್ಸಿ ಪರೀಕ್ಷೆ: ಬಸ್ ಸೌಲಭ್ಯ ಹೆಚ್ಚಿಸಿ

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ದಿನಗಣನೆ ಆರಂಭವಾಗಿದೆ. ಈ ಸಮಯದಲ್ಲಿ ವಿದ್ಯಾರ್ಥಿಗಳು ಮಾನಸಿಕ ಒತ್ತಡವಿಲ್ಲದೆ, ನಿಗದಿತ ಸಮಯಕ್ಕೆ ಪರೀಕ್ಷಾ ಕೇಂದ್ರ ತಲಪುವುದು ಮುಖ್ಯ. ಶಾಲೆಯ ವಾಹನ ಅಥವಾ ಸ್ವಂತ ವಾಹನ ಸೌಲಭ್ಯವಿರುವ ವಿದ್ಯಾರ್ಥಿಗಳು ಸುಲಭವಾಗಿ ತಲಪಬಹುದು. ಆದರೆ ಬಡ, ಮಧ್ಯಮವರ್ಗದ ಸಾವಿರಾರು ವಿದ್ಯಾರ್ಥಿಗಳು ಸರ್ಕಾರಿ ಬಸ್‌ಗಳನ್ನೇ ನೆಚ್ಚಿಕೊಂಡಿದ್ದಾರೆ. ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿದೆ. ಇದರಿಂದಾಗಿ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ಬಸ್ ಹತ್ತಲು ಅಥವಾ ಸೀಟು ಸಿಗದೆ ತೊಂದರೆಯಾಗುವುದು ಸಹಜ. ಹಾಗಾಗಿ, ಪರೀಕ್ಷಾ ದಿನಗಳಂದು ಹೆಚ್ಚುವರಿ ಬಸ್ ಸೌಲಭ್ಯ ಒದಗಿಸುವುದು ಉತ್ತಮ.

ಬಿ. ಗಣೇಶ, ಮೈಸೂರು

ಕಾಲಕ್ಕೆ ತಕ್ಕಂತೆ ಧರ್ಮ ಸುಧಾರಣೆಯಾಗಲಿ

ಶಬರಿಮಲೆಯಲ್ಲಿ ಮಹಿಳೆಯರ ಪ್ರವೇಶಕ್ಕೆ ವಿಧಿಸಿರುವ ನಿರ್ಬಂಧ ಮೇಲ್ನೋಟಕ್ಕೆ ಸಂಪ್ರದಾಯವೆಂದು ಕಂಡರೂ, ಅದರ ಆಳದಲ್ಲಿ ಪುರುಷ ಪ್ರಧಾನ ಮನಃಸ್ಥಿತಿಯ ಬೇರುಗಳಿವೆ. ಮಹಿಳೆಯರ ನೈಸರ್ಗಿಕ ಜೈವಿಕ ಪ್ರಕ್ರಿಯೆ (ಋತುಚಕ್ರ) 'ಅಶುದ್ಧ' ಎಂದು ಬಿಂಬಿಸುವುದು ಅಥವಾ ಪುರುಷನ ಬ್ರಹ್ಮಚರ್ಯಕ್ಕೆ ಮಹಿಳೆಯೇ ಅಡ್ಡಿ ಎಂಬಂತೆ ಚಿತ್ರಿಸುವುದು ಸ್ತ್ರೀವಿರೋಧಿ ಧೋರಣೆ.ಭಕ್ತಿಯ ಹಾದಿಯಲ್ಲಿ ಲಿಂಗದ ಆಧಾರದ ಮೇಲೆ ತಡೆಗೋಡೆ ನಿರ್ಮಿಸುವುದು ಸಂವಿಧಾನದ 14ನೇ ವಿಧಿಯ ನೇರ ಉಲ್ಲಂಘನೆ. ಇದು ಮಹಿಳಾ ಹಕ್ಕಿನ ವಂಚನೆಯೂ ಹೌದು. ದೇವಸ್ಥಾನಗಳು ಸಾರ್ವಜನಿಕ ಸಂಸ್ಥೆಗಳಾಗಿದ್ದು, ಅಲ್ಲಿ ಪುರುಷರಿಗೆ ಇರುವ ಸವಲತ್ತು ಮಹಿಳೆಯರಿಗೆ ಇಲ್ಲದಿರುವುದು ಲಿಂಗ ತಾರತಮ್ಯದ ಪರಮಾವಧಿಯಾಗಿದೆ. ಕಾಲಕ್ಕೆ ತಕ್ಕಂತೆ ಧರ್ಮವೂ ಸುಧಾರಣೆ ಆಗಬೇಕಲ್ಲವೆ?

ಸಂಧ್ಯಾ ಎಚ್.ಎಸ್., ಹಂಪಿ

ಮನೆ ಮಾಲೀಕರ ನೆಮ್ಮದಿ ಕಸಿದ ಷರತ್ತು

ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ 1,200 ಚದರ ಅಡಿ ವಿಸ್ತೀರ್ಣದ ಒಳಗಿರುವ ನಿವೇಶನಗಳಲ್ಲಿನ ಮನೆಗಳಿಗೆ ಸ್ವಾಧೀನಾನುಭವ ಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ. ಆದರೂ, ವಿದ್ಯುತ್ ಮತ್ತು ನೀರಿನ ಸಂಪರ್ಕ ಕಲ್ಪಿಸದಿರುವುದು ದುರದೃಷ್ಟಕರ. ಸರ್ಕಾರ ಈ ಕುರಿತಂತೆ ತೀರ್ಮಾನ ಕೈಗೊಳ್ಳದೆ ನಾಗರಿಕರಿಗೆ ಮೂಲ ಸೌಕರ್ಯ ಒದಗಿಸುವಲ್ಲಿ ಮೀನಮೇಷ ಎಣಿಸುತ್ತಿದೆ. ಸೂರು ನಿರ್ಮಿಸಿಕೊಳ್ಳುವುದು ಪ್ರತಿಯೊಬ್ಬ ನಾಗರಿಕರ ಕನಸು. ಜೀವಿತಾವಧಿಯಲ್ಲಿ ದುಡಿದ ಹಣವನ್ನು ಮನೆ ನಿರ್ಮಾಣಕ್ಕೆ ಬಳಸುತ್ತಾರೆ. ಗ್ರಾಮೀಣ ಭಾಗದಲ್ಲಿ ಸರ್ಕಾರ ನಿಗದಿಪಡಿಸಿರುವ ಮಿತಿಯೊಳಗೆ ನಿರ್ಮಿಸಿರುವ ಮನೆಗಳಿಗೂ ವಿದ್ಯುತ್ ಸಂಪರ್ಕ ನೀಡುತ್ತಿಲ್ಲ. ಅವೈಜ್ಞಾನಿಕ ಷರತ್ತುಗಳು ಮುಳುವಾಗಿವೆ. ಸರ್ಕಾರ ಕೂಡಲೇ ಈ ಬಗ್ಗೆ ಸ್ಪಷ್ಟವಾದ ಮಾರ್ಗಸೂಚಿ ಪ್ರಕಟಿಸಬೇಕಿದೆ.

ಕಬೀರ್ ನಾಯ್ಕ್, ಹರಪನಹಳ್ಳಿ

ಚುರುಮುರಿ

ವಾರ್ ವಾರ್ನಿಂಗ್

• ಮಣ್ಣೆ ರಾಜು

'ಜಗಳ ಆಡಬೇಡಿ, ಫ್ರೆಂಡ್ಸ್ ಆಗಿರಿ ಎಂದು ಮಕ್ಕಳಿಗೆ ಬುದ್ಧಿ ಹೇಳಬಹುದು. ಯುದ್ಧ ಮಾಡಬೇಡಿ, ಅನ್ಯೋನ್ಯವಾಗಿರಿ ಎಂದು ಆ ದೇಶಗಳವರಿಗೆ ಹೇಳಲಾಗುವುದಿಲ್ಲ...' ಎಂದು ನ್ಯೂಸ್ ಪೇಪರ್ ಓದುತ್ತಿದ್ದ ಸುಮಿ ನಿಟ್ಟುಸಿರುಬಿಟ್ಟಳು.

'ಯುದ್ಧೋನ್ಮಾದದಲ್ಲಿ ಇರುವವರು ಬುದ್ಧಿಮಾತು ಕೇಳುವುದಿಲ್ಲ. ಶತ್ರು ದಮನ, ಸಿಟ್ಟು ಶಮನವಷ್ಟೇ ಅವರ ಗುರಿ' ಎಂದ ಶಂಕ್ರಿ.

'ಯುದ್ಧವೆಂಬುದು ಪಟಾಕಿ ಹಚ್ಚುವ ದೀಪಾವಳಿಯಂತಾಗಿಬಿಟ್ಟಿದೆ. ಬಣ್ಣ ಎರಚಾಡುವ ಹೋಳಿ ಹಬ್ಬದಂತೆ ರಕ್ತದೋಕುಳಿ ನಡೆಸುವ ಆಚರಣೆಯಂತಾಗಿಬಿಟ್ಟಿದೆ!'

'ರಾಜ ಮಹಾರಾಜರ ಕಾಲದಲ್ಲಿ ರಣರಂಗದಲ್ಲಿ ಹೋರಾಡಿ ಶತ್ರುಗಳನ್ನು ಕೊಲ್ಲುತ್ತಿದ್ದರು. ಈ ವೈಜ್ಞಾನಿಕ ಕಾಲದಲ್ಲಿ ತಾವಿರುವ ಕಡೆಯಿಂದಲೇ ಕ್ಷಿಪಣಿ ಹಾರಿಸಿ ಶತ್ರು ದೇಶ ನಾಶ ಮಾಡುವಷ್ಟು ಯುದ್ಧ ಸರಳವಾಗಿಬಿಟ್ಟಿದೆ'.

'ಎಲ್ಲರನ್ನೂ ಅಡಿಯಾಳು ಮಾಡಿಕೊಂಡು ತಾವೇ ಭೂಮಂಡಲದ ಅಧಿಪತಿಯಾಗಬೇಕು ಎನ್ನುವ ಸಾಮ್ರಾಜ್ಯಶಾಹಿ ಧೋರಣೆ ಇದೇ ಮೊದಲಲ್ಲ. ಯುದ್ಧದ ಇತಿಹಾಸ ಪುಟಗಳು ರಕ್ತಸಿಕ್ತವಾಗಿವೆ. ಆಗಿನಿಂದ ನಡೆದ ಯುದ್ಧಗಳಲ್ಲಿ ಹರಿದ ರಕ್ತವು ಉಳಿದಿದ್ದರೆ ಈ ವೇಳೆಗೆ ಸರ್ವಖುತು ರಕ್ತನದಿಯಾಗಿ ಹರಿಯುತ್ತಿತ್ತು. ಯುದ್ಧಗಳ ರಕ್ತವನ್ನೂ ನೋವನ್ನೂ ಭೂಮಿ ನುಂಗಿದೆ!'

'ಪ್ರಾಣಿ-ಪಕ್ಷಿಗಳು ಹಣ್ಣು ತಿಂದು ಬೀಜ ಎಸೆದು ಗಿಡ ಮರ ಬೆಳೆಸಿ ಹುಟ್ಟಿದ ಭೂಮಿಯ ಋಣ ತೀರಿಸುತ್ತವೆ. ಭೂ ಒಡೆಯನಾಗಬೇಕೆಂದು ಹಾತೊರೆಯುವ ಮನುಷ್ಯ ಭೂಮಿಗೆ ಕೊಡುವ ಕೊಡುಗೆ ಅಷ್ಟಕ್ಕಷ್ಟೇ'.

'ಎಲ್ಲವನ್ನೂ ಭಸ್ಮ ಮಾಡುವ ಭಸ್ಮಾಸುರ ಮನಃಸ್ಥಿತಿಯ ಯುದ್ಧೋತ್ಪಾದಕರಿಗೆ ಇಂತಹ ಮಾತು ರುಚಿಸುವುದಿಲ್ಲ'.

'ತೊಡೆ ತಟ್ಟಿದವರು, ಮೀಸೆ ತಿರುವಿ ಮೆರೆದ ಪರಾಕ್ರಮಿಗಳು ಮಣ್ಣಲ್ಲಿ ಮಣ್ಣಾಗಿಹೋದರು. ಎಷ್ಟೇ ನಾಶ ಮಾಡಿದರೂ ಭೂಮಿ ಮರುಹುಟ್ಟು ಪಡೆಯುತ್ತದೆ. ಯುದ್ಧಗಳಿಗೆ ಭೂಮಿ ತಲೆಕೆಡಿಸಿಕೊಳ್ಳುವುದಿಲ್ಲ... ಎಲ್ಲವನ್ನೂ ಹೊತ್ತು ತಿರುಗುವ ಭೂಮಿಗೆ ಯಾವತ್ತೂ ತಲೆ ತಿರುಗಿಲ್ಲ, ತಲೆ ತಿರುಗಿ ಮೆರೆದು ಹೋದವರು ಮಾತ್ರ ಭೂಮಿಗೆ ಹಿಂತಿರುಗಿಲ್ಲ' ಎಂದ ಶಂಕ್ರಿ.

ಸಂಗತ

ಸುರಂಗ ಮಾರ್ಗವಲ್ಲ, ಜೀವನಮಾರ್ಗ ಮುಖ್ಯ!

ಆಗುಂಬೆ ಪರಿಸರದಲ್ಲಿ ಸುರಂಗ ಮಾರ್ಗ ನಿರ್ಮಿಸುವ ಚಿಂತನೆಯಲ್ಲಿ ದೂರದೃಷ್ಟಿ ಕೊರತೆ ಇದೆ. ಪರ್ಯಾಯಗಳನ್ನು ಬಲಪಡಿಸಿದರೆ, ಸುರಂಗದ ಅಗತ್ಯ ಬೀಳದು.

• ಶರತ್ ಕಲ್ಕೋಡ್

ಆಗುಂಬೆ ಘಾಟಿ ವಿಸ್ತರಣೆ ಹಾಗೂ ಉದ್ದೇಶಿತ ಸುರಂಗ ಮಾರ್ಗ ಕುರಿತಂತೆ ಪರ-ವಿರೋಧದ ಚರ್ಚೆ ನಡೆಯುತ್ತಿದೆ. ಆಗುಂಬೆ ಆಸುಪಾಸಿನ ಪರಿಸರದಲ್ಲೇ ಬೆಳೆದಿರುವ ನನಗೆ, 'ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡಂತೆ' ಎನ್ನುವ ಗಾದೆ ಯನ್ನು ಇಡೀ ಯೋಜನೆ ನೆನಪಿಸುತ್ತಿದೆ.

ಒಂದು ಕಾಲದಲ್ಲಿ ಆಗುಂಬೆ ಘಾಟಿ, ಬಯಲುಸೀಮೆ, ಮಲೆನಾಡು-ಕರಾವಳಿಯನ್ನು ಬೆಸೆಯುವ ಪ್ರಮುಖ ಕೊಂಡಿಯಾಗಿತ್ತು. ಈಗ, ಆಗುಂಬೆ ಘಾಟಿ ಸನಿಹದಲ್ಲೇ ಹುಲಿಕಲ್, ಕೆರೆಕಟ್ಟೆ ಘಾಟಿಗಳಿವೆ. ದುರಸ್ತಿಗೆಂದು ಆಗುಂಬೆ ಘಾಟಿಯನ್ನು ಮುಚ್ಚಿದಾಗ, ಪರ್ಯಾಯವಾಗಿ ಬಳಸುವುದು ಈ ಘಾಟಿಗಳನ್ನೇ. ಇವೆರಡನ್ನೂ ವಿಸ್ತರಣೆ ಮಾಡಿದರೆ, ಆಗುಂಬೆ ಘಾಟಿ ಮೇಲಿನ ವಾಹನಗಳ ಒತ್ತಡ ಕಡಿಮೆಯಾಗುತ್ತದೆ; ಪರಿಸರ ಸಂರಕ್ಷಣೆಯ ಜೊತೆಗೆ ಕೋಟಿಗಟ್ಟಲೆ ಹಣವೂ ಉಳಿತಾಯವಾಗುತ್ತದೆ. ಅಲ್ಲದೆ, ಕೊಲ್ಲೂರು-ರಾಣೆಬೆನ್ನೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯೂ ಪ್ರಗತಿಯಲ್ಲಿದೆ. ನಿಶ್ಚಿತ ಅವಧಿಯಲ್ಲಿ ಆ ಕಾಮಗಾರಿ ಮುಗಿದರೆ, ಆಗುಂಬೆ ಘಾಟಿ ಮೇಲಿನ ಒತ್ತಡ ಇನ್ನಷ್ಟು ಕಡಿಮೆಯಾಗಿ, ಸುರಂಗ ನಿರ್ಮಾಣದ ಅಗತ್ಯವೇ ಬೀಳದು.

ಬಯಲು ಹಾಗೂ ಮಲೆಸೀಮೆಯ ಹೆಚ್ಚಿನವರು ಮಣಿಪಾಲ-ಮಂಗಳೂರಿಗೆ ಹೋಗುವುದು ಆಸ್ಪತ್ರೆಗಳ ಸಲುವಾಗಿ. ಕರಾವಳಿಯ ಆ ಸೌಲಭ್ಯಗಳು, ಶಿವಮೊಗ್ಗ-ತೀರ್ಥಹಳ್ಳಿ, ಚಿಕ್ಕಮಗಳೂರು-ಕೊಪ್ಪದಲ್ಲೂ ದೊರೆಯುವಂತಾದರೆ, ಘಾಟಿಯ ಸಂಚಾರ ಒತ್ತಡ ಕಡಿಮೆಯಾಗುತ್ತದೆ. ರಸ್ತೆ ವಿಸ್ತರಣೆ ಹಾಗೂ ಸುರಂಗ ಮಾರ್ಗಕ್ಕಾಗಿ ಕೋಟಿಗಟ್ಟಲೆ ಸುರಿಯಲು ಹೋರಾಡುವ ಅಧಿಕಾರಸ್ಥರು, ಅದರಲ್ಲಿ ಅರ್ಧ ಮೊತ್ತವನ್ನು ಮೂಲ ಸೌಕರ್ಯ ಸೃಷ್ಟಿಸಲು ಬಳಸಿದರೆ, ಕ್ಷೇತ್ರದ ಅಭಿವೃದ್ಧಿ ಹಾಗೂ ಜನಕಲ್ಯಾಣವಾಗುವುದು ಖಂಡಿತ. ಆಗುಂಬೆ ಘಾಟಿ ವಿಸ್ತರಣೆ ಹಾಗೂ ಸುರಂಗ ನಿರ್ಮಾಣ ಕಾರ್ಯದಲ್ಲಿ ಉತ್ಸಕರಾಗಿರುವ ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ, ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಡಿಪಿಆರ್ ಮಾಡಲು ಟೆಂಡರ್ ಕರೆಯುವಂತೆ ನೋಡಿಕೊಂಡಿರುವುದಲ್ಲದೆ, ಕೇಂದ್ರ ಸರ್ಕಾರ ₹2.33 ಕೋಟಿ ಮೀಸಲಾಗಿರಿಸುವುದರಲ್ಲಿ ಯಶಸ್ವಿಯಾಗಿರುವುದಾಗಿ ಹೇಳಿಕೊಂಡಿದ್ದಾರೆ.

ನಿಸರ್ಗದ ಸೊಬಗು ವೀಕ್ಷಿಸಲು ಆಗುಂಬೆ ಘಾಟಿಯ ಮೇಲೆ ಸಂಚಾರದ ಒತ್ತಡ ಹೆಚ್ಚಾಗುವುದು ವರ್ಷದಲ್ಲಿ ಆರು ತಿಂಗಳು (ನವೆಂಬರ್-ಏಪ್ರಿಲ್) ಮಾತ್ರ. ಮಳೆಗಾಲದಲ್ಲಿ ಘಾಟಿಯಲ್ಲಿ ಹಾಡಹಗಲೇ ಹೆಡ್‌ಲೈಟ್ ಹಾಕಿಕೊಂಡರೂ, ಎದುರಿನ ರಸ್ತೆ ಕಾಣಿಸದಷ್ಟು ದಟ್ಟ ಕಾವಳ ಮುಸುಕಿರುತ್ತದೆ; ವಾಹನಗಳ ಸಂಚಾರವೂ ವಿರಳವಾಗಿರುತ್ತದೆ.

ಆಗುಂಬೆ ಘಾಟಿ ಹಲವು ಬಾರಿ ದುರಸ್ತಿಯಾದರೂ, ಸುಧಾರಿಸದಿರುವುದು ಲಘು ವಾಹನಗಳ ಓಡಾಟದಿಂದಲ್ಲ. ಚೆಕ್‌ಪೋಸ್ಟ್‌ನಲ್ಲಿ ಕಾಸು ಕಸಿದು ಭಾರೀ ವಾಹನಗಳನ್ನು ಸಂಚಾರಕ್ಕೆ ಬಿಡಲಾಗುತ್ತಿದೆ. ಆ ಕಳ್ಳ ಸಂಚಾರಕ್ಕೆ ಕಡಿವಾಣ ಬಿದ್ದರೆ, ಪರಿಸ್ಥಿತಿ ಅರ್ಧ ಸುಧಾರಣೆಯಾದ ಹಾಗೆಯೇ!

ಬೇಸಿಗೆಯಲ್ಲಿ, ಎಐ ಹಾಗೂ ಸ್ಮಾರ್ಟ್ ಸಿಗ್ನಲಿಂಗ್ ಅಳವಡಿಸಿದರೆ, ಆಗುಂಬೆ ಘಾಟಿ ವಾಹನ ಸಂಚಾರವನ್ನು ಸುಲಭವಾಗಿ ನಿಯಂತ್ರಿಸಬಹುದು. ರಸ್ತೆ ಅಗಲ ಮಾಡುವ ಬದಲು, ಬಯೋ-ಎಂಜಿನಿಯರಿಂಗ್ ತಂತ್ರದಿಂದ ಸ್ಥಿರತೆ ಹೆಚ್ಚಿಸಬಹುದು. ಜಿಯೋ ಗ್ರಿಡ್ ಬಳಸಿ ಮರ ಬೀಳದಂತೆ, ಬೆಟ್ಟ ಕುಸಿಯದಂತೆ ತಡೆಯುವುದು ಸುಲಭ ಸಾಧ್ಯ. ಅದಕ್ಕೆ ತಗಲುವ ವೆಚ್ಚವೂ, ಸುರಂಗ ನಿರ್ಮಾಣ ಕಾರ್ಯಕ್ಕೆ ಹೋಲಿಸಿದರೆ ಅತ್ಯಲ್ಪ ಎನ್ನುವ ಯುವ ತಂತ್ರಜ್ಞ ಶ್ರೀಧರ ಕಲ್ಲಹಳ್ಳ ಅವರ ಮಾತುಗಳನ್ನು ರಾಜಕಾರಣಿಗಳು ಗಮನಿಸಬೇಕು.

ವಾಹನ ಸವಾರರ ಕಷ್ಟ-ನಷ್ಟದ ಬಗ್ಗೆ ಕಳಕಳಿ ತಪ್ಪಲ್ಲ; ಆದರೆ, ಸ್ಥಳೀಯರ ಬದುಕು-ಬವಣೆಯನ್ನೂ ನೋಡಬೇಕಲ್ಲವೆ? ಸೋಮೇಶ್ವರ-ಮೇಗರವಳ್ಳಿ ಸುರಂಗ ಮಾರ್ಗದಲ್ಲಿ ವಾಹನಗಳು ಒಂದು ಕಡೆ ನುಗ್ಗಿ ಮತ್ತೊಂದರಲ್ಲಿ ಹೊರ ಬಿದ್ದರೆ, ಘಟ್ಟದ ಮೇಲಿರುವ ಆಗುಂಬೆ (ರಾಷ್ಟ್ರೀಯ ಹೆದ್ದಾರಿ ಫಲವಾಗಿ ಈಗಾಗಲೇ ಜನ-ವಾಹನ ಸಂಚರಿಸದೆ ತಬ್ಬಲಿಯಾಗಿದೆ), ನಾಲೂರು, ಹೊನ್ನೆತಾಳು, ಬಿದರಗೋಡು ಗ್ರಾಮಗಳ ನೂರಾರು ಹಳ್ಳಿಗಳ ಸಾವಿರಾರು ಜನರ ಸಾರಿಗೆ ಸಂಪರ್ಕಕ್ಕೆ ಧಕ್ಕೆಯಾಗಿ ಅವು ದ್ವೀಪಗಳಾಗಿ, ಅಲ್ಲಿನ ನಾಗರಿಕರ ಆರ್ಥಿಕ ಸ್ಥಿತಿಗತಿ ಮೇಲೆ ತೀವ್ರ ಪರಿಣಾಮ ಉಂಟಾಗುತ್ತದೆ. ಈ ಗ್ರಾಮಗಳಲ್ಲಿನ ಹೆಚ್ಚಿನವರು ಕೃಷಿಕರು. ಅಡಿಕೆಯೇ ಪ್ರಮುಖ ವಾಣಿಜ್ಯ ಬೆಳೆ. ಎಲೆಚುಕ್ಕೆ ರೋಗದಿಂದ ಅವರು ತತ್ತರಿಸುತ್ತಿದ್ದಾರೆ. ಸುರಂಗ ಮಾರ್ಗವಾದರೆ, ಅವರ ಪಾಲಿಗೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ.

ವಾಹನ ಸಂಚಾರ ದಟ್ಟಣೆಯಿಂದ ಬಳಲುತ್ತಿದ್ದ ಶಿರಾಡಿ ಘಾಟಿ ಸಮಸ್ಯೆ ಬಗೆಹರಿಸಲು 27 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಿಸಲು ಕೇಂದ್ರ ಸರ್ಕಾರ ಯೋಜನೆ ರೂಪಿಸಿದಾಗ, ಪರಿಸರ ಪ್ರೇಮಿಗಳು ವಿರೋಧ ವ್ಯಕ್ತಪಡಿಸಿದರು. ಯೋಜನೆಯನ್ನು ಕೂಲಂಕಷವಾಗಿ ಅಧ್ಯಯನ ನಡೆಸಿದ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ, 'ಪರಿಸರದ ಮೇಲೆ ಪರಿಣಾಮ ಬೀರುವ ಸುರಂಗ ಪರಿಹಾರವಲ್ಲ; ಅದಕ್ಕಿಂತ ರಸ್ತೆ ಮಾರ್ಗ ವಿಸ್ತರಣೆಯೇ ಹೆಚ್ಚು ಸೂಕ್ತ' ಎಂದು ಲೋಕಸಭೆಗೆ ಸ್ಪಷ್ಟಪಡಿಸಿದರು.

ಬೆಂಗಳೂರಿನ ಲಾಲ್‌ಬಾಗ್ ಅಡಿಯಲ್ಲಿ ಸುರಂಗ ಮಾರ್ಗ ನಿರ್ಮಾಣ ಯೋಜನೆಗೆ ಸ್ಥಳೀಯ ಸಂಸದ ತೇಜಸ್ವಿ ಸೂರ್ಯ ವಿರೋಧ ವ್ಯಕ್ತಪಡಿಸಿದ್ದಾರೆ ಹಾಗೂ ಸುರಂಗ ಮಾರ್ಗ ವಿರೋಧಿ ಪ್ರತಿಭಟನೆಯಲ್ಲಿ ಗುರ್ತಿಸಿಕೊಂಡಿದ್ದಾರೆ. ಆದರೆ, ಆಗುಂಬೆಯಲ್ಲಿ ಸುರಂಗ ಮಾರ್ಗ ನಿರ್ಮಿಸಲು ಸಂಸದ ಬಿ.ವೈ. ರಾಘವೇಂದ್ರ ಟೊಂಕಕಟ್ಟಿ ನಿಂತಿದ್ದಾರೆ! ವಿಶೇಷ ಎಂದರೆ ಸಂಸದರಿಬ್ಬರೂ ಬಿಜೆಪಿಗೆ ಸೇರಿದವರು!

ನಲುಗುತ್ತಿರುವ ನಿಸರ್ಗವನ್ನು ಮುಂದಿನ ತಲೆಮಾರಿಗೆ ಕಾಪಿಡುವುದು ನಮ್ಮ ಕರ್ತವ್ಯ. ನಮ್ಮ ರಾಜಕಾರಣಿಗಳ ನಡೆಯನ್ನು ನೋಡಿದರೆ, ಕರ್ತವ್ಯವನ್ನು ನಿಭಾಯಿಸುವುದರ ಬದಲು ಅವರು ಮುಂದಿನ ತಲೆಮಾರಿಗೆ ದ್ರೋಹ ಎಸಗುತ್ತಿರುವಂತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮೆರಿಕ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ಮಾಡುವ ಕೆಲವೇ ದಿನಗಳ ಮೊದಲು ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಭೇಟಿ ನೀಡಿದ್ದರು. ಯುದ್ಧ ಆರಂಭದ ನಂತರ ಮೋದಿ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜತೆ ದೂರವಾಣಿಯಲ್ಲಿ ಮಾತುಕತೆ ನಡೆಸಿದರು. ಇರಾನ್ ದಾಳಿಗೆ ತುತ್ತಾಗಿರುವ ಕೊಲ್ಲಿ ರಾಷ್ಟ್ರಗಳ ಮುಖ್ಯಸ್ಥರೊಂದಿಗೂ ಅವರು ಮಾತನಾಡಿದ್ದಾರೆ. ಆದರೆ, ಯುದ್ಧದಲ್ಲಿ ಇರಾನ್ ಸರ್ವೋಚ್ಚ ನಾಯಕ ಮತ್ತು ಅವರ ಪತ್ನಿ ಹತ್ಯೆಗೀಡಾದರೂ, ಇದುವರೆಗೂ ಅದರ ಬಗ್ಗೆ ಸಂತಾಪ ಸೂಚಿಸಿಲ್ಲ; ಹತ್ಯೆಯನ್ನು ಖಂಡಿಸಿಲ್ಲ. ಇರಾನ್ ಪರವಾಗಿ ಮಾತನಾಡಿಲ್ಲ. ಬದಲಾಗುತ್ತಿರುವ ಜಾಗತಿಕ ರಾಜಕಾರಣದಲ್ಲಿ ಭಾರತ ಯಾರ ಪರ ಎನ್ನುವುದನ್ನೂ, ಪಶ್ಚಿಮ ಏಷ್ಯಾದ ಹಲವು ರಾಷ್ಟ್ರಗಳ ಕುರಿತ ದೇಶದ ವಿದೇಶಾಂಗ ನೀತಿ ಬದಲಾಗುತ್ತಿರುವುದನ್ನೂ ಇದು ಸಂಕೇತಿಸುತ್ತಿದೆ

ಬದಲಾದ ಭಾರತದ ವಿದೇಶಾಂಗ ನೀತಿ; ಅಮೆರಿಕದೆಡೆಗೆ ಹೆಚ್ಚಾದ ಒಲವು

ಇರಾನ್‌ಗೆ ದೂರ ಇಸ್ರೇಲ್‌ಗೆ ಹತ್ತಿರ

ಪ್ರಜಾವಾಣಿ ವಾರ್ತೆ

ಅಲಿಪ್ತ ನೀತಿ'ಯನ್ನು ಅಳವಡಿಸಿಕೊಂಡಿದ್ದ ಭಾರತವು ದಶಕಗಳಿಂದಲೂ ಪಶ್ಚಿಮ ಏಷ್ಯಾದ ರಾಷ್ಟ್ರಗಳೊಂದಿಗೆ ಅತ್ಯಂತ ಜಾಗರೂಕತೆಯ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿತ್ತು. ತಟಸ್ಥ ಧೋರಣೆಯ ಹೊರತಾಗಿಯೂ ಪ್ಯಾಲೆಸ್ಟೀನ್ ಪರ ಸಹಾನುಭೂತಿ ಹೊಂದಿತ್ತು ಮತ್ತು ಅದನ್ನು ಸೈದ್ಧಾಂತಿಕವಾಗಿ ಬೆಂಬಲಿಸುತ್ತಿತ್ತು. ಅದರ ಸಾರ್ವಭೌಮತೆಯನ್ನು ಸಮರ್ಥಿಸಿತ್ತು ಮತ್ತು ವಸಾಹತುಶಾಹಿ ವಿರೋಧಕ್ಕೆ ನೈತಿಕ ಬೆಂಬಲ ನೀಡಿತ್ತು. ಪ್ಯಾಲೆಸ್ಟೀನ್ ಲಿಬರೇಷನ್ ಆರ್ಮಿಗೆ (ಪಿಎಲ್‌ಒ) 1975ರಲ್ಲಿ ಭಾರತವು ರಾಜತಾಂತ್ರಿಕ ಮಾನ್ಯತೆ ನೀಡಿತ್ತು. ಈ ಮೂಲಕ ಪಿಎಲ್‌ಒ ಬೆಂಬಲಿಸಿದ ಮೊದಲ ಮುಸ್ಲಿಮೇತರ ರಾಷ್ಟ್ರವಾಗಿತ್ತು.

1950ರಲ್ಲಿ ಭಾರತವು ಇಸ್ರೇಲ್ ದೇಶಕ್ಕೆ ಮಾನ್ಯತೆ ನೀಡಿತು. ಅದರ ನಂತರ ನಿಧಾನಕ್ಕೆ ಅದರೊಂದಿಗೆ ದ್ವಿಪಕ್ಷೀಯ ವ್ಯಾಪಾರ ವಹಿವಾಟುಗಳೂ ಆರಂಭವಾದವು. 1992ರಲ್ಲಿ ಪ್ರಧಾನಿಯಾಗಿದ್ದ ಪಿ.ವಿ. ನರಸಿಂಹರಾವ್ ಅವರು ಎರಡು ದೇಶಗಳ ನಡುವೆ ರಾಜತಾಂತ್ರಿಕ ಸಂಬಂಧಕ್ಕೆ ಅಡಿಗಲ್ಲು ಹಾಕಿದರು.

1971ರ ಬಾಂಗ್ಲಾ ವಿಮೋಚನೆ ಮತ್ತು 1999ರ ಕಾರ್ಗಿಲ್ ಯುದ್ಧಗಳಲ್ಲಿ ಇಸ್ರೇಲ್ ಭಾರತಕ್ಕೆ ಸೇನಾ ನೆರವು ನೀಡಿತ್ತು.

ದೊಡ್ಡ ಸಂಖ್ಯೆಯ ಭಾರತೀಯರು ಕೆಲಸದಲ್ಲಿರುವ ಕೊಲ್ಲಿ ರಾಷ್ಟ್ರಗಳು, ಇಂಧನ ರಫ್ತು ಮಾಡುವುದರ ಜತೆಗೆ ಚಾರಿತ್ರಿಕ ಸಂಬಂಧವೂ ಇರುವ ಇರಾನ್ ಮತ್ತು ಶಸ್ತ್ರಾಸ್ತ್ರ, ತಂತ್ರಜ್ಞಾನ ನೆರವು ನೀಡುವ ಇಸ್ರೇಲ್‌ನೊಂದಿಗಿನ ಸಂಬಂಧಗಳು ಭಾರತಕ್ಕೆ ಅತಿ ಮುಖ್ಯವಾದುವು. ಹಾಗಾಗಿಯೇ ಬಹಿರಂಗವಾಗಿ ಯಾವುದೇ ದೇಶದ ಪರ ಹೆಚ್ಚು ಒಲವು ತೋರದೇ, ಸಮನ್ವಯದಿಂದ ಮುನ್ನಡೆಯುತ್ತಿತ್ತು.

2014ರಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿಯಾದ ನಂತರ ಪಶ್ಚಿಮ ಏಷ್ಯಾದ ರಾಷ್ಟ್ರಗಳೊಂದಿಗಿನ ಭಾರತದ ಸಂಬಂಧದಲ್ಲಿ ಬದಲಾವಣೆಗಳು ಗೋಚರಿಸತೊಡಗಿದವು. 2017ರಲ್ಲಿ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಮೊದಲ ಬಾರಿ ಭೇಟಿ ನೀಡಿದರು. ಭಾರತದ ಪ್ರಧಾನಿಯೊಬ್ಬರು ಇಸ್ರೇಲ್‌ಗೆ ನೀಡಿದ ಮೊದಲ ಭೇಟಿ ಅದು. ರಾಜತಾಂತ್ರಿಕ ಸಮನ್ವಯ ಕಾಯ್ದುಕೊಳ್ಳಲು ಅವರು 2018ರಲ್ಲಿ ಪ್ಯಾಲೆಸ್ಟೀನ್‌ನ ರಾಮಲ್ಲಾಹ್‌ಗೂ ಭೇಟಿ ನೀಡಿದರು. ಹಾಗೆಯೇ, ಕೊಲೆ ಪ್ರಕರಣವೊಂದರ ಸಂಬಂಧ ಅನೇಕ ದೇಶಗಳಲ್ಲಿ ಅವಕೃಪೆಗೆ ಗುರಿಯಾಗಿದ್ದ ಸೌದಿ ಅರೇಬಿಯಾದ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರಿಗೆ 2019ರಲ್ಲಿ ಭಾರತ ಆತಿಥ್ಯ ನೀಡಿತ್ತು. ಪ್ರಧಾನಿಯಾದ ಮೇಲೆ ಹಲವು ಬಾರಿ ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ (ಯುಎಇ) ಭೇಟಿ ನೀಡಿರುವ ಮೋದಿ ಅವರು, ಅಲ್ಲಿನ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರನ್ನು 'ಸೋದರ' ಎಂದೇ ಕರೆಯುತ್ತಾರೆ.

ಭಾರತದ ವಿದೇಶಾಂಗ ನೀತಿ ಬದಲಾಗಿದ್ದು, ಇದಕ್ಕೆ ಚೀನಾ ಮತ್ತು ಪಾಕಿಸ್ತಾನ ಕಾರಣ ಎನ್ನುವುದು ತಜ್ಞರ ವಿಶ್ಲೇಷಣೆ. ಚೀನಾ ವಿರೋಧಿಸಲು ಅಮೆರಿಕಕ್ಕೆ, ಪಾಕ್ ಪ್ರೇರಿತ ಭಯೋತ್ಪಾದನೆ ಎದುರಿಸಲು ಇಸ್ರೇಲ್‌ಗೆ ಭಾರತ ಹತ್ತಿರವಾಗುತ್ತಿದೆ ಎನ್ನುವ ವಿಶ್ಲೇಷಣೆ ಇದೆ. ಅಮೆರಿಕದ ಜೊತೆಗೆ ಶಸ್ತ್ರಾಸ್ತ್ರ, ತಂತ್ರಜ್ಞಾನಕ್ಕೆ ಸಂಬಂಧಿಸಿದ ವಹಿವಾಟಿನ ಜತೆಗೆ ಸಂಬಂಧವನ್ನೂ ವೃದ್ಧಿಸಿಕೊಂಡಿತು. ಇನ್ನೊಂದೆಡೆ, ಪಶ್ಚಿಮ ಏಷ್ಯಾದ ರಾಷ್ಟ್ರಗಳ ಜತೆಗೆ ಸಂಬಂಧ ಕಾಯ್ದುಕೊಳ್ಳುತ್ತಲೇ, ಇಸ್ರೇಲ್ ಜತೆಗೆ ಆಪ್ತವಾಗತೊಡಗಿತು. ಅಮೆರಿಕ ಮತ್ತು ಇಸ್ರೇಲ್‌ನ ಆಪ್ತತೆಯೂ ಇರಾನ್‌ನಂಥ ರಾಷ್ಟ್ರಗಳ ಜತೆಗೆ ಭಾರತ ಒಂದು ಅಂತರ ಕಾಯ್ದುಕೊಳ್ಳಲು ಕಾರಣವಾಗಿದೆ ಎನ್ನಲಾಗುತ್ತಿದೆ. 2018ರಲ್ಲಿ ಅಮೆರಿಕದ ಕಾರಣಕ್ಕೆ ಭಾರತವು ಇರಾನ್‌ನಿಂದ ಇಂಧನ ಆಮದು ಮಾಡಿಕೊಳ್ಳುವುದನ್ನು ಗಮನಾರ್ಹವಾಗಿ ಕಡಿಮೆ ಮಾಡಿದೆ. ಪ್ರಸ್ತುತ, ಪಶ್ಚಿಮ ಏಷ್ಯಾದ ಹಲವು ದೇಶಗಳ ಜತೆಗಿನ ಭಾರತದ ಸಂಬಂಧವು ಕೇವಲ ವ್ಯವಹಾರಕ್ಕೆ ಸೀಮಿತವಾಗಿದೆ.

ಭಾರತದ ವಿದೇಶಾಂಗ ನೀತಿಯಲ್ಲಿನ ಬದಲಾವಣೆಯನ್ನು ಕೆಲವರು ಮೂರು ಮುಖ್ಯ ಅಂಶಗಳ ಮೂಲಕ ಗುರುತಿಸುತ್ತಾರೆ. ಒಂದನೆಯದಾಗಿ, ಜಾತ್ಯತೀತ, ಸಮಾಜವಾದಿ ರಾಷ್ಟ್ರವಾಗಿರುವ ಭಾರತವು ಸಾಂಪ್ರದಾಯಿಕ ರಾಜಮನೆತನಗಳ ಆಡಳಿತದ ಯುಎಇ ಜತೆಗೆ ಹಿಂದೆ ಅಂತರ ಕಾಯ್ದುಕೊಂಡಿತ್ತು. ಈಗ ಹೆಚ್ಚು ಸ್ನೇಹ ಸಂಬಂಧ ಹೊಂದಿದೆ. ಎರಡನೆಯದು, ಸಾಮ್ರಾಜ್ಯಶಾಹಿ ಧೋರಣೆಯ ಅಮೆರಿಕದೊಂದಿಗೆ ಹಿಂದಿಗಿಂತಲೂ ಈಗ ಉತ್ತಮವಾದ, ಹಲವು ಆಯಾಮಗಳ ಸಂಬಂಧ ಹೊಂದಿದೆ. ಮೂರನೆಯದಾಗಿ, ಪ್ಯಾಲೆಸ್ಟೀನ್ ಮತ್ತು ಇಸ್ರೇಲ್ ನಡುವೆ ತಟಸ್ಥ ಧೋರಣೆ ಕೈಬಿಟ್ಟು, ಇಸ್ರೇಲ್ ಪರವಾಗಿ ಬಹಿರಂಗವಾಗಿಯೇ ಗುರುತಿಸಿಕೊಳ್ಳುತ್ತಿದೆ. ವಿದೇಶಾಂಗ ನೀತಿಯಲ್ಲಿನ ದೇಶದ ಸೂಕ್ಷ್ಮ ಬದಲಾವಣೆಯ ಜತೆಗೆ ಮೋದಿ ಅವರ ವೈಯಕ್ತಿಕ ನಿಲುವುಗಳೂ ಇವುಗಳ ಹಿಂದಿವೆ ಎನ್ನಲಾಗುತ್ತಿದೆ.

ಆಧಾರ: ರಾಯಿಟರ್ಸ್, ವಾಣಿಜ್ಯ ಸಚಿವಾಲಯದ ವೆಬ್‌ಸೈಟ್, ಸೌತ್ ಏಷ್ಯಾ ಜರ್ನಲ್, ಫಾರಿನ್ ಪಾಲಿಸಿ.ಕಾಮ್, ಸೆಂಟರ್ ಫಾರ್ ಸ್ಟ್ರಾಟಜಿಕ್ ಆ್ಯಂಡ್ ಇಂಟರ್‌ನ್ಯಾಷನಲ್ ಸ್ಟಡೀಸ್, ಮಾಧ್ಯಮ ವರದಿಗಳು

ಇರಾನ್ ಸಂಬಂಧ: ಉತ್ತುಂಗದಿಂದ ಪ್ರಪಾತಕ್ಕೆ

ಐತಿಹಾಸಿಕವಾಗಿ ಪುರಾತನ ಭಾರತ ಮತ್ತು ಇರಾನ್ (ಹಿಂದಿನ ಪರ್ಷಿಯಾ) ನಡುವೆ ಸಾವಿರಾರು ವರ್ಷಗಳ ಹಿಂದಿನಿಂದಲೇ ಸಂಬಂಧ ಇದೆ. ರಾಜತಾಂತ್ರಿಕ ಸಂಬಂಧ ಆರಂಭವಾಗಿದ್ದು, 20ನೇ ಶತಮಾನದ ಮಧ್ಯಭಾಗದಲ್ಲಿ. 1950ರಲ್ಲಿ ಭಾರತ ಮತ್ತು ಇರಾನ್ 'ಸ್ನೇಹ ಒಪ್ಪಂದ'ಕ್ಕೆ ಸಹಿ ಹಾಕಿದವು. 76 ವರ್ಷಗಳ ಅವಧಿಯಲ್ಲಿ ಉಭಯ ದೇಶಗಳ ನಡುವಿನ ಸಂಬಂಧ ಹಲವು ಮಗ್ಗುಲು ಬದಲಾಯಿಸಿದೆ.

ಸ್ನೇಹ ಒಪ್ಪಂದ ರೂಪುಗೊಂಡಾಗ ಇರಾನ್‌ನಲ್ಲಿ ಷಾ ರಾಜವಂಶಸ್ಥರ ಆಳ್ವಿಕೆ ಇತ್ತು. ಅಲ್ಲಿನ ರಾಜ ಅಮೆರಿಕದ ಪರವಾಗಿದ್ದರು. ಅಮೆರಿಕ ಪಾಕಿಸ್ತಾನದೊಂದಿಗೆ ಹೆಚ್ಚು ಒಡನಾಟ ಹೊಂದಿತ್ತು. ಹೀಗಾಗಿ ಭಾರತ–ಇರಾನ್ ಸಂಬಂಧ ಹೆಸರಿಗಷ್ಟೇ ಇತ್ತು. 1979ರಲ್ಲಿ ನಡೆದ ಕ್ರಾಂತಿಯಲ್ಲಿ ರಾಜರ ಆಡಳಿತ ಪತನಗೊಂಡು ಅಯಾತೊಲ್ಲಾ ರುಹೊಲ್ಲಾಹ್ ಖಮೇನಿ ನೇತೃತ್ವದ 'ಧರ್ಮಾಧರಿತ' ಸರ್ಕಾರದ ಆಡಳಿತ ಶುರುವಾದ ಮೇಲೆ ಭಾರತ ಮಾತ್ರವಲ್ಲದೇ ಪಶ್ಚಿಮ ಏಷ್ಯಾದೊಂದಿಗಿನ ಅದರ ಸಂಬಂಧ ಸುಧಾರಣೆಯತ್ತ ಹೆಜ್ಜೆ ಹಾಕಿತು. ಭಾರತದ ಅಲಿಪ್ತ ನೀತಿಗೆ ಅದು ಬೆಂಬಲವನ್ನೂ ವ್ಯಕ್ತಪಡಿಸಿತು.

ಅಮೆರಿಕದೊಂದಿಗೆ ಪಾಕಿಸ್ತಾನ ಉತ್ತಮ ಸಂಬಂಧ ಹೊಂದಿದ್ದ ಕಾರಣಕ್ಕೆ ಇರಾನ್ ಪಾಕಿಸ್ತಾನದಿಂದ ದೂರ ಉಳಿದಿತ್ತು. ಇದರಿಂದ ಭಾರತಕ್ಕೆ ಅನುಕೂಲವಾಯಿತು. ವಿಶ್ವಸಂಸ್ಥೆ, ಮುಸ್ಲಿಂ ರಾಷ್ಟ್ರಗಳ ಒಕ್ಕೂಟ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಕಾಶ್ಮೀರ ವಿಚಾರವನ್ನು ಪ್ರಸ್ತಾಪಿಸಿ, ಭಾರತದ ವಿರುದ್ಧ ನಿರ್ಣಯ ಕೈಗೊಳ್ಳುವ ಪಾಕಿಸ್ತಾನದ ಹಲವು ಪ್ರಯತ್ನಗಳನ್ನು ಇರಾನ್ ವಿಫಲಗೊಳಿಸಿತ್ತು. ತೈಲ ಸಂಪದ್ಭರಿತ ರಾಷ್ಟ್ರವಾದ ಇರಾನ್‌ನಿಂದ ಭಾರತ ಮೊದಲಿನಿಂದಲೂ ಕಚ್ಚಾ ತೈಲ ಖರೀದಿಸುತ್ತಿತ್ತು. 1980ರ ದಶಕದಲ್ಲಿ ನಡೆದ ಇರಾನ್–ಇರಾಕ್ ಯುದ್ಧದ ಕಾರಣದಿಂದ ಭಾರತವು ತೈಲಕ್ಕಾಗಿ ಬೇರೆ ಕೊಲ್ಲಿ ರಾಷ್ಟ್ರಗಳನ್ನು ಅವಲಂಬಿಸಬೇಕಾಯಿತು. ಶೀತಲ ಸಮರ ಅಂತ್ಯಗೊಂಡ ನಂತರ ಭಾರತ ಮತ್ತು ಇರಾನ್ ಇನ್ನಷ್ಟು ಹತ್ತಿರವಾದವು.

ನಾಯಕರ ಭೇಟಿ–ಒಪ್ಪಂದ: 1993ರಲ್ಲಿ ಪ್ರಧಾನಿ ಪಿ.ವಿ. ನರಸಿಂಹರಾವ್ ಟೆಹರಾನ್‌ಗೆ ಭೇಟಿ ನೀಡಿದ್ದರು. ಎರಡು ವರ್ಷಗಳ ನಂತರ ಇರಾನ್ ಅಧ್ಯಕ್ಷ ಅಕ್ಬರ್ ಹಶೆಮಿ ರಫ್ಸಂಜಾನಿ ಭೇಟಿ ಭಾರತಕ್ಕೆ ನೀಡಿದ್ದರು. ಈ ಸಂದರ್ಭದಲ್ಲಿ ಹಲವು ವ್ಯಾಪಾರ ಒಪ್ಪಂದಗಳಿಗೆ ಎರಡೂ ರಾಷ್ಟ್ರಗಳು ಸಹಿ ಹಾಕಿದ್ದವು. 2001ರಲ್ಲಿ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಇರಾನ್‌ಗೆ ಭೇಟಿ ನೀಡಿದ್ದರೆ, ಎರಡು ವರ್ಷಗಳ ತರುವಾಯ ಅಲ್ಲಿನ ಅಧ್ಯಕ್ಷ ಮೊಹಮ್ಮದ್ ಖಟಮಿ ಅವರು ಭಾರತಕ್ಕೆ ಭೇಟಿ ನೀಡಿದ್ದರು. ಎರಡೂ ಸಂದರ್ಭಗಳಲ್ಲಿ ಉಭಯ ನಾಯಕರು ಸುಸ್ಥಿರ, ಸುರಕ್ಷಿತ, ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಪರಸ್ಪರ ಸಹಕಾರ ನೀಡುವ ಘೋಷಣೆಗಳಿಗೆ ಸಹಿ ಹಾಕಿದ್ದರು. ಬಂದರು, ಇಂಧನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಂಡವಾಳ ಹೂಡುವ ಭರವಸೆಯನ್ನೂ ಭಾರತ ನೀಡಿತ್ತು. 2000ದ ದಶಕದಲ್ಲಿ ಭಾರತವು ಗರಿಷ್ಠ ಪ್ರಮಾಣದಲ್ಲಿ ತೈಲ ಆಮದು ಮಾಡಿತ್ತು.

ಅತೃಪ್ತಿ ತಂದಿದ್ದ ಹೇಳಿಕೆ

2017ರಿಂದ 2024ರ ನಡುವೆ ಭಾರತದಲ್ಲಿ ನಡೆದ ಕೆಲವು ಬೆಳವಣಿಗೆಗಳ ಕುರಿತಾಗಿ ಇರಾನ್ ಪರಮೋಚ್ಚ ನಾಯಕ ಅಯಾತೊಲ್ಲಾ ಖಮೇನಿ ಅವರು ನೀಡಿದ್ದ ಹೇಳಿಕೆಗಳು ಆಡಳಿತಾರೂಢ ಎನ್‌ಡಿಎ ಸರ್ಕಾರದ ಅಸಮಾಧಾನಕ್ಕೆ ಕಾರಣವಾಗಿದ್ದವು.

ಕಾಶ್ಮೀರ ವಿಚಾರ, 370ನೇ ವಿಧಿ ರದ್ದು, 2020ರಲ್ಲಿ ದೆಹಲಿಯಲ್ಲಿ ನಡೆದ ಹಿಂಸಾಚಾರ, ಪೌರತ್ವ ತಿದ್ದುಪಡಿ ಕಾಯ್ದೆಯ ವಿಚಾರವಾಗಿ ಖಮೇನಿ ಅವರು ಕೇಂದ್ರ ಸರ್ಕಾರದ ನಿಲುವಿಗೆ ವಿರುದ್ಧವಾದ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಈ ಸಂದರ್ಭದಲ್ಲಿ ಭಾರತವು ಇರಾನಿನ ರಾಯಭಾರಿಯನ್ನು ಕರೆದು ತನ್ನ ಆಕ್ಷೇಪ ದಾಖಲಿಸಿತ್ತು.

ಇರಾನ್‌ನೊಂದಿಗೆ ಭಾರತದ ಸರಕು ವ್ಯಾಪಾರ (ಕೋಟಿಗಳಲ್ಲಿ)

ವರ್ಷ	ರಫ್ತು	ಆಮದು	ಒಟ್ಟು
2015-16	18,177	40,823	60,000
2018-19	24,461	94,113	1.19 ಲಕ್ಷ
2019-20	23,854	9,762	33,616
2020-21	13,211	2,448	15,660
2024-25	10,498	3,747	14,245

ವಿರುದ್ಧ ಮತ: ಇರಾನ್ ಅಣ್ವಸ್ತ್ರ ಅಭಿವೃದ್ಧಿ ಮಾಡುವುದರ ವಿರುದ್ಧವಾಗಿದ್ದ ಅಮೆರಿಕವು 2005ರಲ್ಲಿ ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯ ಸಭೆಯಲ್ಲಿ ಇರಾನ್ ವಿರುದ್ಧ ನಿರ್ಣಯ ಅಂಗೀಕಾರವಾಗುವಂತೆ ನೋಡಿಕೊಂಡಿತ್ತು. ಆ ಸಮಯದಲ್ಲಿ ಅಮೆರಿಕದೊಂದಿಗೆ ಉತ್ತಮ ದ್ವಿಪಕ್ಷೀಯ ಬಾಂಧವ್ಯ ಬೆಳೆಸುವ ನಿಟ್ಟಿನಲ್ಲಿ ದೃಷ್ಟಿ ನೆಟ್ಟಿದ್ದ ಅಂದಿನ ಯುಪಿಎ ಸರ್ಕಾರ, ಇರಾನ್ ವಿರುದ್ಧದ ನಿರ್ಣಯವನ್ನು ಬೆಂಬಲಿಸಿತ್ತು. ಅದೇ ವರ್ಷ ಪ್ರಧಾನಿ ಮನಮೋಹನ್ ಸಿಂಗ್ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದಾಗ ಎರಡೂ ದೇಶಗಳು ನಾಗರಿಕ ಪರಮಾಣು ಸಹಕಾರ ಒಪ್ಪಂದದ ಘೋಷಣೆ ಮಾಡಿದವು. ಹಾಗಿದ್ದರೂ, ಉಭಯ ದೇಶಗಳ ನಡುವಿನ ತೈಲ ವ್ಯಾಪಾರ ಮುಂದುವರಿದಿತ್ತು.

2010–13ರ ನಡುವೆ ಬರಾಕ್ ಒಬಾಮ ನೇತೃತ್ವದ ಅಮೆರಿಕ ಆಡಳಿತ ಇರಾನ್ ಮೇಲೆ ನಿರ್ಬಂಧಗಳನ್ನು ಹೇರಿತ್ತು. ಪರಮಾಣು ಒಪ್ಪಂದ ಎಂದು ಕರೆಯಲಾಗುವ 'ಜಂಟಿ ಸಮಗ್ರ ಕ್ರಿಯಾ ಯೋಜನೆ ಒಪ್ಪಂದ'ಕ್ಕೆ ಇರಾನ್ ಸಹಿ ಹಾಕಿದ ನಂತರ ಒಬಾಮ ಆಡಳಿತವು ನಿರ್ಬಂಧಗಳನ್ನು ವಾಪಸ್ ಪಡೆಯಿತು.

ಅಮೆರಿಕದ ಒತ್ತಡ: 2014ರಲ್ಲಿ ಅಧಿಕಾರಕ್ಕೆ ಬಂದ, ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಇಸ್ರೇಲ್ ಜೊತೆಗಿನ ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಹೆಚ್ಚು ಗಮನ ನೀಡಲು ಆರಂಭಿಸಿದರೂ, ಇರಾನ್ ಜೊತೆಗಿನ ಬಾಂಧವ್ಯವನ್ನು ಮುಂದುವರಿಸಿತ್ತು. 2016ರಲ್ಲಿ ಪ್ರಧಾನಿ ಮೋದಿ ಅವರು ಇರಾನ್‌ಗೆ ಭೇಟಿ ನೀಡಿದ್ದರು. ಅಲ್ಲಿನ ಛಬಹಾರ್ ಬಂದರನ್ನು ಅಭಿವೃದ್ಧಿ ಪಡಿಸುವ ಕಾರ್ಯಕ್ಕೆ ಭಾರತ ಮುಂದಾಯಿತು.

2018–19ರವರೆಗೂ ಭಾರತವೂ ಇರಾನ್‌ನಿಂದ ಗಣನೀಯ ಪ್ರಮಾಣದಲ್ಲಿ ತೈಲ ಖರೀದಿಸುತ್ತಲೇ ಇತ್ತು. ಆದರೆ, ಡೊನಾಲ್ಡ್ ಟ್ರಂಪ್ ಅವರು ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ನಂತರ, ಒಬಾಮ ಸರ್ಕಾರದ ಅವಧಿಯಲ್ಲಿ ಸಹಿ ಹಾಕಲಾಗಿದ್ದ ಇರಾನ್‌ನೊಂದಿಗಿನ ಅಣು ಒಪ್ಪಂದವನ್ನು ರದ್ದುಪಡಿಸಿ, ಅದರ ಮೇಲೆ ನಿರ್ಬಂಧ ಹೇರಿದರು. ಅಲ್ಲದೇ, ಅಲ್ಲಿಂದ ಯಾವುದೇ ರಾಷ್ಟ್ರ ತೈಲ ಖರೀದಿಸದಂತೆ ಒತ್ತಡ ಹೇರಿದರು. ಸ್ವಲ್ಪ ಸಮಯ ಭಾರತವು ಡಾಲರ್ ಬದಲಿಗೆ ರೂಪಾಯಿ ಕರೆನ್ಸಿಯಲ್ಲೇ ಹಣ ಪಾವತಿ ಮಾಡಿ ತೈಲ ಖರೀದಿಸುತ್ತಿತ್ತು. ಅಮೆರಿಕದ ಒತ್ತಡ ಜಾಸ್ತಿಯಾದ ಬಳಿಕ ಅಲ್ಲಿಂದ ತೈಲ ಖರೀದಿ ಬಹುತೇಕ ನಿಲ್ಲಿಸಿತು. ಇದರಿಂದ ಎರಡು ದೇಶಗಳ ನಡುವಿನ ಸರಕು ವ್ಯಾಪಾರ ಕಡಿಮೆ ಆಯಿತು.

ಆದಾಗ್ಯೂ, 2024ರ ಮೇ 13ರಂದು ಛಬಹಾರ್ ಬಂದರು ಅಭಿವೃದ್ಧಿ ಮತ್ತು ನಿರ್ವಹಣೆ ಸಂಬಂಧ ಎರಡೂ ರಾಷ್ಟ್ರಗಳು 10 ವರ್ಷಗಳ ಗುತ್ತಿಗೆಗೆ ಸಹಿ ಹಾಕಿದ್ದವು. ಇರಾನ್ ಮೇಲೆ ಅಮೆರಿಕ ಹೇರಿರುವ ನಿರ್ಬಂಧ ಅದರ ಕಾರ್ಯಾಚರಣೆಯ ಮೇಲೂ ಪರಿಣಾಮ ಬೀರಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜಗತ್ತಿನ ಅತಿ ಎತ್ತರದ ಕಟ್ಟಡ ಎಂಬ ಹೆಗ್ಗಳಿಕೆ ಪಡೆದಿರುವ ದುಬೈನ ಬುರ್ಜ್ ಖಲೀಫಾದ ಸುತ್ತಮುತ್ತ ಯುದ್ಧವಿಮಾನಗಳು ದಾಳಿ ಮಾಡುತ್ತಿರುವ ವಿಡಿಯೊ ತುಣುಕೊಂದನ್ನು @ತಾರೀಖ್_78 ಎಂಬ 'ಎಕ್ಸ್' ಬಳಕೆದಾರ ಸೋಮವಾರ ಹಂಚಿಕೊಂಡಿದ್ದಾರೆ. ಇರಾನ್ ದುಬೈ ಮೇಲೆ ದಾಳಿ ನಡೆಸುತ್ತಿದೆ. ಜನರು ದಿಕ್ಕಾಪಾಲಾಗಿ ಓಡುತ್ತಿದ್ದಾರೆ ಎಂದು ಅವರು ಪೋಸ್ಟ್‌ನಲ್ಲಿ ಪ್ರತಿಪಾದಿಸಿದ್ದಾರೆ. ಆದರೆ ಇದು ಸುಳ್ಳು ಮಾಹಿತಿ.

ಇನ್‌ವಿಡ್ ಟೂಲ್ ಮೂಲಕ ವಿಡಿಯೊ ತುಣುಕಿನಿಂದ ಕೀ ಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಒಂದು ಕೀ ಫ್ರೇಮ್ ಅನ್ನು ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ, ಹಲವರು ಈ ವಿಡಿಯೊವನ್ನು ಹಂಚಿರುವುದು ಕಂಡು ಬಂತು. ಬುರ್ಜ್ ಖಲೀಫಾದ ಮೇಲೆ ದಾಳಿ ನಡೆದಿದೆಯೇ ಎಂಬುದನ್ನು ತಿಳಿಯಲು ಗೂಗಲ್‌ನಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಲಾಯಿತು. ಆದರೆ, ಈ ಬಗ್ಗೆ ಯಾವುದೇ ವರದಿಗಳು ಸಿಗಲಿಲ್ಲ. ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ, ಅದರ ಅಸಲಿತನದ ಬಗ್ಗೆ ಅನುಮಾನ ಮೂಡಿತು. ವಿಡಿಯೊ ತುಣುಕನ್ನು ಸೈಟ್‌ಎಂಜಿನ್ ಎಂಬ ಎಐ ಪತ್ತೆ ಟೂಲ್ ಮೂಲಕ ಪರಿಶೀಲಿಸಿದಾಗ, ಅದು ಎಐ ವಿಡಿಯೊ ಎಂಬುದು ದೃಢಪಟ್ಟಿತು. ಬುರ್ಜ್ ಖಲೀಫಾ ಸುತ್ತಮುತ್ತ ಇರಾನ್ ಕ್ಷಿಪಣಿ, ಡ್ರೋನ್ ದಾಳಿ ನಡೆಸಿದೆ ಎಂದು ಎಐ ವಿಡಿಯೊವನ್ನು ಸೃಷ್ಟಿಸಿ ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪದಬಂಧ 6333

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಮನಸ್ಸಿನ ಬಯಕೆಯಿದು (4)
5.ಬೇರೆ ರೂಪವು ಈ ತರ ಕಾಣಿಸುತ್ತಿದೆಯಲ್ಲಾ? (4)
6.ತಂಬಾಕು ಕೊಯ್ಯಲು ಬಳಸಿದ ಕಿರುಗತ್ತಿಯಿದು (2)
7.ಬೇರೆಯ ಉಪಾಯ (4)
9.ಪರಂಪರೆಯಲ್ಲಿರುವ ಗಲಾಟೆ ಕಾಣಿಸಿತೇ? (2)
11.ಕಚಕ್ಕನೆ ಕತ್ತರಿಸಿದ ತಲೆಕೂದಲು (2)
12.ಆಡುಗೆಮನೆ ಇಲ್ಲಿದೆ (4)
14.ನಿರುಪಯುಕ್ತತೆಯನ್ನು ಹೀಗೆನ್ನಿ (2)
16.ಇದು ಅನಿರೀಕ್ಷಿತವಾದುದು (4)
17.ಅದೇ ತಾನೆ ಕಡೆದ ಬೆಣ್ಣೆ (4)

ಮೇಲಿಂದ ಕೆಳಕ್ಕೆ

1.ಬಹು ಹೆಚ್ಚಿನ ಅವಶ್ಯಕತೆ (3)
2.ಒಳಗಿನ ಉದ್ದೇಶ (4)
3.ಈ ತರ ಕಾಣಿಸಿದ ಹೊಸಯುಗ (4)
4.ಬೆಳಕು ಚಲ್ಲಿದಾಗ ಕಾಣಿಸಿದ ಕಾಂತಿ (3)
6.ಬಾಲ ಹಚ್ಚಿಕೊಂಡಿರುವ ಹುಡುಗ (3)
8.ಅತಿಯಾದ ಬಯಕೆ (3)
10.ವಸ್ತು ಅಥವಾ ಶಬ್ದದ ಅರ್ಥ (3)
12.ರಂಗದ ನಡುವಿದ್ದವ ಚನ್ನಾಗಿ ತಿಳಿದವನು (4)
13.ಖರ್ಚುವೆಚ್ಚದ ವಿವರ (4)
14.ವ್ಯವಸಾಯಗಾರನ ದುಃಖ (3)
15.ಅನುಕೂಲತೆ ಇಲ್ಲಿದೆ (3)



6332ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಾಕಾರ 3.ಅಶ್ವಾರೋಹಿ 5.ನವೀನ 7.ಪ್ರವರ್ತಕ 9.ವ್ಯವಹಾರ 12.ಹಗರು 14.ಸ್ವಯಂವರ 15.ಕನಲು

ಮೇಲಿಂದ ಕೆಳಕ್ಕೆ:
1.ಪ್ರಾಚೀನ 2.ರಸನ 3.ಅನುಭಾವ 4.ಹಿಸುಣ 6.ವೀರಕಾವ್ಯ 7.ಪ್ರಹರ 8.ಕವಾಡಿಗ 10.ಹಾಹಾಕಾರ 11.ಹಗೃಸ್ವ 12.ಹವ್ಯಕ 13.ರುಮಾಲು

ಸುಡೊಕು 6717

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5			6	8	1		3
9		6						
	8		7			2		6
6		1		5		7		9
			8		6			
8				7		5		2
3		9		1			2	
			6		7	9		4
7		8		2			1	5

6716 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ಬಣ್ಣ ಬಣ್ಣದ ಲೋಕ

ನುಡಿ ಬೆಳಗು

ವಾಸುದೇವ ನಾಡಿಗ್

ಬಣ್ಣಗಳಿಗೂ ಒಂದು ಹಬ್ಬವಿದೆ ಎಂಬ ಮಾತೇ ವಿಸ್ಮಯ. ಇದು ಈ ನೆಲದ ಒನಪು. ಗೊತ್ತಾಗುತ್ತಿಲ್ಲ ಬಣ್ಣ ಕಣ್ಣಿನ ಒಳಗೆ ಇದೆಯೋ ಹೊರಗೆ ಇದೆಯೋ. ಬೆಳಕಿನ ವಕ್ರೀಭವನ ಪಾತದಲ್ಲಿ ಪಟ್ಟಕದ್ದೇ ಪ್ರಾಬಲ್ಯ. ಬಿಳಿ ಬೆಳಕು ಪಟ್ಟಕವನ್ನು ಹೊಕ್ಕಿದಾಗ ಅಚೆ ಬೀಳುವ ಗೆರೆಗಳೇ ಬಾಳಿನ ತುಂಬಾ ಆವರಿಸುತ್ತವೆ. ಕಲಾವಿದ ಹರಸಾಹಸ ಪಟ್ಟು ಏನೆಲ್ಲಾ ಮಿಶ್ರಣ ಮಾಡಿ ಯಥಾವತ್ತಾಗಿ ಬಿದ್ದ, ಕಂಡ ಬಣ್ಣದ ಹೂ ಎಲೆ ಪಕ್ಷಿ ಪ್ರಾಣಿ ರೆಕ್ಕೆ ಪುಕ್ಕ ನದಿ ಆಕಾಶ ಏನೆಲ್ಲವನ್ನೂ ಕ್ಯಾನ್ವಾಸಿನೊಳಗೆ ತರಲು ಯತ್ನಿಸಿ ಸೋಲುತ್ತಾನೆ. ನವದುರ್ಗೆ ಒಂಬತ್ತು ದಿನ ಒಂಬತ್ತು ಬಣ್ಣದ ಸೀರೆಯುಟ್ಟು ಚಿತ್ರಗಳಲ್ಲಿ ಜೀವಂತಗೊಳ್ಳುತ್ತಾಳೆ. ಯಾವ ಸೆರಗಿಗೆ ಯಾವ ಬಣ್ಣದ ಅಂಚು ಎಂದು ಮಾನಿನಿಯರು ಪೇಟೆ ಪೇಟೆಗಳನ್ನು ಮಗುಚಿ ಹಾಕುತ್ತಾರೆ. ದಟ್ಟ ಬಿರುಬಿಸಿಲ ಕಾಲದಲ್ಲೂ ಗುಲ್‌ಮೊಹರ್ ಬೇರಿನ ಆಳ ಕಡು ಕೆಂಪು ಬಣ್ಣವನ್ನು ಮೆತ್ತಿಕೊಂಡು, ದುಂಡು ಮಲ್ಲಿಗೆ ಬೆಳ್ಳನೆ ಹೊಳೆಯುತ್ತ ಪರಿಮಳವನ್ನು ಚೆಲ್ಲುತ್ತದೆ. ಒಂದು ಬಿಂದಿಗೆ ನೀರಿಗೂ ಜನ ತತ್ವಾರ ಪಡುತ್ತಿರುವಾಗ ಕಲ್ಲಂಗಡಿ ಮೈದುಂಬಿ ಕೆಂಪು ತುಳುಕುತ್ತದೆ. ತೆಂಗಿನ ಮರದ ತುದಿ ಗೊನೆಗೆ ಗಟ್ಟಿ ಕವಚದ ಒಳಗೆ ಎಳನೀರು ಸರಬರಾಜು ಮಾಡುತ್ತದೆ. ತಿಳಿ ಬಣ್ಣದ ಕತೆ ಇದು.

ಈ ಭೂಮಿ ಬಣ್ಣದ ಬುಗುರಿ ಎಂದು ಹಾಡುತ್ತಲೇ ಶಿವನೆಂಬ ಚಾಟಿಯ ಎಚ್ಚರ. ಬಣ್ಣದ ಬುಗುರಿಯನ್ನು ಸುತ್ತಿ ತಿರುಗಿಸುವ ಚಾಟಿ ಕೂಡಾ ಬಣ್ಣದ ಹೆಣಿಗೆಯೇ. ಬೆಳ್ಳನೆಯ ಅಕ್ಕಿಯನ್ನು ಕೇರುವ ಮೊರ ಕೂಡಾ ಬಣ್ಣದ ಚೌಕವೇ. ಬದುಕೇ ಬಣ್ಣವಾಗಿರುವಾಗ ಭಾವಗಳು ಕೂಡಾ ಬಣ್ಣ ಮೆತ್ತಿಕೊಳ್ಳುತ್ತವೆ. ಮುನಿಸಿಗೆ ಕೆಂಪು, ಶೋಕಕ್ಕೆ ಕಪ್ಪು, ಸಮೃದ್ಧಿಗೆ ಹಸಿರು, ಶಾಂತಿಗೆ ಬಿಳಿ, ಬಯಕೆಗೆ ನೀಲಿ, ಒಲವಿಗೆ ಗುಲಾಬಿ, ಕ್ರಾಂತಿಗೆ ಕೇಸರಿ ಹೀಗೇ ಒಂದಿಲ್ಲ ಒಂದು ಬಣ್ಣ ಅರ್ಥ ಪಡೆದುಕೊಳ್ಳುತ್ತದೆ. ಇದರ ಮಧ್ಯೆ ನವಿಲು ಯಾರ ಜಪ್ತಿಗೂ ಸಿಗದೇ ಹಾರುತ್ತದೆ. ಊರು ಗಮ್ಯ ಯಾವುದೇ ಇರಲಿ ಕಪ್ಪು ದಾರಿ, ಹೆದ್ದಾರಿಗಳನ್ನೇ ದಾಟಿ ಹೋಗಬೇಕು. ಅಗಾಧ ಜ್ಞಾನಿಗಳೂ ಕಪ್ಪು ಹಲಗೆಯ ಮೇಲಿನ ಬಿಳಿ ಬಣ್ಣದ ಮೂಲಕವೇ ಮೂಡಿ ಬಂದವರು.

ಯಂಡಮೂರಿ ವೀರೇಂದ್ರನಾಥರ 'ಕಪ್ಪಂಚು ಬಿಳಿಸೀರೆ' ಕಾದಂಬರಿ ಲೋಕದ ಸೀರೆ ಮಾರುಕಟ್ಟೆಯನ್ನು ತೆರೆದಿಟ್ಟರೆ, ಡಾ.ರಾಜ್ ಅವರ ಸಿನಿಮಾ 'ಕಾಮನಬಿಲ್ಲು' ಇದ್ದು, ಮರೆಯಾಗುವ ಸುಖ ಸಂತಸದ ನಶ್ವರತೆಯನ್ನು ಬಿಂಬಿಸುತ್ತದೆ. ಒಲವಿನ ಬಣ್ಣದ ಹಾಡು ನೂರೊಂದು ನೆನಪಿಗೆ ಕೆಡವುತ್ತದೆ. ಹೋಳಿ ಹಬ್ಬ ಮನ್ಮಥನ ಕಾಮನೆಗಳನ್ನು ಹರವುತ್ತದೆ. ಪುಡಿ ಬಣ್ಣವಾದರೆ ಅದು ಗಾಳಿಯ ಕೂಡ, ತೇವದ ಬಣ್ಣವಾದರೆ ಇಳೆಯು ಕೂಡ ಕರಗುತ್ತದೆ. ಹೊಸ ಬಿಳಿವಸ್ತ್ರಗಳನ್ನು ಅಳಿಸದ ಬಣ್ಣಗಳಲ್ಲಿ ಅಂದಗೊಳಿಸುತ್ತೇವೆ. ಬಿಳಿ ಬಟ್ಟೆಯಂತಹ ಶುದ್ಧ ಬಾಳಿನಲ್ಲಿ ಕಪ್ಪು ಚುಕ್ಕೆ ಅಂಟದ ಹಾಗೆ ಎಚ್ಚರ ವಹಿಸುತ್ತೇವೆ. ಮುದ್ದು ಮಗುವಿನ ಕೆನ್ನೆ ಹುಬ್ಬಿನ ಮೇಲೆ ಕಾಡಿಗೆ ಕಪ್ಪು ಬಳಿದರೆ ಅದರ ಅರ್ಥವೇ ಬೇರೆ. ಇಡೀ ಲೋಕ ಅದರದ್ದೇ ಆದ ಬಣ್ಣ ಬೆರಗುಗಳಲ್ಲಿ ಕಂಗೊಳಿಸುವಾಗ ಬಣ್ಣ ಬಳಿಯುವ, ಬಣ್ಣ ಹಚ್ಚುವ, ಬಣ್ಣ ಬಯಲಾಗಿಸುವ ಮಾತುಗಳು ಇನ್ನಷ್ಟು ವಿವರಗಳನ್ನು ಬಯಸುತ್ತದೆ. ಬಣ್ಣ ಬಣ್ಣದ ಲೋಕಾ ಬಣ್ಣಿಸಲು ಸಾಲದು ಈ ಸಾಲೂ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

04 ಮಾರ್ಚ್ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಪ್ರತಿಪದ್ ಗಂ. 16-49 ನಕ್ಷತ್ರ: ಪೂರ್ವಫಲ್ಗುನಿ ಗಂ. 7-39 ಯೋಗ: ಧೃತಿ ಗಂ. 8-53 ಕರಣ: ಕೌಲವ ಗಂ 16-49 ಕುಂಭ ಮಾಸದ 19 ನೇ ದಿನ. ಮಳೆ ನಕ್ಷತ್ರ : ಶತಭಿಷ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-48 ಸೂರ್ಯಾಸ್ತ : 06-36, ಮುಸ್ಲಿಂ ದಿನಾಂಕ : 14 ರಂಜಾನ್, ದಿನ ವಿಶೇಷ : ಹೋಳಿ, ಅದೃಷ್ಟ ಸಂಖ್ಯೆ : 7, 10

ಮೇಷ: ಮನಸ್ಸು ಚಂಚಲವಾಗಿರುವುದು. ದೇವಬಲವಿರುವ ಕಾರಣದಿಂದ ಕೈಹಾಕಿದ ಕೆಲಸಗಳು ಜಯದ ಜೊತೆಯಲ್ಲಿ ಪೂರ್ಣಗೊಳ್ಳಲಿವೆ. ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ಉತ್ತಮ ವೇದಿಕೆ ಸಿಗಲಿದೆ.

ವೃಷಭ: ಕೈಮಗ್ಗದ ವಸ್ತುಗಳ ವ್ಯಾಪಾರಿಗಳಿಗೆ ವಿದೇಶದಿಂದ ಮನ್ನಣೆ ಸಿಗುತ್ತದೆ. ನೂತನ ಅಧಿಕಾರಿಗಳ ಆಗಮನದಿಂದ ಕಚೇರಿಯಲ್ಲಿ ಕೆಲಸಗಳು ತೋರಿಬರಲಿವೆ. ವಿನ್ಯಾಸದ ಉಡುಪುಗಳ ರಫ್ತಿನಿಂದ ಲಾಭ ಗಳಿಸುವಿರಿ.

ಮಿಥುನ: ವ್ಯವಹಾರದ ವಿಷಯಗಳಲ್ಲಿ ಸಂಬಂಧಗಳಿಗೆ ಆಸ್ಪದವಿರದಂತೆ ನೋಡಿಕೊಳ್ಳಿ. ವಿದೇಶದಿಂದ ಸ್ನೇಹಿತರ ಆಗಮನ ಸಂತೋಷ ತರಲಿದೆ. ರಾಜಕೀಯ ಭವಿಷ್ಯಕ್ಕೆ ಮೋಡ ಕವಿದಂತೆ ಆಗುತ್ತದೆ.

ಕರ್ಕಾಟಕ: ಆರ್ಥಿಕ ಪರಿಸ್ಥಿತಿಯಿಂದ ಮುಂದುವರಿಯಲು ಮತ್ತು ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಪೂರಕವಾಗುವುದು. ಮಹತ್ವದ ಮಾತುಕತೆ ನಡೆಸುವಾಗ ಧೈರ್ಯವಾಗಿ ಮಾತನಾಡಿ.

ಸಿಂಹ: ಹಳೆಯ ಕಹಿ ಘಟನೆಗಳಿಂದ ಕಲಿತ ಪಾಠ, ಬಡತನದಿಂದ ಕಲಿತ ಪಾಠವು ಉತ್ತಮ ರೀತಿಯಲ್ಲಿ ಉಪಯೋಗಕ್ಕೆ ಬರಲಿದೆ. ಕರಕುಶಲ ವಸ್ತುಗಳ ತಯಾರಿಕಾ ವೃತ್ತಿಗಳಿಂದ ವರಮಾನ ಸಿಗಲಿದೆ.

ಕನ್ಯಾ: ಹೂವಿನ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಲಾಭವಿರುವುದರಿಂದ ಜೀವನ ನಡೆಸುವುದು ಕಷ್ಟವೆನಿಸದು. ಸಾಮಾಜಿಕ ಬದುಕಿನಲ್ಲಿ ಉತ್ತಮ ಸಾಧನೆ ಮಾಡಲು ಸೂಕ್ತ ಅವಕಾಶ ಸಿಗಲಿದೆ.

ತುಲಾ: ಆಫೀಸಿನಲ್ಲಿ ನಡೆಯುವ ವಿಚಾರಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಪರವಾಗಿಯೇ ಇರುತ್ತಾರೆ. ಆರೋಗ್ಯವು ಆಹಾರದಲ್ಲಿ ಪಥ್ಯ ಮಾಡುವುದರ ಪ್ರಭಾವದಿಂದ ಸುಧಾರಣೆಗೆ ಬರುತ್ತದೆ.

ವೃಶ್ಚಿಕ: ಯಂತ್ರೋಪಕರಣಗಳ ಮಾರಾಟದಿಂದ ಮತ್ತು ಪಶು ಸಂಗೋಪನೆಯಿಂದ ಲಾಭ ಇರುವುದು. ಮಕ್ಕಳೊಂದಿಗೆ ವ್ಯವಹಾರದ ವಿಚಾರಗಳ ಬಗ್ಗೆ ಸುದೀರ್ಘ ಮಾತುಕತೆ ನಡೆಸುವಿರಿ. ಕೈಗೂಂಡ ಕಾರ್ಯ ಸಫಲವಾಗಲಿದೆ.

ಧನು: ವ್ಯಾಪಾರ ವ್ಯವಹಾರಗಳಲ್ಲಿ ತುಸು ಚೇತರಿಕೆ ಕಂಡುಬಂದು ಮುಂದುವರಿಯಲು ಸಹಾಯವಾಗುತ್ತದೆ. ನವದಂಪತಿಗೆ ಶುಭಪ್ರದವಾದ ಸಂತಾನ ಭಾಗ್ಯ ದೊರೆತು ಸಂತೋಷವಾಗುವುದು.

ಮಕರ: ವಾಣಿಜ್ಯ ಸಂಸ್ಥೆಯೊಂದರಲ್ಲಿ ಕಾಂಟ್ರಾಕ್ಟ್ ಪಡೆಯುವ ಪ್ರಯತ್ನ ಫಲಕಾರಿ ಆಗಲಿದೆ. ಆದರೆ ಉದ್ಯೋಗಕ್ಕಾಗಿ ಖಾಸಗಿ ಜೀವನವನ್ನೇ ತ್ಯಾಗ ಮಾಡಬೇಕಾಗಬಹುದು. ತಾಳ್ಮೆಯನ್ನು ಪರೀಕ್ಷಿಸುವ ಕೆಲಸಕ್ಕೆ ಕೈ ಹಾಕದಿರಿ.

ಕುಂಭ: ಅನ್ಯರಿಂದ ಆರ್ಥಿಕ ಸಹಾಯ ನಿರೀಕ್ಷಿಸುವುದು ಸರಿಯಲ್ಲ. ಅದು ಸಾಧ್ಯವಾಗುವುದೂ ಇಲ್ಲ. ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಮಾರ್ಗದಲ್ಲಿ ಪ್ರತಿ ಹೆಜ್ಜೆ ಇರಲಿ. ಧ್ಯಾನ ಭಜನೆಗಳತ್ತ ಮನಸ್ಸು ನಿಲ್ಲುವುದು.

ಮೀನ: ಅವಕಾಶವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಯೋಚಿಸಿ ಉಪಯೋಗಿಸಿಕೊಂಡರೆ ಪೂರ್ಣಪ್ರಮಾಣದ ಲಾಭಾಂಶ ಅನುಭವಕ್ಕೆ ಬರುವುದು. ಯಾರ ಮಾತಿಗೂ ಮರುಳಾಗದೆ ತೀರ್ಮಾನಿಸುವುದು ಉತ್ತಮ.

ಗುಂಡಣ್ಣ

ತೈಲ ಸಾಗಣೆಯ ಮಾರ್ಗ ಬಂದ್

ಹೊರ್ಮುಜ್ ಜಲಸಂಧಿ ಬಂದ್ ಮಾಡಿದ ಇರಾನ್, ಹಡಗುಗಳ ಸಂಚಾರಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ / ಪಿಟಿಐ

ನವದೆಹಲಿ: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ, ಭಾರತದ ಬಾವುಟ ಹೊಂದಿರುವ 35ಕ್ಕೂ ಅಧಿಕ ಹಡಗುಗಳ ಸಂಚಾರಕ್ಕೆ ಅಡ್ಡಿ ಉಂಟಾಗಿದೆ. ಪರ್ಷಿಯನ್ ಕೊಲ್ಲಿ, ಒಮಾನ್ ಕೊಲ್ಲಿ ಹಾಗೂ ಇವುಗಳಿಗೆ ಹೊಂದಿಕೊಂಡಿರುವ ಕಡಲ ಮಾರ್ಗಗಳಲ್ಲಿ ಈ ಹಡಗುಗಳು ಇದ್ದು, ಇವುಗಳಲ್ಲಿನ ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಈ ಹಡಗುಗಳು ಕಚ್ಚಾ ತೈಲ ಹಾಗೂ ಎಲ್‌ಎನ್‌ಜಿ ಸಾಗಿಸುತ್ತಿವೆ. ಇವುಗಳು ಹೊರ್ಮುಜ್ ಜಲಸಂಧಿ ಮೂಲಕವೇ ಸಾಗಬೇಕು. ಈಗ, ಹೊರ್ಮುಜ್ ಜಲಸಂಧಿ ಮುಚ್ಚಿರುವ ಕಾರಣ, ಈ ಹಡಗುಗಳು ಭಾರತಕ್ಕೆ ಬರುವುದು ಕಷ್ಟವಾಗಿದೆ ಎಂದು ಶಿಪ್ಪಿಂಗ್ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

10 ಕೋಟಿ ಬ್ಯಾರಲ್ ತೈಲ ದಾಸ್ತಾನು: ದೇಶದಲ್ಲಿ 10 ಕೋಟಿ ಬ್ಯಾರಲ್‌ನಷ್ಟು ಕಚ್ಚಾ ತೈಲದ ದಾಸ್ತಾನು ಇದೆ. ಈಗ, ಭಾರತದತ್ತ ತೈಲ ಹೊತ್ತು ಬರುತ್ತಿರುವ ಹಡಗುಗಳು ಪರ್ಷಿಯನ್ ಕೊಲ್ಲಿಯಲ್ಲಿ ಸಿಕ್ಕಿಹಾಕಿಕೊಂಡಿವೆ. ಹೀಗಾಗಿ, ಈ ದಾಸ್ತಾನು ಮುಂದಿನ 40ರಿಂದ 45 ದಿನಗಳವರೆಗೆ ದೇಶದ ತೈಲದ ಅಗತ್ಯವನ್ನು ಪೂರೈಸಬಹುದು ಎಂದು ಜಾಗತಿಕ ವ್ಯಾಪಾರ ವಿಶ್ಲೇಷಕ ಸಂಸ್ಥೆ ಕೆಪ್ಲರ್ ತಿಳಿಸಿದೆ.

ಭಾರತವು ತನ್ನ ಅಗತ್ಯವಿರುವ ಕಚ್ಚಾ ತೈಲದ ಪೈಕಿ ಶೇ 88ರಷ್ಟು ಆಮದು ಮಾಡಿಕೊಳ್ಳುತ್ತದೆ. ಈ ಪೈಕಿ, ಪಶ್ಚಿಮ ಏಷ್ಯಾದ ದೇಶಗಳಿಂದ ಶೇ 50ರಷ್ಟು ತೈಲ ಪೂರೈಕೆ ಆಗುತ್ತಿದ್ದು, ಹೊರ್ಮುಜ್ ಜಲಸಂಧಿಯ ಮೂಲಕವೇ ಸಾಗಣೆ ಆಗುತ್ತಿದೆ.

'ದೀರ್ಘಾವಧಿವರೆಗೆ ಹೊರ್ಮುಜ್ ಜಲಸಂಧಿಯಲ್ಲಿ ಸಂಚಾರ ಸ್ಥಗಿತವಾದರೆ ಪೂರೈಕೆಯಲ್ಲಿ ಅಡಚಣೆ ಉಂಟಾಗಲಿದ್ದು, ತೈಲ ಬೆಲೆ ಏರಿಕೆ ಆಗಬಹುದು' ಎಂದು ಕೆಪ್ಲರ್‌ನ ಸಂಶೋಧನಾ ವಿಶ್ಲೇಷಕ ಸುಮಿತ್ ರಿತೋಲಿಯಾ ಹೇಳಿದ್ದಾರೆ.

ದೇಶದ ತೈಲ ಸಂಸ್ಕರಣಾಗಾರಗಳು ತೈಲದ ದಾಸ್ತಾನು ಹೊಂದಿವೆ ಎಂದು ತಿಳಿಸಿದ್ದಾರೆ.

ಹೊರ್ಮುಜ್ ಜಲಸಂಧಿಯ ಮೂಲಕ ಪ್ರತಿನಿತ್ಯ ಸರಾಸರಿ 25 ಲಕ್ಷ ಬ್ಯಾರಲ್ ಕಚ್ಚಾ ತೈಲ ಆಮದಾಗುತ್ತದೆ. 2024–25ರ ಆರ್ಥಿಕ ವರ್ಷದಲ್ಲಿ ದೇಶವು ಕಚ್ಚಾ ತೈಲ ಆಮದಿಗೆ ₹12.61 ಲಕ್ಷ ಕೋಟಿಯಷ್ಟು ವ್ಯಯಿಸಿದೆ. ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ 20.6 ಕೋಟಿ ಟನ್ ಕಚ್ಚಾ ತೈಲ ಆಮದಾಗಿದೆ. ಇದಕ್ಕಾಗಿ ₹9.24 ಲಕ್ಷ ಕೋಟಿ ಖರ್ಚು ಮಾಡಿದೆ.

ಭಾರತವು ವಿಶ್ವದಲ್ಲಿಯೇ ಮೂರನೇ ಅತಿದೊಡ್ಡ ತೈಲ ಆಮದು ರಾಷ್ಟ್ರವಾಗಿದೆ. ಕತಾರ್‌ನಲ್ಲಿರುವ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಪೂರೈಕೆದಾರರೂ ಸಹ ಭಾರತಕ್ಕೆ ತೈಲವನ್ನು ಸಾಗಿಸಲು ಈ ಜಲಸಂಧಿಯನ್ನೇ ಬಳಸುತ್ತಾರೆ ಎಂದಿದೆ.

ಒಂದು ವೇಳೆ ಹೊರ್ಮುಜ್ ಜಲಸಂಧಿ ದೀರ್ಘಕಾಲದ ವರೆಗೆ ಮುಚ್ಚಿದರೆ, ಭಾರತವು ಪಶ್ಚಿಮ ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತದೆ. ಕೊರತೆಯನ್ನು ಸರಿದೂಗಿಸಲು ರಷ್ಯಾದಿಂದಲೂ ಸಹ ಭಾರತ ಆಮದು ಮಾಡಿಕೊಳ್ಳಬಹುದು.

2024–25ರಲ್ಲಿ ಭಾರತವು 2.37 ಕೋಟಿ ಟನ್‌ನಷ್ಟು ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡಿತ್ತು. ಇದು ದೇಶದ ಒಟ್ಟು ಇಂಧನ ಬಳಕೆಯಲ್ಲಿ ಶೇ 10ರಷ್ಟು. ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ 5.33 ಕೋಟಿ ಟನ್ ರಫ್ತು ಮಾಡಿದೆ ಎಂದು ತಿಳಿಸಿದೆ.

ಕಚ್ಚಾ ತೈಲ ದರ ಏರಿಕೆ

ಲಂಡನ್ (ಎಎಫ್‌ಪಿ): ಬ್ರೆಂಟ್ ಕಚ್ಚಾ ತೈಲ ದರವು ಮಂಗಳವಾರದ ವಹಿವಾಟಿನಲ್ಲಿ ಶೇ 8ರಷ್ಟು ಏರಿಕೆಯಾಗಿದ್ದು, ಪ್ರತೀ ಬ್ಯಾರಲ್ ದರವು 85.12 ಡಾಲರ್‌ಗೆ ತಲುಪಿದೆ. ಇದು 2024ರ ಜುಲೈ ಬಳಿಕ ದಾಖಲಾದ ಗರಿಷ್ಠ ಏರಿಕೆ ಆಗಿದೆ.

ಎಂಟು ವಾರಕ್ಕೆ ಸಾಕಾಗುವಷ್ಟು ಇಂಧನ

ದೇಶದಲ್ಲಿ ಮುಂದಿನ ಆರರಿಂದ ಎಂಟು ವಾರಗಳಿಗೆ ಸಾಕಾಗುವಷ್ಟು ಪೆಟ್ರೋಲ್, ಡೀಸೆಲ್ ಮತ್ತು ಇತರೆ ಇಂಧನ ದಾಸ್ತಾನು ಇದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತೈಲ ದಾಸ್ತಾನು ಟ್ಯಾಂಕ್‌ಗಳು, ಪೈಪ್‌ಲೈನ್‌ಗಳು ಮತ್ತು ದೇಶಕ್ಕೆ ಬರುತ್ತಿರುವ ಹಡಗುಗಳಲ್ಲಿನ ತೈಲವು ದೇಶದ 25 ದಿನಗಳ ಅಗತ್ಯವನ್ನು ಪೂರೈಸಲಿದೆ. ಸಂಸ್ಕರಣಾಗಾರಗಳು, ಸಂಗ್ರಹ ಮತ್ತು ಇತರೆ ದಾಸ್ತಾನು ಘಟಕಗಳಲ್ಲಿ ಇಷ್ಟೇ ದಿನಗಳಿಗೆ ಆಗುವಷ್ಟು ಇಂಧನದ ದಾಸ್ತಾನು ಇದೆ ಎಂದು ಹೇಳಿದ್ದಾರೆ.

ದೇಶದಲ್ಲಿ ತಕ್ಷಣಕ್ಕೆ ತೈಲ ಕೊರತೆ ಉಂಟಾಗುವ ಸಾಧ್ಯತೆ ಇಲ್ಲ. ಕಚ್ಚಾ ತೈಲದ ಬೆಲೆ ಏರಿಕೆ, ಸಾಗಣೆ ಮತ್ತು ವಿಮಾ ವೆಚ್ಚದಲ್ಲಿನ ಹೆಚ್ಚಳವು ದೇಶದ ಆಮದು ಮತ್ತು ಹಣದುಬ್ಬರದ ಮೇಲೆ ಪರಿಣಾಮ ಬೀರಬಹುದು ಎಂದು ಹೇಳಿದ್ದಾರೆ.

'ದೇಶದಲ್ಲಿ ಕಚ್ಚಾ ತೈಲ, ಪೆಟ್ರೋಲ್, ಡೀಸೆಲ್ ಮತ್ತು ವಿಮಾನ ಇಂಧನ (ಎಟಿಎಫ್) ದಾಸ್ತಾನು ಪ್ರಮಾಣ ಉತ್ತಮ ಸ್ಥಿತಿಯಲ್ಲಿದೆ' ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ತಿಳಿಸಿದ್ದಾರೆ. ಆದರೆ, ದಾಸ್ತಾನು ಎಷ್ಟಿದೆ ಎಂದು ತಿಳಿಸಿಲ್ಲ.

ದೇಶಾದ್ಯಂತ ಪೆಟ್ರೋಲಿಯಂ ಉತ್ಪನ್ನಗಳ ಪೂರೈಕೆ ಮತ್ತು ದಾಸ್ತಾನು ಸ್ಥಿತಿಯ ಮೇಲೆ ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಸಚಿವಾಲಯವು 24 × 7 ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದೆ ಎಂದು ಹೇಳಿದ್ದಾರೆ.

ಇಂಧನ ದಾಸ್ತಾನು ವಿವರ ಸಲ್ಲಿಸಿ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ, ತಮ್ಮಲ್ಲಿ ಲಭ್ಯವಿರುವ ತೈಲದ ವಿವರ ನೀಡುವಂತೆ ದೇಶದಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಸೂಚಿಸಿದೆ.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿನ ಇಂಧನ ಲಭ್ಯತೆಯ ಸ್ಥಿತಿಯನ್ನು ತಿಳಿದುಕೊಳ್ಳಲು ಮುನ್ನೆಚ್ಚರಿಕೆ ಕ್ರಮವಾಗಿ ವಿಮಾನಯಾನ ಸಚಿವಾಲಯದ ನಿರ್ದೇಶನದಂತೆ ಎಎಐ ಈ ವಿವರ ಕೇಳಿದೆ ಎಂದು ಮೂಲವೊಂದು ತಿಳಿಸಿದೆ.

ದಿನಕ್ಕೆ ಸರಾಸರಿ ಇಂಧನ ಬಳಕೆ, ಮುಂದಿನ ಏಳು ದಿನಗಳಿಗೆ ಬೇಕಾಗುವ ಅಂದಾಜು ತೈಲದ ಅಗತ್ಯ ಮತ್ತು ಮುಂದಿನ ಇಂಧನ ಪುನರ್‌ಭರ್ತಿಯ ವೇಳೆಯನ್ನು ತಿಳಿಸುವಂತೆ ವಿಮಾನ ನಿಲ್ದಾಣದ ನಿರ್ವಾಹಕರನ್ನು ಕೇಳಿದೆ ಎಂದು ತಿಳಿಸಿವೆ.

> **ಇರಾನ್‌ನಲ್ಲಿ ಸೇನಾ ಕಾರ್ಯಾಚರಣೆ ಮುಗಿದ ತಕ್ಷಣ ತೈಲ ಬೆಲೆಗಳು ಇಳಿಯುವ ನಿರೀಕ್ಷೆಯಿದೆ**
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

> **ಪೆಟ್ರೋಲಿಯಂ ಉತ್ಪನ್ನಗಳ ಲಭ್ಯತೆಯ ಬಗ್ಗೆ ಚಿಂತೆಯಿಲ್ಲ. ಬಿಕ್ಕಟ್ಟು ಎದುರಿಸಲು ದೇಶ ಸಿದ್ಧವಾಗಿದೆ**
> **ಜಿ.ಕಿಶನ್ ರೆಡ್ಡಿ,** ಕೇಂದ್ರ ಸಚಿವ

ಬಾಸ್ಮತಿ ಅಕ್ಕಿ ಸಾಗಣೆಗೆ ಅಡ್ಡಿ

ಮುಂಬೈ (ರಾಯಿಟರ್ಸ್): ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಯುದ್ಧದಿಂದಾಗಿ ದೇಶದಿಂದ ರಫ್ತಾಗಬೇಕಿದ್ದ 4 ಲಕ್ಷ ಟನ್ ಬಾಸ್ಮತಿ ಅಕ್ಕಿ ರಫ್ತಿಗೆ ತೊಂದರೆ ಉಂಟಾಗಿದೆ.

'ಯುದ್ಧದಿಂದ ಪಶ್ಚಿಮ ಏಷ್ಯಾದಲ್ಲಿ ಹಡಗುಗಳ ಸಾಗಣೆಗೆ ಅಡ್ಡಿ ಉಂಟಾಗಿದೆ. ಇದರಿಂದ ಸುಮಾರು 2 ಲಕ್ಷ ಟನ್ ಬಾಸ್ಮತಿ ಅಕ್ಕಿ ಸಾಗಣೆಯ ಮಾರ್ಗದಲ್ಲಿ ಸಿಲುಕಿಕೊಂಡಿದ್ದರೆ, ಇಷ್ಟೇ ಪ್ರಮಾಣದ ಅಕ್ಕಿಯು ದೇಶದ ಬಂದರುಗಳಲ್ಲಿಯೇ ಉಳಿದುಕೊಂಡಿದೆ' ಎಂದು ಅಖಿಲ ಭಾರತ ಅಕ್ಕಿ ರಫ್ತುದಾರರ ಸಂಘದ ಅಧ್ಯಕ್ಷ ಸತೀಶ್ ಗೋಯಲ್ ಹೇಳಿದ್ದಾರೆ.

ಮಂಗಳೂರಿನ ಎಂಆರ್‌ಪಿಎಲ್‌ನ ನೋಟ

ಎಂಆರ್‌ಪಿಎಲ್ ಮೇಲೂ ಬಿದ್ದಿದೆ ಯುದ್ಧದ ಕರಿಛಾಯೆ

• ಪ್ರವೀಣ್ ಕುಮಾರ್ ಪಿ.ವಿ

ಮಂಗಳೂರು: ಇಲ್ಲಿನ 'ಮಂಗಳೂರು ರಿಫೈನರಿ ಮತ್ತು ಪೆಟ್ರೊಕೆಮಿಕಲ್ಸ್ ಲಿಮಿಟೆಡ್'ನ (ಎಂಆರ್‌ಪಿಎಲ್) ತೈಲ ಸಂಸ್ಕರಣೆಯ ಮೇಲೂ ಕೊಲ್ಲಿ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಕರಿಛಾಯೆ ಬಿದ್ದಿದೆ. ಯುದ್ಧ ಇನ್ನೆರಡು ವಾರ ಮುಂದುವರಿದರೆ ಸಂಸ್ಥೆಯು ಕಚ್ಚಾತೈಲದ ಕೊರತೆ ಎದುರಿಸುವ ಸಾಧ್ಯತೆ ಇದೆ.

ವರ್ಷದಲ್ಲಿ ಸುಮಾರು 1.80 ಕೋಟಿ ಟನ್ ಕಚ್ಚಾತೈಲವನ್ನು ಎಂಆರ್‌ಪಿಎಲ್ ಆಮದು ಮಾಡಿಕೊಳ್ಳುತ್ತದೆ. ಅದನ್ನು ಸಂಸ್ಕರಿಸಿ ವಿವಿಧ ಪೆಟ್ರೋಲಿಯಂ ಉತ್ಪನ್ನಗಳನ್ನು ತಯಾರಿಸುತ್ತದೆ. ದೇಶೀಯ ಬೇಡಿಕೆ ಪೂರೈಕೆ ಜೊತೆಗೆ ವಿದೇಶಗಳಿಗೂ ಈ ಉತ್ಪನ್ನಗಳು ರಫ್ತಾಗುತ್ತವೆ ಎನ್ನುತ್ತವೆ ಸಂಸ್ಥೆಯ ಮೂಲಗಳು.

'ಈಚಿನ ದಿನಗಳಲ್ಲಿ ಎಂಆರ್‌ಪಿಎಲ್‌ನ ಒಟ್ಟು ಬೇಡಿಕೆಯ ಶೇ 80ರಷ್ಟು ಕಚ್ಚಾತೈಲ ಸೌದಿ ಅರೇಬಿಯಾ, ಕತಾರ್, ಕುವೈತ್, ದುಬೈ, ಇರಾಕ್, ಇರಾನ್, ಮೊದಲಾದ ದೇಶಗಳಿಂದಲೇ ಪೂರೈಕೆಯಾಗುತ್ತಿದೆ. ಈ ಯುದ್ಧದಿಂದಾಗಿ ತೈಲ ಸಾಗಣೆ ಹಡಗುಗಳ ಸಂಚಾರ ಈಗಾಗಲೇ ವ್ಯತ್ಯಯವಾಗಿದ್ದು, ಇನ್ನಷ್ಟು ಹದಗೆಡುವ ಸಾಧ್ಯತೆ ಇದೆ' ಎಂದು ಎಂಆರ್‌ಪಿಎಲ್‌ನ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಎಂಆರ್‌ಪಿಎಲ್‌ಗೆ ಮಾಸಿಕ ಸರಾಸರಿ 15 ಲಕ್ಷ ಟನ್ ಕಚ್ಚಾತೈಲ ಬೇಕಾಗುತ್ತದೆ. ತಿಂಗಳ ಬೇಡಿಕೆಯಲ್ಲಿ ಶೇ 50ರಷ್ಟು ತೈಲ ರಷ್ಯಾದಿಂದ ಪೂರೈಕೆಯಾಗಿದ್ದೂ ಇದೆ. ಪ್ರಸ್ತುತ ಒಟ್ಟು ಬೇಡಿಕೆಯ ಶೇ 80ರಷ್ಟು ಕಚ್ಚಾ ತೈಲ ಕೊಲ್ಲಿ ದೇಶಗಳಿಂದ ಆಮದಾಗುತ್ತಿದೆ. ಗರಿಷ್ಠ 12 ದಿನಗಳಿಗೆ ಬೇಕಾಗುವಷ್ಟು ಕಚ್ಚಾ ತೈಲ ಸಂಗ್ರಹಿಸುವ ವ್ಯವಸ್ಥೆ ನಮ್ಮಲ್ಲಿದೆ. ಹಾಗಾಗಿ ಕೊಲ್ಲಿಯಲ್ಲಿ ನಡೆಯುತ್ತಿರುವ ಯುದ್ಧ ಇನ್ನೂ ಒಂದೆರಡು ವಾರ ಮುಂದುವರಿದರೂ ನಮ್ಮ ತೈಲ ಸಂಸ್ಕರಣ ಘಟಕಗಳ ಕಾರ್ಯಾಚರಣೆ ಏರುಪೇರಾಗುವ ಸಾಧ್ಯತೆ ಇದೆ' ಎಂದರು.

'ಕೊಲ್ಲಿದೇಶಗಳ ಹೊರತಾಗಿ ಅಮೆರಿಕ, ವೆನೆಜುವೆಲಾ, ಆಸ್ಟ್ರೇಲಿಯಾ, ಕೆನಡಾ, ನೈಜೀರಿಯಾ, ಅಂಗೋಲಾ ಮೊದಲಾದ ದೇಶಗಳಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ಅವಕಾಶವೂ ಇದೆ. ಆದರೆ, ದಿಢೀರ್ ಆಮದು ಪ್ರಾಯೋಗಿಕವಾಗಿ ಕಾರ್ಯಸಾಧುವಲ್ಲ. ಯುದ್ಧದ ಕಾರಣ ಆ ದೇಶಗಳು ಕಚ್ಚಾ ತೈಲಕ್ಕೆ ದುಬಾರಿ ದರ ವಿಧಿಸುತ್ತವೆ. ಸಾಗಾಟಕ್ಕೆ ಹಡಗು ಕಂಪನಿಗಳು ಹೆಚ್ಚು ದರ ಕೇಳುತ್ತವೆ' ಎಂದು ಅವರು ವಿವರಿಸಿದರು.

'ಭೂಗತ ಸಂಗ್ರಹಾಗಾರದಲ್ಲಿದೆ 7.5 ಲಕ್ಷ ಟನ್'

'ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ ಲಿಮಿಟೆಡ್ (ಐಎಸ್‌ಪಿಆರ್‌ಎಲ್) ಮಂಗಳೂರಿನ ಹೊರವಲಯದಲ್ಲಿ ಎರಡು ಭೂಗತ ಸಂಗ್ರಹಾಗಾರಗಳಲ್ಲಿ ಕಚ್ಚಾ ತೈಲಗಳನ್ನು ಸಂಗ್ರಹಿಸುವ ವ್ಯವಸ್ಥೆಯನ್ನು ಹೊಂದಿದೆ. ಅದರಲ್ಲಿ ಒಂದು ಸಂಗ್ರಹಾಗಾರವನ್ನು ಎಂಆರ್‌ಪಿಎಲ್ ಕಚ್ಚಾ ತೈಲ ಸಂಗ್ರಹಕ್ಕೆ ಬಳಸಲಾಗುತ್ತಿದೆ. ಅದರಲ್ಲಿ ಗರಿಷ್ಠ 7.5 ಲಕ್ಷ ಟನ್ ಕಚ್ಚಾ ತೈಲವನ್ನು ಸಂಗ್ರಹಿಸಬಹುದಾಗಿದೆ' ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಎಂಆರ್‌ಪಿಎಲ್‌ಗೆ ಪ್ರತಿ ತಿಂಗಳು ಬೇಕು 15 ಲಕ್ಷ ಟನ್ ಕಚ್ಚಾ ತೈಲ
- ಗರಿಷ್ಠ 12 ದಿನಗಳಿಗೆ ಬೇಕಾಗುವಷ್ಟು ಕಚ್ಚಾ ತೈಲ ಮಾತ್ರ ಸಂಗ್ರಹವಿದೆ

ಮುದ್ರೆಮನೆ ಕಾಫಿ (50 ಕೆಜಿಗೆ)	
ಎಪಿ	₹23850
ಎಸಿ	₹12750
ಆರ್‌ಪಿ	₹18000
ಆರ್‌ಸಿ	₹10125

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹480
	12 ಕ್ಕೆ	₹63
ಮೈಸೂರು:	100 ಕ್ಕೆ	₹480

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹444-750
ದ್ವಿತಳಿ (ಬಿ.ವಿ)	₹340-866

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹215
ಆರ್‌ಎಸ್‌ಎಸ್-5	₹209
ಗುಡ್ ಲಾಟ್	₹196

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹20000-20000
ಬೆಂಗಳೂರು	₹30000-33000
ತುಮಕೂರು	₹26100-29600

ಮೆಲಾನಿಯಾ ಅಧ್ಯಕ್ಷತೆಯಲ್ಲಿ ಭದ್ರತಾ ಮಂಡಳಿ ಸಭೆ

ವಿಶ್ವಸಂಸ್ಥೆ (ಎಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪತ್ನಿ ಮೆಲಾನಿಯಾ ಟ್ರಂಪ್ ಅವರ ಅಧ್ಯಕ್ಷತೆಯಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆ ಸೋಮವಾರ ನಡೆದಿದೆ.

'ಸಂಘರ್ಷದಲ್ಲಿ ಮಕ್ಕಳು' ಎಂಬ ವಿಚಾರವನ್ನು ಪ್ರಧಾನವಾಗಿಸಿ ಈ ಸಭೆ ನಡೆಸಲಾಗಿದೆ. ಇರಾನ್ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಗೆ ಅಮೆರಿಕ ಕೈ ಜೋಡಿಸಿರುವ ನಡುವೆಯೇ ಈ ಸಭೆ ನಡೆದಿರುವುದು ಮಹತ್ವ ಪಡೆದಿದೆ. ಜತೆಗೆ ಸಂಘರ್ಷದ ವಿಚಾರವಾಗಿ ಮೆಲಾನಿಯಾ ಏನು ಹೇಳಲಿದ್ದಾರೆ ಎಂಬುದು ಎಲ್ಲರ ಗಮನ ಸೆಳೆದಿದೆ.

ಭದ್ರತಾ ಮಂಡಳಿಯ ಸಭೆಗೆ ಅಮೆರಿಕದ ಪ್ರಥಮ ಮಹಿಳೆ ಅಧ್ಯಕ್ಷತೆ ವಹಿಸುತ್ತಿರುವುದು ಇದೇ ಮೊದಲು. ಸಭೆಗೆ ಅಧ್ಯಕ್ಷತೆ ವಹಿಸುವ ಈ ಬಾರಿಯ ಸರದಿ ಅಮೆರಿಕದ್ದಾಗಿರುವುದರಿಂದ ಮೆಲಾನಿಯಾ ಅವರಿಗೆ ಈ ಅವಕಾಶ ದೊರೆತಿದೆ.

ವಿಶ್ವಸಂಸ್ಥೆಯ ಕೇಂದ್ರ ಕಚೇರಿಗೆ ಆಗಮಿಸಿದ ಮೆಲಾನಿಯಾ ಅವರನ್ನು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟನಿಯೊ ಗುಟೆರಸ್ ಅವರು ಸ್ವಾಗತಿಸಿದ್ದಾರೆ. ಬಳಿಕ ಮಂಡಳಿಯ 15 ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳ ಜತೆಗೆ ಮಾತುಕತೆ ನಡೆಸಿ, 'ಸಂಘರ್ಷದಲ್ಲಿ ಮಕ್ಕಳು, ತಂತ್ರಜ್ಞಾನ, ಶಿಕ್ಷಣ' ಎಂಬ ವಿಚಾರವನ್ನು ಸಭೆಯಲ್ಲಿ ಚರ್ಚಿಸಲಾಗಿದೆ.

ಪ್ರತಿಸುಂಕ ಮರುಪಾವತಿ: ಟ್ರಂಪ್ ಆಡಳಿತಕ್ಕೆ ಹಿನ್ನಡೆ

ವಾಷಿಂಗ್ಟನ್ (ಎಪಿ): ಪ್ರತಿಸುಂಕಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು 90 ದಿನ ತಡೆಹಿಡಿಯುವಂತೆ ಟ್ರಂಪ್ ಆಡಳಿತವು ಸಲ್ಲಿಸಿದ್ದ ಮೇಲ್ಮನವಿಯನ್ನು ಫೆಡರಲ್ ನ್ಯಾಯಾಲಯವು ಸೋಮವಾರ ತಿರಸ್ಕರಿಸಿದೆ.

ಇದರಿಂದಾಗಿ, ಶತಕೋಟಿ ಡಾಲರ್ ಮೌಲ್ಯದ ಪ್ರತಿಸುಂಕ ಮರುಪಾವತಿಯನ್ನು ನಿಧಾನಗೊಳಿಸುವ ಟ್ರಂಪ್ ಆಡಳಿತದ ಪ್ರಯತ್ನಕ್ಕೆ ಪೆಟ್ಟುಬಿದ್ದಂತಾಗಿದೆ.

ಅಮೆರಿಕದ ಮೇಲ್ಮನವಿ ನ್ಯಾಯಾಲಯವು ಮರುಪಾವತಿ ಪ್ರಕ್ರಿಯೆಯಲ್ಲಿನ ಮುಂದಿನ ಹಂತವನ್ನು ನಿರ್ವಹಿಸುವಂತೆ ಸೂಚಿಸಿ, ಪ್ರಕರಣವನ್ನು ಕೆಳ ನ್ಯಾಯಾಲಯಕ್ಕೆ ವರ್ಗಾಯಿಸಿತು.

ಇದೀಗ ನ್ಯೂಯಾರ್ಕ್‌ನಲ್ಲಿರುವ ಅಮೆರಿಕದ ಅಂತರರಾಷ್ಟ್ರೀಯ ವ್ಯಾಪಾರ ನ್ಯಾಯಾಲಯವು, ಮರುಪಾವತಿ ಪ್ರಕ್ರಿಯೆಯನ್ನು ಹೇಗೆ ಮುಂದುವರಿಸಬೇಕು ಎಂಬುದನ್ನು ನಿರ್ಧರಿಸಲಿದೆ.

ಜಗತ್ತಿನ ವಿವಿಧ ದೇಶಗಳ ಮೇಲೆ ಟ್ರಂಪ್ ಆಡಳಿತವು ಹೇರಿದ್ದ ಹೆಚ್ಚುವರಿ ಪ್ರತಿ ಸುಂಕವು ಕಾನೂನುಬಾಹಿರ ಎಂದು ಸುಪ್ರೀಂ ಕೋರ್ಟ್ ಫೆ.20ರಂದು ತೀರ್ಪು ನೀಡಿತ್ತು.

'ಪೆನ್ ವಾರ್ಟನ್ ಬಜೆಟ್ ಮಾಡೆಲ್' ಅರ್ಥಶಾಸ್ತ್ರಜ್ಞರು ಅಂದಾಜಿಸಿದ ಪ್ರಕಾರ ಟ್ರಂಪ್ ಆಡಳಿತವು ಕಳೆದ ಡಿಸೆಂಬರ್ 14ರಿಂದ, 175 ಬಿಲಿಯನ್ ಡಾಲರ್ (ಅಂದಾಜು ₹15.89 ಲಕ್ಷ ಕೋಟಿ) ಸುಂಕ ಸಂಗ್ರಹಿಸಿದೆ. ಇದರ ಮರುಪಾವತಿ ಬಗ್ಗೆ ಸುಪ್ರೀಂ ಕೋರ್ಟ್ ಯಾವುದೇ ಮಾರ್ಗದರ್ಶನ ನೀಡಿರಲಿಲ್ಲ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೋರಿಯರ್ ಸೌಲಭ್ಯವಿದೆ. 9964322833.

General

ಸರ್ಕಾರಿ ಇಲಾಖೆ ಗುತ್ತಿಗೆಗೆ, ಡಿಇಓ, ITI, 7th, PUC ಸಂಬಳ 25000 - 50000 ಉಚಿತ ವಸತಿಯೂಟವಿರುತ್ತದೆ. ಕರ್ನಾಟಕ ಉದ್ಯೋಗ (ಸರ್ಕಾರಿ ನೋಂದಾಯಿತ) ಸಂಪರ್ಕಿಸಿ: 080-29909699, 9606155699.

Hotel

WANTED PERSON Hotel Working. Boys/ Girls, Age 21 above, 12k Salary. with Staying and Food. Location: Yediyur. Hassan Service Road. Contact: 8722638309.

Wanted

GIRI R RAMMURTHY Group CFO / Finance Director 30+ yrs | Infra, Real Estate, Hospitality MBA (Fin), M.Com, ACCA Rs.550+ Cr Fundraising | Project Finance | Governance Bengaluru | 9742488188 | rgiri0507@gmail.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಮೆರಿಕ: ಗುಂಡಿನ ದಾಳಿಗೆ ಭಾರತೀಯ ವಿದ್ಯಾರ್ಥಿ ಬಲಿ

ಹ್ಯೂಸ್ಟನ್ (ಪಿಟಿಐ): ಅಮೆರಿಕದ ಆಸ್ಟಿನ್‌ನ ಬಾರ್‌ವೊಂದರ ಹೊರಗೆ ನಡೆದ ಗುಂಡಿನ ದಾಳಿಯಲ್ಲಿ ಭಾರತ ಮೂಲದ 21 ವರ್ಷದ ವಿದ್ಯಾರ್ಥಿನಿ ಸೇರಿದಂತೆ ಮೂವರು ಭಾನುವಾರ ಸಾವಿಗೀಡಾಗಿದ್ದಾರೆ. ಆರೋಪಿಯನ್ನೂ ಹತ್ಯೆ ಮಾಡಲಾಗಿದೆ.

ಆಸ್ಟಿನ್‌ನಲ್ಲಿರುವ ಟೆಕ್ಸಾಸ್ ವಿಶ್ವವಿದ್ಯಾಲಯದಲ್ಲಿ ಪದವಿ ವ್ಯಾಸಾಂಗ ಮಾಡುತ್ತಿದ್ದ ಸವಿತಾ ಶಾನ್ ಮೃತರು.

ಜನನಿಬಿಡ ಪ್ರದೇಶದಲ್ಲಿ ಬಂದೂಕು ಧಾರಿಯೊಬ್ಬ ಮಧ್ಯರಾತ್ರಿ 2 ಗಂಟೆಗೆ ಇದ್ದಕ್ಕಿದ್ದಂತೆ ಜನರತ್ತ ಗುಂಡು ಹಾರಿಸತೊಡಗಿದ. ಈ ವೇಳೆ 14 ಮಂದಿ ಗಾಯಗೊಂಡಿದ್ದಾರೆ.

ಆರೋಪಿಯ ಮನೆಯಲ್ಲಿ ಶೋಧ ನಡೆಸಿದ ವೇಳೆ ಇರಾನ್‌ನ ಧ್ವಜ ಹಾಗೂ ಭಯೋತ್ಪಾದಕ ಬರಹಗಳು ಪತ್ತೆಯಾಗಿವೆ. ಅಮೆರಿಕ ಮತ್ತು ಇರಾನ್ ನಡುವೆ ಸಂಘರ್ಷ ನಡೆಯುತ್ತಿರುವ ಸಮಯದಲ್ಲೇ ಈ ದಾಳಿ ನಡೆದಿದೆ. ಇದೊಂದು ಭಯೋತ್ಪಾದಕ ಕೃತ್ಯ ಎಂದು ಶಂಕಿಸಿ ತನಿಖೆ ನಡೆಸಲಾಗುತ್ತಿದೆ.

ಗುಂಡಿನ ದಾಳಿ ನಡೆಸಿದ್ದ ಆರೋಪಿಯನ್ನು ಮೂಲತಃ ಸೆನೆಗಲ್‌ನವನಾಗಿದ್ದು, ಅಮೆರಿಕದ ಪೌರತ್ವ ಪಡೆದಿದ್ದ ಎನ್‌ಡಿಯಾಗ ಡಿಯಾನೆ ಎಂದು ಗುರುತಿಸಲಾಗಿದೆ. ಪೊಲೀಸರ ಜೊತೆಗಿನ ಗುಂಡಿನ ಚಕಮಕಿಯಲ್ಲಿ ಆತನೂ ಹತನಾಗಿದ್ದಾನೆ ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಡಿಕೆ ಧಾರಣೆ

ಪುತ್ತೂರು		ಶಿವಮೊಗ್ಗ			
ಕೋಕ	20000-37500	ಬೆಟ್ಟೆ	50109-64599	ಚಾಲಿ	42209-48149
ಹೊಸತು	26000-47500	ಗೊರಬಲು	19509-41299	ಕೋಕ	22899-35909
ಸಾಗರ		ರಾಶಿ	46009-57259	ಹಳೆಚಾಲಿ	44609-49099
ಬಿಳಿಗೋಟು	30290-32289	ಸರಕು	54500-95240	**ಶಿರಸಿ**	
ಚಾಲಿ	42399-43099	**ಸಿದ್ದಾಪುರ**		ಬೆಟ್ಟೆ	43718-51018
ಕೋಕ	34989-34989	ಕೆಂಪುಗೋಟು	28869-35699	ಬಿಳಿಗೋಟು	29699-43005
ಕೆಂಪುಗೋಟು	37591-37591	ರಾಶಿ	48319-54899	ಚಾಲಿ	43898-47915
ರಾಶಿ	51288-55599	ತಟ್ಟಿಬೆಟ್ಟೆ	38689-42419	ಕೆಂಪುಗೋಟು	21879-37218
ಸಿಪ್ಪೆಗೋಟು	20199-23469	ಬಿಳಿಗೋಟು	27699-38319	ರಾಶಿ	50918-54218

ಎಚ್‌ಎಎಲ್ ಜೊತೆಗೆ ರಕ್ಷಣಾ ಇಲಾಖೆ ಒಪ್ಪಂದ

ನವದೆಹಲಿ (ಪಿಟಿಐ): ಆರು ಸುಧಾರಿತ ಲಘು ಹೆಲಿಕಾಪ್ಟರ್ (ಎಎಲ್‌ಎಚ್) ಹಾಗೂ ಮೇಲ್ಮೈಯಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿಗಳ ಖರೀದಿ ಸಂಬಂಧ ₹5,083 ಕೋಟಿ ಮೊತ್ತದ ಒಪ್ಪಂದಕ್ಕೆ ರಕ್ಷಣಾ ಇಲಾಖೆಯು ಮಂಗಳವಾರ ಎಚ್‌ಎಎಲ್‌ನೊಂದಿಗೆ ಸಹಿ ಹಾಕಿದೆ.

ಎಎಲ್‌ಎಚ್ ಎಂಕೆ–2 ಹೆಲಿಕಾಪ್ಟರ್‌ಗಳನ್ನು ಭಾರತೀಯ ತಟರಕ್ಷಕ ಪಡೆಗೆ ನಿಯೋಜಿಸಲು ಖರೀದಿ ಪ್ರಕ್ರಿಯೆ ನಡೆದಿದ್ದು, 'ಶಿಟಲ್' ಕ್ಷಿಪಣಿಗಳನ್ನು ಭಾರತೀಯ ಯುದ್ಧನೌಕೆಗಳಲ್ಲಿ ನಿಯೋಜಿಸಲಾಗುತ್ತದೆ.

'ಕಾರ್ಯಾಚರಣಾ ಉಪಕರಣಗಳು, ಎಂಜಿನಿಯರಿಂಗ್ ಬೆಂಬಲ ಪ್ಯಾಕೇಜ್ ಹಾಗೂ ಸಾಗಣೆ ನೆರವಿನ ಉದ್ದೇಶ ದೊಂದಿಗೆ ಎಎಲ್‌ಎಚ್ ಎಂಕೆ–2 ಹೆಲಿಕಾಪ್ಟರ್‌ಗಳ ಖರೀದಿಗೆ ₹2901 ಕೋಟಿ ಮೊತ್ತದ ಒಪ್ಪಂದ ಮಾಡಿಕೊಳ್ಳಲಾಗಿದೆ. ಎರಡು ಎಂಜಿನ್‌ಗಳನ್ನು ಹೊಂದಿರುವ ವಿಮಾನವು ಕಡಲಿನ ಭದ್ರತೆ ಒದಗಿಸುತ್ತಿರುವ ಹೆಲಿಕಾಪ್ಟರ್‌ಗಳಲ್ಲಿಯೇ ಅತ್ಯುನ್ನತ ಮಟ್ಟದಾಗಿದೆ. ಈ ಕಾಪ್ಟರ್‌ಗಳ ಸೇರ್ಪಡೆಯಿಂದ ಭಾರತೀಯ ಕಡಲ ರಕ್ಷಣೆಗೆ ಮತ್ತಷ್ಟು ಬಲ ತುಂಬಲಿದೆ. ಅದೇ ರೀತಿ, ಕ್ಷಿಪಣಿಗಳ ಸೇರ್ಪಡೆಯಿಂದ ವಾಯು ರಕ್ಷಣೆಯಲ್ಲಿ ಮತ್ತಷ್ಟು ಸದೃಢವಾಗಲಿದೆ' ಎಂದು ರಕ್ಷಣಾ ಇಲಾಖೆಯು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪಾಕ್ ದಾಳಿ: 67 ಮಂದಿ ಸಾವು

ಇಸ್ಲಾಮಾಬಾದ್ (ಪಿಟಿಐ): ಭದ್ರತಾ ಪಡೆಯು ಸೋಮವಾರ ರಾತ್ರಿಯಿಡೀ ನಡೆಸಿದ ದಾಳಿಯಲ್ಲಿ ಅಫ್ಗಾನ್ ತಾಲಿಬಾನ್‌ನ 67 ಸಿಬ್ಬಂದಿಯನ್ನು ಹತ್ಯೆ ಮಾಡಿರುವುದಾಗಿ ಪಾಕಿಸ್ತಾನ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ವಾಯುವ್ಯ ಗಡಿ ಪ್ರದೇಶದ 16 ಸ್ಥಳಗಳ ಮೇಲೆ ವಾಯು ದಾಳಿ ನಡೆಸಲಾಗಿದೆ ಎಂಬುದನ್ನು ಇದೇ ವೇಳೆ ಪಾಕಿಸ್ತಾನ ನಿರಾಕರಿಸಿದೆ.

ಫೆಬ್ರುವರಿ 26ರಂದು ಅಫ್ಗಾನ್ ತಾಲಿಬಾನ್ ನಡೆಸಿದ್ದ ದಾಳಿಗೆ ಪ್ರತ್ಯುತ್ತರವಾಗಿ 'ಘಜಬ್ ಲಿಲ್ ಹಕ್' ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪಾಕಿಸ್ತಾನದ ವಾರ್ತಾ ಸಚಿವ ಅತಾವುಲ್ಲಾ ತರಾರ್ ತಿಳಿಸಿದ್ದಾರೆ.

'ಖೈಬರ್ ಪಖ್ತುಂಕ್ವಾ ಪ್ರಾಂತ್ಯಕ್ಕೆ ಹೊಂದಿಕೊಂಡ ಗಡಿಯಲ್ಲಿ 40 ಅಫ್ಗಾನ್ ತಾಲಿಬಾನ್‌ಗಳನ್ನು ಹತ್ಯೆ ಮಾಡಲಾಗಿದೆ. ಉತ್ತರ ಬಲೂಚಿಸ್ತಾನದ 16 ಸ್ಥಳಗಳಲ್ಲಿ, ಚಮಾನ್ ಜಿಲ್ಲೆಯ 25 ಸ್ಥಳಗಳ ಮೇಲೆ ನಡೆದ ದಾಳಿಯಲ್ಲಿ 27 ಮಂದಿ ಮೃತಪಟ್ಟಿದ್ದಾರೆ. ತಾಲಿಬಾನ್ ಪ್ರತಿದಾಳಿಗೆ ನಮ್ಮ ಒಬ್ಬ ಯೋಧ ಮೃತಪಟ್ಟು, ಐವರು ಗಾಯಗೊಂಡಿದ್ದಾರೆ' ಎಂದು ಹೇಳಿದ್ದಾರೆ.

ಅಫ್ಗಾನಿಸ್ತಾನದ ನಂಗರ್‌ಹಾರ್ ಪ್ರಾಂತ್ಯದ ಮೇಲೆ ಪಾಕಿಸ್ತಾನ ಸೇನೆ ವಾಯುದಾಳಿ ನಡೆಸಿದೆ. ಘಜಬ್ ಉಲ್ ಹಕ್ ಕಾರ್ಯಾಚರಣೆ ಮುಂದುವರಿದಿದೆ ಎಂದು ಪಾಕಿಸ್ತಾನದ ಸರ್ಕಾರಿ ವಾಹಿನಿ ಪಿಟಿವಿ ವರದಿ ಮಾಡಿದೆ.

ಕಾರ್ಯಾಚರಣೆಯಲ್ಲಿ 435 ಅಫ್ಗಾನ್ ತಾಲಿಬಾನ್‌ಗಳು ಮೃತಪಟ್ಟಿದ್ದು, 630 ಮಂದಿ ಗಾಯಗೊಂಡಿದ್ದಾರೆ ಎಂದು ತರಾರ್ ಅವರು ಸೋಮವಾರ ತಿಳಿಸಿದ್ದರು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಬೆಂಗಳೂರು

• **ಪ್ರಶ್ನೆ: ನನ್ನ ವಯಸ್ಸು 70. ನಾನು ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿದ್ದೇನೆ. ನಾನು ಮಕ್ಕಳಿಗೆ (ಮನೆಯವರಿಗೆ) ತಿಳಿಯದಂತೆ ಸಹಕಾರಿ ಬ್ಯಾಂಕ್‌ವೊಂದರಲ್ಲಿ ₹10 ಲಕ್ಷ ನಿಶ್ಚಿತ ಠೇವಣಿ (ಎಫ್.ಡಿ) ಮಾಡಿದ್ದೇನೆ. ಅದು ವರ್ಷಕ್ಕೊಮ್ಮೆ ನವೀಕರಣ ಆಗುತ್ತದೆ. ಅದರ ಬಡ್ಡಿಯನ್ನು ನಾನು ತೆಗೆದುಕೊಳ್ಳದೆ ಅಸಲಿಗೆ ಸೇರುವಂತೆ ಮುಂದುವರಿಸಿದ್ದೇನೆ. ನನಗೆ ಇಬ್ಬರು ಗಂಡು ಮಕ್ಕಳಿದ್ದು, ಇಬ್ಬರು ಬೇರೆ ಬೇರೆ ಮನೆಯಲ್ಲಿದ್ದಾರೆ. ನಾವು ದೊಡ್ಡ ಮಗನ ಜೊತೆಯಲ್ಲಿದ್ದೇವೆ.**

ನಮಗೆ ಮನೆ ಇದ್ದು, ಅದರಿಂದ ₹15 ಸಾವಿರ ಬಾಡಿಗೆ ಬರುತ್ತದೆ. ಅದು ನಮ್ಮ ಖರ್ಚಿಗೆ ಸಾಕು. ಮಕ್ಕಳಲ್ಲಿ ಇಬ್ಬರೂ ಅವರಿಗೆ ತಕ್ಕಂತೆ, ಅಂದರೆ ಮೂಲ ಅಗತ್ಯಗಳಿಗೆ ಬರವಿಲ್ಲದಂತೆ ಇದ್ದಾರೆ. ಈಗ ನನ್ನ ಚಿಕ್ಕ ಮಗ ಮನೆ ಕಟ್ಟಿಸುತ್ತಿದ್ದಾನೆ. ನನ್ನ ಒಂದು ಎಫ್.ಡಿ ಮುಂದಿನ ಏಪ್ರಿಲ್ ತಿಂಗಳಲ್ಲಿ ಮರಳಿ ಸಿಗುತ್ತದೆ. ಅದನ್ನು ನಾನು ಅವನಿಗೆ ಕೊಡಬೇಕು ಎಂದುಕೊಂಡಿದ್ದೇನೆ. ನಾನು ಸೇವೆಯಲ್ಲಿ ಇದ್ದಾಗ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆ ಮಾಡುತ್ತಿದ್ದೆ. ಇತ್ತೀಚೆಗೆ ಮಾಡುತ್ತಿಲ್ಲ. ನಾನು ಈ ಮೊತ್ತ ಕೊಡಬೇಕೆಂದರೆ ಅದು ಮೊದಲ ಹಂತದಲ್ಲಿ ನೇರವಾಗಿ ನನ್ನ ಖಾತೆಗೆ ಬರುತ್ತದೆ. ನಾನು ಅದನ್ನು ನಂತರ ಅವನಿಗೆ ಹೇಗೆ ಕೊಡಬೇಕು. ಏಕೆಂದರೆ ಖಾತೆಯಲ್ಲಿ ಪಾನ್ ಸಂಖ್ಯೆ ಮತ್ತು ಆಧಾರ್ ಸಂಖ್ಯೆ ಎಲ್ಲವೂ ಇರುತ್ತದೆ.

ನನ್ನ ಸಮಸ್ಯೆ ಏನೆಂದರೆ, ಅದನ್ನು ಹಂತ-ಹಂತವಾಗಿ ಕೊಡಬೇಕೇ ಅಥವಾ ಒಟ್ಟಿಗೆ ಕೊಡಬಹುದೇ? ಇದರಿಂದ ನನಗಾಗಲೀ ಅವನಿಗಾಗಲಿ ಮುಂದೆ ಸಮಸ್ಯೆ ಬರಬಹುದೇ? ಇದಕ್ಕೆ ಪರಿಹಾರ ತಿಳಿಸಿ.

ಉತ್ತರ: ನೀವು ಪ್ರಶ್ನೆಯಲ್ಲಿ ವಿವರವಾಗಿ ನಿಮ್ಮ ಮಾಹಿತಿ ನೀಡಿದ್ದೀರಿ. ಮೊದಲನೆಯದಾಗಿ, ನೀವು ನಿಮ್ಮ ಸ್ವಂತ ಹಣವನ್ನು ನಿಮ್ಮ ಮಗನಿಗೆ ನೀಡುವುದು ಸಂಪೂರ್ಣವಾಗಿ ಕಾನೂನುಬದ್ಧವಾಗಿದೆ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 56(2)(x) ರ ಪ್ರಕಾರ, ನಿರ್ದಿಷ್ಟ ಸಂಬಂಧಿಕರಿಂದ ಪಡೆಯುವ ಉಡುಗೊರೆಗಳಿಗೆ ತೆರಿಗೆ ವಿನಾಯಿತಿ ಇದೆ. ಹೀಗಾಗಿ ತಂದೆ, ಮಗನಿಗೆ ನೀಡುವ ಹಣ 'ಉಡುಗೊರೆ' ಆಗಿ ಪರಿಗಣಿಸಲಾಗುತ್ತದೆ ಮತ್ತು ಅದು ಮಗನ ಕೈಯಲ್ಲಿ ತೆರಿಗೆಗೆ ಒಳಪಡುವುದಿಲ್ಲ. ಹಾಗೆಯೇ, ನಿಮ್ಮ ಕೈಯಲ್ಲೂ ಮೂಲಧನ ನೀಡುವಿಕೆಗೆ ತೆರಿಗೆ ಬಾಧ್ಯತೆ ಇಲ್ಲ. ಆದರೆ ಎಫ್.ಡಿ. ಮೇಲಿನ ಬಡ್ಡಿ ಆದಾಯವು ನಿಮ್ಮ ಆದಾಯವಾಗಿದ್ದು, ಅದು ನಿಮ್ಮ ಒಟ್ಟು ಆದಾಯಕ್ಕೆ ಸೇರಿ ತೆರಿಗೆ ವ್ಯಾಪ್ತಿಗೆ ಬರಬಹುದು. ಇದು ನಿಮ್ಮ ಒಟ್ಟು ಆದಾಯ ಮಾಹಿತಿಯ ಆಧಾರದಲ್ಲಿ ನಿರ್ಣಯಿಸಲ್ಪಡಬೇಕಾದ ವಿಚಾರ. ಈ ಬಗ್ಗೆ ಪ್ರತ್ಯೇಕ ಅಭಿಪ್ರಾಯ ಪಡೆದುಕೊಳ್ಳಿ.

ಇನ್ನು ಹಣವನ್ನು ಹಂತ ಹಂತವಾಗಿ ಕೊಡುವುದೇ ಅಥವಾ ಒಟ್ಟಿಗೆ ಕೊಡುವುದೇ ಎಂಬ ವಿಚಾರದಲ್ಲಿ ಕಾನೂನಾತ್ಮಕವಾಗಿ ದೊಡ್ಡ ವ್ಯತ್ಯಾಸವಿಲ್ಲ. ಕಾರಣ, ಸಂಬಂಧಿಕರ ನಡುವೆ ನಡೆಯುವ ಹಣಕಾಸಿನ ವಿಚಾರವಾದ ಕಾರಣ ಎಷ್ಟು ಹಂತದಲ್ಲಿ ಹಣ ವರ್ಗಾವಣೆಯಾಗುತ್ತದೆ ಎನ್ನುವುದು ಇಲ್ಲಿ ಗೌಣ, ಇಲ್ಲಿ ಸಂಬಂಧವಷ್ಟೇ ಮುಖ್ಯ. ಆದಾಗ್ಯೂ, ಬ್ಯಾಂಕ್ ವ್ಯವಹಾರಗಳು ಸಂಪೂರ್ಣವಾಗಿ ದಾಖಲಾಗುವಂತೆ, ನಿಮ್ಮ ಖಾತೆಯಿಂದ ಮಗನ ಖಾತೆಗೆ ನೇರವಾಗಿ ಆನ್‌ಲೈನ್ ಮೂಲಕ ಅಥವಾ ಚೆಕ್ ಮೂಲಕ ನೀಡುವುದು ಸೂಕ್ತ. ನಗದು ರೂಪದಲ್ಲಿ ಈ ಮೊತ್ತ ನೀಡುವುದು ಸಮಂಜಸವಲ್ಲ. ನಿಮ್ಮ ಹಣದ ವರ್ಗಾವಣೆಗೆ ಮತ್ತಷ್ಟು ಪುಷ್ಟಿ ನೀಡುವ 'ಗಿಫ್ಟ್ ಡೀಡ್' ಎಂಬ ಸರಳ ಪತ್ರವನ್ನು ದಾಖಲಿಸಿ, ಅದು ನಿಮ್ಮ ಸ್ವಇಚ್ಛೆಯಿಂದ, ಯಾವುದೇ ಪ್ರತಿಫಲವಿಲ್ಲದೆ ನೀಡಿದ ಉಡುಗೊರೆ ಎಂದು ಉಲ್ಲೇಖಿಸಿ ಹಣ ವರ್ಗಾವಣೆ ಮಾಡಿ. ಇದು ಕಡ್ಡಾಯವಲ್ಲದಿದ್ದರೂ, ಭವಿಷ್ಯದಲ್ಲಿ ವಿವಾದ ತಪ್ಪಿಸುವಲ್ಲಿ ನೆರವಾಗುತ್ತದೆ. ಆದ್ದರಿಂದ, ತಂದೆ-ಮಕ್ಕಳ ಪರಸ್ಪರ ಹಣ ವರ್ಗಾವಣೆಗೆ ಯಾವುದೇ ಮಿತಿ ಇಲ್ಲದೆ ಸಂಪೂರ್ಣ ವಿನಾಯಿತಿ ದೊರೆಯುತ್ತದೆ.

ರಾಮಚರಣ ಶೆಟ್ಟಿ, ಸಾಗರ

• **ಪ್ರಶ್ನೆ: ನಾನು ಕೆಲವು ವರ್ಷಗಳಿಂದ ಆರ್‌ಇಐಟಿಯಲ್ಲಿ ಹೂಡಿಕೆ ಮಾಡಬೇಕು ಎಂದು ಅಂದುಕೊಂಡಿದ್ದೇನೆ. ಆದರೆ ವಾಸ್ತವದಲ್ಲಿ ಇನ್ನೂ ಹೂಡಿಕೆ ಮಾಡಿಲ್ಲ. ರಿಯಲ್ ಎಸ್ಟೇಟ್ ಹೂಡಿಕೆಯಿಂದ ಬಾಡಿಗೆ ಮೊತ್ತ ಸಿಗುವಂತೆಯೇ, ಇಲ್ಲಿಯೂ ಸಿಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಆದರೆ ಆರ್‌ಇಐಟಿಗಳ ಮೇಲಿನ ಹೂಡಿಕೆಯಿಂದ ಸಿಗುವ ವರಮಾನಕ್ಕೆ ತೆರಿಗೆ ಲೆಕ್ಕಾಚಾರ ಭಿನ್ನವಾಗಿ, ಸಂಕೀರ್ಣವಾಗಿ ಇರುತ್ತದೆ ಎಂದು ಹೇಳಲಾಗಿದೆ. ಇದರ ಬಗ್ಗೆ ವಿವರ ನೀಡಿ. ಹಾಗೆಯೇ, ಭೌತಿಕ ರಿಯಲ್ ಎಸ್ಟೇಟ್ ಮೇಲಿನ ಹೂಡಿಕೆ ಸೂಕ್ತವೋ, ಆರ್‌ಇಐಟಿಗಳ ಮೇಲಿನ ಹೂಡಿಕೆ ಸೂಕ್ತವೋ ಎಂಬುದನ್ನು ತಿಳಿಸಿ.**

ಉತ್ತರ: ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳಲ್ಲಿನ (ಆರ್‌ಇಐಟಿ) ಹೂಡಿಕೆ ಎಂದರೆ ಆದಾಯ ತರುವ ವಾಣಿಜ್ಯ ಆಸ್ತಿಗಳಲ್ಲಿ ಹೂಡಿಕೆ ಮಾಡಲು ರೂಪುಗೊಂಡಿರುವ ಸಮೂಹ ಹೂಡಿಕೆ ವ್ಯವಸ್ಥೆ. ಇಂತಹ ಟ್ರಸ್ಟ್‌ಗಳು, ಮ್ಯೂಚುಯಲ್ ಫಂಡ್ ಮಾದರಿಯಲ್ಲಿ ಕಾರ್ಯನಿರ್ವಹಿಸಿ, ಅನೇಕ ಹೂಡಿಕೆದಾರರಿಂದ ಸಂಗ್ರಹಿಸಲಾದ ಬಂಡವಾಳವನ್ನು ಕಚೇರಿ ಸಂಕೀರ್ಣಗಳು, ಐ.ಟಿ ಪಾರ್ಕ್‌ಗಳು, ಶಾಪಿಂಗ್ ಮಾಲ್‌ಗಳು, ಹೋಟೆಲ್‌ಗಳು ಮತ್ತು ಗೋದಾಮುಗಳಂತಹ ದೊಡ್ಡ ಮಟ್ಟದ ವಾಣಿಜ್ಯ ಆಸ್ತಿಗಳಲ್ಲಿ ಹೂಡಿಕೆ ಮಾಡುವ ಉದ್ದೇಶದಿಂದ ಸ್ಥಾಪನೆಗೊಂಡಿರುತ್ತವೆ. ಇವುಗಳನ್ನು ಉದ್ದೇಶಿತ ವಿಶೇಷ ಕಂಪನಿಗಳ ಮೂಲಕ ಟ್ರಸ್ಟ್‌ಗಳು ನಡೆಸುತ್ತವೆ. ಇವು ಆಸ್ತಿಗಳನ್ನು ಖರೀದಿಸಿ, ಅಭಿವೃದ್ಧಿಪಡಿಸಿ ಮತ್ತು ನಿರ್ವಹಿಸಿ, ಅವುಗಳಿಂದ ನಿರಂತರ ಬಾಡಿಗೆ ಆದಾಯವನ್ನು ಗಳಿಸಿ ಹೂಡಿಕೆದಾರರಿಗೆ ನೀಡುವುದು ಇಂತಹ ಟ್ರಸ್ಟ್‌ಗಳ ಮುಖ್ಯ ಉದ್ದೇಶವಾಗಿದೆ.

ಆರ್‌ಇಐಟಿ ನಿಯಮಾವಳಿಯ ಪ್ರಕಾರ, ಲಭಿಸುವ ನಿವ್ವಳ ವಿತರಣಾಯೋಗ್ಯ ಆದಾಯದ ಕನಿಷ್ಠ ಶೇ 90ರಷ್ಟು ಮೊತ್ತವನ್ನು ಯೂನಿಟ್ ಹೋಲ್ಡರ್‌ಗಳಿಗೆ ಹಂಚಿಕೆ ಮಾಡಬೇಕು. ಹೀಗಾಗಿ ಹೂಡಿಕೆದಾರರಿಗೆ ಬಾಡಿಗೆ ಆದಾಯದಿಂದ ಲಾಭಾಂಶ ಅಥವಾ ಬಡ್ಡಿ ರೂಪದಲ್ಲಿ ನಿಯಮಿತ ಆದಾಯ ದೊರೆಯುತ್ತದೆ. ಜೊತೆಗೆ, ಷೇರುಪೇಟೆಯಲ್ಲಿ ಆರ್‌ಇಐಟಿ ಯೂನಿಟ್‌ಗಳ ಬೆಲೆ ಏರಿಕೆಯಿಂದ ಬಂಡವಾಳ ವೃದ್ಧಿ ರೂಪದಲ್ಲಿಯೂ ಲಾಭ ಗಳಿಸುವ ಸಾಧ್ಯತೆ ಇರುತ್ತದೆ. ಇದು ಮಾರುಕಟ್ಟೆ ಆಧಾರಿತವಾಗಿದೆ.

ಈ ಟ್ರಸ್ಟ್‌ಗಳಿಗೆ ನೇರವಾಗಿ ಸಿಗುವ ಬಡ್ಡಿ, ಬಾಡಿಗೆ ಅಥವಾ ಡಿವಿಡೆಂಡ್ ಆದಾಯಕ್ಕೆ ಆದಾಯ ತೆರಿಗೆಯ ಸೆಕ್ಷನ್ 10 (ಎಫ್‌ಸಿ), (ಎಫ್‌ಸಿಎ), (ಎಫ್‌ಡಿ) ಇದರಡಿ ವಿನಾಯಿತಿ ಇದೆ. ಇತರೆ ಆದಾಯಕ್ಕೆ ಅವೂ ತೆರಿಗೆ ಕಟ್ಟಬೇಕು. ಹೀಗಾಗಿ, ಹೂಡಿಕೆದಾರರ ಕೈಗೆ ಈ ವಿನಾಯಿತಿಗೊಳಗಾದ ಮೊತ್ತ ವರ್ಗಾಯಿಸುವಾಗ ತೆರಿಗೆ ಕಡಿತ ಅನ್ವಯಿಸುತ್ತದೆ ಹಾಗೂ ವೈಯಕ್ತಿಕ ತೆರಿಗೆ ದರದಲ್ಲಿ ಒಟ್ಟಾರೆ ಬಾಕಿ ತೆರಿಗೆಯನ್ನು ರಿಟರ್ನ್ಸ್ ಸಲ್ಲಿಸುವಾಗ ಪಾವತಿಸಬೇಕಾಗುತ್ತದೆ. ಉದಾಹರಣೆಗೆ, ಟ್ರಸ್ಟ್‌ಗಳು ಬಡ್ಡಿ, ಡಿವಿಡೆಂಡ್ ಹಾಗೂ ಬಾಡಿಗೆ ಮೊತ್ತ ಪಾವತಿಸಿದಾಗ ಶೇ 10ರ ದರದಲ್ಲಿ ತೆರಿಗೆ ಕಡಿತ ಮಾಡುತ್ತವೆ. ಇನ್ನು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ ಯೂನಿಟ್‌ಗಳನ್ನು ಮಾರಾಟ ಮಾಡಿದಾಗ ಉಂಟಾಗುವ ಲಾಭದ ಮೇಲೆ ಹೂಡಿಕೆಯ ಅವಧಿಯನ್ನು ಅವಲಂಬಿಸಿ, ಅಲ್ಪಾವಧಿ ಅಥವಾ ದೀರ್ಘಾವಧಿ ಬಂಡವಾಳ ಲಾಭ ತೆರಿಗೆ (ಶೇ 20 ಅಥವಾ ಶೇ 12.50) ಅನ್ವಯಿಸುತ್ತದೆ.

ಭಾರತದಲ್ಲಿ ಆರ್‌ಇಐಟಿ ಯೂನಿಟ್‌ಗಳು ಎನ್‌ಎಸ್‌ಇ ಮತ್ತು ಬಿಎಸ್‌ಇಗಳಲ್ಲಿ ಲಿಸ್ಟ್ ಆಗಿರುವುದರಿಂದ, ಡಿಮ್ಯಾಟ್ ಮತ್ತು ಟ್ರೇಡಿಂಗ್ ಖಾತೆಯ ಮೂಲಕ ಷೇರುಗಳನ್ನು ಖರೀದಿಸುವಂತೆಯೇ ಸುಲಭವಾಗಿ ಹೂಡಿಕೆ ಮಾಡಬಹುದು. ಕಡಿಮೆ ಬಂಡವಾಳದಲ್ಲಿಯೇ ಉನ್ನತ ಮಟ್ಟದ ವಾಣಿಜ್ಯ ಆಸ್ತಿಗಳಲ್ಲಿ ಭಾಗಿಯಾಗಲು ಇದು ಪರೋಕ್ಷ ಮಾರ್ಗವಾಗಿದೆ. ಒಟ್ಟಿನಲ್ಲಿ ಈ ಹೂಡಿಕೆಯ ಒಟ್ಟಾರೆ ಲಾಭ–ನಷ್ಟಗಳು ವಾಣಿಜ್ಯ ಸಂಕೀರ್ಣಗಳ ಅಗತ್ಯ-ಪೂರೈಕೆಯೊಡನೆ ಮಿಳಿತವಾಗಿದೆ ಎಂಬುದು ತಿಳಿದಿರಲಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in

ಚಿನ್ನದ ಪೆಟ್ಟಿಗೆಯಲ್ಲಿ ಮೆಂಚೊ ಶವವಿಟ್ಟು ಸಮಾಧಿ

ಮೆಕ್ಸಿಕೊದ ಸೇನಾ ಕಾರ್ಯಾಚರಣೆ ವೇಳೆ ಮೃತಪಟ್ಟಿದ್ದ ಡ್ರಗ್ಸ್ ಜಾಲದ ಪಾತಕಿ

ಗ್ವಾದಲಹಾರ (ಎಪಿ): ಮೆಕ್ಸಿಕೊದ ಡ್ರಗ್ಸ್ ಜಾಲದ ಪಾತಕಿ, 'ಹಾಲಿಸ್ಕೊ ನ್ಯೂ ಜನರೇಷನ್ ಕಾರ್ಟೆಲ್'ನ (ಸಿಜೆಎನ್‌ಜಿ) ಮುಖ್ಯಸ್ಥ 'ಎಲ್ ಮೆಂಚೊ'ನ ಶವವನ್ನು ಚಿನ್ನದ ಪೆಟ್ಟಿಗೆಯಲ್ಲಿಟ್ಟು, ಬೃಹತ್ ಹೂಗುಚ್ಛಗಳನ್ನು ಅರ್ಪಿಸುವ ಮೂಲಕ ಸೇನಾ ಉಪಸ್ಥಿತಿಯಲ್ಲಿ ಸೋಮವಾರ ಸಮಾಧಿ ಮಾಡಲಾಯಿತು.

ಗ್ವಾದಲಹಾರದ ಉಪನಗರವಾದ ಜಪೋಪಾನ್‌ನಲ್ಲಿರುವ ಸ್ಮಶಾನದಲ್ಲಿ ನೆಮೆಸಿಯೊ ಒಸೆಗುರಾ ಸೆರ್ವಾಂಟೆಸ್ ಅಲಿಯಾಸ್ ಎಲ್ ಮೆಂಚೊನ ಅಂತ್ಯಕ್ರಿಯೆ ನಡೆಯಿತು. ಭದ್ರತಾ ಕಾರಣಗಳಿಗಾಗಿ ಸಮಾಧಿ ಸ್ಥಳದ ಬಗ್ಗೆ ಮಾಹಿತಿ ನೀಡಲು ಅಟಾರ್ನಿ ಜನರಲ್ ಕಚೇರಿ ನಿರಾಕರಿಸಿದೆ.

ಬಿಸಿಲಿನ ಪ್ರಖರತೆ ಹೆಚ್ಚಾಗಿದ್ದರಿಂದ ಅನೇಕರು ಕಪ್ಪು ಬಣ್ಣದ ಕೊಡೆಗಳನ್ನು ಹಿಡಿದುಕೊಂಡು ಮೆಕ್ಸಿಕನ್ ಪ್ರಾದೇಶಿಕ ಸಂಗೀತದ ಬ್ಯಾಂಡ್‌ನೊಂದಿಗೆ ಅಂತ್ಯಕ್ರಿಯೆಯ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಅಂತ್ಯಕ್ರಿಯೆ ನಡೆದ ಸ್ಥಳದ ಸುತ್ತಲೂ ಭಾನುವಾರದಿಂದಲೇ ಹೆಚ್ಚಿನ ಭದ್ರತೆ ಒದಗಿಸಲಾಗಿತ್ತು. ಬೃಹತ್ ಹೂಗುಚ್ಛಗಳನ್ನು ಸಮಾಧಿ ಮೇಲೆ ಇಡಲಾಗಿತ್ತು. ಹೂವಿನಿಂದ ಹುಂಜದ ಚಿತ್ರ ಬಿಡಿಸಿದ್ದ ಕಲಾಕೃತಿಗಳನ್ನು ಅಲ್ಲಲ್ಲಿ ಇಡಲಾಗಿತ್ತು. ಎಲ್ ಮೆಂಚೊನನ್ನು 'ಹುಂಜಗಳ ಒಡೆಯ' ಎಂದೂ ಕರೆಯಲಾಗುತ್ತಿತ್ತು.

ಫೆಬ್ರುವರಿ 22ರಂದು ಹಾಲಿಸ್ಕೊದ ಟಪಲ್ಪಾದಲ್ಲಿ ಸೇನೆಯು ನಡೆಸಿದ್ದ ಕಾರ್ಯಾಚರಣೆಯಲ್ಲಿ ಎಲ್ ಮೆಂಚೊ ಗಾಯಗೊಂಡಿದ್ದ. ಆತನ ಎದೆ, ಹೊಟ್ಟೆ ಮತ್ತು ಕಾಲುಗಳಿಗೆ ಗುಂಡುಗಳು ಹೊಕ್ಕಿದ್ದವು. ಮೆಕ್ಸಿಕೊ ನಗರಕ್ಕೆ ವಿಮಾನದಲ್ಲಿ ಕರೆದೊಯ್ಯುವಾಗ ಮೃತಪಟ್ಟಿದ್ದ. ಮರಣೋತ್ತರ ಪರೀಕ್ಷೆ ಬಳಿಕ ಫೆಬ್ರುವರಿ 28ರಂದು ಶವವನ್ನು ಕುಟುಂಬದ ಸದಸ್ಯರಿಗೆ ಹಸ್ತಾಂತರಿಸಲಾಗಿತ್ತು.

ಎಲ್ ಮೆಂಚೊನ ಹತ್ಯೆ ನಂತರ ಕಾರ್ಟೆಲ್‌ನ ಸದಸ್ಯರು ದೇಶದಾದ್ಯಂತ ರಸ್ತೆ ತಡೆ ನಡೆಸಿದ್ದಲ್ಲದೆ, ವಾಹನಗಳಿಗೆ ಬೆಂಕಿ ಹಚ್ಚುವ ಮೂಲಕ ಹಿಂಸಾಚಾರ ನಡೆಸಿದ್ದರು. ಇದರಿಂದ ಅನೇಕರು ಮೃತಪಟ್ಟಿದ್ದರು.


ಎಲ್ ಮೆಂಚೊನ ಶವವನ್ನು ಚಿನ್ನದ ಪೆಟ್ಟಿಗೆಯಲ್ಲಿ ಇಟ್ಟು ಸ್ಮಶಾನದ ಸ್ಥಳಕ್ಕೆ ತರಲಾಯಿತು —ಎಎಫ್‌ಪಿ ಚಿತ್ರ

‘ತಬಾಹಿ’ಯಲ್ಲಿ ಯಶ್-ಕಿಯಾರಾ

ನಟ ಯಶ್ ನಟನೆಯ 19ನೇ ಸಿನಿಮಾ ‘ಟಾಕ್ಸಿಕ್: ಎ ಫೇರಿಟೇಲ್ ಫಾರ್ ಗ್ರೋನ್ ಅಪ್ಸ್’ ಬಿಡುಗಡೆಯ ಹೊಸ್ತಿಲಿನಲ್ಲಿದೆ. ಮಾರ್ಚ್ 19ರಂದು ಸಿನಿಮಾ ರಿಲೀಸ್ ಆಗುತ್ತಿದ್ದು, ಚಿತ್ರದ ‘ತಬಾಹಿ’ ಎನ್ನುವ ಹಾಡನ್ನು ಚಿತ್ರತಂಡ ಬಿಡುಗಡೆ ಮಾಡಿದೆ.

‘ತಬಾಹಿ’ ಎನ್ನುವ ಹಾಡು ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಬಿಡುಗಡೆಯಾಗಿದೆ. ‘ಎಲ್ಲಾ ಮಿತಿಮೀರಿ ಹೋಗೋಣ ಬಾ.. ಎಲ್ಲಾ ಗಡಿ ದಾಟಿ ನೋಡೋಣ ಬಾ...’ ಎಂಬ ಕನ್ನಡ ಹಾಡಿಗೆ ನಿರ್ದೇಶಕ ಯೋಗರಾಜ್ ಭಟ್ ಸಾಹಿತ್ಯ ಬರೆದಿದ್ದಾರೆ. ಹಿಂದಿಯಲ್ಲಿ ರಾಜ್ ಶೇಖರ್, ತೆಲುಗಿನಲ್ಲಿ ರಾಮಜೋಗಯ್ಯ ಶಾಸ್ತ್ರಿ, ತಮಿಳಿನಲ್ಲಿ ವಿಘ್ನೇಶ್ ಶಿವನ್ ಹಾಗೂ ಮಲಯಾಳದಲ್ಲಿ ರಫೀಕ್ ಅಹಮ್ಮದ್ ಸಾಹಿತ್ಯ ಬರೆದಿದ್ದಾರೆ. ಎಲ್ಲಾ ಭಾಷೆಗಳಲ್ಲಿ ವಿಶಾಲ್ ಮಿಶ್ರಾ ಸಂಗೀತ ಸಂಯೋಜಿಸಿ ಹಾಡಿದ್ದಾರೆ.

ಸೂರ್ಯಾಸ್ತದ ಸಂದರ್ಭದಲ್ಲಿ ಸಮುದ್ರ ಕಿನಾರೆಯಲ್ಲಿ ಯಶ್ ಹಾಗೂ ಕಿಯಾರಾ ಅಡ್ವಾಣಿ ಕುಳಿತಿರುವ ಪೋಸ್ಟರ್ ಹಿನ್ನೆಲೆಯಲ್ಲಿ ಹಾಡು ಬಿಡುಗಡೆಯಾಗಿದ್ದು, ಅಭಿಮಾನಿಗಳಿಂದ ಮಿಶ್ರ ಪ್ರತಿಕ್ರಿಯೆ ದೊರೆತಿದೆ. ವಿಡಿಯೊ ಇಲ್ಲದ ಹಾಡಿನಿಂದ ನಿರಾಶೆಯಾಗಿದೆ ಎಂದು ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ಬರೆದುಕೊಂಡಿದ್ದಾರೆ. ಚಿತ್ರತಂಡ ಉದ್ದೇಶಪೂರ್ವಕವಾಗಿಯೇ ವಿಡಿಯೊ ಬಿಡುಗಡೆ ಮಾಡಿಲ್ಲ. ಕಿಯಾರಾ ಅವರ ಎರಡು ಪೋಸ್ಟರ್‌ಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದು ತಿಳಿಯುತ್ತದೆ. ವಿಡಿಯೊ ಬಿಡುಗಡೆ ಮಾಡದೆ ಕಿಯಾರಾ ಅಡ್ವಾಣಿ ಅವರ ಪಾತ್ರದ ಗುಣಲಕ್ಷಣಗಳನ್ನು ಗುಟ್ಟಾಗಿ ಇರಿಸಲಾಗಿದೆ ಎನ್ನಲಾಗಿದೆ.

ಸಿನಿಮಾದಲ್ಲಿ ಯಶ್ ಜೊತೆಗೆ ನಯನತಾರಾ, ಹುಮಾ ಖುರೇಶಿ, ರುಕ್ಮಿಣಿ ವಸಂತ್ ಹಾಗೂ ತಾರಾ ಸುತಾರಿಯಾ ನಟಿಸಿದ್ದಾರೆ. ಗೀತು ಮೋಹನ್‌ದಾಸ್ ನಿರ್ದೇಶನದ ‘ಟಾಕ್ಸಿಕ್’ನಲ್ಲಿ ನಟರಾಗಿ, ಸಹ-ಬರಹಗಾರರಾಗಿ, ಸಹ-ನಿರ್ಮಾಪಕರಾಗಿ ಯಶ್ ಕಾರ್ಯನಿರ್ವಹಿಸಿದ್ದಾರೆ. ವೆಂಕಟ್ ಕೆ.ನಾರಾಯಣ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ಮಾನ್‌ಸ್ಟರ್‌ಮೈಂಡ್ ಕ್ರಿಯೇಷನ್ಸ್‌ನಡಿ ಯಶ್ ಸಾಥ್ ನೀಡಿದ್ದಾರೆ. ಸಿನಿಮಾ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಏಕಕಾಲದಲ್ಲಿ ಚಿತ್ರೀಕರಣಗೊಂಡಿದ್ದು, ಹಿಂದಿ, ತಮಿಳು, ತೆಲುಗು, ಮಲಯಾಳ ಸೇರಿದಂತೆ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಡಬ್ ಆಗಿ ರಿಲೀಸ್ ಆಗಲಿದೆ.

8ಕ್ಕೆ ಟ್ರೇಲರ್

ಈಗಾಗಲೇ ಟೀಸರ್ ಹಾಗೂ ಪಾತ್ರಗಳ ಪೋಸ್ಟರ್ ಮೂಲಕ ಸದ್ದು ಮಾಡಿರುವ ‘ಟಾಕ್ಸಿಕ್’ ಚಿತ್ರದ ಟ್ರೇಲರ್ ಇದೇ 8ರಂದು ಬೆಂಗಳೂರಿನಲ್ಲಿ ಬಿಡುಗಡೆಯಾಗಲಿದೆ. ಯಶ್ ಸೇರಿದಂತೆ ಇಡೀ ತಾರಾಬಳಗ ಕಾರ್ಯಕ್ರಮದಲ್ಲಿ ಭಾಗವಹಿಸಲಿದೆ.



ಕಿಯಾರಾ, ಯಶ್

ಅಸಭ್ಯವಾಗಿ ವಿಡಿಯೊ ನಟಿಯರ ವಿರೋಧ

ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕಲಾವಿದೆಯರ ವಿಡಿಯೊಗಳು ಹಾಗೂ ಫೋಟೋಗಳನ್ನು ಅಸಭ್ಯವಾಗಿ ಸೆರೆಹಿಡಿಯುತ್ತಿರುವವರ ವಿರುದ್ಧ ನಟಿ ಸಪ್ತಮಿ ಗೌಡ ಆಕ್ರೋಶ ಹೊರಹಾಕಿದ್ದಾರೆ. ಇದಕ್ಕೆ ಚಂದನವನದ ನಟ-ನಟಿಯರು ಬೆಂಬಲ ಸೂಚಿಸಿದ್ದಾರೆ.

‘ಚಿತ್ರರಂಗದಲ್ಲಿರುವ ಮಹಿಳೆಯರಾಗಿ, ಒಂದು ಗಂಭೀರ ಸಮಸ್ಯೆಯನ್ನು ಎದುರಿಸಲು ಒಟ್ಟಾಗಿ ನಿಂತಿದ್ದೇವೆ. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮಹಿಳಾ ಕಲಾವಿದರ ವಿಡಿಯೊಗಳು ಮತ್ತು ಫೋಟೋಗಳನ್ನು ಅಸಭ್ಯ ಕೋನಗಳಿಂದ ಚಿತ್ರೀಕರಿಸಿ ನಮ್ಮ ಕಲೆಗಿಂತ ನಮ್ಮ ದೇಹದ ಮೇಲೆ ಅನವಶ್ಯಕವಾಗಿ ಜೂಮ್ ಮಾಡಿ ಪ್ರಸಾರ ಮಾಡುವ ಘಟನೆಗಳು ನಡೆಯುತ್ತಿವೆ. ನಾವು ಕಲಾವಿದರು, ವಸ್ತುಗಳಲ್ಲ’ ಎಂದು ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಸಪ್ತಮಿ ಗೌಡ ಉಲ್ಲೇಖಿಸಿದ್ದಾರೆ.

ಸಪ್ತಮಿ ಗೌಡ

‘ಇಂತಹ ವರ್ತನೆ, ಕೆಲವರಿಂದ ನಡೆಯುತ್ತಿರುವುದಾದರೂ, ಅದು ಅಸಭ್ಯ, ಅವಮಾನಕಾರಿ ಮತ್ತು ಸಂಪೂರ್ಣವಾಗಿ ಅಸ್ವೀಕಾರ್ಹವಾಗಿದೆ. ನಮ್ಮ ಗೌರವಕ್ಕೆ ಸ್ಪಷ್ಟ ಧಕ್ಕೆ ಇದಾಗಿದ್ದು, ಇದನ್ನು ಸಾಮಾನ್ಯವೆಂದು ಸ್ವೀಕರಿಸುವುದಿಲ್ಲ, ಸಹಿಸುವುದಿಲ್ಲ. ಕಾರ್ಯಕ್ರಮಗಳನ್ನು ವರದಿ ಮಾಡುವವರು ವೃತ್ತಿಪರತೆ ಮತ್ತು ಶಿಸ್ತನ್ನು ಕಾಪಾಡಬೇಕು. ಈ ಗಡಿರೇಖೆಯನ್ನು ಸ್ಪಷ್ಟವಾಗಿ ಎಳೆದು, ನಾವು ಒಟ್ಟಾಗಿ ನಿಂತಿದ್ದೇವೆ’ ಎಂದೂ ಅವರು ಹೇಳಿದ್ದಾರೆ.

ರಾಗಿಣಿ

‘ಸರ್ಕಾರಿ ನ್ಯಾಯಬೆಲೆ ಅಂಗಡಿ’ ಚಿತ್ರೀಕರಣ ಪೂರ್ಣ

ರಾಗಿಣಿ ದ್ವಿವೇದಿ ಮುಖ್ಯಭೂಮಿಕೆಯಲ್ಲಿರುವ ‘ಸರ್ಕಾರಿ ನ್ಯಾಯಬೆಲೆ ಅಂಗಡಿ’ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದ್ದು, ವಿಶೇಷ ಪೋಸ್ಟರ್ ಅನ್ನು ತಂಡ ಬಿಡುಗಡೆಗೊಳಿಸಿದೆ. ಸಾತ್ವಿಕ್ ಪವನ್ ಕುಮಾರ್ ನಿರ್ದೇಶನದ ಚಿತ್ರ ಜೂನ್ ತಿಂಗಳಲ್ಲಿ ತೆರೆಗೆ ಬರುವ ನಿರೀಕ್ಷೆಯಿದೆ.

‘ಸಿನಿಮಾದ ಹೆಸರೇ ಹೇಳುವಂತೆ ಇದು ಸರ್ಕಾರಿ ನ್ಯಾಯಬೆಲೆ ಅಂಗಡಿ ಮತ್ತು ಪಡಿತರ ವ್ಯವಸ್ಥೆಯ ಸುತ್ತ ನಡೆಯುವಂಥ ಕಥಾಹಂದರದ ಚಿತ್ರ. ಗ್ರಾಮೀಣ ಸೊಗಡಿನ ಈ ಸಿನಿಮಾದ ಸಂಪೂರ್ಣ ಚಿತ್ರೀಕರಣವನ್ನು ಮಂಡ್ಯ ಜಿಲ್ಲೆಯಲ್ಲೇ ನಡೆಸಿದ್ದೇವೆ. ಮನರಂಜನೆ ಜತೆಗೆ ಗಟ್ಟಿಯಾದ ಸಂದೇಶ ಹೊಂದಿರುವ ಕಥೆ. ಚಿತ್ರೀಕರಣ ಮುಗಿಸಿ ಈಗ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ’ ಎಂದರು ನಿರ್ದೇಶಕ.

ಕುಮಾರ ಬಂಗಾರಪ್ಪ, ದೊಡ್ಡಣ್ಣ ಪ್ರಮುಖ ಪಾತ್ರಗಳಲ್ಲಿದ್ದಾರೆ. ಚಿತ್ರವನ್ನು ತೇಜುಮೂರ್ತಿ ಮತ್ತು ಪದ್ಮಾವತಿ ಚಂದ್ರಶೇಖರ್ ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರದ ಹಾಡುಗಳಿಗೆ ಅನಂತ್ ಆರ್ಯನ್ ಸಂಗೀತ ಸಂಯೋಜಿಸುತ್ತಿದ್ದಾರೆ. ಬಿ.ರಾಮಮೂರ್ತಿ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯಿರುವ ಚಿತ್ರಕ್ಕೆ ನಿರ್ದೇಶಕರೆ ಛಾಯಾಚಿತ್ರಗ್ರಹಣ ಮಾಡಿದ್ದಾರೆ.

ಏ.30ಕ್ಕೆ ಧನುಷ್ ‘ಕಾರಾ’ ತೆರೆಗೆ

ಧನುಷ್ ಅಭಿನಯದ ತಮಿಳಿನ ಬಹುನಿರೀಕ್ಷಿತ ಚಿತ್ರ ‘ಕಾರಾ’ ಏ.30ರಂದು ತೆರೆಗೆ ಬರಲಿದೆ. ವಿಘ್ನೇಶ್ ರಾಜ ನಿರ್ದೇಶನದ ಚಿತ್ರದ ಬಿಡುಗಡೆ ದಿನಾಂಕ ಘೋಷಣೆ ಪೋಸ್ಟರ್ ಅನ್ನು ಚಿತ್ರತಂಡ ಸಾಮಾಜಿಕ ಮಾಧ್ಯಗಳಲ್ಲಿ ಹಂಚಿಕೊಂಡಿದೆ.

‘ಕಾರಾಸಾಮಿ’ ಎಂಬ ಹತ್ತಿ ವ್ಯಾಪಾರಿ ಪಾತ್ರದಲ್ಲಿ ಧನುಷ್ ಕಾಣಿಸಿಕೊಂಡಿದ್ದಾರೆ. ಚಿತ್ರದ ಟ್ರೇಲರ್ ಈಗಾಗಲೇ ಗಮನ ಸೆಳೆದಿದ್ದು, ಧನುಷ್ ಮಾಸ್ ಅವತಾರಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ. ತಮಿಳುನಾಡಿನ ಗ್ರಾಮೀಣ ಪ್ರದೇಶದಲ್ಲಿನ ಜಿದ್ದು, ದ್ವೇಷ ಕಥೆಯ ಪ್ರಧಾನ ಅಂಶವಾಗಿದೆ. ದ್ವೇಷದ ಜತೆಗೆ ಭಾವನಾತ್ಮಕ ಅಂಶಗಳಿಂದಲೂ ಕೂಡಿದೆ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

ಮಮಿತಾ ಬೈಜು, ಕೆ.ಎಸ್.ರವಿಕುಮಾರ್, ಜಯರಾಮ್, ಸುರಾಜ್ ವೆನ್ನಾರಮೂಡು ಸೇರಿದಂತೆ ಬಹುಭಾಷಾ ಕಲಾವಿದರು ಚಿತ್ರದಲ್ಲಿದ್ದಾರೆ. ಜಿ.ವಿ.ಪ್ರಕಾಶ್ ಸಂಗೀತ, ಥೇನಿ ಈಶ್ವರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.



ಧನುಷ್

ಬಿಹಾರ: ರಾಜ್ಯಸಭೆಗೆ ನಿತಿನ್ ನವೀನ್ ಸ್ಪರ್ಧೆ

ಆರು ರಾಜ್ಯಗಳಿಂದ ಒಂಬತ್ತು ಅಭ್ಯರ್ಥಿಗಳ ಹೆಸರು ಪ್ರಕಟಿಸಿದ ಬಿಜೆಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆಗೆ ಇದೇ 16ರಂದು ನಡೆಯಲಿರುವ ಚುನಾವಣೆಗೆ ಬಿಹಾರದಿಂದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸ್ಪರ್ಧೆ ಮಾಡಲಿದ್ದಾರೆ.

ಚುನಾವಣೆಗೆ ಬಿಹಾರ, ಅಸ್ಸಾಂ, ಛತ್ತೀಸಗಢ, ಹರಿಯಾಣ, ಒಡಿಶಾ ಹಾಗೂ ಪಶ್ಚಿಮ ಬಂಗಾಳದಿಂದ ಸ್ಪರ್ಧಿಸಲಿರುವ ಅಭ್ಯರ್ಥಿಗಳ ಹೆಸರನ್ನು ಪಕ್ಷ ಮಂಗಳವಾರ ಪ್ರಕಟಿಸಿದೆ. ಆದರೆ, ಮೂರು ರಾಜ್ಯಗಳಲ್ಲಿ ಐವರು ಹಾಲಿ ಸಂಸದರನ್ನು ಕೈಬಿಟ್ಟಿದೆ. ಒಬ್ಬರಿಗಷ್ಟೇ ಮತ್ತೆ ಟಿಕೆಟ್ ನೀಡಿದೆ. ಮಹಾರಾಷ್ಟ್ರ, ತಮಿಳುನಾಡು, ತೆಲಂಗಾಣ ಹಾಗೂ ಹಿಮಾಚಲ ಪ್ರದೇಶದ ಅಭ್ಯರ್ಥಿಗಳ ಹೆಸರನ್ನು ಪಕ್ಷ ಇನ್ನಷ್ಟೇ ಘೋಷಿಸಬೇಕಿದೆ.

ಬಿಹಾರ ಮತ್ತು ಅಸ್ಸಾಂನಲ್ಲಿ ತಲಾ ಒಂದು ಸ್ಥಾನ ಗೆಲ್ಲಲು ಪ್ರತಿಪಕ್ಷಗಳಿಗೆ ಸಾಕಷ್ಟು ಸಂಖ್ಯೆಯ ಕೊರತೆ ಇರುವುದರಿಂದ, ಈ ರಾಜ್ಯಗಳಲ್ಲಿ ಬಿಜೆಪಿಯು ಹೆಚ್ಚುವರಿ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತದೆಯೇ ಎಂದು ಕಾದು ನೋಡಬೇಕಾಗಿದೆ.

ಪ್ರಸ್ತುತ ಬಿಹಾರ ವಿಧಾನಸಭೆಯ ಸದಸ್ಯರಾಗಿರುವ ನಿತಿನ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಜನವರಿಯಲ್ಲಿ ನೇಮಕ ಮಾಡಲಾಗಿತ್ತು. ರಾಷ್ಟ್ರ ರಾಜಕಾರಣಕ್ಕೆ ಪ್ರವೇಶಿಸಿದ್ದರಿಂದ ಅವರು ರಾಜ್ಯಸಭಾ ಸದಸ್ಯರಾಗುವುದು ಬಹುತೇಕ ಖಚಿತವಾಗಿತ್ತು. ಪಕ್ಷವು ಬಿಹಾರ ಘಟಕದ ಪ್ರಧಾನ ಕಾರ್ಯದರ್ಶಿ ಶಿವೇಶ್ ಕುಮಾರ್ ಅವರನ್ನು ಎರಡನೇ ಅಭ್ಯರ್ಥಿಯಾಗಿ ಘೋಷಿಸಿದೆ.

ಮುಖ್ಯಾಂಶಗಳು

- ಪಶ್ಚಿಮ ಬಂಗಾಳದಿಂದ ರಾಹುಲ್ ಸಿನ್ಹಾ ಕಣಕ್ಕೆ
- ಐವರು ಹಾಲಿ ಸಂಸದರ ಕೈಬಿಟ್ಟಿರುವ ಕಮಲ ಪಕ್ಷ
- ಬಿಹಾರದಲ್ಲೇ ಐದು ಸ್ಥಾನಗಳಿಗೆ ಚುನಾವಣೆ

ಬಿಹಾರದಲ್ಲಿ ಐದು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ವಿಧಾನಸಭೆಯ ಬಲಾಬಲದ ಆಧಾರದಲ್ಲಿ ಬಿಜೆಪಿ-ಜೆಡಿಯು ಮೈತ್ರಿಕೂಟವು ನಾಲ್ಕು ಕ್ಷೇತ್ರಗಳಲ್ಲಿ ಗೆಲ್ಲಲಿದೆ. ಎರಡು ಕ್ಷೇತ್ರಗಳಿಗೆ ಜೆಡಿಯು ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ.

ಅಸ್ಸಾಂನಲ್ಲಿ ಕಮಲ ಪಾಳಯವು ಎರಡು ಸ್ಥಾನಗಳನ್ನು ಸುಲಭದಲ್ಲಿ ಗೆಲ್ಲಲಿದೆ. ಆದರೂ, ಹಾಲಿ ಸದಸ್ಯರಾದ ಕೇಂದ್ರದ ಮಾಜಿ ಸಚಿವ ರಾಮೇಶ್ವರ್ ತೇಲಿ ಮತ್ತು ಹಿರಿಯ ನಾಯಕ ಭುವನೇಶ್ವರ್ ಕಲಿತಾ ಅವರನ್ನು ಕೈಬಿಟ್ಟಿದೆ. ಪಕ್ಷವು ಲೋಕೋಪಯೋಗಿ ಸಚಿವ ಜೋಗೆನ್ ಮೋಹನ್ ಮತ್ತು ಶಾಸಕ ತೇರಶ್ ಗೊವಲ್ಲಾ ಅವರನ್ನು ಅಭ್ಯರ್ಥಿಗಳಾಗಿ ಹೆಸರಿಸಿದೆ.

ಒಡಿಶಾದಿಂದ ಹಾಲಿ ಸಂಸದ ಸುಜಿತ್ ಕುಮಾರ್ ಅವರಿಗೆ ಪಕ್ಷ ಮತ್ತೆ ಅವಕಾಶ ನೀಡಿದೆ. ಮಮತಾ ಮೊಹಂತ ಬದಲಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮನಮೋಹನ್ ಸಮಲ್ ಅವರಿಗೆ ಟಿಕೆಟ್ ನೀಡಿದೆ. ಸಮಲ್ ಅವರು 2024ರ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದರು. ಬಿಜೆಡಿ ಸಂಸದರಾಗಿದ್ದ ಸುಜಿತ್ ಕುಮಾರ್ ಹಾಗೂ ಮೊಹಂತ ಅವರು ಈ ಹಿಂದೆ ಬಿಜೆಪಿ ಪಕ್ಷವನ್ನು ಸೇರಿದ್ದರು.

ಪಶ್ಚಿಮ ಬಂಗಾಳದಿಂದ ಪಕ್ಷದ ರಾಜ್ಯ ಘಟಕದ ಮಾಜಿ ಅಧ್ಯಕ್ಷ ರಾಹುಲ್ ಸಿನ್ಹಾ ಕಣಕ್ಕಿಳಿಯಲಿದ್ದಾರೆ.

ಹರಿಯಾಣದಲ್ಲಿ ಹಾಲಿ ಸದಸ್ಯರಾದ ಕಿರಣ್ ಚೌಧರಿ ಹಾಗೂ ರಾಮ್ ಚಂದರ್ ಜಂಗ್ರಾ ಅವರನ್ನು ಪಕ್ಷ ಕೈಬಿಟ್ಟಿದೆ. ಕರ್ನಾಲ್‌ನ ಮಾಜಿ ಸಂಸದ ಸಂಜಯ್ ಭಾಟಿಯಾ ಅವರಿಗೆ ಟಿಕೆಟ್ ನೀಡಿದೆ.

ಕೇಂದ್ರ ಸಚಿವ ಮನೋಹರ್ ಲಾಲ್ ಖಟ್ಟರ್ ಅವರಿಗಾಗಿ ಭಾಟಿಯಾ 2024ರಲ್ಲಿ ಕ್ಷೇತ್ರ ತ್ಯಾಗ ಮಾಡಿದ್ದರು. ವಿಧಾನಸಭೆಯ ಸಂಖ್ಯಾ ಬಲದ ಆಧಾರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ತಲಾ ಒಂದು ಸ್ಥಾನಗಳಲ್ಲಿ ಗೆಲುವು ಸಾಧಿಸಲಿವೆ.

‘ನಿತೀಶ್ ಕುಮಾರ್ ಪುತ್ರ ನಿಶಾಂತ್ ರಾಜಕಾರಣಕ್ಕೆ’

ಪಟ್ನಾ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಅವರ ರಾಜಕೀಯ ಪ್ರವೇಶ ಖಚಿತವಾಗಿದೆ.

ಬಿಹಾರ ವಿಧಾನಸಭೆಯಿಂದ ರಾಜ್ಯಸಭೆಗೆ ಚುನಾವಣೆ ಪ್ರಕ್ರಿಯೆ ನಡೆದಿರುವಾಗಲೇ ಈ ಬೆಳವಣಿಗೆ ನಡೆದಿದೆ. ನಿಶಾಂತ್‌ಗೆ ರಾಜ್ಯಸಭೆ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಸಿಗಬಹುದು ಎಂಬ ಚರ್ಚೆ ಸಹ ಜೋರಾಗಿದೆ. ಈ ಬಗ್ಗೆ ಜೆಡಿಯು ಶೀಘ್ರದಲ್ಲೇ ಅಧಿಕೃತವಾಗಿ ಪ್ರಕಟಿಸಲಿದೆ ಎಂದು ಸಚಿವ ಶ್ರವಣ್ ಕುಮಾರ್ ಅವರು ಮಂಗಳವಾರ ತಿಳಿಸಿದ್ದಾರೆ.

ನಿಶಾಂತ್ ಅವರಿಗೆ ಪಕ್ಷದಲ್ಲಿ ದೊಡ್ಡ ಜವಾಬ್ದಾರಿಯನ್ನೇ ನೀಡಲಾಗುವುದು ಎಂದು ಜೆಡಿಯುನ ಹಿರಿಯ ನಾಯಕರೂ ಆಗಿರುವ ಅವರು ಹೇಳಿದ್ದಾರೆ.

‘ಪಕ್ಷದ ಕಾರ್ಯಕರ್ತರ ಬಹು ವರ್ಷಗಳ ಬೇಡಿಕೆ ಈಡೇರಿದೆ. ಬೆಂಬಲಿಗರು ಈ ವಿಷಯ ಖಚಿತವಾಗುತ್ತಿದ್ದಂತೆ ಹೋಳಿ ಸಂಭ್ರಮದಲ್ಲಿ ಮಿಂದೇಳುತ್ತಿದ್ದಾರೆ’ ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

‘ನಿಶಾಂತ್ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸುವಂತೆ ಜೆಡಿಯು ಕಾರ್ಯಕರ್ತರು ಹಲವು ವರ್ಷಗಳಿಂದ ಒತ್ತಾಯಿಸುತ್ತಿದ್ದರು. ಅದೀಗ ಅಂತಿಮಗೊಂಡಿದೆ. ಈ ನಿರ್ಧಾರದಿಂದ ನಮಗೆ ತುಂಬಾ ಸಂತೋಷವಾಗಿದೆ’ ಎಂದು ಸಮಾಜ ಕಲ್ಯಾಣ ಸಚಿವ ಮದನ್ ಸಹನಿ ಹೇಳಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಚಿವ ಅಶೋಕ್ ಚೌಧರಿ ಸಹ ಸಂತಸ ವ್ಯಕ್ತಪಡಿಸಿದ್ದಾರೆ. ಹೋಳಿ ಉಡುಗೊರೆ ಎಂದಿದ್ದಾರೆ. ಜೆಡಿಯು ಮಿತ್ರಪಕ್ಷ ಬಿಜೆಪಿ ಸಹ ನಿಶಾಂತ್ ರಾಜಕೀಯ ಪ್ರವೇಶವನ್ನು ಸ್ವಾಗತಿಸಿದೆ.

ತಮಿಳುನಾಡು ಸೇರಿ ಐದು ರಾಜ್ಯಗಳ ಚುನಾವಣೆ

ಮುಂದಿನ ವಾರ ವೇಳಾಪಟ್ಟಿ?

ನವದೆಹಲಿ: ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗೆ ಮುಂದಿನ ವಾರ ವೇಳಾಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ.

ಪಶ್ಚಿಮ ಬಂಗಾಳದಲ್ಲಿ ಮೇ 7 ರಂದು, ತಮಿಳುನಾಡಿನಲ್ಲಿ ಮೇ 10 ರಂದು, ಅಸ್ಸಾಂನಲ್ಲಿ ಮೇ 20 ರಂದು, ಕೇರಳದಲ್ಲಿ ಮೇ 23ರಂದು ಮತ್ತು ಪುದುಚೆರಿಯಲ್ಲಿ ಜೂನ್ 15ರಂದು ವಿಧಾನಸಭೆಗಳ ಅವಧಿ ಕೊನೆಗೊಳ್ಳಲಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ತಂಡವು ಮೂರು ರಾಜ್ಯಗಳಿಗೆ ಈಗಾಗಲೇ ಭೇಟಿ ನೀಡಿ ಚುನಾವಣಾ ಪೂರ್ವಸಿದ್ಧತೆಗಳನ್ನು ಪರಿಶೀಲಿಸಿದೆ. ಈ ತಂಡವು ಮಾರ್ಚ್ 6 ಹಾಗೂ 7ರಂದು ಕೇರಳಕ್ಕೆ, ಪಶ್ಚಿಮ ಬಂಗಾಳಕ್ಕೆ ಮಾರ್ಚ್ 9 ಹಾಗೂ 10ರಂದು ಭೇಟಿ ನೀಡಿ ಸಿದ್ಧತೆಗಳ ಪರಿಶೀಲನೆ ಮಾಡಲಿದೆ.

ಮೂಲಗಳ ಪ್ರಕಾರ, ಚುನಾವಣಾ ಆಯೋಗವು ಮುಂದಿನ ವಾರದ ಆರಂಭದಲ್ಲಿ ವೇಳಾಪಟ್ಟಿ ಪ್ರಕಟಿಸುವ ಸಂಭವ ಇದೆ. ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ನಂತರ ಈ ರಾಜ್ಯಗಳಲ್ಲಿ ನಡೆಯುತ್ತಿರುವ ಮೊದಲ ಚುನಾವಣೆ ಯಾಗಿದೆ.

2021ರಲ್ಲಿ ಪಶ್ಚಿಮ ಬಂಗಾಳದಲ್ಲಿ ಎಂಟು ಹಂತದಲ್ಲಿ ಹಾಗೂ ಅಸ್ಸಾಂನಲ್ಲಿ ಮೂರು ಹಂತದಲ್ಲಿ ಚುನಾವಣೆ ನಡೆದಿದ್ದರೆ, ಉಳಿದ ಮೂರು ರಾಜ್ಯಗಳಲ್ಲಿ ಒಂದೇ ಹಂತದಲ್ಲಿ ಚುನಾವಣೆ ನಡೆದಿತ್ತು.

ಸೀಟು ಹಂಚಿಕೆ ಬಿಕ್ಕಟ್ಟು : ಸ್ಟಾಲಿನ್, ಚಿದಂಬರಂ ಚರ್ಚೆ

ಚೆನ್ನೈ (ಪಿಟಿಐ): ತಮಿಳುನಾಡು ವಿಧಾನಸಭೆ ಚುನಾವಣೆಯ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರೊಂದಿಗೆ ಕಾಂಗ್ರೆಸ್‌ನ ಹಿರಿಯ ನಾಯಕ ಪಿ.ಚಿದಂಬರಂ ಮತ್ತು ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಕೆ.ಸೆಲ್ವಪೆರುಂತಗೈ ಮಂಗಳವಾರ ಮಾತುಕತೆ ನಡೆಸಿದರು.



ಎಂ.ಕೆ.ಸ್ಟಾಲಿನ್

ಪಿ. ಚಿದಂಬರಂ

ಡಿಎಂಕೆ-ಕಾಂಗ್ರೆಸ್ ನಡುವೆ ಸೀಟು ಹಂಚಿಕೆ ಕುರಿತು ಬಿಕ್ಕಟ್ಟು ಎದುರಾಗಿರುವ ಸಂದರ್ಭದಲ್ಲಿ ಈ ಮಾತುಕತೆ ನಡೆದಿದೆ.

ಡಿಎಂಕೆ ಅಧ್ಯಕ್ಷರೂ ಆಗಿರುವ ಸ್ಟಾಲಿನ್ ಜೊತೆ ಚಿದಂಬರಂ ಒಂದು ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಸಿದರು. ಹಲವು ವಿಚಾರಗಳ ಬಗ್ಗೆ ಮಾತುಕತೆ ನಡೆದಿದ್ದು, ಶೀಘ್ರವೇ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ತಿಳಿಸಿವೆ.

ಮೈತ್ರಿ ಮುಂದುವರಿಸಲು ಎರಡೂ ಪಕ್ಷಗಳು ಬಯಸಿವೆ. ಆದರೆ, ಕಾಂಗ್ರೆಸ್ ಸೀಟು ಹಂಚಿಕೆ ವಿಚಾರದಲ್ಲಿ ಅಸಮಾಧಾನಗೊಂಡಿದೆ.

ರಾಜ್ಯಸಭೆಯ ಒಂದು ಸ್ಥಾನ ಮತ್ತು ವಿಧಾನಸಭೆಯ 25 ಸ್ಥಾನಗಳನ್ನು ಕಾಂಗ್ರೆಸ್‌ಗೆ ನೀಡಲು ಡಿಎಂಕೆ ಒಪ್ಪಿದೆ. ಆದರೆ, ಎರಡು ರಾಜ್ಯಸಭೆ ಸ್ಥಾನ ಮತ್ತು 39 ವಿಧಾನಸಭಾ ಸ್ಥಾನಗಳಿಗೆ ಕಾಂಗ್ರೆಸ್ ಪಟ್ಟು ಹಿಡಿದಿದೆ. ಕಾಂಗ್ರೆಸ್ ಪ್ರಸ್ತಾವದ ಬಗ್ಗೆ ಮಾತುಕತೆ ನಡೆಯುತ್ತಿದೆ.

ಎರಡು ರಾಜ್ಯಸಭೆ ಸ್ಥಾನ ಮತ್ತು 28 ವಿಧಾನಸಭೆ ಸ್ಥಾನಗಳಿಗೆ ಕಾಂಗ್ರೆಸ್ ಒಪ್ಪುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ತಮಿಳುನಾಡು ಕಾಂಗ್ರೆಸ್ ಉಸ್ತುವಾರಿ ಗಿರೀಶ್ ಚೋಡಂಕರ್ ನೇತೃತ್ವದ ಸೀಟು ಹಂಚಿಕೆ ಸಮಿತಿಯು ಡಿಎಂಕೆಯ ಟಿ.ಆರ್. ಬಾಲು ನೇತೃತ್ವದ ಸಮಿತಿಗೆ ಬೇಡಿಕೆ ಸ್ಥಾನಗಳ ಪಟ್ಟಿ ನೀಡಿತ್ತು.‘ಡಿಎಂಕೆ 25 ಕ್ಷೇತ್ರ ನೀಡುವುದಾಗಿ ಹೇಳುತ್ತಿದೆ. ನಾವು ಹೆಚ್ಚು ಕ್ಷೇತ್ರಗಳನ್ನು ಕೇಳುತ್ತಿದ್ದೇವೆ’ ಎಂದು ಚೋಡಂಕರ್ ತಿಳಿಸಿದ್ದರು.

ಮೈತ್ರಿ ಮುಂದುವರಿಸಲು ಡಿಎಂಕೆ ಬಯಸುತ್ತದೆ. ಮಾತುಕತೆ ನಡೆದಿದೆ. ನಮ್ಮ ನಾಯಕರು ಶೀಘ್ರವೇ ಉತ್ತಮ ನಿರ್ಧಾರ ಕೈಗೊಳ್ಳಲಿದ್ದಾರೆ

ಟಿ.ಕೆ.ಎಸ್ ಇಳಂಗೋವನ್, ಡಿಎಂಕೆ ವಕ್ತಾರ

ಹೋಳಿ ಸಂಭ್ರಮ

ಪಿಟಿಐ ಚಿತ್ರ:

ಗುಜರಾತ್‌ನ ಬೊಟಾದ್ ಜಿಲ್ಲೆಯ ಸಲಂಗ್‌ಪುರ್ ಗ್ರಾಮದಲ್ಲಿ ಹೋಳಿ ಹಬ್ಬದ ಅಂಗವಾಗಿ ಶ್ರೀ ಕಷ್ಟಭಂಜನ್ ಹನುಮಾನ್ ದೇಗುಲದಲ್ಲಿ ವಿಜೃಂಭಣೆಯ ಉತ್ಸವ ಜರುಗಿತು. ಈ ವೇಳೆ ಸಾವಿರಾರು ಭಕ್ತರು ಬಣ್ಣ ಎರಚಿ ಸಂಭ್ರಮಿಸಿದರು

ಯೂಟ್ಯೂಬ್: ಮೋದಿಗೆ 3 ಕೋಟಿ ಸಬ್‌ಸ್ಕ್ರೈಬರ್ಸ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಯೂಟ್ಯೂಬ್ ಚಾನೆಲ್‌ನ ಸಬ್‌ಸ್ಕ್ರೈಬರ್‌ಗಳ ಸಂಖ್ಯೆ ಮೂರು ಕೋಟಿಯ ಗಡಿ ದಾಟಿದೆ.

ಈ ಮೂಲಕ ಯೂಟ್ಯೂಬ್‌ನಲ್ಲಿ ಅತಿ ಹೆಚ್ಚು ಫಾಲೋವರ್ಸ್‌ಗಳನ್ನು ಹೊಂದಿರುವ ವಿಶ್ವದ ಅಗ್ರ ನಾಯಕ ಸ್ಥಾನದಲ್ಲಿ ಮೋದಿ ಮುಂದುವರಿದಿದ್ದಾರೆ.

ಮೋದಿ ಅವರ ನಂತರದ ಸ್ಥಾನದಲ್ಲಿ ಬ್ರೆಜಿಲ್‌ನ ಮಾಜಿ ಅಧ್ಯಕ್ಷ ಜೈರ್ ಬೊಲ್ಸೊನಾರೊ ಅವರಿದ್ದಾರೆ. ಆದರೆ, ಅವರ ಸಬ್‌ಸ್ಕ್ರೈಬರ್‌ಗಳ ಸಂಖ್ಯೆಯು ಮೋದಿ ಅವರ ಅನುಯಾಯಿಗಳ ಸಂಖ್ಯೆಯ ನಾಲ್ಕನೇ ಒಂದು ಭಾಗದಷ್ಟು ಮಾತ್ರ ಇದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಬ್‌ಸ್ಕ್ರೈಬರ್‌ಗಳಿಗಿಂತಲೂ ಏಳು ಪಟ್ಟು ಹೆಚ್ಚು ಅನುಯಾಯಿಗಳನ್ನು ಮೋದಿ ಹೊಂದಿದ್ದಾರೆ. ಇದು ವಿಶ್ವದಾದ್ಯಂತ ಡಿಜಿಟಲ್ ವೇದಿಕೆ ಗಳ ಮೂಲಕ ಮೋದಿ ಅವರು ಗಣನೀಯವಾಗಿ ಜನರನ್ನು ತಲುಪಿರುವ ಪ್ರಮಾಣದ ಬಗ್ಗೆ ಬೆಳಕು ಚೆಲ್ಲುತ್ತದೆ. ಭಾರತದಲ್ಲಿಯೂ ಇತರೆ ನಾಯಕರಿಗಿಂತಲೂ ಹೆಚ್ಚಿನ ಅನುಯಾಯಿಗಳನ್ನು ಮೋದಿ ಹೊಂದಿದ್ದಾರೆ ಎಂಬುದು ಗಮನಾರ್ಹ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗಿಂತ ಮೂರು ಪಟ್ಟು ಹೆಚ್ಚು ಮಾತ್ರವಲ್ಲದೇ, ಆಮ್ ಆದ್ಮಿ ಪಕ್ಷ ಹಾಗೂ ಕಾಂಗ್ರೆಸ್ ಪಕ್ಷಗಳು ಪ್ರತ್ಯೇಕವಾಗಿ ಯೂಟ್ಯೂಬ್‌ನಲ್ಲಿ ಹೊಂದಿರುವ ಸಬ್‌ಸ್ಕ್ರೈಬರ್‌ಗಳಿಗಿಂತಲೂ ನಾಲ್ಕು ಪಟ್ಟು ಹೆಚ್ಚು ಸಬ್‌ಸ್ಕ್ರೈಬರ್‌ಗಳನ್ನು ಮೋದಿ ಹೊಂದಿದ್ದಾರೆ. ಇನ್ನು ಕಳೆದ ತಿಂಗಳಷ್ಟೇ ಇನ್‌ಸ್ಟಾಗ್ರಾಂನಲ್ಲಿಯೂ ಮೋದಿ ಅವರ ಫಾಲೋವರ್ಸ್‌ಗಳ ಸಂಖ್ಯೆ ಹತ್ತು ಕೋಟಿಯ ಗಡಿ ದಾಟಿದೆ.

ಕಾಂಗ್ರೆಸ್ ಟಿಕೆಟ್‌ಗಾಗಿ ₹7 ಕೋಟಿ ಸುಲಿಗೆ: ಬಿಜೆಪಿ ಆರೋಪ

ನವದೆಹಲಿ(ಪಿಟಿಐ): ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನೀಡಲು ಕಾಂಗ್ರೆಸ್ ಪಕ್ಷ ಹರಿಯಾಣದ ಮಾಜಿ ಮಹಿಳಾ ಕಾಂಗ್ರೆಸ್ ನಾಯಕಿಯ ಪತಿಯಿಂದ ₹ 7ಕೋಟಿ ಸುಲಿಗೆ ಮಾಡಲು ಯತ್ನಿಸಿದೆ ಎಂದು ಬಿಜೆಪಿ ಆರೋಪಿಸಿದೆ.

ಇಲ್ಲಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ, ಹರಿಯಾಣದ ರಾಜ್ಯ ಮಹಿಳಾ ಘಟಕದ ಮಾಜಿ ಪ್ರಧಾನ ಕಾರ್ಯದರ್ಶಿಯ ಪತಿ ಗೌರವ್ ಕುಮಾರ್ ಅವರ ಹೇಳಿಕೆ ಆಧರಿಸಿ ಕಾಂಗ್ರೆಸ್ ವಿರುದ್ಧ ಆರೋಪ ಮಾಡಿದರು.

‘ಗೌರವ್ ಕುಮಾರ್, ತನ್ನ ಪತ್ನಿಗೆ ಬವಾಲ್ ವಿಧಾನಸಭಾ ಕ್ಷೇತ್ರದಿಂದ ಪಕ್ಷದ ಟಿಕೆಟ್ ನೀಡಲು ಗಾಂಧಿ ಕುಟುಂಬವು ಹೇಗೆ ತಮ್ಮಿಂದ ₹7 ಕೋಟಿ ಸುಲಿಗೆ ಮಾಡಲು ಹೇಗೆ ಪ್ರಯತ್ನಿಸಿತು ಎಂಬುದನ್ನು ವಿವರಿಸಿದ್ದಾರೆ’ ಎಂದರು.

‘ಗಾಂಧಿ ಕುಟುಂಬವು ವೇಣು ಗೋಪಾಲ್ ಅವರನ್ನು ಹೇಗೆ ಬಳಸಿಕೊಂಡಿತು ಎಂಬುದನ್ನು ಬಹಿರಂಗಪಡಿಸಿದ್ದಾರೆ’ ಎಂದು ಭಂಡಾರಿ ಹೇಳಿದರು.

ವಿಧವೆ, ವೃದ್ಧರಿಗೆ ₹2 ಸಾವಿರ: ಸ್ಟಾಲಿನ್

ಚೆನ್ನೈ (ಪಿಟಿಐ): ದುರ್ಬಲ ವರ್ಗದ ಜನರ 37.79 ಲಕ್ಷ ಬ್ಯಾಂಕ್ ಖಾತೆಗಳಿಗೆ ತಲಾ ₹2 ಸಾವಿರ ಜಮೆ ಮಾಡಲಾಗಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಘೋಷಿಸಿದರು.

ವೃದ್ಧರು, ವಿಧವೆಯರು, ವಯಸ್ಸಾದ ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಅಂಗವಿಕಲರಿಗೆ ಹೆಚ್ಚುವರಿ ಬೆಂಬಲ ನೀಡಬೇಕು ಎಂಬ ಮನವಿಗೆ, ಈಗಾಗಲೇ ಅವರು ಪಡೆಯುತ್ತಿರುವ ಮಾಸಾಶನ ಹೊರತುಪಡಿಸಿ, ಸರ್ಕಾರ ವಿಶೇಷ ನೆರವು ನೀಡಲಿದೆ ಎಂದಿದ್ದಾರೆ.

‘ಕೋರ್ಟ್ ಸೂಚಿಸಿದ ಐವರಿಗೆ ಅನುಮತಿ’

ಮದುರೆ(ತಮಿಳುನಾಡು)(ಪಿಟಿಐ): ‘ನ್ಯಾಯಾಲಯ ಸೂಚಿಸುವ ಐದು ಜನರು ತಿರುಪರನ್‌ಕುಂದ್ರಂ ಬೆಟ್ಟದ ಮೇಲೆ ತೆರಳಿ, ಅಲ್ಲಿನ ದೀಪದ ಸ್ತಂಭದ ಬಳಿ ಸಾಂಕೇತಿಕವಾಗಿ 15 ನಿಮಿಷ ಪ್ರಾರ್ಥನೆ ಸಲ್ಲಿಸಲು ಅನುಮತಿ ನೀಡಬೇಕು’ ಎಂದು ಮದುರೆ ಜಿಲ್ಲಾಡಳಿತಕ್ಕೆ ಮದ್ರಾಸ್ ಹೈಕೋರ್ಟ್ ಸಲಹೆ ನೀಡಿದೆ.

ಬೆಟ್ಟದ ಮೇಲಿನ ದೀಪಸ್ತಂಭದ ಮೇಲೆ ದೀಪ ಹಚ್ಚುವುದಕ್ಕೆ ಅನುಮತಿ ನೀಡುವಂತೆ ನಿರ್ದೇಶನ ನೀಡಿ ನ್ಯಾಯಾಲಯ ಈ ಹಿಂದೆ ನೀಡಿದ್ದ ಆದೇಶ ಪಾಲನೆ ಮಾಡಿಲ್ಲ ಎಂದು ದೂರಿ ಸಲ್ಲಿಸಲಾಗಿರುವ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ವೇಳೆ, ಹೈಕೋರ್ಟ್‌ನ ಮದುರೆ ಪೀಠ ಈ ಸಲಹೆ ನೀಡಿದೆ.

‘ನ್ಯಾಯಾಲಯ ಈ ಹಿಂದೆ ನೀಡಿದ್ದ ಆದೇಶವನ್ನು ಗೌರವಿಸಲು ಸರ್ಕಾರ ಇಚ್ಛಿಸಿದಲ್ಲಿ, ಸಾಂಕೇತಿಕವಾಗಿ ಪ್ರಾರ್ಥನೆ ಸಲ್ಲಿಸಲು ಅನುಮತಿ ನೀಡಬಹುದು. ಇದು ಕೂಡ ಸಲಹೆ ಮಾತ್ರವೇ ಆಗಿದ್ದು ನಿರ್ದೇಶನವಲ್ಲ’ ಎಂದು ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರೂ ಇರುವ ಪೀಠ ಹೇಳಿದೆ.

ನ್ಯಾ. ಜಿ.ಆರ್. ಸ್ವಾಮಿನಾಥನ್

‘ತಿರುಪರನ್ ಕುಂದ್ರಂ ಬೆಟ್ಟದ ಮೇಲಿನ ದೀಪಸ್ತಂಭ ದಲ್ಲಿ ಕಾರ್ತಿಕ ದೀಪ ಹಚ್ಚುವುದಕ್ಕೆ ಅನುಮತಿ ನೀಡುವುದಿಲ್ಲ ಎಂದು ರಾಜ್ಯದ ಖನಿಜಗಳು ಮತ್ತು ಗಣಿಗಾರಿಕೆ ಸಚಿವ ಎಸ್.ರಘುಪತಿ ಹೇಳಿದ್ದರು.

ಈ ಮೂಲಕ ಅವರು, ದುರುದ್ದೇಶಪೂರಿತ ರಾಜಕೀಯಕ್ಕಾಗಿ ಈ ಪ್ರಕರಣವನ್ನು ತಿರುಚಿದ್ದಾರೆ’ ಎಂದು ಪೀಠ ಹೇಳಿದೆ. ಕಳೆದ ವರ್ಷ ಡಿಸೆಂಬರ್ 1ರಂದು ನಿಷೇಧಾಜ್ಞೆ ಜಾರಿಗೊಳಿಸಿ ಆದೇಶ ಹೊರಡಿಸಿದ ಬಗ್ಗೆ ವಿವರಣೆ ನೀಡಿ ಮದುರೆ ಜಿಲ್ಲಾಧಿಕಾರಿ ಕೆ.ಜೆ. ಪ್ರವೀಣ ಕುಮಾರ್ ತಮ್ಮ ಹೆಚ್ಚುವರಿ ಅಫಿಡವಿಟ್ ಸಲ್ಲಿಸಿದ್ದರು.

‘ಕಾನೂನು-ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ನಿಷೇಧಾಜ್ಞೆ ಜಾರಿ ಮಾಡ ಲಾಗಿತ್ತು. ಬೆಟ್ಟದ ಮೇಲೆ ಕಾರ್ತಿಕ ದೀಪ ಹಚ್ಚುವ ವಿಧಿಗೆ ಅನುಮತಿ ನೀಡಿ ಹೈಕೋರ್ಟ್‌ನ ಮದುರೆ ಪೀಠ ನೀಡಿದ್ದ ಆದೇಶ ವನ್ನು ದೇವಸ್ಥಾನ ಆಡಳಿತ ಮಂಡಳಿ ಜಾರಿಗೊಳಿಸುವುದನ್ನು ತಡೆಯುವುದ ಕ್ಕಾಗಿ ಅಲ್ಲ’ ಎಂದು ಜಿಲ್ಲಾಧಿಕಾರಿ ವಿವರಿಸಿದ್ದರು.

ಈ ಬಗ್ಗೆ ಮಾರ್ಚ್ 2ರಂದು ನಡೆದ ವಿಚಾರಣೆ ವೇಳೆ ಪ್ರಸ್ತಾಪಿಸಿದ ನ್ಯಾಯಮೂರ್ತಿ ಸ್ವಾಮಿ ನಾಥನ್, ‘ಜಿಲ್ಲಾಧಿಕಾರಿ ಹೊರಡಿ ಸಿದ್ದ ನಿಷೇಧಾಜ್ಞೆ ಆದೇಶವನ್ನೇ ನೆಪ ಮಾಡಿಕೊಂಡಿದ್ದ ಪೊಲೀಸರು ದೀಪ ಬೆಳಗಲು ಅವಕಾಶ ನೀಡಿಲ್ಲ. ಜಿಲ್ಲಾಧಿಕಾರಿ ಆದೇಶವನ್ನಷ್ಟೆ ನಾವು ಪಾಲನೆ ಮಾಡುವುದಾಗಿ ಪೊಲೀಸರು ಸ್ಪಷ್ಟವಾಗಿ ಹೇಳಿದ್ದಾರೆ’ ಎಂದು ಅಭಿಪ್ರಾಯಪಟ್ಟರು.. ನಂತರ, ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿದರು.

ಎಸ್‌ಸಿ,ಎಸ್‌ಟಿ ಕಾಯ್ದೆ: ಅಲಹಾಬಾದ್ ಹೈಕೋರ್ಟ್ ಮಹತ್ವದ ಆದೇಶ

‘ವೃತ್ತಿ ಹೆಸರಿಂದ ಕರೆದ ಮಾತ್ರಕ್ಕೆ ಪ್ರಕರಣ ಸಲ್ಲ’

ಪ್ರಜಾವಾಣಿ ವಾರ್ತೆ

ಲಖನೌ: ಯಾವುದೇ ವ್ಯಕ್ತಿಯನ್ನು ಆತನ/ಆಕೆಯ ಕುಲಕಸುಬಿನಿಂದ/ ವೃತ್ತಿಯಿಂದ ಕರೆದ ಮಾತ್ರಕ್ಕೆ, ಆರೋಪಿಗಳ ವಿರುದ್ಧ ಎಸ್‌ಸಿ/ಎಸ್‌ಟಿ ವಿರುದ್ಧ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸುವಂತಿಲ್ಲ. ನಿರ್ದಿಷ್ಟ ಸಮುದಾಯಕ್ಕೆ ಸೇರಿದ ವ್ಯಕ್ತಿಯನ್ನು ಅವಮಾನಿಸುವ ಉದ್ದೇಶದಿಂದಲೇ ಅಂತಹ ಪದಗಳನ್ನು ಬಳಸಲಾಗಿತ್ತು ಎಂಬುದು ಸಾಬೀತಾಗಬೇಕು ಎಂದು ಅಲಹಾಬಾದ್ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಮನೆಗೆಲಸದ ಮಹಿಳೆಯನ್ನು ಜಾತಿಯಿಂದ ಕರೆಯುವ ಮೂಲಕ ಅವಮಾನಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿ, ಉತ್ತರ ಪ್ರದೇಶದ ಗೌತಮಬುದ್ಧನಗರ ಜಿಲ್ಲೆಯ ಎಸ್‌ಸಿ/ಎಸ್‌ಟಿ ವಿಶೇಷ ನ್ಯಾಯಾಲಯವು ಆಕೆ ಕೆಲಸ ಮಾಡುತ್ತಿದ್ದ ಮನೆಯ ಮಾಲೀಕನ ವಿರುದ್ಧ ಕಳೆದ ವರ್ಷ ಸಮನ್ಸ್ ಜಾರಿ ಮಾಡಿತ್ತು.

ಈ ಸಮನ್ಸ್ ಪ್ರಶ್ನಿಸಿ ಸಲ್ಲಿಸಲಾಗಿದ್ದ ಕ್ರಿಮಿನಲ್ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಿಲ ಕುಮಾರ್ ನೇತೃತ್ವದ ಏಕಸದಸ್ಯ ಪೀಠ, ಈ ಆದೇಶ ನೀಡಿದೆ.

‘ನಾನು ಕೆಲಸ ಮಾಡುತ್ತಿದ್ದ ಮನೆಯ ಮಾಲೀಕನ ಬಟ್ಟೆಗಳನ್ನು ಒಗೆಯುತ್ತಿದ್ದೆ. ಕೂಲಿ ನೀಡುವಂತೆ ಕೇಳಿದ ವೇಳೆ, ಅರ್ಜಿದಾರ(ಮನೆ ಮಾಲೀಕ) ನನ್ನನ್ನು ನನ್ನ ಜಾತಿಯಿಂದ ಕರೆದು, ಅವಮಾನಿಸಿದ್ದಾರೆ’ ಎಂದು ಮಹಿಳೆ ದೂರು ನೀಡಿದ್ದರು.

ವಿಚಾರಣೆ ವೇಳೆ, ‘ಅರ್ಜಿದಾರ, ದೂರುದಾರ ಮಹಿಳೆಯನ್ನು ‘ಧೋಬನ್’ ಎಂದು ಕರೆದಿದ್ದಾರೆ. ಬಟ್ಟೆ ಒಗೆಯುವ ಕೆಲಸಕ್ಕಾಗಿಯೇ ಅವರ ನಡುವೆ ಕರಾರು ಏರ್ಪಟ್ಟಿತ್ತು’ ಎಂಬುದನ್ನು ಪೀಠ ಗಮನಿಸಿದೆ.

ಅರ್ಜಿದಾರ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದ ಪೀಠವು, ಎಸ್‌ಸಿ/ಎಸ್‌ಟಿ ಕಾಯ್ದೆಯ ಅವಕಾಶಗಳಡಿ ಸಮನ್ಸ್ ನೀಡಿ ಹೊರಡಿಸಿದ್ದ ಅದೇಶವನ್ನು ರದ್ದುಗೊಳಿಸಿದೆ. ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ಅರ್ಜಿದಾರ ವಿರುದ್ಧದ ವಿಚಾರಣೆ ಮುಂದುವರಿಸಬೇಕು ಎಂದೂ ಆದೇಶಿಸಿದೆ.

ಮರ್ಕರಂ–ಮಿಚೆಲ್ ಮುಖಾಮುಖಿ

ಟಿ20 ವಿಶ್ವಕಪ್ ಸೆಮಿಫೈನಲ್: ನ್ಯೂಜಿಲೆಂಡ್ ತಂಡಕ್ಕೆ ದಕ್ಷಿಣ ಆಫ್ರಿಕಾ ಸವಾಲು ಇಂದು

ಕೋಲ್ಕತ್ತ (ಪಿಟಿಐ): ಹಾಲಿ ರನ್ನರ್ಸ್ ಅಪ್ ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ತಂಡಗಳು ಬುಧವಾರ ಈಡನ್ ಗಾರ್ಡನ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ಮೊದಲ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ದಕ್ಷಿಣ ಆಫ್ರಿಕಾ ತಂಡದ ನಾಯಕ, ಸ್ಫೋಟಕ ಶೈಲಿಯ ಬ್ಯಾಟರ್ ಏಡನ್ ಮರ್ಕರಂ ಮತ್ತು ಕಿವೀಸ್ ತಂಡದ ನಾಯಕ, ಸ್ಪಿನ್ನರ್ ಮಿಚೆಲ್ ಸ್ಯಾಂಟ್ನರ್ ಅವರ ನಡುವಿನ ಹಣಾಹಣಿಯೆಂದೇ ಈ ಪಂದ್ಯ ಬಿಂಬಿತವಾಗಿದೆ.

ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ತಂಡಗಳ ನಡುವಿನ ಪೈಪೋಟಿಯು 2015ರ ಏಕದಿನ ವಿಶ್ವಕಪ್ ಸೆಮಿಫೈನಲ್‌ನಿಂದಲೂ ತಾರಕಕ್ಕೇರಿದೆ. ಆ ರೋಚಕ ಪಂದ್ಯದಲ್ಲಿ 'ಬ್ಲ್ಯಾಕ್ ಕ್ಯಾಪ್ಸ್' ಬಳಗವು ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿತ್ತು. ಅದರಿಂದಾಗಿ ವೇಗಿ ಡೇಲ್ ಸ್ಟೇಯ್ನ್ ಮತ್ತು ಬ್ಯಾಟರ್ ಎಬಿ ಡಿವಿಲಿಯರ್ಸ್ ಅವರು ಹತಾಶರಾಗಿದ್ದರು.

ಈಗ ಕೋಚ್ ಶುಕ್ರಿ ಕೊನ್ರಾಡ್ ಅವರ ಮಾರ್ಗದರ್ಶನದಲ್ಲಿ ತಂಡವು ಉತ್ತಮವಾಗಿ ಬೆಳೆದಿದೆ. ಹೋದ ವರ್ಷ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಗೆದ್ದಿತ್ತು. ಆದರೆ ಬಿಳಿ ಚೆಂಡಿನ ಕ್ರಿಕೆಟ್‌ನಲ್ಲಿ ಐಸಿಸಿ ಟ್ರೋಫಿಗಳನ್ನು ಗೆಲ್ಲುವಲ್ಲಿ ಇನ್ನೂ ಯಶಸ್ವಿಯಾಗಿಲ್ಲ. ಅದರಿಂದಾಗಿ ಸೀಮಿತ ಓವರ್‌ಗಳಲ್ಲಿ ಅವರಿಗೆ ಇನ್ನೂ 'ಚೋಕರ್ಸ್' ಪಟ್ಟ ಇದೆ.

ಉಭಯ ತಂಡಗಳ ನಾಯಕರು ಪ್ರತಿಭಾನ್ವಿತರು ಅಲ್ಲದೇ ತಂತ್ರಗಾರಿಕೆಯಲ್ಲಿ ನಿಪುಣರೂ ಆಗಿದ್ದಾರೆ. ಮರ್ಕರಂ ಅವರು 175ರ ಸ್ಟ್ರೈಕ್‌ರೇಟ್‌ನಲ್ಲಿ 268 ರನ್ ಗಳಿಸಿದ್ದಾರೆ. ಅದರಿಂದಾಗಿ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಬಲ್ಲ ಬ್ಯಾಟರ್ ಆವರಾಗಿದ್ದಾರೆ.

ಸ್ಯಾಂಟ್ನರ್ ಅವರು 6.35ರ ಏಕಾನಮಿಯಲ್ಲಿ ಬೌಲಿಂಗ್ ಮಾಡುತ್ತಿದ್ದಾರೆ. ಅದರಲ್ಲೂ ಪವರ್‌ಪ್ಲೇನಲ್ಲಿ ಬ್ಯಾಟರ್‌ಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ದಕ್ಷಿಣ ಆಫ್ರಿಕಾ ತಂಡದಲ್ಲಿ ಮರ್ಕರಂ ಅಷ್ಟೇ ಅಲ್ಲ; ಕ್ವಿಂಟನ್ ಡಿ ಕಾಕ್, ಡಿವಾಲ್ಡ್ ಬ್ರೆವಿಸ್, ರಿಯಾನ್ ರಿಕೆಲ್ಟನ್, ಟ್ರಿಸ್ಟನ್ ಸ್ಟಬ್ಸ್, ಡೇವಿಡ್ ಮಿಲ್ಲರ್ ಮತ್ತು ಮಾರ್ಕೊ ಯಾನ್ಸೆನ್ ಅವರು ಬೀಸಾಟಕ್ಕೆ ಹೆಸರಾದವರು. ಬೌಲರ್‌ಗಳ ನಿದ್ದೆಗೆಡಿಸಬಲ್ಲ ಬಲಾಢ್ಯರು.

ಕಿವೀಸ್ ಬಳಗದಲ್ಲಿ ಸ್ಯಾಂಟ್ನರ್ ಅವರಿಗೆ ರಚಿನ್ ರವೀಂದ್ರ (9 ವಿಕೆಟ್), ಆಲ್‌ರೌಂಡರ್ ಗ್ಲೆನ್ ಫಿಲಿಪ್ಸ್, ಕೋಲಿ ಮೆಕ್‌ಕಾಂಚಿ ಅವರ ಬಲವಿದೆ. ಇವರು ಮರ್ಕರಂ ಅವರಿಗೆ ಸ್ಪಿನ್ ಪರೀಕ್ಷೆಗೆ ಒಡ್ಡಬಲ್ಲರು.

ಒಂದೊಮ್ಮೆ ಕಿವೀಸ್ ತಂಡವು ಮೊದಲು ಬ್ಯಾಟಿಂಗ್ ಮಾಡುವ ಪ್ರಮೇಯ ಬಂದರೆ ಫಿನ್ ಅಲೆನ್, ಟಿಮ್ ಸೀಫರ್ಟ್, ಗ್ಲೆನ್ ಫಿಲಿಪ್ಸ್ ಮತ್ತು ಡ್ಯಾರಿಲ್ ಮಿಚೆಲ್ ಅವರ ಹೊಣೆ ಹೆಚ್ಚಲಿದೆ. 200ಕ್ಕಿಂತ ಹೆಚ್ಚು ರನ್‌ಗಳ ಮೊತ್ತದ ಸವಾಲನ್ನು ಮರ್ಕರಂ ಪಡೆಗೆ ನೀಡಲೇಬೇಕು. ವೇಗಿ ಲುಂಗಿ ಎನ್‌ಗಿಡಿ ಅವರ ಸ್ಲೋವರ್, ಯಾರ್ಕರ್ ಮತ್ತು ಲೆಗ್ ಕಟರ್‌ಗಳನ್ನು ಎದುರಿಸಿ ನಿಂತರೆ ಇದು ಸಾಧ್ಯವಾಗಲಿದೆ. ನ್ಯೂಜಿಲೆಂಡ್ ತಂಡಕ್ಕೆ ಲಾಕಿ ಫರ್ಗ್ಯುಸನ್ ಅವರ ಮೊದಲ ಸ್ಪೆಲ್ ಯಾವ ರೀತಿ ಪರಿಣಾಮ ಬೀರಲಿದೆ ಎಂಬುದು ಕೂಡ ಇಲ್ಲಿ ಮುಖ್ಯವಾಗಲಿದೆ.

ಒಟ್ಟಾರೆ 'ಹೋಳಿ ಹಬ್ಬ'ದ ಋತುವಿನಲ್ಲಿ ರೋಚಕತೆ ರಂಗು ಚೆಲ್ಲುವ ಎಲ್ಲ ನಿರೀಕ್ಷೆಗಳೂ ಈ ಪಂದ್ಯದ ಸುತ್ತ ಇವೆ.

ಬೌಲಿಂಗ್ ಅಭ್ಯಾಸ ಮಾಡಿದ ನ್ಯೂಜಿಲೆಂಡ್ ನಾಯಕ ಮಿಚೆಲ್ ಸ್ಯಾಂಟ್ನರ್ ಪಿಟಿಐ ಚಿತ್ರ

ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡನ್ ಮರ್ಕರಂ ತಾಲೀಮು 'ಎಕ್ಸ್' ಚಿತ್ರ

ತಂಡಗಳು

ನ್ಯೂಜಿಲೆಂಡ್: ಮಿಚೆಲ್ ಸ್ಯಾಂಟ್ನರ್ (ನಾಯಕ), ಫಿನ್ ಅಲೆನ್, ಟಿಮ್ ಸೀಫರ್ಟ್, ರಚಿನ್ ರವೀಂದ್ರ, ಡೆವೊನ್ ಕಾನ್ವೆ, ಕೈಲ್ ಜೆಮಿಸನ್, ಜೇಕಬ್ ಡಫಿ, ಗ್ಲೆನ್ ಫಿಲಿಪ್ಸ್, ಡ್ಯಾರಿಲ್ ಮಿಚೆಲ್, ಲಾಕಿ ಫರ್ಗ್ಯುಸನ್, ಮಾರ್ಕ್ ಚಾಪ್ಮನ್, ಮ್ಯಾಟ್ ಹೆನ್ರಿ, ಈಶ್ ಸೋಧಿ, ಕೋಲೆ ಮೆಕಾಂಚಿ, ಜೇಮ್ಸ್ ನಿಶಾಮ್.

ದಕ್ಷಿಣ ಆಫ್ರಿಕಾ: ಏಡನ್ ಮರ್ಕರಂ (ನಾಯಕ), ಕ್ವಿಂಟನ್ ಡಿ ಕಾಕ್, ರಿಯಾನ್ ರಿಕೆಲ್ಟನ್, ಡೆವಾಲ್ಡ್ ಬ್ರೆವಿಸ್, ಡೇವಿಡ್ ಮಿಲ್ಲರ್, ಟ್ರಿಸ್ಟನ್ ಸ್ಟಬ್ಸ್, ಮಾರ್ಕೊ ಯಾನ್ಸೆನ್, ಕಾರ್ಬಿನ್ ಬಾಷ್, ಕಗಿಸೊ ರಬಾಡ, ಕೇಶವ್ ಮಹಾರಾಜ್, ಲುಂಗಿ ಎನ್‌ಗಿಡಿ, ಜಾರ್ಜ್ ಲಿಂಡೆ, ಕವೆನಾ ಮಫಾಕಾ, ಎನ್ರಿಚ್ ನಾಕಿಯಾ, ಜೇಸನ್ ಸ್ಮಿತ್.

ಪಂದ್ಯ ಆರಂಭ: ರಾತ್ರಿ 7

ನೇರಪ್ರಸಾರ; ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಭಾರತ ತಂಡದ ಅಭ್ಯಾಸಕ್ಕೆ 'ಗ್ರಹಣ'

ಮುಂಬೈ (ಪಿಟಿಐ): ಮಂಗಳವಾರ ನಡೆದ ಚಂದ್ರಗ್ರಹಣದ ಪರಿಣಾಮ ಭಾರತ ಕ್ರಿಕೆಟ್ ತಂಡದ ಅಭ್ಯಾಸದ ಮೇಲೂ ಆಯಿತು!

ವಾಂಖೆಡೆ ಕ್ರೀಡಾಂಗಣದಲ್ಲಿ ಇದೇ 5ರಂದು ಭಾರತ ತಂಡವು ಇಂಗ್ಲೆಂಡ್ ಎದುರಿನ ಸೆಮಿಫೈನಲ್‌ನಲ್ಲಿ ಆಡಲಿದೆ. ಅದಕ್ಕಾಗಿ ಮಂಗಳವಾರ ಸಂಜೆ 6ರಿಂದ ರಾತ್ರಿ 9ರವರೆಗೆ ಹೊನಲು ಬೆಳಕಿನಲ್ಲಿ ತಂಡದ ಆಟಗಾರರು ತಾಲೀಮು ನಡೆಸಬೇಕಿತ್ತು. ಆದರೆ ಚಂದ್ರಗ್ರಹಣವಿದ್ದ ಕಾರಣ ಸಮಯ ಬದಲಾವಣೆ ಮಾಡಿಕೊಂಡು ರಾತ್ರಿ 7.20ಕ್ಕೆ ಅಭ್ಯಾಸ ಆರಂಭಿಸಿತು.

ನೆರವು ಸಿಬ್ಬಂದಿ ಮತ್ತು ಕೋಚ್‌ಗಳು ಆಟಗಾರರಿಗಿಂತ ಮೊದಲು ಕ್ರೀಡಾಂಗಣಕ್ಕೆ ಬಂದರು. ಮೈದಾನದಲ್ಲಿರುವ ಫ್ಲಡ್‌ಲೈಟ್‌ಗಳನ್ನು ಸಂಜೆ 6.50ರಿಂದಲೇ ಬೆಳಗಿಸಲಾಗಿತ್ತು.

ವಾಂಖೆಡೆ ಸ್ತಬ್ಧ– ಕರನ್: 'ವಾಂಖೆಡೆ ಕ್ರೀಡಾಂಗಣ ಅದ್ಭುತವಾಗಿದೆ. ಆದರೆ ಗುರುವಾರ ರಾತ್ರಿ ಇದು ಸ್ತಬ್ಧವಾಗಲಿದೆ ಎಂಬ ನಂಬಿಕೆ ನನಗಿದೆ' ಎಂದು ಇಂಗ್ಲೆಂಡ್ ತಂಡದ ವೇಗದ ಬೌಲಿಂಗ್ ಆಲ್‌ರೌಂಡರ್ ಸ್ಯಾಮ್ ಕರನ್ ಅವರು ಹೇಳಿದ್ದಾರೆ.

ಇಲ್ಲಿ ನಡೆಯಲಿರುವ ಸೆಮಿಫೈನಲ್ ನಲ್ಲಿ ಇಂಗ್ಲೆಂಡ್ ತಂಡವು ಹಾಲಿ ಚಾಂಪಿಯನ್ ಆತಿಥೇಯ ಭಾರತ ತಂಡವನ್ನು ಎದುರಿಸಲಿದೆ. ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತದ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ತುಂಬಿರುತ್ತಾರೆ. ಅವರ ಹರ್ಷೋದ್ಗಾರಗಳು ಮುಗಿಲು ಮುಟ್ಟುತ್ತವೆ. ಆದರೆ ಭಾರತದ ಎದುರು ಮೇಲುಗೈ ಸಾಧಿಸುವ ಮೂಲಕ ಪ್ರೇಕ್ಷಕ ಗಣವನ್ನು 'ಮೌನ'ಗೊಳಿಸುವ ಅರ್ಥದಲ್ಲಿ ಕರನ್ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇಲ್ಲಿ ಪಿಚ್ ಚೆನ್ನಾಗಿದೆ. ಬೌಂಡರಿ ಅಂತರವೂ ಕಡಿಮೆ. ಆದ್ದರಿಂದ ದೊಡ್ಡ ಮೊತ್ತ ದಾಖಲಾಗುವ ನಿರೀಕ್ಷೆ ಇದೆ. ನಾವು ಕೂಡ ಇಲ್ಲಿ ಬಹಳಷ್ಟು ಪಂದ್ಯಗಳಲ್ಲಿ ಆಡಿದ್ದೇವೆ. ಭಾರತ ತಂಡದ ಎದುರು ಹಾಗೂ ಐಪಿಎಲ್ ಪಂದ್ಯಗಳಲ್ಲಿ ಆಡಿದ ಅನುಭವ ನಮಗಿದೆ. ಉಭಯ ತಂಡಗಳೂ ಸೆಮಿಫೈನಲ್ ಗೆಲ್ಲಲು ಉತ್ಸುಕವಾಗಿದೆ. ಆದ್ದರಿಂದ ರೋಚಕ ಹಣಾಹಣಿ ಖಚಿತ' ಎಂದರು.

ಕರನ್ ಅವರು ಟೂರ್ನಿಯ ಏಳು ಪಂದ್ಯಗಳಿಂದ 149 ರನ್ ಗಳಿಸಿದ್ದಾರೆ ಮತ್ತು ಆರು ವಿಕೆಟ್ ಪಡೆದಿದ್ದಾರೆ.

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಮಂಗಳವಾರ ಅಭ್ಯಾಸ ನಡೆಸಿದ ಭಾರತ ತಂಡದ ಮೊಹಮ್ಮದ್ ಸಿರಾಜ್ ಮತ್ತು ಇಶಾನ್ ಕಿಶನ್ ಪಿಟಿಐ ಚಿತ್ರ

ತವರಿಗೆ ಮರಳಲು ವಿಂಡೀಸ್ ತಂಡಕ್ಕೆ ವಿಘ್ನ

ನವದೆಹಲಿ (ಪಿಟಿಐ): ಟಿ20 ವಿಶ್ವಕಪ್ ಅಭಿಯಾನ ಮುಗಿಸಿರುವ ವೆಸ್ಟ್ ಇಂಡೀಸ್ ತಂಡಕ್ಕೆ ತವರಿಗೆ ಮರಳಲು ಅಂತರರಾಷ್ಟ್ರೀಯ ವಾಯು ಪ್ರದೇಶ ನಿರ್ಬಂಧದಿಂದ ಸಮಸ್ಯೆಯಾಗಿದೆ. ಹೀಗಾಗಿ ತಂಡ ಭಾರತದಲ್ಲೇ ಉಳಿದಿದೆ.

ಅಮೆರಿಕ ಮತ್ತು ಇಸ್ರೇಲ್ ಪಡೆಗಳು, ಇರಾನ್ ಮೇಲೆ ದಾಳಿ ಮಾಡಿದ ನಂತರ ಈ ನಿರ್ಬಂಧ ಶುರುವಾಗಿದೆ.

ಆಟಗಾರರು ಸುರಕ್ಷಿತವಾಗಿ ಮರಳಲು ಅನುವಾಗುವಂತೆ ಐಸಿಸಿ ಮತ್ತು ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳೊಂದಿಗೆ ನಿಕಟವಾಗಿ ಸಂಪರ್ಕದಲ್ಲಿರುವುದಾಗಿ ಕ್ರಿಕೆಟ್ ವೆಸ್ಟ್ ಇಂಡೀಸ್ ಹೇಳಿದೆ. ಯುದ್ಧದ ಕಾರಣ ಕೊಲ್ಲಿ ಪ್ರದೇಶದಲ್ಲಿ ವಿಮಾನಗಳ ಪ್ರಯಾಣಕ್ಕೆ ನಿರ್ಬಂಧ ವಿಧಿಸಲಾಗಿದೆ. ಸದಾ ಬ್ಯುಸಿಯಾಗಿರುವ ದುಬೈ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮೂರು –ನಾಲ್ಕು ದಿನ ಪ್ರಯಾಣಿಕರು ಸಿಲುಕಿಕೊಂಡಿದ್ದರು.

ವಾಯು ಪ್ರದೇಶ ನಿರ್ಬಂಧದ ಕಾರಣದಿಂದ ಜಿಂಬಾಬ್ವೆ ತಂಡವೂ ಭಾರತದಿಂದ ತವರಿಗೆ ಮರಳಲು ಅಡ್ಡಿಯಾಗಿದೆ.

'ತಂಡ ದೆಹಲಿಯಲ್ಲಿಯೇ ಉಳಿದುಕೊಂಡಿದೆ. ತಂಡಕ್ಕೆ ಪರ್ಯಾಯ ಪ್ರಯಾಣ ವ್ಯವಸ್ಥೆ ಮಾಡುವ ಬಗ್ಗೆ ಯೋಜನೆಗಳನ್ನು ರೂಪಿಸಲಾಗುತ್ತಿದೆ' ಎಂದು ಜಿಂಬಾಬ್ವೆ ಕ್ರಿಕೆಟ್ 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದೆ. ತಂಡವು ಭಾನುವಾರ ದುಬೈ ಮೂಲಕ ಹರಾರೆಗೆ ವಾಪಸಾಗಬೇಕಿತ್ತು.

ಬಾಗನ್ ತವರು ಪಂದ್ಯಕ್ಕೆ ಪ್ರೇಕ್ಷಕರಿಗೆ ನಿರ್ಬಂಧ

ಕೋಲ್ಕತ್ತ (ಪಿಟಿಐ): ಕ್ಲಬ್ ಅಭಿಮಾನಿಗಳ ದುರ್ವರ್ತನೆಯ ಕಾರಣ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಶಿಸ್ತು ಸಮಿತಿಯು ಮೋಹನ್ ಬಾಗನ್ ಸೂಪರ್ ಜೈಂಟ್ಸ್‌ಗೆ ದಂಡ ವಿಧಿಸಿದೆ. ಜೊತೆಗೆ ಒಡಿಶಾ ಎಫ್‌ಸಿ ಎದುರಿನ ಮುಂದಿನ ಪಂದ್ಯವನ್ನು ಖಾಲಿ ಕ್ರೀಡಾಂಗಣದಲ್ಲಿ ಆಡಬೇಕೆಂದೂ ಸೂಚನೆ ನೀಡಿದೆ.

ಫೆ. 14ರಂದು ಕೇರಳ ಬ್ಲಾಸ್ಟರ್ಸ್ ಎದುರಿನ ತವರು ಪಂದ್ಯದ ವೇಳೆ ಬಾಗನ್ ಅಭಿಮಾನಿಗಳು ಅತಿರೇಕದಿಂದ ವರ್ತಿಸಿದ್ದರು.

ದಂಡವನ್ನು ಪಾವತಿಸಲು ಕ್ಲಬ್ ಒಪ್ಪಿಕೊಂಡಿದೆ. ದಂಡದ ಮೊತ್ತ ಬಹಿರಂಗಪಡಿಸಿಲ್ಲ. ಮಾರ್ಚ್ 6ರಂದು ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯವನ್ನು ಖಾಲಿ ಕ್ರೀಡಾಂಗಣದಲ್ಲಿ ಆಡಬೇಕೆಂಬ ಸೂಚನೆ ವಿರುದ್ಧ ಅದು ಸಲ್ಲಿಸಿದ್ದ ಮನವಿಯನ್ನು ತಿರಸ್ಕರಿಸಲಾಗಿದೆ.

'ಪಂದ್ಯವನ್ನು ಖಾಲಿ ಕ್ರೀಡಾಂಗಣದಲ್ಲಿ ಆಡಿಸಬೇಕೆಂಬ ಎಐಎಫ್‌ಎಫ್‌ನ ಶಿಸ್ತು ಸಮಿತಿಯ ನಿರ್ಧಾರದಿಂದ ನಮಗೆ ತೀವ್ರ ನಿರಾಶೆಯಾಗಿದೆ' ಎಂದು ಕ್ಲಬ್ 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದೆ.

ಲಕ್ಷ್ಯ ಸೇನ್ ಭರ್ಜರಿ ಶುಭಾರಂಭ

ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್: ಹೊರಬಿದ್ದ ಶಿ ಯುಕಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್ಸ್‌ನ ಮೊದಲ ಸುತ್ತಿನಲ್ಲಿ 23–21, 19–21, 21–17ರಿಂದ ವಿಶ್ವದ ಅಗ್ರಮಾನ್ಯ ಆಟಗಾರ, ಚೀನಾದ ಶಿ ಯುಕಿ ಅವರಿಗೆ ಆಘಾತ ನೀಡಿದರು. ಆ ಮೂಲಕ ಮಂಗಳವಾರ ಇಲ್ಲಿ ಆರಂಭವಾದ ಪ್ರತಿಷ್ಠಿತ ಟೂರ್ನಿಯಲ್ಲಿ ಭರ್ಜರಿಯಾಗಿ ಅಭಿಯಾನ ಆರಂಭಿಸಿದರು.

ಉತ್ತರಾಖಂಡದ ಅಲ್ಮೋರಾದ 24 ವರ್ಷ ವಯಸ್ಸಿನ ಆಟಗಾರ, ನಿಕಟ ಪೈಪೋಟಿಯಿಂದ ಕೂಡಿದ್ದ ಪಂದ್ಯದಲ್ಲಿ ಛಲದಿಂದ ಆಡಿದರು. ಪಂದ್ಯದುದ್ದಕ್ಕೂ ಶಾಂತಚಿತ್ತ ಹಾಗೂ ಸಂಯಮದಿಂದ ಆಡಿದ ಅವರು, ಎದುರಾಳಿ ಆಟಗಾರ ಪಾಯಿಂಟ್ಸ್‌ಗಾಗಿ ತಾಳ್ಮೆ ಕಳೆದು ಕೊಳ್ಳುವಂತೆ ಮಾಡಿದರು. ಅಗತ್ಯ ವಿದ್ದಾಗ ಆಕ್ರಮಣಕಾರಿ ಆಟವನ್ನೂ ಪ್ರದರ್ಶಿಸಿದರು. ಪಂದ್ಯವು 1 ಗಂಟೆ 18 ನಿಮಿಷಗಳವರೆಗೆ ಸಾಗಿತು.

ಭಾರತದ ಆಟಗಾರ ಮೊದಲ ಗೇಮ್ ಗೆಲ್ಲಲು ಬೆವರು ಹರಿಸಬೇಕಾಯಿತು. ಒಂದು ಹಂತದಲ್ಲಿ 11–7ರ ಮುನ್ನಡೆ ಸಾಧಿಸಿದ್ದರೂ, ಚೀನಾದ ಆಟಗಾರ ಚೇತ ರಿಸಿಕೊಂಡು 20–20 ರಿಂದ ಸಮಬಲ ಸಾಧಿಸಿದರು. ಆಗ ಕ್ರಾಸ್‌ಕೋರ್ಟ್ ಹೊಡೆತದೊಂದಿಗೆ 23–21ರಿಂದ ಗೇಮ್ ತಮ್ಮದಾಗಿಸಿಕೊಂಡರು.

ಭಾರತದ ಲಕ್ಷ್ಯ ಸೇನ್ ಚಿತ್ರ: 'ಬ್ಯಾಡ್ಮಿಂಟನ್ ಫೋಟೊ'

ಎರಡನೇ ಗೇಮ್ ವೇಳೆಗೆ ಲಕ್ಷ್ಯ ತುಸು ಆಯಾಸಗೊಂಡರು. ಯುಕಿ 21–19 ರಿಂದ ಗೇಮ್ ತಮ್ಮದಾಗಿಸಿಕೊಂಡು, 1–1ರ ಸಮಬಲ ಸಾಧಿಸಿದರು. ನಿರ್ಣಾಯಕ ಗೇಮ್‌ನಲ್ಲಿ ಪುಟಿದೆದ್ದ ಲಕ್ಷ್ಯ, ಪಂದ್ಯದ ಮೇಲೆ ಮತ್ತೆ ಹಿಡಿತ ಸಾಧಿಸಿದರು. ಕ್ರಾಸ್‌ಕೋರ್ಟ್ ಹೊಡೆತಗಳೊಂದಿಗೆ ಎದುರಾಳಿ ಆಟಗಾರ ದಣಿಯುವಂತೆ ಮಾಡಿದರು. ಹಾಲಿ ಚಾಂಪಿಯನ್ ಆಟಗಾರನ ವಿರುದ್ಧ 21–17ರಲ್ಲಿ ಮೇಲುಗೈ ಸಾಧಿಸಿದರು.

ಭಾರತದ ಆಟಗಾರ 2023ರ ಏಷ್ಯನ್ ಗೇಮ್ಸ್ ಟೀಮ್ ಚಾಂಪಿಯನ್‌ಷಿಪ್ಸ್‌ನಲ್ಲಿಯೂ ಚೀನಾದ ಆಟಗಾರನಿಗೆ ಆಘಾತ ನೀಡಿದ್ದರು.

ಆದರೆ, ಮಹಿಳೆಯರ ಸಿಂಗಲ್ಸ್ ಪಂದ್ಯದಲ್ಲಿ ಮಾಳವಿಕಾ ಬನ್ಸೋಡ್ ಅವರು 11–21, 6–21ರಲ್ಲಿ ಚೀನಾದ ಷೆನ್ ಯು ಫೀಯಿ ಅವರಿಗೆ ಸುಲಭವಾಗಿ ಮಣಿದರು.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ಧ್ರುವ್ ಕಪಿಲಾ– ತನಿಷಾ ಕ್ರಾಸ್ಟೊ ಜೋಡಿ 21–17, 21–19ರಿಂದ ಮಲೇಷ್ಯಾದ ಹೋ ಪಾಂಗ್ ರೊನ್ ಹಾಗೂ ಷೆಂಗ್ ಸು ಯಿನ್ ಅವರನ್ನು ಸೋಲಿಸಿ, ಎರಡನೇ ಸುತ್ತಿಗೆ ಮುನ್ನಡೆಯಿತು.

ಐಪಿಎಲ್: ರಾಯಪುರದಲ್ಲಿ ಎರಡು ಪಂದ್ಯಗಳನ್ನು ಆಡಲಿರುವ ಆರ್‌ಸಿಬಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 5 ಪಂದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ತವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐದು ಪಂದ್ಯಗಳನ್ನು ಆಡಲಿದೆ. ಇನ್ನೆರಡು ಪಂದ್ಯಗಳನ್ನು ಛತ್ತೀಸಗಢದ ರಾಯಪುರದಲ್ಲಿ ಆಯೋಜಿಸಲಿದೆ.

ಆರ್‌ಸಿಬಿ ಫ್ರ್ಯಾಂಚೈಸಿಯು ಮಂಗಳವಾರ ಈ ಕುರಿತು ಅಧಿಕೃತ ಹೇಳಿಕೆ ನೀಡಿದೆ. ಇದರೊಂದಿಗೆ ಕಳೆದ ಕೆಲವು ದಿನಗಳಿಂದ ರಾಜ್ಯ ಸರ್ಕಾರ, ಕೆಎಸ್‌ಸಿಎ ಮತ್ತು ಆರ್‌ಸಿಬಿ ನಡುವಿನ ಹಗ್ಗಜಗ್ಗಾಟ ಅಂತ್ಯವಾದಂತಾಗಿದೆ.

ಹೋದ ವರ್ಷ ಆರ್‌ಸಿಬಿಯ ವಿಜಯೋತ್ಸವ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿ, 11 ಅಭಿಮಾನಿಗಳು ಅಸು ನೀಗಿದ್ದರು.

ನಂತರದ ಬೆಳವಣಿಗೆಗಳಲ್ಲಿ ರಾಜ್ಯ ಸರ್ಕಾರವು, ಕ್ರೀಡಾಂಗಣದಲ್ಲಿ ರಣಜಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ ಮತ್ತು ಮಹಾರಾಜ ಟ್ರೋಫಿ ಕ್ರಿಕೆಟ್ ಪಂದ್ಯಗಳನ್ನು ಆಯೋಜಿಸಲು ಅನುಮತಿ ನೀಡಿರಲಿಲ್ಲ. ಸರ್ಕಾರ ನೇಮಕ ಮಾಡಿದ್ದ ನ್ಯಾಯಮೂರ್ತಿ ಮೈಕೆಲ್ ಡಿ ಕುನ್ಹಾ ಆಯೋಗವು ಕ್ರೀಡಾಂಗಣದಲ್ಲಿ ಸುರಕ್ಷತೆಗಾಗಿ ಕೆಲವು ಸುಧಾರಣೆ ಕ್ರಮಗಳನ್ನು ಶಿಫಾರಸು ಮಾಡಿತ್ತು. ಅದರ ಮೇಲ್ವಿಚಾರಣೆಗಾಗಿ ಸರ್ಕಾರದ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳಿರುವ ಕಾರ್ಯಪಡೆಯನ್ನು ನಿಯೋಜಿಸಿತ್ತು. ಕೆಎಸ್‌ಸಿಎ ಮತ್ತು ಸರ್ಕಾರದ ನಡುವೆ ಹಲವು ಸುತ್ತುಗಳ ಮಾತುಕತೆ, ಕಾಮಗಾರಿ ಪರಿಶೀಲನೆಯ ನಂತರ ಈಚೆಗಷ್ಟೇ ಐಪಿಎಲ್ ಪಂದ್ಯಗಳ ಆಯೋಜನೆಗೆ ಷರತ್ತುಬದ್ಧ ಅನುಮತಿ ದೊರೆತಿತ್ತು.

'ಕಳೆದ ಕೆಲವು ತಿಂಗಳುಗಳ ನಿರಂತರ ಪರಿಶ್ರಮದಿಂದಾಗಿ ಮಹತ್ವದ ಬೆಳವಣಿಗೆ ಆಗಿದೆ. ಪಂದ್ಯಗಳು ತವರಿಗೆ ಮರಳುತ್ತಿವೆ. ಆರ್‌ಸಿಬಿಯು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 5 ಹಾಗೂ ರಾಯಪುರದಲ್ಲಿ 2 ಪಂದ್ಯಗಳು ನಡೆಯಲಿವೆ' ಎಂದು ಆರ್‌ಸಿಬಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಮೆನನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಚಿನ್ನಸ್ವಾಮಿ ಕ್ರೀಡಾಂಗಣ ನಮಗೆ ತವರುಮನೆಗಿಂತ ಮಿಗಿಲು. ನಮ್ಮ ತಂಡದ ನಿಜವಾದ ಅಸ್ತಿತ್ವ ಇರುವುದೇ ಇಲ್ಲಿ. ತವರಿನಲ್ಲಿ ತಮ್ಮ ನೆಚ್ಚಿನ ತಂಡದ ಆಟವನ್ನು ನೋಡುವುದು ಅವರ ಹಕ್ಕಾಗಿದೆ. ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮತ್ತು ರಾಜ್ಯ ಪೊಲೀಸ್ ಇಲಾಖೆಗೆ ಆಭಾರಿಯಾಗಿದ್ದೇವೆ' ಎಂದೂ ಹೇಳಿದ್ದಾರೆ.

ಫೈನಲ್, ಪ್ಲೇಆಫ್ ಪಂದ್ಯಗಳಿಗೂ ಆತಿಥ್ಯ: ವೆಂಕಟೇಶ್ ಪ್ರಸಾದ್

ಆರ್‌ಸಿಬಿ ತಂಡವು ಕೊನೆಗೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳನ್ನು ಆಡಲು ಸಮ್ಮತಿಸಿದೆ. ವೈಯಕ್ತಿಕವಾಗಿ ಇದು ನನ್ನ ಪಾಲಿಗೆ ಬಹುದೊಡ್ಡ ಸಾಧನೆಯಾಗಿದೆ. ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ಎದುರು ಐದು ವಿಕೆಟ್ ಪಡೆದಿದ್ದಕ್ಕಿಂತಲೂ ದೊಡ್ಡ ಸಾಧನೆ ಇದು. ಉದ್ಘಾಟನೆ ಪಂದ್ಯ ಹಾಗೂ ಸಮಾರಂಭ, ಪ್ಲೇ ಆಫ್ ಪಂದ್ಯ ಹಾಗೂ ಫೈನಲ್ ಹಣಾಹಣಿ ಕೂಡ ಇಲ್ಲಿಯೇ ನಡೆಯಲಿದೆ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹೇಳಿದರು.

'ಬಿಸಿಸಿಐ (ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ) ಶೀಘ್ರದಲ್ಲಿಯೇ ಐಪಿಎಲ್ ವೇಳಾಪಟ್ಟಿಯನ್ನು ಪ್ರಕಟಿಸುವ ನಿರೀಕ್ಷೆ ಇದೆ' ಎಂದು ಮಂಗಳವಾರ ರಾತ್ರಿ ಪ್ರಸಾದ್ ಅವರು ಸುದ್ದಿಗಾರರಿಗೆ ತಿಳಿಸಿದರು.

'ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನವೀಕರಣ ಕಾಮಗಾರಿಯಲ್ಲಿ ಇನ್ನೂ ಸ್ವಲ್ಪ ಕೆಲಸ ಬಾಕಿ ಇದೆ. ಆದರೆ ಮಹೇಶ್ವರ ರಾವ್ ನೇತೃತ್ವದ ಕಾರ್ಯಪಡೆಗೆ ನಾವು ಭರವಸೆ ಕೊಟ್ಟಿರುವಂತೆ ನಿಗದಿತ ಸಮಯದೊಳಗೆ ಪೂರ್ಣಗೊಳಿಸುತ್ತೇವೆ' ಎಂದು ಪ್ರಸಾದ್ ಹೇಳಿದರು.

'ಕಾರ್ಯಪಡೆಯು ಇಲ್ಲಿ ಕೆಲವು ಸಭೆಗಳನ್ನು ನಡೆಸಿತ್ತು. ಅವರು ಕೇಳಿದ ವಿವರಗಳನ್ನು ನೀಡಿದ್ದೇವೆ. ನಿನ್ನೆ ಮುಂಜಾನೆ (ಸೋಮವಾರ) ಕೂಡ ಅವರು ಬಂದು ಕಾಮಗಾರಿಗಳನ್ನು ಪರಿಶೀಲಿಸಿದ್ದರು. ಇದೇ 15ರಂದು ಆರ್‌ಸಿಬಿ ಆಟಗಾರರು ಇಲ್ಲಿ ಸೇರಿಕೊಳ್ಳುವರು. ಮೊದಲ ಪಂದ್ಯಕ್ಕೆ ಒಂದು ವಾರ ಮುನ್ನ ಅನ್‌ಬಾಕ್ಸ್ (ಟಿಕೆಟ್ ಇರುತ್ತದೆ) ಕಾರ್ಯಕ್ರಮ ಕೂಡ ನಡೆಯಲಿದೆ' ಎಂದರು.

'ಪ್ರೇಕ್ಷಕರ ಸುರಕ್ಷತೆಗೆ ನಾವು ಆದ್ಯತೆ ನೀಡುತ್ತೇವೆ. ಆದ್ದರಿಂದ ಎಲ್ಲ ವ್ಯವಸ್ಥೆಗಳೂ ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಲಾಗುವುದು. 13 ಹೊಸ ಪ್ರವೇಶ ದ್ವಾರಗಳನ್ನು ಸಿದ್ಧಗೊಳಿಸಲಾಗಿದೆ. ಪರಿಣತರ ಸಮಿತಿಯು ಸೂಚಿಸಿದಂತೆ ಭದ್ರತಾ ವ್ಯವಸ್ಥೆ ಮಾಡಲಾಗುವುದು. ಪಂದ್ಯಗಳನ್ನು ವೀಕ್ಷಿಸಲು ಬರುವವರು ಸಾರ್ವಜನಿಕ ಸಾರಿಗೆ ಮತ್ತು ಮೆಟ್ರೊ ರೈಲುಗಳನ್ನು ಬಳಸಬೇಕೆಂದು ಮನವಿ ಮಾಡುತ್ತೇವೆ' ಎಂದು ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಹೇಳಿದ್ದಾರೆ.

ಎಎಫ್‌ಸಿ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿ ಇಂದಿನಿಂದ

ಭಾರತ ತಂಡಕ್ಕೆ ವಿಯೆಟ್ನಾಂ ಸವಾಲು

ಪರ್ತ್ (ಪಿಟಿಐ): ಭಾರತ ತಂಡವು, ಎಎಫ್‌ಸಿ ಮಹಿಳಾ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ತನಗಿಂತ ಮೇಲಿನ ಕ್ರಮಾಂಕದ ವಿಯೆಟ್ನಾಂ ತಂಡವನ್ನು ಬುಧವಾರ ಎದುರಿಸಲಿದೆ. ಸುಮಾರು ನಾಲ್ಕು ತಿಂಗಳಿಂದ ಯಾವುದೇ ಅಂತರ ರಾಷ್ಟ್ರೀಯ ಪಂದ್ಯ ಆಡದಿರುವುದು ಭಾರತ ತಂಡದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ.

'ಸಿ' ಗುಂಪಿನಲ್ಲಿ ಭಾರತ, ವಿಯೆಟ್ನಾಂ ಜೊತೆ, ಜಪಾನ್ ಮತ್ತು ತೈವಾನ್ ತಂಡಗಳಿವೆ. ಈ ಗುಂಪಿನಲ್ಲಿರುವ ತಂಡಗಳ ಪೈಕಿ ಭಾರತದ ಕ್ರಮಾಂಕ ಕೆಳಮಟ್ಟದಲ್ಲಿದೆ. ವಿಶ್ವ ಕ್ರಮಾಂಕದಲ್ಲಿ ವಿಯೆಟ್ನಾಂ 36ನೇ ಸ್ಥಾನದಲ್ಲಿದೆ. ಭಾರತ ವನಿತೆಯರು 67ನೇ ಸ್ಥಾನದಲ್ಲಿದ್ದಾರೆ.

ಭಾರತ 2025ರ ಅಕ್ಟೋಬರ್‌ನಲ್ಲಿ ಕೊನೆಯ ಬಾರಿ ಅಂತರರಾಷ್ಟ್ರೀಯ ಪಂದ್ಯಗಳನ್ನು (ಇರಾನ್ ಮತ್ತು ನೇಪಾಳ ವಿರುದ್ಧ) ಆಡಿದ್ದು, ಕ್ರಮವಾಗಿ 0–2 ಮತ್ತು 1–2 ರಿಂದ ಸೋಲನುಭವಿಸಿತ್ತು.

ಟರ್ಕಿಯಲ್ಲಿ ನಾಲ್ಕು ವಾರಗಳ ಶಿಬಿರದ ಅವಧಿಯಲ್ಲಿ ಭಾರತ ಅಂತರ ರಾಷ್ಟ್ರೀಯ ಪಂದ್ಯಗಳನ್ನು ಆಡುವ ಬದಲು ಕ್ಲಬ್‌ಗಳ ವಿರುದ್ಧ ಆಡಿತ್ತು. ತಂಡ ಅಲ್ಲಿಂದಲೇ ನೇರವಾಗಿ ಫೆ. 11ರಂದು ಪರ್ತ್‌ಗೆ ಬಂದಿಳಿದಿದೆ. ಪರ್ತ್‌ನಲ್ಲಿ ತಂಡವು ಆಸ್ಟ್ರೇಲಿಯಾದ ಕ್ಲಬ್ ತಂಡಗಳ ಜೊತೆ ಅಭ್ಯಾಸ ಪಂದ್ಯಗಳನ್ನು ಆಡಿದೆ.

ವಿಯೆಟ್ನಾಂ ತಂಡವು ಫೆಬ್ರುವರಿಯಲ್ಲಿ ನಾಲ್ಕು ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದೆ. ಅದೂ ಪ್ರಬಲ ತಂಡಗಳಾದ ಉಜ್ಬೇಕಿಸ್ತಾನ ಮತ್ತು ಚೀನಾ ವಿರುದ್ಧ. ನಾಲ್ಕರಲ್ಲಿ ಒಂದು ಗೆದ್ದು, ಮೂರು ಸೋತಿದೆ.

ಭಾರತ ತಂಡವು ಈ ಟೂರ್ನಿಯಲ್ಲಿ ನಾಕೌಟ್ ತಲುಪುವ ಗುರಿಯನ್ನು ಇಟ್ಟುಕೊಂಡಿದೆ. ಈ ಹಂತ ತಲುಪಿದಲ್ಲಿ 2027 ಫಿಫಾ ಮಹಿಳಾ ವಿಶ್ವಕಪ್ ಅರ್ಹತಾ ಟೂರ್ನಿಯಲ್ಲಿ ಆಡುವ ಅವಕಾಶ ಲಭಿಸಲಿದೆ.

ಭಾರತ ತಂಡವು ಸಿ ಗುಂಪಿನ ಇತರ ಪಂದ್ಯಗಳಲ್ಲಿ 7ರಂದು ಜಪಾನ್ ವಿರುದ್ಧ, 10ರಂದು ತೈವಾನ್ ವಿರುದ್ಧ ಆಡಲಿದೆ.

ಕಳಪೆ ಕಿಟ್: ಆಟಗಾರ್ತಿಯರಿಗೆ ಬೇಸರ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಆಟಗಾರ್ತಿಯರಿಗೆ ನೀಡಿರುವ ಕಿಟ್ ಕಳಪೆಯಾಗಿದೆ. 'ಪೋಷಾಕುಗಳು ಸರಿಯಾಗಿ ಹೊಂದುತ್ತಿಲ್ಲ' ಎಂದು ಆಟಗಾರ್ತಿಯರು ದೂರಿದ್ದಾರೆ. ಪಂದ್ಯಕ್ಕೆ ಒಂದು ದಿನವಿರುವಾಗ ನಡೆದ ಈ ಬೆಳವಣಿಗೆ ಮುಜುಗರ ಉಂಟುಮಾಡಿದ್ದು, ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ದುರಾಡಳಿತವನ್ನು ಬಯಲು ಮಾಡಿದೆ.

ಇದು ಪಂದ್ಯಕ್ಕೆ ಮೊದಲು ತಮ್ಮ ನೈತಿಕ ಸ್ಥೈರ್ಯ ಮತ್ತು ಏಕಾಗ್ರತೆಯ ಮೇಲೆ ಪರಿಣಾಮ ಬೀರಿದೆ ಎಂದು ಆಟಗಾರ್ತಿಯರು ಎಐಎಫ್‌ಎಫ್ ಉಪ ಕಾರ್ಯದರ್ಶಿ ಎಂ.ಸತ್ಯನಾರಾಯಣ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

'ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸುವ ವೇಳೆ ಕಿಟ್‌ಗಳು ವೃತ್ತಿಪರ ಮಟ್ಟದಲ್ಲಿರುವಂತೆ ನೋಡಿಕೊಳ್ಳಬೇಕಿತ್ತು. ಪಂದ್ಯದ ವೇಳೆ ಮತ್ತು ಅಭ್ಯಾಸದ ವೇಳೆ ಧರಿಸಲು ನೀಡಿದ ಉಡುಪುಗಳು ಹೊಂದುತ್ತಿಲ್ಲ. ಇದರಿಂದಾಗಿ ಆಟಗಾರ್ತಿಯರು ಮತ್ತು ಸಿಬ್ಬಂದಿ ಸಿದ್ಧತೆಯ ವೇಳೆ ಸಮಸ್ಯೆ ಅನುಭವಿಸಿದ್ದಾರೆ. ನಿರ್ಣಾಯಕ ಘಟ್ಟದಲ್ಲಿ ಹೀಗೆ ಆಗಿರುವುದು ನಮ್ಮ ಸ್ಥೈರ್ಯ ಉಡುಗುವಂತೆ ಮಾಡಿದೆ' ಎಂದು ಪತ್ರದಲ್ಲಿ ಬರೆದಿದ್ದಾರೆ. ಎಲ್ಲ ಆಟಗಾರ್ತಿಯರು ಪತ್ರಕ್ಕೆ ಸಹಿ ಮಾಡಿದ್ದಾರೆ.

ಮಹಿಳಾ ಕ್ರಿಕೆಟ್: ಕರ್ನಾಟಕ ಶುಭಾರಂಭ

ಬೆಂಗಳೂರು: ಆಲ್‌ರೌಂಡ್ ಪ್ರದರ್ಶನ ನೀಡಿದ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ 6 ವಿಕೆಟ್‌ಗಳಿಂದ ಜಮ್ಮು ಮತ್ತು ಕಾಶ್ಮೀರ ತಂಡವನ್ನು ಮಣಿಸಿ, ಶುಭಾರಂಭ ಮಾಡಿತು.

ಜೈಪುರದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಜಮ್ಮು– ಕಾಶ್ಮೀರ ತಂಡವು ಆರಂಭಿಕ ಆಟಗಾರ್ತಿ ಬವನ್‌ದೀಪ್ ಕೌರ್ (88; 92ಎ, 4x8, 6x3) ಆಟದ ಬಲದಿಂದ 50 ಓವರ್‌ಗಳಲ್ಲಿ 7 ವಿಕೆಟ್‌ಗೆ 211 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ರಾಜ್ಯ ತಂಡಕ್ಕೆ ಪ್ರೇರಣಾ ಜಿ.ಆರ್. (32; 45ಎ, 4x4) ಹಾಗೂ ರಚಿತಾ ಹತ್ವಾರ್ (33; 47ಎ, 4x6) ಅವರು ಮೊದಲ ವಿಕೆಟ್‌ಗೆ 61 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ನಿಕ್ಕಿ ಪ್ರಸಾದ್ 17 ಎಸೆತಗಳಲ್ಲಿ 5 ಬೌಂಡರಿ ಹಾಗೂ ಒಂದು ಸಿಕ್ಸರ್ ಸಹಿತ 33 ರನ್ ಸೂರೆ ಮಾಡಿದರು.

ನಾಯಕಿ ಚಾಂದಸಿ ಕೃಷ್ಣಮೂರ್ತಿ (ಔಟಾಗದೇ 42; 62 ಎ, 4x5) ಹಾಗೂ ಮಿಥಿಲಾ (ಔಟಾಗದೇ 41; 44ಎ, 4x6) ಅವರು ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 89 ರನ್ ಸೇರಿಸಿದರು. ಕರ್ನಾಟಕ ತಂಡವು 40.3 ಓವರ್‌ಗಳಲ್ಲಿ 4 ವಿಕೆಟ್‌ಗೆ 212 ರನ್ ಗಳಿಸಿ, ಸುಲಭವಾಗಿ ಗುರಿ ಮುಟ್ಟಿತು.

ಸಂಕ್ಷಿಪ್ತ ಸ್ಕೋರು: ಜಮ್ಮು ಮತ್ತು ಕಾಶ್ಮೀರ: 50 ಓವರ್‌ಗಳಲ್ಲಿ 7ಕ್ಕೆ 211 (ಬವನ್‌ದೀಪ್ ಕೌರ್ 88; ವಂದಿತಾ ಕೆ. ರಾವ್ 45ಕ್ಕೆ2); ಕರ್ನಾಟಕ: 40.3 ಓವರ್‌ಗಳಲ್ಲಿ 4ಕ್ಕೆ 212 (ಚಾಂದಸಿ ಔಟಾಗದೇ 42, ಮಿಥಿಲಾ ವಿನೋದ್ ಔಟಾಗದೇ 41; ರುದ್ರಾಕ್ಷಿ ಚಿಬ್ 38ಕ್ಕೆ2).

ರ‍್ಯಾಂಕಿಂಗ್ ಅಗ್ರಸ್ಥಾನಕ್ಕೇರಿದ ಮಂದಾನ

ದುಬೈ (ಪಿಟಿಐ): ಭಾರತ ತಂಡದ ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಅವರು ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ಕ್ರಮಾಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಆಸ್ಟ್ರೇಲಿಯಾ ವಿರುದ್ಧ ಇತ್ತೀಚೆಗೆ ನಡೆದ ಮೂರು ಪಂದ್ಯಗಳ ಸರಣಿಯಲ್ಲಿ ನೀಡಿದ ಉತ್ತಮ ಪ್ರದರ್ಶನ ಇದಕ್ಕೆ ಕಾರಣವಾಗಿದೆ.

ಮಂದಾನ ಆ ಸರಣಿಯಲ್ಲಿ 58 ಮತ್ತು 31 ರನ್ ಗಳಿಸಿದ್ದರು. ಅವರು 790 ಪಾಯಿಂಟ್ಸ್ ಕಲೆಹಾಕಿದರೆ, ದಕ್ಷಿಣ ಆಫ್ರಿಕಾದ ಲಾರಾ ವೋಲ್ವಾರ್ಟ್ (782) ಎರಡನೇ ಸ್ಥಾನದಲ್ಲಿದ್ದಾರೆ. ಈ ತಿಂಗಳು ಮತ್ತು ಏಪ್ರಿಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವು ನ್ಯೂಜಿಲೆಂಡ್ ವಿರುದ್ಧ ಆಡಲಿದ್ದು, ಲಾರಾ ಅವರಿಗೆ ಮರಳಿ ಅಗ್ರಸ್ಥಾನಕ್ಕೇರುವ ಅವಕಾಶವಿದೆ. ತಮ್ಮ ಕೊನೆಯ ಏಕದಿನ ಪಂದ್ಯದಲ್ಲಿ ಭರ್ಜರಿ ಶತಕ ಬಾರಿಸಿ ವಿದಾಯ ಹೇಳಿದ್ದ ಆಸ್ಟ್ರೇಲಿಯಾದ ಅಲಿಸಾ ಹೀಲಿ ನಾಲ್ಕನೇ ಸ್ಥಾನ (744) ಪಡೆದಿದ್ದಾರೆ. ಇದೇ ದೇಶದ ಬೆತ್ ಮೂನಿ (749) ಮೂರನೇ ಮತ್ತು ಆ್ಯಶ್ಲೆ ಗಾರ್ಡನರ್ (724) ಐದನೇ ಸ್ಥಾನ ಗಳಿಸಿದ್ದಾರೆ.

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ 9ನೇ ಸ್ಥಾನ ಪಡೆದಿದ್ದಾರೆ.

ಕಲಬುರಗಿ ಓಪನ್ ಮಹಿಳೆಯರ ಟೆನಿಸ್ ಟೂರ್ನಿ: ಪ್ರಿಕ್ವಾರ್ಟರ್‌ಫೈನಲ್‌ಗೆ ಥಾಯ್ಲೆಂಡ್‌ನ ಅಂಚಿಸಾ ಚಂತಾ

ವೈಷ್ಣವಿಗೆ ಸಾಟಿಯಾಗದ ಚೆವಿಕಾ ಸಮಾ

• ಬಸವರಾಜ ದಳವಾಯಿ

ಕಲಬುರಗಿ: ಚುರುಕಿನ ಆಟವಾಡಿದ ವೈಷ್ಣವಿ ಅಡ್ಕರ್, ಐಟಿಎಫ್ ಕಲಬುರಗಿ ಓಪನ್ ಮಹಿಳೆಯರ ಟೆನಿಸ್ ಟೂರ್ನಿಯಲ್ಲಿ ಸುಲಭ ಗೆಲುವಿನೊಡನೆ ಶುಭಾರಂಭ ಮಾಡಿದರು.

ಇಲ್ಲಿನ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಡಬ್ಲ್ಯು–35 ದರ್ಜೆಯ ಟೂರ್ನಿಯ ಸಿಂಗಲ್ಸ್ ಮೊದಲ ಸುತ್ತಿನ ಹಣಾಹಣಿಯಲ್ಲಿ ಭಾರತದ ಆಟಗಾರ್ತಿ ಮಂಗಳವಾರ 6–0, 6–3ರಿಂದ ಸ್ವದೇಶದ ಚೆವಿಕಾ ರೆಡ್ಡಿ ಸಮಾ ಅವರನ್ನು ಪರಾಭವಗೊಳಿಸಿದರು.

ಮೊದಲ ಸೆಟ್‌ನ ಆರಂಭದಿಂದಲೇ ವೇಗದ ಆಟಕ್ಕೆ ತೊಡಗಿಕೊಂಡ ಪುಣೆಯ 21 ವರ್ಷ ವಯಸ್ಸಿನ ಆಟಗಾರ್ತಿ ಸೆಟ್ ಉದ್ದಕ್ಕೂ ಎದುರಾಳಿಗೆ ಚೇತರಿಸಿಕೊಳ್ಳಲು ಅವಕಾಶ ನೀಡಲಿಲ್ಲ. ಚುರುಕಿನ ಪಾದ ಚಲನೆ ಹಾಗೂ ವೇಗದ ಸರ್ವ್‌ಗಳಿಂದ ಗಮನ ಸೆಳೆದರು. ಅವರ ಫೋರ್‌ಹ್ಯಾಂಡ್ ಹೊಡೆತಗಳೂ ಆಕರ್ಷಕವಾಗಿದ್ದವು.

ಎರಡನೇ ಸೆಟ್‌ನಲ್ಲಿ ಮಾತ್ರ ಚೆವಿಕಾ ಸ್ವಲ್ಪ ಪ್ರತಿರೋಧ ತೋರಿದರು. ಮೊದಲ ಗೇಮ್ ಗೆದ್ದು ಪೈಪೋಟಿ ನಡೆಸುವ ನಿರೀಕ್ಷೆ ಮೂಡಿಸಿದ್ದರು. ಆದರೆ, ಎರಡು ಮತ್ತು ಮೂರನೇ ಗೇಮ್ ಗೆದ್ದ ವೈಷ್ಣವಿ ತಿರುಗೇಟು ನೀಡಿದರು. ಬಳಿಕ ನಾಲ್ಕು ಮತ್ತು ಏಳನೇ ಗೇಮ್ ಗೆಲ್ಲಲಷ್ಟೇ ತೆಲಂಗಾಣದ ಚೆವಿಕಾ ಅವರಿಗೆ ಸಾಧ್ಯವಾಯಿತು.

ಭಾರತದ ವೈಷ್ಣವಿ ಅಡ್ಕರ್ ಆಟದ ಪರಿ ಚಿತ್ರ: ತಾಜುದ್ದೀನ್ ಆಜಾದ್

ಲಕ್ಷ್ಮಿಶ್ರೀ ದಿಟ್ಟ ಹೋರಾಟ: ಏಳನೇ ಶ್ರೇಯಾಂಕದ ಆಟಗಾರ್ತಿ ಜಪಾನ್‌ನ ಮಿಷಿಕಾ ಒಜೆಕಿ ಎದುರು 4–6, 6–1, 6–2ರಿಂದ ಭಾರತದ ಲಕ್ಷ್ಮಿಶ್ರೀ ದಂಡು ಸೋತರೂ ಹೋರಾಟದಿಂದ ಗಮನಸೆಳೆದರು. ಅರ್ಹತಾ ಸುತ್ತಿನಲ್ಲಿ ಗೆದ್ದು ಅವರು ಪ್ರಧಾನ ಸುತ್ತು ಪ್ರವೇಶಿಸಿದ್ದರು.

ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಎರಡನೇ ಶ್ರೇಯಾಂಕದ, ಥಾಯ್ಲೆಂಡ್‌ನ ಅಂಚಿಸಾ ಚಂತಾ 6–2, 6–0ದಿಂದ ಗ್ರೇಟ್ ಬ್ರಿಟನ್‌ನ ಅಲೆಗ್ರಾ ಕೊರ್ಪಾನೆಕ್ ಡೇವಿಸ್ ವಿರುದ್ಧ, ರಷ್ಯಾದ ಸೋಫಿಯಾ ಮಾರ್ಟಿನೊವಾ 6–4, 6–2ರಿಂದ ಎ. ಲಕ್ಷ್ಮಿ ಪ್ರಭಾ ವಿರುದ್ಧ, ಉಜ್ಬೆಕಿಸ್ತಾನದ ಮಿಲಾನಾ ಮಸ್ಲೆಂಕೊವಾ 6–2, 7–5ರಿಂದ ಜರ್ಮನಿಯ ಅನಸ್ತೇಸಿಯಾ ಕುಪರೆವ್ ವಿರುದ್ಧ, ರಷ್ಯಾದ ಸೋಫಿಯಾ ಸುಸ್ಲೊವಾ 6–4, 6–7 (3), 6–3ರಿಂದ ಸ್ವದೇಶದ ಎಕಟೆರಿನಾ ಯಶಿನಾ ವಿರುದ್ಧ ಗೆದ್ದು 16ರ ಘಟ್ಟ ಪ್ರವೇಶಿಸಿದರು. ಕರ್ನಾಟಕದ ಅಮೋದಿನಿ ನಾಯಕ್ 0–6, 1–6 ರಿಂದ ಇಸ್ರೇಲ್‌ನ ಮಾಯನ್ ಲಾರೆನ್ ಅವರಿಗೆ ಸುಲಭವಾಗಿ ಸೋತರು.

ಆಕಾಂಕ್ಷಾ– ಸೋಹಾ ಜೋಡಿಗೆ ಜಯ

ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಭಾರತದ ಆಕಾಂಕ್ಷಾ ದಿಲೀಪ್ ನಿಟ್ಟೂರೆ– ಸೋಹಾ ಸಾದಿಕ್ ಜೋಡಿಯು 6–2, 5–7, 11–9ರಿಂದ ಅಲೆಗ್ರಾ ಕರ್ಪಾನೆಕ್ ಡೇವಿಸ್– ಸಿಂಗಪುರದ ಎವಾ ಮರಿಯಾ ಡೆಸ್ವಿನ್ಸ್ ಎದುರು ಗೆದ್ದಿತು. ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ– ನೆದರ್ಲೆಂಡ್ಸ್‌ನ ಯಾಸ್ಮಿನ್ ಜಿಂಬ್ರೆ 6–4, 6–4ರಿಂದ ಥಾಯ್ಲೆಂಡ್‌ನ ಅಂಚಿಸಾ ಚಂತಾ, ಥಾಸ್‌ಪಾರ್ನ್ ನಾಕ್ಲೊ ಎದುರು ಜಯಿಸಿದರು.

ಭಾರತದ ಕಶಿಶ್ ಭಾಟಿಯಾ ಹಾಗೂ ವಂಶಿತಾ ಪಠಾಣಿಯಾ ಜೋಡಿಯು 3–6, 4–6ರಿಂದ ರಷ್ಯಾದ ಇವಾಜೆನ್ನಾ ಬರ್ಡ್‌ಲಾನಾ– ಸೋಫಿಯಾ ಮಾರ್ಟಿನೊವಾ ಜೋಡಿಗೆ ಶರಣಾಯಿತು.

ಬಿಲ್ಲೀ ಜೀನ್ ಕಿಂಗ್ ಕಪ್: ಭಾರತ ತಂಡಕ್ಕೆ ವೈಷ್ಣವಿ

ನವದೆಹಲಿ (ಪಿಟಿಐ): ಭರವಸೆ ಮೂಡಿಸಿರುವ ಆಟಗಾರ್ತಿ ವೈಷ್ಣವಿ ಅಡ್ಕರ್ ಅವರನ್ನು ಬಿಲ್ಲೀ ಜೀನ್ ಕಿಂಗ್ ಕಪ್ ಏಷ್ಯಾ/ ಓಷಾನಿಯಾ ಒಂದನೇ ಗುಂಪಿನನಲ್ಲಿ ಆಡಲಿರುವ ಭಾರತ ಟೆನಿಸ್ ತಂಡಕ್ಕೆ ಸೇರ್ಪಡೆಗೊಳಿಸಲಾಗಿದೆ. ಈ ಟೂರ್ನಿಯು ನವದೆಹಲಿಯಲ್ಲಿ ಏಪ್ರಿಲ್ 6ರಿಂದ ನಡೆಯಲಿದೆ.

21 ವರ್ಷ ವಯಸ್ಸಿನ ವೈಷ್ಣವಿ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಐಟಿಎಫ್ ಡಬ್ಲ್ಯು 100 ಟೂರ್ನಿಯ ಫೈನಲ್ ತಲುಪಿದ ಭಾರತದ ಮೊದಲ ಆಟಗಾರ್ತಿ ಎನಿಸಿದ್ದರು.

ಅನುಭವಿಗಳಾದ ಸಹಜಾ ಯಮಲಪಲ್ಲಿ, ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ, ಋತುಜಾ ಭೋಸಲೆ ಮತ್ತು ಅಂಕಿತಾ ರೈನಾ ಅವರು ತಂಡದಲ್ಲಿ ಸ್ಥಾನ ಉಳಿಸಿಕೊಂಡಿದ್ದಾರೆ. ವೈದೇಹಿ ಚೌಧರಿ ಮೀಸಲು ಆಟಗಾರ್ತಿಯಾಗಿದ್ದಾರೆ. ವಿಶಾಲ್ ಉಪ್ಪಲ್ ಅವರು ನಾಯಕರಾಗಿದ್ದು, ರಾಧಿಕಾ ಕಾನಿಟ್ಕರ್ ಅವರು ಭಾರತ ತಂಡದ ಕೋಚ್ ಆಗಿದ್ದಾರೆ ಎಂದು ಅಖಿಲ ಭಾರತ ಟೆನಿಸ್ ಸಂಸ್ಥೆ ತಿಳಿಸಿದೆ.

ಬೆಂಗಳೂರಿನಲ್ಲಿ ನಡೆದ ಬಿಲ್ಲೀ ಜೀನ್ ಕಿಂಗ್ ಕಪ್ ಪ್ಲೇ ಆಫ್‌ನಲ್ಲಿ ನೆದರ್ಲೆಂಡ್ಸ್ ಮತ್ತು ಸ್ಲೊವೇನಿಯಾ ತಂಡಗಳು ಭಾರತ ತಂಡವನ್ನು ಸೋಲಿಸಿದ್ದವು. ಹೀಗಾಗಿ ಭಾರತ ಏಷ್ಯಾ/ ಓಷಾನಿಯಾ ವಲಯದಿಂದ ಅಭಿಯಾನ ಆರಂಭಿಸಬೇಕಾಗಿದೆ.